ಗುರುವಾರ, ಏಪ್ರಿಲ್ 8, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 98 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಪರೀಕ್ಷೆಯ ಸಫಲತೆಯಲ್ಲಿ ತರಬೇತಿಯ ಜೊತೆಗೆ ನಿರಂತರ ಅಭ್ಯಾಸ, ಸತತ ಪರಿಶ್ರಮ ಸೇರಿದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ.

ಆಳ-ಅಗಲ ಕಾಳಿಚ್ಚಿನ ಕಣ್ಣಾಲಿಗೆ

ಮಾರ್ಚ್: ಸೇವಾ ವಲಯದ ಚಟುವಟಿಕೆ ಅಲ್ಪ ಇಳಿಕೆ 10

ಸಿಂಗೂರ್‌ಗೆ ಕೈಗಾರಿಕೆ: ಶಾ ಭರವಸೆ 11

ಸೆನ್ಸೆಕ್ಸ್	ನಿಫ್ಟಿ	₹/$
49,661 ▲	14,819 ▲	74.47 ▼

ಪರ್ಯಾಯ ವ್ಯವಸ್ಥೆಯತ್ತ ಚಿತ್ತ • ಕರ್ತವ್ಯಕ್ಕೆ ಹಾಜರಾಗಲು ಟ್ರೈನಿ ಸಿಬ್ಬಂದಿಗೆ ಸೂಚನೆ

ಮುಷ್ಕರ: ಸಾರಿಗೆ ಸಂಚಾರ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆಗೆ ಪಟ್ಟು ಹಿಡಿದಿರುವ ನಾಲ್ಕು ಸಾರಿಗೆ ನಿಗಮಗಳ ನೌಕರರು ಬುಧವಾರದಿಂದ ಮುಷ್ಕರ ಆರಂಭಿಸಿದ್ದಾರೆ. ಮೊದಲ ದಿನವೇ ಸಾರಿಗೆ ನಿಗಮಗಳ ಬಹುತೇಕ ಬಸ್‌ಗಳು ಸಂಚಾರ ಸ್ಥಗಿತಗೊಳಿಸಿದ ಪರಿಣಾಮ ಸಾರ್ವಜನಿಕರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ.

ರಾಜಧಾನಿಯಲ್ಲಿ ಕೂಲಿ–ಕಾರ್ಮಿಕರು ಹತ್ತಾರು ಕಿಲೋಮೀಟರ್ ದೂರವನ್ನು ನಡಿಗೆಯಲ್ಲೇ ಕ್ರಮಿಸುತ್ತಿದ್ದ ದೃಶ್ಯಗಳು ಕಂಡುಬಂದವು. ವಿದ್ಯಾರ್ಥಿಗಳು, ಬಡವರು, ರೋಗಿಗಳು ಬಸ್ಸುಗಳಿಲ್ಲದೇ ಪರದಾಡಿದರು. ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ವೃದ್ಧರೊಬ್ಬರು ಮೃತಪಟ್ಟರು.

ಸಾರಿಗೆ ಸಂಸ್ಥೆಯಲ್ಲಿ ತರಬೇತಿ ಅವಧಿಯಲ್ಲಿರುವ (ಟ್ರೈನಿ) ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗದಿದ್ದರೆ, ಕೆಲಸದಿಂದ ತೆಗೆದು ಹಾಕಲಾಗುವುದು ಎಂದೂ ಸಾರಿಗೆ ಸಂಸ್ಥೆ ಎಚ್ಚರಿಕೆ ನೀಡಿದೆ. ಈ ಸಂಬಂಧ ಎಲ್ಲ ಟ್ರೈನಿಗಳಿಗೆ ಸಾರಿಗೆ ನಿಗಮಗಳು ಬುಧವಾರ ರಾತ್ರಿ ನೋಟಿಸ್ ಜಾರಿ ಮಾಡಿವೆ.

ಸಾರ್ವಜನಿಕರ ತೊಂದರೆ ಬಗೆಹರಿಸಲು ಅಧಿಕಾರಿಗಳು ಬೆಳಗ್ಗಿನಿಂದಲೇ ತಿಣುಕಾಡಿದರು. ಹೆಚ್ಚಿನ ಜಿಲ್ಲೆಗಳಲ್ಲಿ ಜಿಲ್ಲೆಯ ಒಳಗಿನ ಸಂಚಾರಕ್ಕೆ ಸಾರಿಗೆ ಇಲಾಖೆಯೇ ಖಾಸಗಿ ಬಸ್‌ಗಳನ್ನು ರಸ್ತೆಗೆ ಇಳಿಸಿದೆ. ರಸ್ತೆ ತೆರಿಗೆ ಪಾವತಿ ವಿನಾಯಿತಿಯನ್ನೂ ನೀಡಿದ ಕಾರಣ ಖಾಸಗಿ ಬಸ್‌ಗಳೂ ಸೇವೆಗೆ ಲಭಿಸಿವೆ. ಇದರಿಂದ ಬಹುತೇಕ ಕಡೆಗಳಲ್ಲಿ ಸ್ಥಳೀಯ ಪ್ರಯಾಣಕ್ಕೆ ಹೆಚ್ಚು ತೊಂದರೆ ಆಗಿಲ್ಲ. ಆದರೆ, ದೂರದ ಊರುಗಳಿಗೆ ತೆರಳಬೇಕಿರುವ ಅಂತರ ಜಿಲ್ಲಾ ಪ್ರಯಾಣಿಕರು ಬಹುತೇಕ ಜಿಲ್ಲೆಗಳಲ್ಲಿ ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮುಷ್ಕರ ಮುಂದುವರಿಸುವುದಾಗಿ ಹೋರಾಟದ ನೇತೃತ್ವ ವಹಿಸಿರುವ ಸಾರಿಗೆ ನೌಕರರ ಒಕ್ಕೂಟ ಪ್ರಕಟಿಸಿದೆ. ಪರಿಸ್ಥಿತಿ ನಿಯಂತ್ರಿಸಲು ಸಾರಿಗೆ ನಿಗಮಗಳ ಅಧಿಸೂಚಿತ ಮಾರ್ಗಗಳಲ್ಲೂ ಖಾಸಗಿ ಬಸ್‌ಗಳ ಸಂಚಾರಕ್ಕೆ ಅವಕಾಶ ಕಲ್ಪಿಸಿ ಸಾರಿಗೆ ಇಲಾಖೆ ಆದೇಶ ಹೊರಡಿಸಿದೆ. ಸಾರಿಗೆ ನಿಗಮಗಳ ಬಸ್ ನಿಲ್ದಾಣಗಳನ್ನೂ ಖಾಸಗಿ ಬಸ್‌ಗಳ ಬಳಕೆಗೆ ಮುಕ್ತಗೊಳಿಸಿದ್ದು, ಮುಷ್ಕರನಿರತ ನೌಕರರ ವಿರುದ್ಧ ಅಗತ್ಯ ಸೇವೆಗಳ ಕಾಯ್ದೆ (ಎಸ್ಮಾ) ಜಾರಿಯ ಎಚ್ಚರಿಕೆ ರವಾನಿಸಿದೆ.

ಅಲ್ಲದೆ, ಮುಷ್ಕರ ನಿರತ ನೌಕರರ ವೇತನ ಕಡಿತ ಮಾಡುವ ಸಾಧ್ಯತೆಯ ಬಗ್ಗೆ ಸಾರಿಗೆ ಸಂಸ್ಥೆ ಆಡಳಿತ ಪರಿಶೀಲನೆ ನಡೆಸಿದೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 3B

ಹಾವೇರಿ ಕೇಂದ್ರ ಸಾರಿಗೆ ಬಸ್ ನಿಲ್ದಾಣದ ಮುಂಭಾಗ ಬುಧವಾರ ಮ್ಯಾಕ್ಸಿಕ್ಯಾಬ್‌ಗಳ ಮೇಲೂ ಕುಳಿತು ಜನರು ಪ್ರಯಾಣಿಸಿದರು

ವಿಶೇಷ ರೈಲು ಸೇವೆಗೆ ಮನವಿ

ಯುಗಾದಿ ಹಬ್ಬದ ನಡುವೆಯೇ ಸಾರಿಗೆ ನೌಕರರು ಮುಷ್ಕರ ಆರಂಭಿಸಿರುವುದರಿಂದ ಸಾರ್ವಜನಿಕರಿಗೆ ನೆರವಾಗಲು ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳಿಗೆ ಏಪ್ರಿಲ್ 9 ಮತ್ತು 10ರಂದು ವಿಶೇಷ ರೈಲುಗಳನ್ನು ಓಡಿಸುವಂತೆ ನೈರುತ್ಯ ರೈಲ್ವೆ ಅಧಿಕಾರಿಗಳಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಪತ್ರ ಬರೆದಿದ್ದಾರೆ.

ಬೆಂಗಳೂರಿನಿಂದ ಬೆಳಗಾವಿ, ಕಲಬುರ್ಗಿ, ಕಾರವಾರಕ್ಕೆ ತಲಾ ಎರಡು ಹಾಗೂ ಬೀದರ್, ವಿಜಯಪುರ ಮತ್ತು ಶಿವಮೊಗ್ಗಕ್ಕೆ ತಲಾ ಒಂದು ವಿಶೇಷ ರೈಲು ಓಡಿಸುವಂತೆ ಮನವಿ ಮಾಡಿದ್ದಾರೆ. ಬೆಂಗಳೂರು– ಮೈಸೂರು ನಡುವಣ ಇಂಟರ್‌ಸಿಟಿ ರೈಲುಗಳ ಸಂಚಾರವನ್ನೂ ಹೆಚ್ಚಿಸುವಂತೆ ಕೋರಿದ್ದಾರೆ.

ರಾಜ್ಯ ಸರ್ಕಾರದ ಮನವಿಗೆ ಸ್ಪಂದಿಸಿರುವ ರೈಲ್ವೆ ಇಲಾಖೆ ಕೆಲವು ವಿಶೇಷ ರೈಲುಗಳನ್ನು ಓಡಿಸಲು ಒಪ್ಪಿಕೊಂಡಿದೆ.

ಎಸ್ಮಾ ಜಾರಿ ಚಿಂತನೆ: ಮುಖ್ಯಮಂತ್ರಿ

ಬೆಳಗಾವಿ: ‘ಪರಿಪರಿಯಾಗಿ ಮನವಿ ಮಾಡಿಕೊಂಡರೂ ಸಾರಿಗೆ ನೌಕರರು ಕೆಲಸದಿಂದ ದೂರ ಉಳಿದು ಮುಷ್ಕರ ನಡೆಸುತ್ತಿದ್ದಾರೆ. ಇದರಿಂದ ಜನರಿಗೆ ತೊಂದರೆ ಆಗುತ್ತಿದೆ. ಹೀಗಾಗಿ, ಪರಿಸ್ಥಿತಿ ನೋಡಿಕೊಂಡು ಎಸ್ಮಾ (ಅಗತ್ಯ ಸೇವಾ ನಿರ್ವಹಣಾ ಕಾಯ್ದೆ) ಜಾರಿ ಬಗ್ಗೆ ಚಿಂತಿಸಲಾಗುವುದು’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ತಿಳಿಸಿದರು.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ನೌಕರರು ಮುಷ್ಕರ ನಿಲ್ಲಿಸಿ, ಮಾತುಕತೆಗೆ ಬರಬೇಕು. ಯಾರ ಜೊತೆಗೆ ಬೇಕಾದರೂ ಮಾತನಾಡಲು ಸಿದ್ಧ. ಹಟ ಸರಿಯಲ್ಲ’ ಎಂದರು. ‘ಮುಷ್ಕರದ ನೆಪದಲ್ಲಿ ಖಾಸಗಿಯವರು ಹೆಚ್ಚಿಗೆ ಹಣ ಪಡೆದರೆ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಜನರ ಸುಲಿಗೆ ಮಾಡಬೇಡಿ ಎಂದು ಮನವಿ ಮಾಡುತ್ತೇನೆ’ ಎಂದರು.

ನೃತ್ಯದ ಮೆರುಗು

ಗುವಾಹಟಿಯಲ್ಲಿ ರೊಂಗಾಲಿ ಬಿಹು ಹಬ್ಬದ ಪ್ರಯುಕ್ತ ಬುಧವಾರ ಮಹಿಳೆಯರು ಬಿಹು ನೃತ್ಯ ಮಾಡಿದರು– ಪಿಟಿಐ ಚಿತ್ರ

ಕೋವಿಡ್ ನಿಯಮ ಸಡಿಲಿಕೆ ಆದೇಶ ಮಂಡನೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಮ ಸಡಿಲಿಕೆ ಸಂಬಂಧ ಪದೇ ಪದೇ ಆದೇಶಗಳನ್ನು ಮಾರ್ಪಡಿಸಲಾಗುತ್ತಿದ್ದು, ಸಂಬಂಧಿಸಿದ ಎಲ್ಲಾ ಆದೇಶಗಳನ್ನು ನ್ಯಾಯಾಲಯದ ಮುಂದೆ ಮಂಡಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸಿನಿಮಾ ಮಂದಿರಗಳಲ್ಲಿ ಶೇ 50ರಷ್ಟು ಪ್ರೇಕ್ಷಕರಿಗೆ (ಆಸನಗಳ ಭರ್ತಿ) ಅವಕಾಶ ನೀಡಿದ್ದ ಆದೇಶವನ್ನು ಮತ್ತೆ ಬದಲಾಯಿಸಿ ಏ.7ರ ತನಕ ಶೇ 100ರಷ್ಟು ಆಸನಗಳ ಭರ್ತಿಗೆ ಅವಕಾಶ ನೀಡಲಾಯಿತು. ಜಿಮ್‌ಗಳನ್ನು ಮುಚ್ಚಬೇಕು ಎಂಬ ಆದೇಶವನ್ನೂ ಸಡಿಲಿಸಲಾಗಿದೆ. ಎಲ್ಲಾ ಆದೇಶಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ಸರ್ಕಾರಕ್ಕೆ ಬುಧವಾರ ನಿರ್ದೇಶನ ನೀಡಿತು.

ಅಪಾರ್ಟ್‌ಮೆಂಟ್‌ಗಳು, ಹೋಟೆಲ್, ರೆಸ್ಟೋರೆಂಟ್, ಸಿನಿಮಾ ಮಂದಿರ, ಬಾರ್, ಜಿಮ್ ಹಾಗೂ ಇನ್ನಿತರ ಸಾರ್ವಜನಿಕ ಪ್ರದೇಶಗಳಲ್ಲಿ ಸರ್ಕಾರದ ಆದೇಶಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದರ ಕುರಿತು ದಿಢೀರ್ ತಪಾಸಣೆ ನಡೆಸುವಂತೆ ಬಿಬಿಎಂಪಿಗೆ ಪೀಠ ನಿರ್ದೇಶನ ನೀಡಿತು.

‘ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣ ಏರಿಕೆಯಾಗುತ್ತಿದೆ. ಒಳಾಂಗಣ ಮತ್ತು ಹೊರಾಂಗಣ ಕಾರ್ಯಕ್ರಮಗಳಿಗೆ ಸರ್ಕಾರ ನಿಗದಿ ಮಾಡಿರುವಷ್ಟೇ ಜನರು ಭಾಗವಹಿಸುತ್ತಿದ್ದಾರೆಯೇ ಪರಿಶೀಲಿಸಬೇಕು. ಅಗತ್ಯ ಇದ್ದರೆ ಜನರ ಸಂಖ್ಯೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಮಾರ್ಪಡಿಸಿದ ಆದೇಶ ಹೊರಡಿಸಬೇಕು’ ಎಂದು ಸೂಚಿಸಿತು. ವಿಚಾರಣೆಯನ್ನು ಏ.15ಕ್ಕೆ ಮುಂದೂಡಿತು.

ಕೆಲಸದ ಸ್ಥಳದಲ್ಲೇ ಲಸಿಕೆ

ನವದೆಹಲಿ: ಕೆಲಸದ ಸ್ಥಳಗಳಲ್ಲಿಯೇ ಕೋವಿಡ್–19 ತಡೆ ಲಸಿಕೆ ಹಾಕಿಸಿಕೊಳ್ಳಲು ಸರ್ಕಾರ ಅವಕಾಶ ಕೊಟ್ಟಿದೆ. ಇದು ಖಾಸಗಿ ಮತ್ತು ಸರ್ಕಾರಿ ಸಂಸ್ಥೆಗಳಿಗೆ ಅನ್ವಯ. ಆದರೆ, ಲಸಿಕೆ ಪಡೆಯಲು ಅರ್ಹರಾದ ನೂರಕ್ಕೂ ಹೆಚ್ಚು ಮಂದಿ ಇರಬೇಕು. ಭಾನುವಾರದಿಂದ (ಏಪ್ರಿಲ್ 11) ಇದು ಜಾರಿಗೆ ಬರಲಿದೆ. ಸಂಸ್ಥೆಯಲ್ಲಿ ಕೆಲಸ ಮಾಡುವವರಿಗೆ ಮಾತ್ರ ಇದು ಅನ್ವಯ. ಅವರ ಕುಟುಂಬದ ಸದಸ್ಯರು ಕೆಲಸದ ಸ್ಥಳದಲ್ಲಿ ಲಸಿಕೆ ಹಾಕಿಸಿಕೊಳ್ಳಲು ಅವಕಾಶ ಇಲ್ಲ.

ಇಂತಹ ಲಸಿಕೆ ಶಿಬಿರಗಳನ್ನು ನಡೆಸುವ ವಿವರವಾದ ಮಾರ್ಗಸೂಚಿಯನ್ನು ಕೇಂದ್ರವು ರಾಜ್ಯಗಳಿಗೆ ಕಳುಹಿಸಿಕೊಟ್ಟಿದೆ. ಜಿಲ್ಲಾಧಿಕಾರಿ ನೇತೃತ್ವದ ಜಿಲ್ಲಾ ಕಾರ್ಯಪಡೆ ಮತ್ತು ನಗರಪಾಲಿಕೆ ಆಯುಕ್ತರ ನೇತೃತ್ವದ ನಗರ ಕಾರ್ಯಪಡೆಯು ಲಸಿಕೆ ಶಿಬಿರ ಆಯೋಜಿಸಬಹುದಾದ ಸಂಸ್ಥೆಗಳನ್ನು ಗುರುತಿಸಲಿದೆ. ಜಿಲ್ಲಾ ಆರೋಗ್ಯ ಅಧಿಕಾರಿಗಳ ಜತೆಗೆ ಸಮನ್ವಯಕ್ಕಾಗಿ ಸಂಸ್ಥೆಯು ಲಸಿಕೆ ಶಿಬಿರಕ್ಕೆ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಬೇಕು.

1.15 ಲಕ್ಷ ಪ್ರಕರಣ: ಬುಧವಾರ ಬೆಳಗ್ಗಿನ ವರೆಗಿನ 24 ತಾಸು ಅವಧಿಯಲ್ಲಿ ದೇಶದಲ್ಲಿ ಈವರೆಗಿನ ಗರಿಷ್ಠ ಸಂಖ್ಯೆಯ ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. 1.15 ಲಕ್ಷ ಪ್ರಕರಣಗಳು ದೃಢಪಟ್ಟಿವೆ. ಈ ಅವಧಿಯಲ್ಲಿ ಮೃತಪಟ್ಟವರ ಸಂಖ್ಯೆ 630. ದೇಶದ ಒಟ್ಟು ಕೋವಿಡ್ ಪ್ರಕರಣಗಳ ಸಂಖ್ಯೆಯು 1.28 ಕೋಟಿಗೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಒಬ್ಬರೇ ಇದ್ದರೂ ಮಾಸ್ಕ್ ಕಡ್ಡಾಯ: ಖಾಸಗಿ ವಾಹನದಲ್ಲಿ ಒಬ್ಬರೇ ಸಂಚರಿಸುವಾಗಲೂ ಮಾಸ್ಕ್ ಧರಿಸುವುದು ಕಡ್ಡಾಯ ಎಂದು ದೆಹಲಿ ಹೈಕೋರ್ಟ್ ಬುಧವಾರ ಹೇಳಿದೆ.

ದಿನಕ್ಕೆ ಸಾವಿರ ಸಾವು?: ಕೋವಿಡ್ ಪ್ರಸರಣದ ವೇಗ ಗಮನಿಸಿದರೆ, ಮುಂಬರುವ ವಾರಗಳಲ್ಲಿ ಭಾರತದಲ್ಲಿ ನಿತ್ಯ ಸಾವಿರ ಜನರ ಸಾವು ಸಂಭವಿಸುವ ಸಾಧ್ಯತೆ ಇದೆ. ಅಂತೆಯೇ ದಿನ ಹೊಸ ಪ್ರಕರಣಗಳ ಸಂಖ್ಯೆ ಇನ್ನಷ್ಟು ಹೆಚ್ಚಳವಾಗಲಿದೆ ಎಂದು ಅಮೆರಿಕದ ಮಿಷಿಗನ್ ವಿ.ವಿ ಪ್ರೊ.ಭ್ರಮರ್ ಮುಖರ್ಜಿ ಎಚ್ಚರಿಸಿದ್ದಾರೆ.

ಒಳ ಪುಟಗಳು

ವಿದ್ಯುತ್ ತಗುಲಿ ನಾಲ್ವರು ಕಾರ್ಮಿಕರ ಸಾವು 4

ಅಲೆಮಾರಿಗಳಿಗೆ ಪ್ರತ್ಯೇಕ ಸ್ಮಶಾನ: ರವೀಂದ್ರ ಶೆಟ್ಟಿ 5

ಆರ್‌ಬಿಐ ಸಭೆ ನಂತರ ಶಕ್ತಿಕಾಂತ ದಾಸ್ ಹೇಳಿಕೆ

ಕೋವಿಡ್ ಹೆಚ್ಚಳದಿಂದ ಅನಿಶ್ಚಿತ ಸ್ಥಿತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕೋವಿಡ್–19 ಪ್ರಕರಣಗಳು ಈಚೆಗೆ ಮತ್ತೆ ಹೆಚ್ಚುತ್ತಿರುವುದು ಆರ್ಥಿಕ ಬೆಳವಣಿಗೆಯ ವಿಚಾರವಾಗಿ ಅನಿಶ್ಚಿತ ಸ್ಥಿತಿ ನಿರ್ಮಿಸಿದೆ’ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

‘ಅಲ್ಲಲ್ಲಿ ಜಾರಿಯಾಗುತ್ತಿರುವ ಲಾಕ್‌ಡೌನ್ ಕ್ರಮಗಳು ಬೇಡಿಕೆಯಲ್ಲಿ ಈಚೆಗೆ ಕಂಡುಬಂದಿರುವ ಹೆಚ್ಚಳದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು, ಪರಿಸ್ಥಿತಿ ಮಾಮೂಲಿನಂತಾಗುವುದು ತಡವಾಗಬಹುದು’ ಎಂದು ಕೂಡ ದಾಸ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ.



ಶಕ್ತಿಕಾಂತ ದಾಸ್

ಬುಧವಾರ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯ ನಂತರ ದಾಸ್ ಅವರು ಈ ಮಾತು ಹೇಳಿದರು. ಆದರೆ, 2021-22ರಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇಕಡ 10.5ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಈ ಹಿಂದೆ ಮಾಡಿದ್ದ ಅಂದಾಜನ್ನು ಆರ್‌ಬಿಐ ಪುನರುಚ್ಚರಿಸಿದೆ.

ಆರ್ಥಿಕ ಪುನಶ್ಚೇತನಕ್ಕೆ ಬೆಂಬಲವಾಗಿ ಅಗತ್ಯವಿರುವ ಯಾವುದೇ ಕ್ರಮ ತೆಗೆದುಕೊಳ್ಳುವುದಾಗಿ ಕೂಡ ಆರ್‌ಬಿಐ ಹೇಳಿದೆ. ಎಂಪಿಸಿ ಸಭೆಯು ರೆಪೊ ದರಗಳಲ್ಲಿ ಯಾವ ಬದಲಾವಣೆಯನ್ನೂ ಮಾಡದಿರುವ ತೀರ್ಮಾನ ಕೈಗೊಂಡಿದೆ.

ಹಣದುಬ್ಬರ

ಚಿಲ್ಲರೆ ಹಣದುಬ್ಬರ ದರವು ಈ ಆರ್ಥಿಕ ವರ್ಷದಲ್ಲಿ ಶೇ 4.4ರಿಂದ ಶೇ 5.2ರ ನಡುವೆ ಇರಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. 2021–22ರ ಮೊದಲ 6 ತಿಂಗಳ ಅವಧಿಯಲ್ಲಿ ಹಣದುಬ್ಬರವು ಶೇ 5ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇರಬಹುದು ಎಂದು ಅದು ಹೇಳಿದೆ.

ರಾಜ್ಯ ಕೋವಿಡ್ ಅಂಕಿ–ಅಂಶ

10,33,560 ▲	ಒಟ್ಟು ಸೋಂಕಿತರು (10,26,584 ನಿನ್ನೆಯ ವಿವರ)
49,254 ▲	ಸಕ್ರಿಯ ಪ್ರಕರಣಗಳು
9,71,556 ▲	ಗುಣಮುಖರಾದವರು
12,731 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	6,976 ▲
ಗುಣಮುಖ	2,794 ▼
ಸಾವು	35 ▼

353 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-7

ಸಂಸದ ಸಿದ್ದೇಶ್ವರ, ಡಾ.ರಮೇಶ್‌ಗೆ ದಾವಣಗೆರೆ ವಿ.ವಿ ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ದಾವಣಗೆರೆ: ಇಲ್ಲಿನ ಬಿಜೆಪಿ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ರಾಷ್ಟ್ರೀಯ ವೈದ್ಯಕೀಯ ಆಯೋಗದ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಮಂಡಳಿಯ ಅಧ್ಯಕ್ಷ ಡಾ.ಎಂ.ಕೆ. ರಮೇಶ್ ಅವರನ್ನು ದಾವಣಗೆರೆ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಲಾಗಿದೆ.

‘ಗೌರವ ಡಾಕ್ಟರೇಟ್ ಪದವಿಯ ಪಟ್ಟಿಯನ್ನು ಆಯ್ಕೆಮಾಡುವ ಸಮಿತಿ ಮುಂದೆ ಎಳೆಂಟು ಅರ್ಜಿಗಳು ಬಂದಿದ್ದವು. ಜಿ.ಎಂ. ಸಿದ್ದೇಶ್ವರ ಹಾಗೂ ಡಾ.ಎಂ.ಕೆ. ರಮೇಶ್ ಜೊತೆಗೆ ಇತಿಹಾಸಕಾರ, ಸಂಶೋಧಕ ಲಕ್ಷ್ಮಣ ತೆಲಗಾವಿ ಅವರ ಹೆಸರನ್ನೂ ರಾಜ್ಯಪಾಲರಿಗೆ ಕಳುಹಿಸಿಕೊಡಲಾಗಿತ್ತು. ಇಬ್ಬರಿಗೆ ಮಾತ್ರ ಗೌರವ ಡಾಕ್ಟರೇಟ್ ಪದವಿ ನೀಡಲು ರಾಜ್ಯಪಾಲರು ಒಪ್ಪಿಗೆ ಸೂಚಿಸಿದ್ದು, ಗುರುವಾರ (ಏ.8) ನಡೆಯಲಿರುವ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಗುವುದು’ ಎಂದು ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಜಿ.ಎಂ. ಸಿದ್ದೇಶ್ವರ

ಡಾ.ರಮೇಶ್

ಎಲೆ ಮರೆಯಲ್ಲಿದ್ದುಕೊಂಡು ಸಾಧನೆ ಮಾಡುತ್ತಿರುವವರನ್ನು ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡುವ ಬದಲು ರಾಜಕೀಯ ನಾಯಕರನ್ನು ಪರಿಗಣಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಆಯ್ಕೆ ಸಮಿತಿಯ ಮುಂದೆ ಬಂದ ಅರ್ಜಿಗಳನ್ನಷ್ಟೇ ಪರಿಗಣನೆಗೆ ತೆಗೆದುಕೊಳ್ಳುವ ವ್ಯವಸ್ಥೆ ಇದೆ. ಈ ಹಿಂದೆ ರಾಜ್ಯಪಾಲರು ರಾಜಕೀಯ ಮುಖಂಡರ ಹೆಸರನ್ನು ಕಳುಹಿಸುವುದು ಬೇಡ ಎಂದು ಸೂಚಿಸಿದ್ದರು. ಈ ವರ್ಷ ಪರಿಗಣಿಸಿದ್ದಾರೆ. ಸಮಾಜ ಸೇವೆ, ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಂಸದರು ದಾವಣಗೆರೆ ಜಿಲ್ಲೆಯ ಅಭಿವೃದ್ಧಿಗೆ ಬಹಳಷ್ಟು ಕೊಡುಗೆ ನೀಡಿದ್ದಾರೆ. ಅದೇ ರೀತಿ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಡಾ. ರಮೇಶ್ ಅವರೂ ದಾವಣಗೆರೆ ಜಿಲ್ಲೆಯ ಮಾಯಕೊಂಡ ಮೂಲದವರಾಗಿದ್ದಾರೆ’ ಎಂದು ಕುಲಪತಿ ಸಮರ್ಥಿಸಿಕೊಂಡರು.

ಸಿದ್ದೇಶ್ವರ ಅವರು 2004ರಿಂದ ಸತತವಾಗಿ ನಾಲ್ಕು ಬಾರಿ ಸಂಸದರಾಗಿದ್ದಾರೆ.

ಪಡಿತರ ಅಕ್ಕಿ ಕಳ್ಳಸಾಗಣೆ: ಲಾರಿ ಮಾಲೀಕನ ಬಂಧನ

ಬೆಂಗಳೂರು: ನಗರದಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆಯ ಅಕ್ಕಿ ಗಿರಣಿಗಳಿಗೆ ಪಡಿತರ ಅಕ್ಕಿಯನ್ನು ಕಳ್ಳಸಾಗಣೆ ಮಾಡುತ್ತಿದ್ದ ಪ್ರಕರಣದಲ್ಲಿ 20 ದಿನಗಳಿಂದ ತಲೆಮರೆಸಿಕೊಂಡಿದ್ದ ಲಾರಿ ಮಾಲೀಕನನ್ನು ಕೋಲಾರ ಗ್ರಾಮಾಂತರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ನಗರದ ನಂದಿನಿ ಬಡಾವಣೆ ನಿವಾಸಿ ಆರ್.ಎಸ್. ಮಣಿ ಬಂಧಿತ ಆರೋಪಿ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ ವಿತರಣೆ ಮಾಡಲು ಹಂಚಿಕೆಯಾಗಿದ್ದ 240 ಚೀಲ ಪಡಿತರ ಅಕ್ಕಿಯನ್ನು ಬಂಗಾರ ಪೇಟೆಗೆ ಕಳ್ಳಸಾಗಣೆ ಮಾಡುತ್ತಿದ್ದ ಮಣಿ ಮಾಲೀಕತ್ವದ ಈಚರ್ ಲಾರಿಯನ್ನು ಮಾ. 16ರಂದು ಕೋಲಾರದ ಗಾಜಲದಿನ್ನೆ ಬಳಿ ವಶಕ್ಕೆ ಪಡೆಯಲಾಗಿತ್ತು.

6ನೇ ಪುಟ ನೋಡಿ

ಮಿಸಳ್ ಹಾಪ್ಚಾ

ಬೇವು ಕುಡಿಯಾಕ ಬರ್ರಿ...

ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ ವನಿತಾ ಧ್ವನಿ

ಪ್ರತಿ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಸಾಮಾಜಿಕ ಜಾಲತಾಣಗಳಲ್ಲಿ ವ್ಯಂಗ್ಯ

ಸಕ್ಕರೆ ಕಾರ್ಖಾನೆ ಮಾಲೀಕರಿಗೆ ನಾಡೋಜ: ಟೀಕೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ ಪದವಿಗೆ ಜಮಖಂಡಿಯ ಸಕ್ಕರೆ ಕಾರ್ಖಾನೆ ಮಾಲೀಕ ಜಗದೀಶ ಎಸ್. ಗುಡಗುಂಟಿ ಅವರನ್ನು ಆಯ್ಕೆ ಮಾಡಿರುವ ಕ್ರಮಕ್ಕೆ ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆ ವ್ಯಕ್ತವಾಗಿದೆ.

‘ಪ್ರಜಾವಾಣಿ’ ವೆಬ್‌ಸೈಟಿನಲ್ಲಿ ಪ್ರಕಟಗೊಂಡ ಸುದ್ದಿಯನ್ನು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ದಾದಾ ಕಲಂದರ್ ಎಂಬುವವರು, ‘ಬಿಜೆಪಿಯವರ ಆಡಳಿತದಲ್ಲಿ ಏನೆಲ್ಲಾ ನೋಡಬೇಕಿದೆಯೋ? ಅಲ್ಲಾ ಈ ನಾಡೋಜ ಪ್ರಶಸ್ತಿ ನೀಡಲು ಇರುವ ಮಾನದಂಡಗಳಲ್ಲಿ ಹಣವಂತರು ಎಂಬ ಮಾನದಂಡ ಯಾವಾಗ ಸೇರಿಸಲಾಯಿತು? ನಿಜ ನಾಡೋಜರಾದ ರೈತರು, ಕಬ್ಬು ಬೆಳೆಗಾರರ ಬಾಕಿ ಹಣವನ್ನು ಸಂದಾಯ ಮಾಡಲಾಗದವರನ್ನೆಲ್ಲ ನಾಡೋಜ ಕೊಟ್ಟು ಗೌರವಿಸುವ ದಾರಿದ್ರ್ಯಕ್ಕೆ ಸಾಕ್ಷಿಯಾಗಬೇಕಾಗಿ ಬಂದದ್ದು ಕನ್ನಡಿಗರ ದೌರ್ಭಾಗ್ಯವೇ ಹೌದು’ ಎಂದು ಬರೆದುಕೊಂಡಿದ್ದಾರೆ.

Dada Khalander
23ನಿ •

ಬಿಜೆಪಿಗರ ಆಡಳಿತ ಕಾಲಕ್ಕೆ ಇನ್ನೂ ಏನೆಲ್ಲಾ ನೋಡಬೇಕಿದೆಯೊ!? ಅಲ್ಲಾ ಈ 'ನಾಡೋಜ' ಪ್ರಶಸ್ತಿ ನೀಡಲು ಇರುವ ಮಾನದಂಡಗಳಲ್ಲಿ 'ಹಣವಂತರು' ಎಂಬ ಮಾನದಂಡವನ್ನು ಯಾವಾಗ ಸೇರಿಸಲಾಯಿತು!? ನಿಜ ನಾಡೋಜರಾದ ರೈತರು, ಕಬ್ಬು ಬೆಳೆಗಾರರ ಬಾಕಿ ಹಣವನ್ನು ಸಂದಾಯ ಮಾಡಲಾಗದವರನ್ನೆಲ್ಲ 'ನಾಡೋಜ' ಪ್ರಶಸ್ತಿ ಕೊಟ್ಟು ಗೌರವಿಸುವ ಬೌದ್ಧಿಕ ದಾರಿದ್ರ್ಯಕ್ಕೆ ಸಾಕ್ಷಿಯಾಗಬೇಕಾಗಿ ಬಂದದ್ದು ಕನ್ನಡಿಗರ ದೌರ್ಭಾಗ್ಯವೇ ಹೌದು.

ಸಕ್ಕರೆ ಕಾರ್ಖಾನೆ ಮಾಲೀಕನಿಗೆ ಹಂಪಿ ಕನ್ನಡ ವಿ.ವಿ. ನಾಡೋಜ ಗೌರವ

ಫೇಸ್‌ಬುಕ್ ಪೋಸ್ಟ್

ಜಗದೀಶ ಅವರಿಗೆ ಸೇರಿದ ‘ಪ್ರಭುಲಿಂಗೇಶ್ವರ ಶುಗರ್ಸ್’ಗೆ ಕಬ್ಬು ಪೂರೈಸಿದ ರೈತರ ಎಷ್ಟು ಹಣ ಬಾಕಿ ಉಳಿಸಿಕೊಂಡಿದ್ದಾರೆ ಎನ್ನುವ ವಿವರ ಒಳಗೊಂಡ ಸ್ಕ್ರೀನ್ ಶಾಟ್ ಕೂಡ ಪೋಸ್ಟ್ ಮಾಡಿದ್ದಾರೆ. ಅವರ ಪೋಸ್ಟ್‌ಗೆ ಹಲವರು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.

‘ಇದು ಪಕ್ಕಾ ಮಾರ್ವಾಡಿಗಳ ಸಂಘದಿಂದ ಹುಟ್ಟಿದೆಯಲ್ಲ’ ಎಂದು ಪ್ರಕಾಶ ಮಂತೆವಾಡ ಎನ್ನುವವರು ಪ್ರತಿಕ್ರಿಯಿಸಿದರೆ, ‘ದೇಣಿಗೆ ತಂದ ಪ್ರಶಸ್ತಿ ನೀವೂ ಪೀಕಿಕೊಳ್ಳಬಹುದು’ ಎಂದು ಸಿರಾಜುನ್ನಿಸಾ ಪಾಷಾ ಕಾಮೆಂಟ್ ಮಾಡಿದ್ದಾರೆ.

‘ಬಹಳಷ್ಟು ಸಿಹಿ ಹಂಚಿರಬೇಕು’ ಎಂದು ವಿಶ್ವನಾಥ ಮಾಳಗಿ ಎಂಬುವರು ವ್ಯಂಗ್ಯವಾಗಿ ಪ್ರತಿಕ್ರಿಯಿಸಿದರೆ, ‘ಲಕ್ಷಾಂತರ ಜನರಿಗೆ ಉದ್ಯೋಗ ನೀಡಲು ಮತ್ತು ಸಮಾಜಮುಖಿ ಕಾರ್ಯ ಮಾಡುವ ಸಜ್ಜನ್ ಜಿಂದಾಲ್ ಅವರಿಗೆ ನೀಡಬಹುದು ಅಲ್ಲವೇ’ ಎಂದು ಎ.ಕೆ. ಉದೇದಪ್ಪ ಪ್ರಶ್ನಿಸಿದ್ದಾರೆ.

‘ಪಕ್ಷ ನಿಷ್ಠೆ ಇರುವವರು ಯಾರಾದರೂ ನಾಡೋಜ ಆಗಬಹುದು. ಇನ್ನೂ ಮುಂದೆ... ವಿಶ್ವವಿದ್ಯಾಲಯದ ಸ್ವಾಯತ್ತತೆ ಗಾಳಿಗೆ ತೂರಿ’ ಎಂದು ಎಚ್. ಯರ್ರಿಸ್ವಾಮಿ ಪ್ರತಿಕ್ರಿಯಿಸಿದ್ದಾರೆ.

‘ನಾಡೋಜ ಗೌರವ ಹಾಳಾಗಿ ತುಂಬ ವರ್ಷವೇ ಆಯಿತು’ ಎಂದು ಸತೀಶ ಜವರೇಗೌಡ ವಿಷಾದಿಸಿದ್ದಾರೆ.

ನೀರಿನ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಲಮಂಡಳಿಯು ವಿವಿಧ ಉಪವಿಭಾಗಗಳಲ್ಲಿ ಗುರುವಾರ (ಏ.8) ಬೆಳಿಗ್ಗೆ 9.30ರಿಂದ 11ರವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ನೀರಿನ ಬಿಲ್, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ವಾಣಿಜ್ಯ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಅದಾಲತ್‌ನಲ್ಲಿ ಪರಿಹರಿಸಲಾಗುವುದು. ಬಳಕೆದಾರರು ಸಂಬಂಧಪಟ್ಟ ಉಪವಿಭಾಗದ ಕಚೇರಿಗೆ ತೆರಳಿ ಅದಾಲತ್‌ನಲ್ಲಿ ಪಾಲ್ಗೊಳ್ಳಬಹುದು.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ದಿನದ 24 ಗಂಟೆ ಕಾರ್ಯಾಚರಿಸುವ ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ: 080– 22238888,

ಸಹಾಯವಾಣಿ 1916 ಹಾಗೂ ವಾಟ್ಸ್ಆ್ಯಪ್ ಸಂಖ್ಯೆ: 8762228888 ಸಂಪರ್ಕಿಸಬಹುದು.

IN THE HIGH COURT OF KARNATAKA
AT BENGALURU
FORM No. IV (RULE-IV)
Notice to the Respondent
Vide Court Order dated 25.03.2021

CRP No. 62/2019

Smt. Sunanda (Sri Amaresh .A Angadi, Advocate for the Petitioner) ...Petitioner

V/s

Satya Deepa Ashrama, Represented by its Secretary & others ...Respondents

To: R-1. Satya Deepa Ashrama, Bellur Village, Narasapura Hobli, Kolar Taluk & District-563101. Represented by its Secretary.

R-3. Smt. Sumithra Siddappa, W/o Late Siddappa, aged about 60 years, R/at Near Basaveshwara Temple, M.V. Badawane, Kurubara Pete, Hoskote Town-562114.

Notice is hereby given to you to appear in this Court in person or through an Advocate duly instructed or through someone authorize, by Law to act or you in the **CRP No. 62/2019 on 15.04.2021** on which date the case will be posted for orders/hearing, in case you intend to contest the CRP. If you fail to appear the same will be dealt with, heard and decided in your absence.

Issued under my hand and the seal of the Court, this the 25th day of March, 2021.

**BY ORDER OF THE COURT,
ASSISTANT REGISTRAR.**

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ. ಬೆಳ್ಳಿ ಹಬ್ಬ–ವಿವಿಧ ಕಾರ್ಯಕ್ರಮಗಳಿಗೆ ಚಾಲನೆ

‘ಆರೋಗ್ಯ ಕೇಂದ್ರಗಳ ಉನ್ನತೀಕರಣ’

ಪ್ರಜಾವಾಣಿ ವಾರ್ತೆ

ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಅಂಗವಾಗಿ ಹೊರತಂದಿರುವ ಅಂಚೆ ಚೀಟಿಯನ್ನು ಸಚಿವ ಡಾ.ಕೆ.ಸುಧಾಕರ್ ಬಿಡುಗಡೆಗೊಳಿಸಿದರು. (ಎಡದಿಂದ) ವಿಶ್ವವಿದ್ಯಾಲಯದ ಕುಲಸಚಿವ ಎನ್‌.ರಾಮಕೃಷ್ಣ ರೆಡ್ಡಿ, ಕುಲಪತಿ ಎಸ್‌.ಸಚ್ಚಿದಾನಂದ, ಕರ್ನಾಟಕ ಸರ್ಕಲ್‌ನ ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಶಾರದ ಸಂಪತ್ ಮತ್ತು ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಮಂಜುನಾಥ್ ಹೆಗ್ಡೆ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪ್ರಾಥಮಿಕ ಆರೋಗ್ಯ ಕೇಂದ್ರಗಳು ಆರೋಗ್ಯ ಕ್ಷೇತ್ರದ ಆಧಾರಸ್ತಂಭಗಳು. ಹೀಗಾಗಿ ಮೊದಲ ಹಂತದಲ್ಲಿ ರಾಜ್ಯದ ಒಟ್ಟು 250 ಕೇಂದ್ರಗಳನ್ನು ಉನ್ನತೀಕರಿಸಲು ಮುಂದಾಗಿದ್ದೇವೆ’ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಬುಧವಾರ ಹೇಳಿದರು.

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬ ಹಾಗೂ ವಿಶ್ವ ಆರೋಗ್ಯ ದಿನದ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ನವೀಕೃತ ಕೇಂದ್ರ ಕಚೇರಿ, ಪರೀಕ್ಷಾ ಸ್ಕ್ಯಾನಿಂಗ್ ಕೇಂದ್ರ, ರಕ್ತದಾನ ಮತ್ತು ನೇತ್ರದಾನ ಶಿಬಿರಗಳನ್ನು ಉದ್ಘಾಟಿಸಿದರು. ಅಂಚೆ ಇಲಾಖೆ ಹೊರತಂದಿರುವ ವಿಶೇಷ ಅಂಚೆ ಲಕೋಟೆ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

‘ರಾಜ್ಯದಲ್ಲಿ 2,500 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಗ್ರಾಮೀಣ ಭಾಗದಲ್ಲಿ ಸುಮಾರು 9,600 ಉಪ ಕೇಂದ್ರಗಳಿವೆ. ಇವುಗಳ ಅಭಿವೃದ್ಧಿಯೇ ನಮ್ಮ ಧ್ಯೇಯ. ನೀರು ಹಾಗೂ ವಸತಿಯಂತೆ ಉತ್ತಮ ಆರೋಗ್ಯ ಸೇವೆ ಪಡೆಯುವುದು ಎಲ್ಲರ ಮೂಲಭೂತ ಹಕ್ಕು. ಯಾರು ಕೂಡ ಇದರಿಂದ ವಂಚಿತರಾಗಬಾರದು’ ಎಂದರು.

‘ಬೆಂಗಳೂರಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಲೇ ಇವೆ. ಮೈಸೂರು, ಕಲಬುರ್ಗಿ ಸೇರಿದಂತೆ ಇತರ ಜಿಲ್ಲೆಗಳಲ್ಲೂ ಇದೇ ಪರಿಸ್ಥಿತಿ ಇದೆ. ಇದಕ್ಕೆ ಕಡಿವಾಣ ಹಾಕಲು ಸರ್ಕಾರ ಅನೇಕ ಮಾರ್ಗಸೂಚಿಗಳನ್ನು ಬಿಡುಗಡೆಗೊಳಿಸಿದೆ. ಅವುಗಳನ್ನು ಕಡ್ಡಾಯವಾಗಿ ಪಾಲಿಸಬೇಕಾದ ಹೊಣೆ ನಾಗರಿಕರ ಮೇಲಿದೆ. ಜನರು ಸರ್ಕಾರದ ಜೊತೆ ಕೈಜೋಡಿಸಿದಾಗ ಮಾತ್ರ ಕೊರೊನಾ ವಿರುದ್ಧದ ಹೋರಾಟದಲ್ಲಿ ಗೆಲ್ಲಲು ಸಾಧ್ಯ’ ಎಂದು ಹೇಳಿದರು.

ವಿದ್ಯಾರ್ಥಿಗಳಿಗೆ ಅಕಾಡೆಮಿಕ್ ವಿಮೆ: ‘ತಂದೆ ತಾಯಿ ಮೃತಪಟ್ಟರೆ ವಿದ್ಯಾರ್ಥಿಗಳು ವ್ಯಾಸಂಗ ಮೊಟಕುಗೊಳಿಸುವ ಸಾಧ್ಯತೆ ಇರುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ನಾವು ಅಕಾಡೆಮಿಕ್ ವಿಮೆ ಜಾರಿಗೊಳಿಸಿದ್ದೇವೆ. ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲು ಮುಂದಾಗಿದ್ದೇವೆ. ಇದು ವಿಶ್ವವಿದ್ಯಾಲಯದ ಇತಿಹಾಸದಲ್ಲೇ ಹೊಸ ಹೆಜ್ಜೆ. ಹೀಗೆ ಅನೇಕ ವಿದ್ಯಾರ್ಥಿ ಸ್ನೇಹಿ ಯೋಜನೆಗಳನ್ನು ಜಾರಿಗೊಳಿಸಿದ್ದೇವೆ’ ಎಂದು ಕುಲಪತಿ ಡಾ.ಸಚ್ಚಿದಾನಂದ ತಿಳಿಸಿದರು.

‘ವರ್ಷದಲ್ಲಿ 40 ಸಾವಿರ ನೇತ್ರ ದಾನ’

‘ದೇಶದಲ್ಲಿ ವರ್ಷಕ್ಕೆ ಸುಮಾರು 40 ಸಾವಿರ ನೇತ್ರದಾನ ನಡೆಯುತ್ತಿದೆ. ಈ ಪೈಕಿ ಸುಮಾರು 30 ರಿಂದ 35 ಸಾವಿರ ಕಣ್ಣುಗಳು ಮಾತ್ರ ಸಕಾಲಕ್ಕೆ ಲಭ್ಯವಾಗುತ್ತಿವೆ. ಐದು ಸಾವಿರದಷ್ಟು ಕಣ್ಣುಗಳನ್ನು ಕಸಿ ಮಾಡಲು ಸಾಧ್ಯವಾಗುತ್ತಿಲ್ಲ’ ಎಂದು ಸುಧಾಕರ್ ಹೇಳಿದರು.

ಸುಧಾಕರ್ ಬುಧವಾರ ನೇತ್ರದಾನಕ್ಕೆ ಹೆಸರು ನೋಂದಾಯಿಸಿಕೊಂಡರು. ಅವರಿಗೆ ಮಿಂಟೋ ನಿರ್ದೇಶಕಿ ಡಾ.ಸುಜಾತ ರಾಥೋಡ್ ಪ್ರಮಾಣ ಪತ್ರ ಹಸ್ತಾಂತರಿಸಿದರು.

‘ವ್ಯಕ್ತಿ ಮೃತಪಟ್ಟ 6 ಗಂಟೆಯೊಳಗೆ ನೇತ್ರದಾನವಾಗಬೇಕು. ವ್ಯಕ್ತಿ ಮರಣ ಹೊಂದಿದ ಕೂಡಲೇ ಸಂಬಂಧಿಕರು ನೇತ್ರ ಆಸ್ಪತ್ರೆಗೆ ಮಾಹಿತಿ ನೀಡಬೇಕು. ನೇತ್ರದಾನ ಮಹಾದಾನ ಎಂಬ ಬಗ್ಗೆ ಜಾಗೃತಿ ಮೂಡಿಸಬೇಕು’ ಎಂದರು.

ಸುದ್ದಿ 2 ನಿಮಿಷ

ಬಿಐಎಎಲ್‌ಗೆ ‘ಗೋಲ್ಡನ್ ಪೀಕಾಕ್’ ರಾಷ್ಟ್ರೀಯ ಗೌರವ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮವು (ಬಿಐಎಎಲ್) 2020ನೇ ಸಾಲಿನ ‘ಗೋಲ್ಡನ್ ಪೀಕಾಕ್’ ರಾಷ್ಟ್ರೀಯ ಪ್ರಶಸ್ತಿ ಪಡೆದಿದೆ. ಬಿಐಎಎಲ್ ಹಮ್ಮಿಕೊಂಡಿರುವ ‘ನಮ್ಮ ಶಿಕ್ಷಣ’ ಕಾರ್ಯಕ್ರಮಕ್ಕೆ ಈ ಪುರಸ್ಕಾರ ಒಲಿದಿದೆ.

‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸುತ್ತಲಿನ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಉದ್ದೇಶದಿಂದ ನಾವು ಈ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಇದು ಅತ್ಯಂತ ಯಶಸ್ವಿಯಾಗಿ ಸಾಗುತ್ತಿದೆ. ಶಿಕ್ಷಣದಿಂದ ವಿದ್ಯಾರ್ಥಿಗಳ ಬದುಕಿನಲ್ಲಿ ಬದಲಾವಣೆ ತರಬಹುದು, ಸಮಾಜದಲ್ಲಿ ಕ್ರಾಂತಿ ಸೃಷ್ಟಿಸಬಹುದು ಎಂಬುದನ್ನು ನಾವು ಬಲವಾಗಿ ನಂಬಿದ್ದೇವೆ. ಈ ಪುರಸ್ಕಾರ ಇನ್ನಷ್ಟು ಜನಪರ ಕೆಲಸಗಳನ್ನು ಮಾಡಲು ಪ್ರೇರಣೆಯಾಗಿದೆ’ ಎಂದು ಬಿಐಎಎಲ್ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಹರಿ ಮರಾರ್ ತಿಳಿಸಿದ್ದಾರೆ.

‘ನಮ್ಮ ಶಿಕ್ಷಣ’ ಕಾರ್ಯಕ್ರಮದ ಅಡಿಯಲ್ಲಿ ಬಿಐಎಎಲ್ ಐದು ಸರ್ಕಾರಿ ಶಾಲೆಗಳನ್ನು ಸ್ಥಾಪಿಸಿದ್ದು, ಆರು ಶಾಲೆಗಳನ್ನು ಉನ್ನತೀಕರಿಸಿದೆ. 21 ಅಂಗನವಾಡಿಗಳನ್ನೂ ಅಭಿವೃದ್ಧಿಪಡಿಸಿದೆ’ ಎಂದು ಪ್ರಕಟಣೆ ತಿಳಿಸಿದೆ.

‘ಗತವೈಭವ ನೆನಪಿಸುವ ಕೃತಿ’



ಜೀರಿಗೆ ಲೋಕೇಶ್ ಅವರು ಪುಸ್ತಕ ಬಿಡುಗಡೆಗೊಳಿಸಿದರು. ಲೇಖಕ ರಮಾನಂದ ಹಾಗೂ ಗುರುರಾಜ ಪೋಶೆಟ್ಟಿಹಳ್ಳಿ ಇದ್ದಾರೆ.

ಬೆಂಗಳೂರು: ‘ಕಾದಂಬರಿಕಾರ ಕೆ.ರಮಾನಂದ ರಚಿಸಿರುವ ‘ಚಾರಿತ್ರಿಕ ವ್ಯಕ್ತಿಚಿತ್ರ ಶ್ರೀಕೃಷ್ಣದೇವರಾಯ’ ಕೃತಿಯು ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ನೆನಪಿಸುವಂತಿದೆ’ ಎಂದು ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷ ಜೀರಿಗೆ ಲೋಕೇಶ್ ಹೇಳಿದರು.

ಗಾಂಧಿ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದರು.

ಲೇಖಕ ಗುರುರಾಜ ಪೋಶೆಟ್ಟಿಹಳ್ಳಿ, ‘ರಮಾನಂದ ಅವರು ಐತಿಹಾಸಿಕ ರಾಜಮನೆತನದ ನಾಯಕನೊಬ್ಬನ ಬಗ್ಗೆ ಮನಮುಟ್ಟುವ ರೀತಿಯಲ್ಲಿ ಬರೆದಿದ್ದಾರೆ. ಇದು ಅವರ ಗದ್ಯ ಬರವಣಿಗೆಯ ನಿಪುಣತೆಗೆ ಹಿಡಿದ ಕೈಗನ್ನಡಿ’ ಎಂದು ತಿಳಿಸಿದರು.

32 ಶಾಲೆ ದತ್ತು ಪಡೆದ ಚಿದಾನಂದ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಸದಸ್ಯ, ಬಿಜೆಪಿಯ ಚಿದಾನಂದ ಎಂ. ಗೌಡ ಅವರು 32 ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡಿದ್ದಾರೆ.

ಆಗ್ನೇಯ ಪದವೀಧರ ಕ್ಷೇತ್ರ ಪ್ರತಿನಿಧಿಸುವ ಚಿದಾನಂದ ಗೌಡ, ತಮ್ಮ ಮತಕ್ಷೇತ್ರದ ದಾವಣಗೆರೆ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ ಕೋಲಾರ ಜಿಲ್ಲೆಯ ವ್ಯಾಪ್ತಿಯಲ್ಲಿರುವ 32 ತಾಲ್ಲೂಕುಗಳಿಂದ ಒಂದೊಂದು ಶಾಲೆಯನ್ನು ದತ್ತು ಪಡೆದಿದ್ದಾರೆ.

‘ಅವರ ಮಾದರಿಯನ್ನು ಇತರೆ ಜನಪ್ರತಿನಿಧಿಗಳೂ ಅನುಸರಿಸಬೇಕು’ ಎಂದು ರಾಜ್ಯ ಸರ್ಕಾರದ ಶೈಕ್ಷಣಿಕ ಸಲಹೆಗಾರ ಪ್ರೊ. ಎಂ.ಆರ್. ದೊರೆಸ್ವಾಮಿ ಕೋರಿದ್ದಾರೆ.

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಎಸ್‌.ಸಿ. ಎಸ್‌.ಟಿ ಕಲ್ಯಾಣ ಸಮಿತಿಗೆ ದೂರು

‘ನೇಮಕಾತಿ, ಬಡ್ತಿಯಲ್ಲಿ ನಿಯಮ ಉಲ್ಲಂಘನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಹಾಗೂ ಬಡ್ತಿ ನಿಯಮಗಳನ್ನು ಸರಿಯಾಗಿ ಪಾಲಿಸದೆ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ತಾರತಮ್ಯ ಎದುರಿಸುತ್ತಿದ್ದಾರೆ ಎಂದು ವಿಧಾನಸಭೆಯ ಅನುಸೂಚಿತ ಜಾತಿ, ಪಂಗಡಗಳ (ಎಸ್‌ಸಿ,ಎಸ್‌ಟಿ) ಕಲ್ಯಾಣ ಸಮಿತಿಗೆ ದೂರು ನೀಡಲಾಗಿದೆ.

ವಿಶ್ವವಿದ್ಯಾಲಯದ ಕುಲಸಚಿವರಾದ (ಆಡಳಿತ) ಕೆ. ಜ್ಯೋತಿ, ಸಿಂಡಿಕೇಟ್ ಸದಸ್ಯರು, ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಸಮಿತಿಗೆ ದೂರು ನೀಡಿದರು.

ಸಮಿತಿಯ ಅಧ್ಯಕ್ಷ ಎಂ.ಪಿ. ಕುಮಾರಸ್ವಾಮಿ ನೇತೃತ್ವದ ಸಮಿತಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಈ ದೂರು ಸಲ್ಲಿಸಲಾಯಿತು.

‘ಯಾವುದೇ ನೇಮಕಾತಿಯಲ್ಲಿ ಕುಲಪತಿಯವರು ನೀತಿ–ನಿಯಮ ಪಾಲಿಸಿಲ್ಲ’ ಎಂದು ಕುಲಸಚಿವರು ದೂರು ನೀಡಿದರು.

ಅವ್ಯವಸ್ಥೆಗೆ ಅಸಮಾಧಾನ: ಸ್ನಾತಕೋತ್ತರ ಪದವೀಧರರ ವಸತಿ ನಿಲಯಕ್ಕೆ ಭೇಟಿ ನೀಡಿದ ಎಂ.ಪಿ. ಕುಮಾರಸ್ವಾಮಿ ಅಲ್ಲಿನ ಅವ್ಯವಸ್ಥೆ ಕಂಡು ಅಸಮಾಧಾನ ವ್ಯಕ್ತಪಡಿಸಿದರು.

ಮುರಿದ ಬಾಗಿಲುಗಳು, ಒಂದೇ ಕೊಠಡಿಯಲ್ಲಿ ಏಳು ವಿದ್ಯಾರ್ಥಿಗಳು ಇದ್ದ ಸ್ಥಿತಿ ಕಂಡ ಅವರು, ಕೂಡಲೇ ಅವ್ಯವಸ್ಥೆ ಸರಿಪಡಿಸುವಂತೆ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಮಿತಿಯ ಸದಸ್ಯರು ಮತ್ತು ಶಾಸಕರಾದ ಎಚ್‌.ಕೆ.ಕುಮಾರಸ್ವಾಮಿ, ಅವಿನಾಶ್ ಜಾಧವ್, ಅಶ್ವಿನಿ ಕುಮಾರ್, ಪ್ರೊ.ಲಿಂಗಣ್ಣ ಹಾಜರಿದ್ದರು.

ಪಟ್ಟಿ ನೀಡಲಿ: ‘ಒಬ್ಬ ಅಭ್ಯರ್ಥಿಯನ್ನೂ ಅಕ್ರಮವಾಗಿ ನೇಮಕ ಮಾಡಿಲ್ಲ ಮತ್ತು ಯಾರಿಗೂ ನಿಯಮಕ್ಕೆ ವಿರುದ್ಧವಾಗಿ ಬಡ್ತಿ ನೀಡಿಲ್ಲ. ಬಡ್ತಿ ಪ್ರಕ್ರಿಯೆ ನಡೆಯುವ ಸಂದರ್ಭದಲ್ಲಿ ಈಗಿನ ಕುಲಸಚಿವರೂ ಇರಲಿಲ್ಲ. ಆರೋಪ ಮಾಡುವವರು, ಯಾರನ್ನು ಅಕ್ರಮವಾಗಿ ನೇಮಕ ಮಾಡಲಾಗಿದೆ ಮತ್ತು ಯಾರಿಗೆ ನಿಯಮ ಬಾಹಿರವಾಗಿ ಬಡ್ತಿ ನೀಡಲಾಗಿದೆ ಎಂಬ ಪಟ್ಟಿ ನೀಡಲಿ’ ಎಂದು ಪ್ರೊ. ವೇಣುಗೋಪಾಲ್ ‘ಪ್ರಜಾವಾಣಿ’ಗೆ ಹೇಳಿದರು.

‘ಈ ಪ್ರಕ್ರಿಯೆ ನಿಯಮ ಬಾಹಿರವಾಗಿ ನಡೆದಿದ್ದರೆ ಈ ವೇಳೆಗಾಗಲೇ ಹಲವರು ನ್ಯಾಯಾಲಯದ ಮೊರೆ ಹೋಗಬೇಕಾಗಿತ್ತು. ಸಿಂಡಿಕೇಟ್ ಅನುಮತಿ ಪಡೆದೇ ಎಲ್ಲ ಪ್ರಕ್ರಿಯೆ ನಡೆಸಲಾಗಿದೆ. ನನ್ನ ಆದೇಶದಲ್ಲಿ ಯಾವುದೇ ತಪ್ಪಾಗಿಲ್ಲ. ತಪ್ಪಾಗಿದ್ದರೆ, ಅದನ್ನು ಹಿಂಪಡೆಯುವ ಅವಕಾಶವೂ ಇದೆ’ ಎಂದು ಅವರು ಸ್ಪಷ್ಟಪಡಿಸಿದರು.

ನಗರದಲ್ಲಿ ಇಂದು

ಮಾನಿಷಾದ ನಾಟಕ ಪ್ರದರ್ಶನ: ರೂಪಾಂತರ, ವಿನ್ಯಾಸ ಮತ್ತು ನಿರ್ದೇಶನ: ರೇವಂತ್ ಮಾಳಿಗೆ, ಪ್ರಸ್ತುತಿ: ಕರಣ ಥಿಯೇಟರ್, ಸ್ಥಳ: ನಯನ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 7.

ಎಲ್. ಹನುಮಂತಯ್ಯ

‘ಅಧಿಕಾರ ರಾಜಕಾರಣದಲ್ಲಿ ಚಳವಳಿಗಾರರ ಪಾಲ್ಗೊಳ್ಳುವಿಕೆ ಮತ್ತು ಯಶಸ್ಸಿನ ಸಾಧ್ಯತೆಗಳು’ ಕುರಿತು ವೆಬಿನಾರ್: ಮಾತನಾಡುವವರು– ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಅಧ್ಯಕ್ಷತೆ: ಜೆಡಿಎಸ್ ಮುಖಂಡ ವೈ.ಎಸ್.ವಿ.ದತ್ತ, ಆಯೋಜನೆ–ಸ್ಫೂರ್ತಿಧಾಮ, ಸಂಜೆ 6.30. (link: http://forms.gle/b6aciz3LfiKR5zYU6)

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Buying

Others

WANTED OWNER DRIVEN Accident Free Aspirefigo/ Brio/ Celerio/ Pulse Car 5 Years Reasonable Price, 9886233136

BUSINESS

Business Offers

Finance

NRI'S INVESTMENT And Finance Available On Low Interest Against, Properties, Land&Building,Sites, Flats, (Also)Business, Companies Call: 7411265189

RENTAL PROPERTIES

Accommodation Available

House

INDEPENDENT HOUSE FOR RENT in AGS Layout-Ground Floor,2BHK, 2 Bathrooms. Vegetarian family preferred. Contact: 9845091600

Industrial And Factory

4ACRES OF land Available on NH7 80km from Bangalore and 40km from Hosur Suitable for Warehouse and Factories Contact 8056149444

REAL ESTATE SELLING

Agricultural Land

Mysore

FOR SALE, 1 Acre Prime Agriculture Land Facing NH-766, between Mysore and T. Narasipura at Inam-Uttanahalli Village, Mysore Taluk. Suitable for Complex, Bunk, Lodging, Hotel etc. Price: 3 Crores (Nego) Contact: 7338091714

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Sites

Bannerghatta Road

APPROVED LAYOUT Anekal Town Planning at Bannerghatta Road, 30X40, 40X60 after National Park. Contact- 9886241744

Mysore

SITE FOR Sale: Muda Site 80X120 ft., North East Corner Site, Opp. Kusuma Chandrashekar Choultry, Off. KRS Road, 2 Km from Ring Road, Mysore. Call: 9845121600, 9886872757

JOB OPPORTUNITIES

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Skilled Labour

REQUIRED CCTV Technician for Cabling and Installation of Cameras, Part/ Full Time. 9900061547

Teachers/ Professors

WANTED QUALIFIED Experienced Teacher to teach Kids Studying in Pre-School at Respective Residences at Jayamahal/ J.P. Nagar& Kalyannagar. Contact-8197722777 /9611411114

PERSONAL

Change of Name

KUMARESAN, FATHER/O, 14833657P, SEP/MT, K JEEVA, Vill- OMAKUPPAM, MARIMANIKUPPAM, VANIYAMBADI, VELLORE, TAMIL NADU, have changed my name from KUMARESAN to G KUMARESAN, 06/04/2021, Notary K.V. Mani, Bangalore

I, PUSPAVATHI Bai I.V aged 21 Years D/o Venkatesh Naik r/a #16, Sowbhagya Nilaya, 2nd Cross, Kithaganur Colony, Parvathinagar, Near Water Tank, Medahalli, Virgonagar Post, Bangalore-49 have Changed my name to MEGHANA V NAIK vide affidavit dated 07.03.2021 before notary K.B. SADHASHIVAPPA, Bangalore

I, MARY REBECCA D'SOUZA residing at No.20, Magnificat, 2nd Block, 1st Street, Prakruthi Township, Near Logos Church, Babusapalya, Bangalore-560043 have changed my name to MARY REBECCA CORREA vide affidavit dated 07/04/2021 sworn before notary Y.R.Chandrasekar, Bangalore.

PALANISAMY ABINAYA, W/o 14846304N, SEP/MT, P ANANDAN, R/at. 2/116, NEELIYANKATTUPUDUR, SILUVAMPATTI, NAMAKKAL, TAMIL NADU, have changed my name from PALANISAMY ABINAYA to P ABINAYA, 06/04/2021, Notary K.V.Mani, Bangalore

I, SHWETHARANI PUVADDI NATARAJU residing at #1, 8th cross, Marutinagar, Ittamadu Bangalore-85 have changed my name to SNEHA PUVADDI NATARAJU vide affidavit dated 06-04-2021, before Notary Ravi Bangalore.

SHANTA M/O 14839374K-SEP/MT- KHARADE JANARDHAN BHIMRAO R/a Manjarde, Tasgion, Sangli, Maharashtra changed name from SHANTA to SHANTA BHIMRAO KHARADE notary KV Mani Bangalore.

BHIM RAO F/o 14839374K-SEP/MT- KHARADE JANARDHAN BHIMRAO R/a Manjarde, Tasgion, Sangli, Maharashtra changed name from BHIM RAO to BHIMRAO SAKHARAM KHARADE notary KV Mani Bangalore.

6497539K, SEP/ASH A. Pachiyappan, 2ATC, son name service record P. LOKESH WARAN instead of P. LOKESHWARAN, notary K.V Mani, Bangalore.

6497539K, SEP/ASH A. Pachiyappan, 2ATC, daughter name service record P. JASVIKA SHREE instead of P. JASVIKASHREE, notary K.V Mani, Bangalore.

DH Classifieds
BOOK YOUR AD FOR SATURDAY & GET 50% OFF ON SUNDAY AD
For more information contact:
9880856233
9731810277 | 9901641752
9845114560 | 9886213331
*condition apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ನಗರಸಭಾ ಕಾರ್ಯಾಲಯ, ಕೋಲಾರ

ಸಂಖ್ಯೆ: ನಸಕೋ/ತಾಶಾ/ಟೆಂಡರ್/ಸಿಆರ್/77/2020–21 ದಿನಾಂಕ: 03.04.2021

ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1,2 & 3 ಹಾಗೂ ಕೆ.ಜಿ–1 & 2ರ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭೆ ನಿಧಿಯಡಿಯಲ್ಲಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್ **http://eproc.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದುದಾಗಿದೆ.

1. ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ : **20.04.2021ರ ಸಂಜೆ 5.30 ಗಂಟೆವರೆಗೆ.**
2. ಟೆಂಡರ್‌ನ್ನು ತೆರೆಯುವ ದಿನಾಂಕ : **22.04.2021ರ ಬೆಳಿಗ್ಗೆ 11.00 ಗಂಟೆಗೆ.**

ಸಂ.	ಕಾಮಗಾರಿಗಳ ವಿವರ	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
	2020–21 ನಗರಸಭೆ ನಿಧಿ		
1.	DMA/2020-21/WS/WORK_INDENT113948	26,78,130.00	3ತಿಂಗಳು
2.	DMA/2020-21/OW/WORK_INDENT114551	4,44,751.20	1ತಿಂಗಳು
3.	DMA/2020-21/EL/WORK_INDENT114701	4,32,918.20	2ತಿಂಗಳು
4.	DMA/2020-21/EL/WORK_INDENT114702	89,653.12	1ತಿಂಗಳು
5.	DMA/2020-21/OW/WORK_INDENT115218	5,14,307.96	2ತಿಂಗಳು
6.	CMC/CW/TENDER/CR/74 2020-21	20,14,160.00	3ತಿಂಗಳು
	2016–17ನೇ ಸಾಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ		
7.	DMA/2020-21/IND11371/CALL-2	4,39,000.00	2ತಿಂಗಳು
8.	DMA/2020-21/IND11809 CALL-2	40,00,000.00	2ತಿಂಗಳು
	2020–21ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ		
9.	DMA/2020-21/IND11808	40,00,000.00	2ತಿಂಗಳು
10.	DMA/2020-21/EL/WORK_INDENT111205/CALL-2	64,81,312.00	3ತಿಂಗಳು

ಸೂಚನೆ : ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಅಧ್ಯಕ್ಷರು ನಗರಸಭೆ, ಕೋಲಾರ | ಉಪಾಧ್ಯಕ್ಷರು ನಗರಸಭೆ, ಕೋಲಾರ | ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಕೋಲಾರ | ಪೌರಾಯುಕ್ತರು ನಗರಸಭೆ, ಕೋಲಾರ

ವಾಸಸಂಇ/ಕೋಲಾರ/ಶಿರಡಿ ಸಾಯಿ/08/2021–22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅಮೆರಿಕದಲ್ಲಿ ಕನ್ನಡ ಶಾಲೆ ಉದಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ ದಕ್ಷಿಣ ಫ್ಲೋರಿಡಾದಲ್ಲಿ ಹೊಸ ಕನ್ನಡ ಶಾಲೆಯೊಂದು ಉದಯವಾಗಿದೆ. ಡಾ. ನಾಗರಾಜ್ ನಾಗತಿಹಳ್ಳಿ ಎಂಬುವವರ ನೇತೃತ್ವದಲ್ಲಿ ‘ನಂದಿ ಕನ್ನಡ ಶಾಲೆ’ ನಿರ್ಮಿಸಲಾಗಿದೆ.

ಮಾ.14ರಂದು ಈ ಶಾಲೆ ಆರಂಭವಾಗಿದೆ. ಕನ್ನಡ ಅಕಾಡೆಮಿ ಸಹಯೋಗದಲ್ಲಿ ನಂದಿ ಕನ್ನಡ ಕೂಟದ ಜೊತೆಗೂಡಿ ಆರಂಭಿಸಲಾಗಿರುವ ಈ ಶಾಲೆಯನ್ನು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಆನ್‌ಲೈನ್‌ನಲ್ಲಿ ಉದ್ಘಾಟಿಸಿದರು. ನಾಗರಾಜ್ ಅವರ ಕನ್ನಡದ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಮೆರಿಕನ್ನಡದ ಮಕ್ಕಳ ಜೀವನಶೈಲಿಯನ್ನು ಗಮನದಲ್ಲಿ ಇಟ್ಟುಕೊಂಡು ಕನ್ನಡ ಪಠ್ಯಪುಸ್ತಕವನ್ನು ರಚಿಸಲಾಗಿದೆ. ಶಿಕ್ಷಣದ ಜೊತೆಗೆ, ಸರಳವಾದ ಕನ್ನಡವನ್ನು ಬಳಸಿ ಪರಿಪೂರ್ಣವಾದ ಎಂಟು ಪುಸ್ತಕಗಳನ್ನೊಳಗೊಂಡ, ಪಠ್ಯಕ್ರಮವನ್ನು 13 ವರ್ಷಗಳ ಅವಧಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ’ ಎಂದು ನಾಗರಾಜ್ ಹೇಳಿದರು.

‘ಈ ಪಠ್ಯಕ್ರಮವು ಮೈಸೂರು ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದಿದ್ದು, ವಿದೇಶದಲ್ಲಿ ಕನ್ನಡ ಶಿಕ್ಷಣಕ್ಕೆ ಅರ್ಹವಾಗಿದೆ. ಈಗ ಈ ಪುಸ್ತಕಗಳನ್ನು ಪ್ರಪಂಚದಾದ್ಯಂತದ ಕನ್ನಡ ಕಲಿಸಲು ಶಾಲೆಗಳಲ್ಲಿ ಬಳಸಲಾಗುತ್ತಿದೆ. ಈ ಕನ್ನಡ ಅಕಾಡೆಮಿ ಲಾಭರಹಿತ ಸಂಸ್ಥೆಯಾಗಿದೆ’ ಎಂದು ತಿಳಿಸಿದರು.

ಶಾಲೆಯಲ್ಲಿ 6 ಶಿಕ್ಷಕರು, ಮೂವರು ನಿರ್ವಾಹಕರು ಕೆಲಸ ಮಾಡುತ್ತಿದ್ದು, 42 ವಿದ್ಯಾರ್ಥಿಗಳು ಓದುತ್ತಿದ್ದಾರೆ.

ಅಮೆರಿಕದಲ್ಲಿ ನೆಲೆಸಿರುವ ಸಂಗೀತಗಾರರಾದ ಸುನೀತಾ ಅನಂತಸ್ವಾಮಿ ‘ಕನ್ನಡವೆಂದರೆ ಬರಿ ನುಡಿಯಲ್ಲ...’ ಹಾಡನ್ನ ಹೇಳುವ ಮೂಲಕ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು.

ಚಲನಚಿತ್ರ ನಿರ್ದೇಶಕ ಡಾ.ನಾಗತಿಹಳ್ಳಿ ಚಂದ್ರಶೇಖರ್ ಮತ್ತು ನಗೆ ಭಾಷಣಕಾರ ಪ್ರೊ. ಕೃಷ್ಣೇಗೌಡ ಭಾಗವಹಿಸಿದ್ದರು. ನಂದಿ ಕನ್ನಡ ಕೂಟದ ಅಧ್ಯಕ್ಷರಾದ ಮೈಥಿಲಿ ಮೂರ್ತಿ, ಡಾ.ಹಲ್ಲಗೆರೆ ಮೂರ್ತಿ, ರಮಾ ಸುರೇಶ್, ಮತ್ತು ಪ್ರೊ. ಮಹಾದೇವ್ ಭಟ್ ಹಾಜರಿದ್ದರು.

ನೀರಿನ ಕೊರತೆ ಬಗ್ಗೆ ದೂರು ಬಂದರೆ ಅಧಿಕಾರಿಗಳು ಭೇಟಿ

ಟ್ಯಾಂಕರ್ ಮಾಫಿಯಾ ತಡೆಗೆ ವಿಶೇಷ ನಿಗಾ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೇಸಿಗೆ ಶುರುವಾಗುತ್ತಿದ್ದಂತೆ ನಗರದ ಹೊರವಲಯದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಜಲಮಂಡಳಿಯು ಕಡಿಮೆ ದರದಲ್ಲಿ ಟ್ಯಾಂಕರ್ ನೀರು ಪೂರೈಸುತ್ತಿದೆ. ಜೊತೆಗೆ ಖಾಸಗಿ ಟ್ಯಾಂಕರ್‌ಗಳಿಂದಲೂ ಜನರು ನೀರು ತರಿಸಿಕೊಳ್ಳುತ್ತಿದ್ದಾರೆ.

ಕಾವೇರಿ ನೀರಿನ ಸಂಪರ್ಕ ಇಲ್ಲದ ಪ್ರದೇಶಗಳಿಗೆ ಟ್ಯಾಂಕರ್‌ಗಳ ಮೂಲಕ 6500 ಲೀಟರ್‌ಗೆ ₹540ರಂತೆ ಮಂಡಳಿ ನೀರು ಪೂರೈಸುತ್ತಿದೆ.

ಅಲ್ಲದೆ, ಬಿಬಿಎಂಪಿ ವ್ಯಾಪ್ತಿಯಲ್ಲಿ 9 ಸಾವಿರ ಸಾರ್ವಜನಿಕ ಕೊಳವೆ ಬಾವಿಗಳನ್ನು ಮಂಡಳಿ ನಿರ್ವಹಿಸುತ್ತಿದೆ.

‘ನೀರಿನ ಕೊರತೆ ಬಗ್ಗೆ ದೂರು ಬರುವ ಸ್ಥಳಗಳಲ್ಲಿ ಪ್ರತಿದಿನ ಬೆಳಿಗ್ಗೆ 7ಕ್ಕೆ ಮುಖ್ಯ ಎಂಜಿನಿಯರ್ ಸೇರಿದಂತೆ ಎಲ್ಲ ಹಿರಿಯ ಅಧಿಕಾರಿಗಳು ಭೇಟಿ ನೀಡುವಂತೆ ಸೂಚಿಸಲಾಗಿದೆ. ಕೆಳಹಂತದ ಸಿಬ್ಬಂದಿ ಟ್ಯಾಂಕರ್ ಮಾಫಿಯಾ ಜೊತೆಗೆ ಕೈಜೋಡಿಸಿದ್ದರೂ, ಈ ಅಧಿಕಾರಿಗಳು ಅವರ ವಿರುದ್ಧ ಕ್ರಮ ಕೈಗೊಳ್ಳಲಿದ್ದಾರೆ. ಅಲ್ಲದೆ, ಸಾರ್ವಜನಿಕರ ಅಹವಾಲುಗಳನ್ನು ಆಲಿಸಲಿದ್ದಾರೆ’ ಎಂದು ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್ ಹೇಳಿದ್ದಾರೆ.

‘ಖಾಸಗಿ ಟ್ಯಾಂಕರ್ ಮಾಫಿಯಾ ತಡೆಗಟ್ಟುವ ನಿಟ್ಟಿನಲ್ಲಿ ಮಂಡಳಿಯಿಂದ ವಿಶೇಷ ನಿಗಾ ತಂಡ (ವಿಜಿಲೆನ್ಸ್ ಟೀಂ) ರಚಿಸಲಾಗಿದೆ. ಈ ಸಂಬಂಧ ದೂರುಗಳನ್ನು ತಂಡ ಪರಿಶೀಲಿಸಲಿದೆ’ ಎಂದರು.

ಮಂಡಳಿಯ ಇತರೆ ಕ್ರಮಗಳು

- ಬೇಸಿಗೆಯಲ್ಲಿ ನೀರಿನ ಸರಬರಾಜು ಮಾಡಲು ಮಂಡಳಿಯ 35 ಉಪವಿಭಾಗಗಳಲ್ಲಿ ನೋಡಲ್ ಅಧಿಕಾರಿಗಳ ನೇಮಕ
- ಎಲ್ಲ ಉಪವಿಭಾಗಗಳಲ್ಲಿ ಸಮಾನ ಪ್ರಮಾಣದ ನೀರಿನ ವಿತರಣೆ
- 125 ಸೇವಾ ಠಾಣೆಗಳಲ್ಲಿ ದೂರವಾಣಿ ಸಂಖ್ಯೆ ಒದಗಿಸಲಾಗಿದೆ
- ಆನ್‌ಲೈನ್ ಮೂಲಕ ದೂರು ನೀಡಬಹುದು.
- ನೀರಿನ ಕೊರತೆಯಿದ್ದಲ್ಲಿ ಸಂಪರ್ಕಿಸಬೇಕಾದ ಸಂಖ್ಯೆ– 1916 ಮತ್ತು 080–22238888.

ಕೋವಿಡ್ ನಿಯಂತ್ರಣ ಮಾರ್ಗಸೂಚಿ ಕಡೆಗಣನೆ • ಕಠಿಣ ಕ್ರಮಕ್ಕೆ ಮುಂದಾದ ಅಧಿಕಾರಿಗಳು

22 ಉದ್ದಿಮೆಗಳನ್ನು ಮುಚ್ಚಿಸಿದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹರಡುವುದನ್ನು ತಡೆಗಟ್ಟುವ ಸಲುವಾಗಿ ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಕಡೆಗಣಿಸುತ್ತಿರುವ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಮಳಿಗೆಗಳು ಹಾಗೂ ಸೂಪರ್ ಮಾರ್ಕೆಟ್‌ಗಳ ಮೇಲಿನ ದಾಳಿಯನ್ನು ಬಿಬಿಎಂಪಿ ಮುಂದುವರಿಸಿದೆ.

ಸಿಬ್ಬಂದಿ ಮಾಸ್ಕ್ ಧರಿಸದೇ ಇರುವುದು, ಗ್ರಾಹಕರು ಅಂತರ ಕಾಪಾಡುವುದಕ್ಕೆ ಸೂಕ್ತ ವ್ಯವಸ್ಥೆ ಕಲ್ಪಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪಾಲಿಕೆ ಅಧಿಕಾರಿಗಳು ಬುಧವಾರ ಒಂದೇ ದಿನ 22 ಉದ್ದಿಮೆಗಳನ್ನು ಮುಚ್ಚಿಸಿದ್ದಾರೆ.

ಪಶ್ಚಿಮ ವಲಯದಲ್ಲಿ ಚಾಮರಾಜಪೇಟೆಯ ಮಂಜುನಾಥ ಟಿಫಿನ್ ಸೆಂಟರ್, ಹೋಟೆಲ್ ಶ್ರೀಹರ್ಷ ಹಾಗೂ ರಾಜಾಜಿನಗರದ ಗಣೇಶ ಜ್ಯೂಸ್ ಸೆಂಟರ್‌ಗಳನ್ನು ಅಧಿಕಾರಿಗಳು ಮುಚ್ಚಿಸಿದ್ದಾರೆ. ಪಶ್ಚಿಮ ವಲಯದಲ್ಲಿ ಆರು ಉದ್ದಿಮೆಗಳಿಗೆ ಒಟ್ಟು 12,750 ದಂಡ ವಿಧಿಸಲಾಗಿದೆ.

ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಪಾಲಿಸದ ಕಾರಣಕ್ಕೆ ವಿನಾಯಕನಗರದ ಶಂಕರ್‌ನಾಗ್ ವೃತ್ತದ ಹೋಟೆಲ್ ಒಂದನ್ನು ಬಿಬಿಎಂಪಿ ಅಧಿಕಾರಿಗಳು ಬುಧವಾರ ಮುಚ್ಚಿಸಿದರು

ಯಲಹಂಕ ವಲಯದಲ್ಲಿ ಝುತಾರ್ ಮಲ್ಟಿ ಕುಸೈನ್ ರೆಸ್ಟೋರೆಂಟ್‌ಗೆ ಬೀಗಮುದ್ರೆ ಹಾಕಲಾಗಿದೆ. ಮಹದೇವಪುರ ವಲಯದ ಹಗದೂರು ವಾರ್ಡ್‌ನಲ್ಲಿ ಮಿಯಾಮಿ ಸೂಪರ್ ಮಾರ್ಕೆಟ್, ಮಾರತಹಳ್ಳಿಯ ಪ್ಯಾರಡೈಸ್ ರೆಸ್ಟೋರೆಂಟ್ ಹಾಗೂ ರಿಲಯನ್ಸ್ ಸ್ಮಾರ್ಟ್ ಪಾಯಿಂಟ್ ಮಳಿಗೆ, ಹೊರಮಾವು ವಾರ್ಡ್‌ನ ಲಸ್ಸಿ ಶಾಪ್‌ಗಳನ್ನು ಅಧಿಕಾರಿಗಳು ಮುಚ್ಚಿಸಿದರು.

ಉದ್ದಿಮೆಗಳಿಗೆ ಬೀಗಮುದ್ರೆ ವಿವರ

ವಲಯ	ಸಂಖ್ಯೆ
ಯಲಹಂಕ	1
ಮಹದೇವಪುರ	4
ಪಶ್ಚಿಮ	3
ದಕ್ಷಿಣ	4
ಬೊಮ್ಮನಹಳ್ಳಿ	2
ಪೂರ್ವ	3
ಆರ್.ಆರ್.ನಗರ	3
ದಾಸರಹಳ್ಳಿ	2

ರಾಜರಾಜೇಶ್ವರಿ ನಗರ ವಲಯದ ನಾಗರಬಾವಿಯ ಉಡುಪಿ ಹೋಟೆಲ್, ರಾಜರಾಜೇಶ್ವರಿ ನಗರ ವಾರ್ಡ್‌ನ ಕಾಪಿಕಟ್ಟೆ ಹಾಗೂ ಇಂದ್ರಪ್ರಸ್ಥ ಹೋಟೆಲ್‌ಗಳನ್ನು ಬಂದ್ ಮಾಡಿಸಿದರು. ಪೂರ್ವವಲಯದ ಗಂಗೇನಹಳ್ಳಿ ವಾರ್ಡ್‌ನಲ್ಲಿ ಮೂರು ಮಳಿಗೆಗಳಿಗೆ ಅಧಿಕಾರಿಗಳು ಬಾಗಿಲು ಹಾಕಿಸಿದರು.

ದಕ್ಷಿಣ ವಲಯದಲ್ಲಿ ಶಿವಶಕ್ತಿ ಟಿಫಿನ್ ಸೆಂಟರ್, ಲಕ್ಷ್ಮೀ ಈಟಿಂಗ್ ಪಾಯಿಂಟ್, ಹೋಟೆಲ್ ಕಬ್ಬಾಳ್ ಹಾಗೂ ಶ್ರೀಮಾತಾ ಚಿಕನ್ ಸೆಂಟರ್‌ಗಳನ್ನು ಮುಚ್ಚಿಸಿದರು. ದಾಸರಹಳ್ಳಿ ವಲಯದ ಟಿ ದಾಸರಹಳ್ಳಿ ವಾರ್ಡ್‌ನಲ್ಲಿ ಎರಡು ಮಳಿಗೆಗಳನ್ನು ಅಧಿಕಾರಿಗಳು ಮುಚ್ಚಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ, 'ಸಾರ್ವಜನಿಕರು ಹಾಗೂ ಅಂಗಡಿ ಮಳಿಗೆಗಳ ಮಾಲೀಕರು ಕೊರೊನಾ ಸೋಂಕು ನಿಯಂತ್ರಿಸಲು ಪಾಲಿಕೆ ಅಧಿಕಾರಿಗಳ ಜೊತೆ ಸಹಕರಿಸಬೇಕು. ಸರ್ಕಾರ ರೂಪಿಸಿರುವ ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು' ಎಂದು ಕೋರಿದರು.'ಕೋವಿಡ್ ಸೋಂಕು ಹರಡುವಿಕೆಯನ್ನು ತಡೆಯಲು ಅಧಿಕಾರಿಗಳು ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಿದ್ದಾರೆ' ಎಂದು ಅವರು ಸ್ಪಷ್ಟಪಡಿಸಿದರು.



ಜಿಎಸ್‌ಟಿ: ಜಪ್ತಿ ಕ್ರಮಕ್ಕೆ 'ಸುಪ್ರೀಂ' ತರಾಟೆ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು ನಾಗರಿಕ ಸ್ನೇಹಿ ಆಗಿರಬೇಕು ಎಂದಿರುವ ಸುಪ್ರೀಂ ಕೋರ್ಟ್, ಜಿಎಸ್‌ಟಿ ಸೆಕ್ಷನ್ 83ರ ಅಡಿ ತಂದಿರುವ 'ಪವರ್ ಆಫ್ ಪ್ರಾವಿಷನಲ್ ಅಟ್ಯಾಚ್‌ಮೆಂಟ್' ಕಠಿಣ ನಿಯಮವಾಗಿದೆ ಎಂದು ತರಾಟೆಗೆ ತೆಗೆದುಕೊಂಡಿದೆ. ಅಲ್ಲದೆ, ತೆರಿಗೆದಾರನ ಎಲ್ಲಾ ವ್ಯವಹಾರಗಳನ್ನು ಮೋಸ ಎಂಬಂತೆ ನೋಡುವುದು ಸರಿಯಲ್ಲ ಎಂದೂ ಹೇಳಿದೆ.

'ಸಂಸತ್ತು ಜಿಎಸ್‌ಟಿಯನ್ನು ನಾಗರಿಕ ಸ್ನೇಹಿ ತೆರಿಗೆ ವ್ಯವಸ್ಥೆಯನ್ನಾಗಿಸಲು ಉದ್ದೇಶಿಸಿತ್ತು. ಆದರೆ ಈ ಕಾಯ್ದೆಯನ್ನು ನಮ್ಮ ದೇಶದಲ್ಲಿ ಜಾರಿಗೊಳಿಸಿದ ರೀತಿಯನ್ನು ಗಮನಿಸಿದರೆ, ಅದರ ಉದ್ದೇಶವೇಕಳೆದುಹೋದಂತಿದೆ'ಎಂದುನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್ ಮತ್ತು ಎಂ.ಆರ್. ಷಾ ಅವರ ನ್ಯಾಯಪೀಠ ಅಸಮಾಧಾನ ವ್ಯಕ್ತಪಡಿಸಿದೆ.

ಹಿಮಾಚಲ ಪ್ರದೇಶ ಜಿಎಸ್‌ಟಿ ಕಾಯ್ದೆಯಡಿ 'ಪವರ್ ಆಫ್ ಪ್ರಾವಿಷನಲ್ ಅಟ್ಯಾಚ್‌ಮೆಂಟ್' ಅಧಿಕಾರವನ್ನು ಪ್ರಶ್ನಿಸಿ ರಾಧಾ ಕೃಷ್ಣ ಇಂಡಸ್ಟ್ರೀಸ್ ಸಲ್ಲಿಸಿದ್ದ ಮನವಿಯ ವಿಚಾರಣೆಯ ವೇಳೆ ನ್ಯಾಯಾಲಯ ಈ ರೀತಿ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು.

ಅರ್ಜಿದಾರರ ಪರ ಹಿರಿಯ ವಕೀಲ ಪುನೀತ್ ಬಾಲಿ ಮತ್ತು ವಕೀಲ ಸುರ್ಜಿತ್ ಭಾಡು ವಾದಿಸಿದರು. ಪ್ರಕರಣದ ತೀರ್ಪನ್ನು ನ್ಯಾಯಾಲಯ ಕಾಯ್ದಿರಿಸಿದೆ.

ನಿಯಮ ಉಲ್ಲಂಘನೆ: ಮಳಿಗೆಗಳಿಗೆ ದಂಡ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕೋವಿಡ್ ನಿಯಮಗಳನ್ನು ಪಾಲಿಸದ ಮಳಿಗೆಗಳ ಮೇಲೆ ಬಿಬಿಎಂಪಿ ಅಧಿಕಾರಿಗಳ ತಂಡವು ಬುಧವಾರ ದಾಳಿ ನಡೆಸಿ ದಂಡ ವಿಧಿಸಿತು.

ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಎಚ್.ಎಸ್.ಆರ್ ಬಡಾವಣೆಯ ಕೆಲ ವಾಣಿಜ್ಯ ಮಳಿಗೆಗಳಲ್ಲಿ ಗ್ರಾಹಕರು ಅಂತರ ಕಾಯ್ದುಕೊಳ್ಳದೇ ಹಾಗೂ ಮಾಸ್ಕ್ ಧರಿಸದೇ ಇರುವುದನ್ನು ಗಮನಿಸಿದ ಅಧಿಕಾರಿಗಳ ತಂಡವು, ಅಂಗಡಿಗಳ ಮಾಲೀಕರಿಗೆ ದಂಡ ವಿಧಿಸಿದ್ದಲ್ಲೇ, ಸ್ಥಳದಲ್ಲೇ ಬೀಗ ಮುದ್ರೆ ಹಾಕಿ ಕಠಿಣ ಕ್ರಮ ಕೈಗೊಂಡಿತು.

ನಿಯಮ ಉಲ್ಲಂಘಿಸಿದ ಮಳಿಗೆಯೊಂದಕ್ಕೆ ಬೀಗಮುದ್ರೆ ಹಾಕಲಾಯಿತು

ಎಂಟಿಆರ್ ಹೋಟೆಲ್‌ನಲ್ಲಿ ಕೋವಿಡ್ ನಿಯಮ ಪಾಲಿಸದ ಕಾರಣ ₹10 ಸಾವಿರ ದಂಡ ವಿಧಿಸಲಾಗಿದೆ.

ಬೊಮ್ಮನಹಳ್ಳಿ ವ್ಯಾಪ್ತಿಯಲ್ಲಿ ಪ್ರತಿದಿನ 400ಕ್ಕೂ ಅಧಿಕ ಕೇಸುಗಳು ದಾಖಲಾಗುತ್ತಿದ್ದು, ಎರಡನೇ ಬಾರಿ ನಿಯಮ ಉಲ್ಲಂಘಿಸಿದ ಮಳಿಗೆಗಳ ವ್ಯಾಪಾರ ಪರವಾನಗಿ ರದ್ದು ಮಾಡುವ ಎಚ್ಚರಿಕೆಯನ್ನೂ ನೀಡಲಾಗಿದೆ.

'ಈಗಾಗಲೇ ಐದು ಸಾವಿರಕ್ಕೂ ಅಧಿಕ ಮಂದಿಗೆ ಲಸಿಕೆ ನೀಡಲಾಗಿದೆ. ಕೋವಿಡ್ ಪರೀಕ್ಷೆಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ' ಎಂದು ಬೊಮ್ಮನಹಳ್ಳಿ ಜಂಟಿ ಆಯುಕ್ತ ಎಂ.ರಾಮಕೃಷ್ಣ ಹೇಳಿದರು.

ಬಿಬಿಎಂಪಿ ಆರೋಗ್ಯಾಧಿಕಾರಿ ಡಾ.ಸವಿತಾ, 'ಕೋವಿಡ್ ನಿಯಮ ಉಲ್ಲಂಘಿಸಿದ ಕಲ್ಪವೃಕ್ಷ ಹೋಟೆಲ್ ಹಾಗು ಮೋರ್ ಮಳಿಗೆಯನ್ನು ಬಂದ್ ಮಾಡಿದ್ದೇವೆ. ಕೆಲ ಮಳಿಗೆಗಳಿಗೆ ಎಚ್ಚರಿಕೆ ನೀಡಿ ದಂಡ ವಿಧಿಸಿದ್ದೇವೆ' ಎಂದರು.

ವೈದ್ಯಾಧಿಕಾರಿಗಳಾದ ಡಾ. ನಾಗೇಂದ್ರ, ಡಾ. ಕುಮಾರ್, ಆರೋಗ್ಯ ನಿರೀಕ್ಷಕ ವಿನೋದ್ ಹಾಗೂ ಸಿಬ್ಬಂದಿ ಇದ್ದರು.

'ಕ್ಷಯರೋಗದಿಂದ ಮುಕ್ತ: ಸಹಕಾರ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಕೇಂದ್ರ ಆರೋಗ್ಯ ಇಲಾಖೆಯು 2025ರೊಳಗೆ ದೇಶವನ್ನು ಕ್ಷಯರೋಗ ಮುಕ್ತ ಮಾಡುವ ಗುರಿ ಇಟ್ಟುಕೊಂಡಿದೆ. ಎಲ್ಲರೂ ಈ ಕಾರ್ಯಕ್ಕೆ ಕೈಜೋಡಿಸಿದರೆ ಯಶಸ್ಸು ಸಾಧ್ಯ' ಎಂದು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ಚುನಾಯಿತ ಪ್ರತಿನಿಧಿಗಳಿಗೆ ಬನಶಂಕರಿಯ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕ್ಷಯರೋಗ ಹಾಗೂ ಕೋವಿಡ್ ಕುರಿತು ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಕೇಂದ್ರವು ಕ್ಷಯ ನಿರ್ಮೂಲನಾ ಕಾರ್ಯಕ್ರಮ ರೂಪಿಸಿ, ರಾಜ್ಯ ಆರೋಗ್ಯ ಇಲಾಖೆ ಮೂಲಕ ಜಿಲ್ಲಾ ಮಟ್ಟದಲ್ಲಿ ಕ್ಷಯ ನಿರ್ಮೂಲನೆಗೆ ನಿರ್ದೇಶಿಸಿದೆ. ಅಧಿಕಾರಿಗಳು ಉತ್ತಮವಾಗಿ ಕೆಲಸ ಮಾಡಿದರೆ, ಕ್ಷಯ ನಿರ್ಮೂಲನೆ ಸಾಧ್ಯ' ಎಂದರು.

'ಶಿಕ್ಷಣ ಸಂಸ್ಥೆಗಳು, ಆರೋಗ್ಯ ಇಲಾಖೆ ಕಾರ್ಯಕರ್ತರ ನೆರವಿನಿಂದ ಜಿಲ್ಲಾಪ್ರಾಥಮಿಕಆರೋಗ್ಯಕೇಂದ್ರಗಳ ವ್ಯಾಪ್ತಿಯಲ್ಲಿ ಕ್ಷಯ ರೋಗ ಕುರಿತು ಅರಿವು ಮೂಡಿಸಲಾಗುತ್ತಿದೆ' ಎಂದು ಹೇಳಿದರು.

ಕಾರ್ಯಾಗಾರದಲ್ಲಿ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ ಚುನಾಯಿತ ಪ್ರತಿನಿಧಿಗಳಿಗೆ ಆರೋಗ್ಯ ಕಿಟ್ ವಿತರಿಸಿದರು. ಉಪಾಧ್ಯಕ್ಷೆ ಪಾರ್ವತಿ ಚಂದ್ರಪ್ಪ, ಆಯುಷ್ ಇಲಾಖೆ ವೈದ್ಯಾಧಿಕಾರಿ ಡಾ.ಖಲಿದಾ ಜಾವೇದ್, ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಮಂಡಳಿ ವೈದ್ಯಾಧಿಕಾರಿಗಳಾದ ಡಾ.ಮಹೇಶ್ ಕುಮಾರ್, ಜೆ.ಎ.ಶ್ರೀನಿವಾಸ್, ಶಿಕ್ಷಣ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅಧ್ಯಕ್ಷ ನಾಗೇಶ್ ರೆಡ್ಡಿ ಇದ್ದರು

ಶೇ 50 ಹಾಸಿಗೆ ಮೀಸಲು ಇಂದಿನಿಂದ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಶೇ 50 ಹಾಸಿಗೆ ಮೀಸಲಿಡಬೇಕು ಎಂಬ ರಾಜ್ಯ ಸರ್ಕಾರದ ಆದೇಶದಿಂದ ನಗರದ ಖಾಸಗಿ ಆಸ್ಪತ್ರೆಗಳು ಸಂದಿಗ್ಧದಲ್ಲಿವೆ. ಇತರೆ ರೋಗಿಗಳ ಸಂಖ್ಯೆಯೂ ಹೆಚ್ಚಿರುವುದರಿಂದ ಹಾಸಿಗೆಗಳ ಕೊರತೆ ಕಾಡಬಹುದು ಎಂಬ ಆತಂಕದಲ್ಲಿ ಆಸ್ಪತ್ರೆಗಳಿವೆ.

'ಕೋವಿಡ್ ಅಲ್ಲದೆ, ಇತರೆ ರೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಒಂದು ವರ್ಷದಿಂದ ಬಹಳಷ್ಟು ಜನರಿಗೆ ಸರಿಯಾದ ಚಿಕಿತ್ಸೆ ಸಿಕ್ಕಿಲ್ಲ. ಅಲ್ಲದೆ, ದೀರ್ಘಕಾಲದ ಚಿಕಿತ್ಸೆ ಅಗತ್ಯ ಇರುವ ಅನೇಕರು ಇದ್ದಾರೆ. ಅವರನ್ನು ನಾವು ನಿರ್ಲಕ್ಷಿಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ಆಸ್ಪತ್ರೆಗೆ ದಾಖಲಾದವರನ್ನು ಹಾಸಿಗೆ ಇಲ್ಲ ಎಂದು ವಾಪಸ್ ಕಳುಹಿಸಲೂ ಆಗುವುದಿಲ್ಲ' ಎಂದು ಮಣಿಪಾಲ್ ಆಸ್ಪತ್ರೆ ಸಮೂಹದ ವೈದ್ಯಕೀಯ ಸಲಹಾ ಮಂಡಳಿಯ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್ ಹೇಳಿದರು.



ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಮೀಸಲಿಡುವ ವಿಭಾಗದ ಉಸ್ತುವಾರಿಯಾಗಿರುವ ಐಎಎಸ್ ಅಧಿಕಾರಿ ಎನ್. ಜಯರಾಮ್, 'ಸರ್ಕಾರದ ಮೂಲಕ ಖಾಸಗಿ ಆಸ್ಪತ್ರೆಗೆ ದಾಖಲಾಗುವ ಕೋವಿಡ್ ರೋಗಿಗಳಿಗೆ ಶೇ 50ರಷ್ಟು ಹಾಸಿಗೆಯನ್ನು ಮೀಸಲಿಡಬೇಕು. ಅಧಿಕಾರಿಗಳು ಗುರುವಾರದಿಂದಲೇ ಈ ನಿಟ್ಟಿನಲ್ಲಿ ಪರಿಶೀಲನೆ ನಡೆಸಲಿದ್ದಾರೆ' ಎಂದು ಹೇಳಿದರು.

'ಈ ನಿಯಮ ಪಾಲನೆಯಾದರೆ, ನಗರದ ಖಾಸಗಿ ಆಸ್ಪತ್ರೆಗಳಲ್ಲಿ 5000 ಹಾಸಿಗೆಗಳು ಕೋವಿಡ್ ರೋಗಿಗಳಿಗೆ ಲಭ್ಯ ಆಗಲಿವೆ. ಸದ್ಯಕ್ಕೆ ನಮ್ಮ ಬೇಡಿಕೆಯೂ ಇಷ್ಟೇ ಇದೆ. ಆದರೆ, ಈಗ ನಗರದಲ್ಲಿ ದಿನಕ್ಕೆ 5 ಸಾವಿರಕ್ಕೂ ಹೆಚ್ಚು ಹೊಸ ಪ್ರಕರಣಗಳು ವರದಿಯಾಗುತ್ತಿದ್ದು, ಹಾಸಿಗೆಯ ಕೊರತೆ ಉದ್ಭವಿಸುವ ಸಾಧ್ಯತೆ ಇದೆ' ಎಂದರು.

'ಸರ್ಕಾರ ಶೇ 50ರಷ್ಟು ಹಾಸಿಗೆ ಮೀಸಲು ಕೇಳುತ್ತಿದೆ ಎಂದ ಮಾತ್ರಕ್ಕೆ, ಇರುವ ರೋಗಿಗಳನ್ನು ಹೊರಗೆ ಕಳಿಸಿ ಎಂದರ್ಥವಲ್ಲ. ಇರುವ ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ತಕ್ಷಣ ಆ ಹಾಸಿಗೆಯನ್ನು ಮೀಸಲು ಇಡಬೇಕು. ಹಾಸಿಗೆಗಳ ಸಂಖ್ಯೆ ಶೇ 50ಕ್ಕೆ ತಲುಪುವವರೆಗೆ ಈ ನಿಯಮ ಪಾಲಿಸಬೇಕು' ಎಂದು ಅವರು ಹೇಳಿದರು.

ಬಿಬಿಎಂಪಿ ಅಂಕಿ–ಅಂಶದ ಪ್ರಕಾರ, ಬುಧವಾರ ಸಂಜೆಯ ವೇಳೆಗೆ, ಖಾಸಗಿ ಆಸ್ಪತ್ರೆಗಳಲ್ಲಿ 90, ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ 445 ಸೇರಿದಂತೆ ಒಟ್ಟು 2,300 ಹಾಸಿಗೆಗಳು ಕೋವಿಡ್ ರೋಗಿಗಳಿಗೆ ಮೀಸಲಾಗಿದ್ದವು. ಈ ಪೈಕಿ, 556 ಹಾಸಿಗೆಗಳು ಮಾತ್ರ ಖಾಲಿ ಉಳಿದಿದ್ದವು.

ಸ್ವಚ್ಛತಾ ಕಾರ್ಯ: ಜನರಿಂದಲೇ ಮೌಲ್ಯಮಾಪನ ನಡೆಸಲು ಬಿಬಿಎಂಪಿ ಸಿದ್ಧತೆ

ನಿಮ್ಮ ಬೀದಿ ಎಷ್ಟು ಶುಚಿಯಾಗಿದೆ– ನೀವೇ ಹೇಳಿ

• ಪ್ರವೀಣ್ ಕುಮಾರ್ ಪಿ.ವಿ.

ರಸ್ತೆ ಸ್ವಚ್ಛತೆ (ಸಂಗ್ರಹ ಚಿತ್ರ)

ಬೆಂಗಳೂರು: ನೀವು ವಾಸವಿರುವ ಬೀದಿ ಸ್ವಚ್ಛವಾಗಿದೆಯೇ, ಬೀದಿಯನ್ನು ಸ್ವಚ್ಛಗೊಳಿಸುವವರು ನಿಯೋಜನೆಗೊಂಡಿರುವ ಸಿಬ್ಬಂದಿ ಅಥವಾ ರಸ್ತೆಗಳನ್ನು ಸ್ವಚ್ಛಗೊಳಿಸಬೇಕಾದ ಯಂತ್ರಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ? ನಗರದ ಉಳಿದ ಬೀದಿಗಳಿಗಿಂತ ನಿಮ್ಮ ಬೀದಿಯ ಸ್ವಚ್ಛತೆ ಉತ್ತಮವಾಗಿದೆಯೇ...

ಈ ಬಗ್ಗೆ 'ಇನ್ನು ಮುಂದೆ ನೀವೇ ಮೌಲ್ಯಮಾಪನ ನಡೆಸಬಹುದು. ಇದಕ್ಕೆ ಬಿಬಿಎಂಪಿ ಅವಕಾಶ ಕಲ್ಪಿಸಲಿದೆ. ನಿರ್ದಿಷ್ಟ ಬೀದಿಯ ಅಥವಾ ರಸ್ತೆಯ ಸ್ವಚ್ಛತಾ ಕಾರ್ಯದ ಗುಣಮಟ್ಟದ ಬಗ್ಗೆ ಜನರಿಂದ ಪ್ರತಿಕ್ರಿಯೆ ಪಡೆಯುವ ಆನ್‌ಲೈನ್ ವ್ಯವಸ್ಥೆ ಜಾರಿಗೆ ತರಲು ಬಿಬಿಎಂಪಿ ಮುಂದಾಗಿದೆ.

ಯಂತ್ರಗಳು ಕಸ ಗುಡಿಸುವ ರಸ್ತೆಗಳ ಬಗ್ಗೆ ಸಂಪೂರ್ಣ ವಿವರಗಳನ್ನು ಪಾಲಿಕೆ ವೆಬ್‌ಸೈಟ್‌ನಲ್ಲಿ ಹಂಚಿಕೊಳ್ಳಲಿದೆ. ಯಾವ ಯಂತ್ರ ಯಾವ ಅವಧಿಯಲ್ಲಿ ರಸ್ತೆಗಳ ಕಸ ಗುಡಿಸಲಿದೆ ಎಂಬ ವೇಳಾಪಟ್ಟಿ ಒದಗಿಸಲಿದೆ. ಅದರ ಪ್ರಕಾರವೇ ರಸ್ತೆಗಳನ್ನು ಸ್ವಚ್ಛಗೊಳಿಸುವ ಕಾರ್ಯ ನಡೆಯುತ್ತಿದೆಯೇ ಎಂಬುದನ್ನು ಜನರು ಪರಿಶೀಲಿಸಬಹುದು. ಒಂದುವೇಳೆ ಈ ವೇಳಾಪಟ್ಟಿ ಪ್ರಕಾರ ಸ್ವಚ್ಛತಾ ಕಾರ್ಯ ನಡೆಯದಿದ್ದರೆ ಆನ್‌ಲೈನ್‌ನಲ್ಲೇ ದೂರು ದಾಖಲಿಸಬಹುದು. ಈ ಯಂತ್ರಗಳ ಕಾರ್ಯನಿರ್ವಹಣೆ ಬಗ್ಗೆಯೂ ಜನರು ಅಭಿಪ್ರಾಯ ದಾಖಲಿಸಬಹುದು.

ನಿಗಾ ಇಡಲು ನೆರವಾಗಲಿದೆ ಡ್ಯಾಶ್‌ಬೋರ್ಡ್

'ಬೀದಿಗಳ ಸ್ವಚ್ಛತೆ ಕಾಪಾಡುವ ಕಾರ್ಯದ ಮೇಲೆ ನಿಗಾ ಇಡಲು ಡ್ಯಾಶ್‌ಬೋರ್ಡ್ ಸಿದ್ಧಪಡಿಸಲಾಗುತ್ತದೆ. ಇದರ ನೆರವಿನಿಂದ ಬಿಬಿಎಂಪಿ ಆಡಳಿತಾಧಿಕಾರಿ, ಮುಖ್ಯ ಆಯುಕ್ತರು, ವಿಶೇಷ ಆಯುಕ್ತರು ಕಚೇರಿಯಲ್ಲೇ ಕುಳಿತುಕೊಂಡೇ ಸ್ವಚ್ಛತಾ ಕಾರ್ಯ ಹೇಗೆ ನಡೆಯುತ್ತಿದೆ ಎಂದು ಪರಿಶೀಲಿಸಬಹುದು. ಒಂದೆರಡು ತಿಂಗಳಲ್ಲೇ ಹೊಸ ವ್ಯವಸ್ಥೆ ಜಾರಿಗೆ ತರಲು ಪ್ರಯತ್ನ ಮಾಡುತ್ತಿದ್ದೇವೆ' ಎಂದು ಸರ್ಫರಾಜ್ ಖಾನ್ ಮಾಹಿತಿ ನೀಡಿದರು.

'ಪ್ರತಿ ಪೌರಕಾರ್ಮಿಕರಿಗೆ ನಿರ್ದಿಷ್ಟ ರಸ್ತೆ ಅಥವಾ ಬೀದಿಯನ್ನು ಸ್ವಚ್ಛಗೊಳಿಸುವ ಹೊಣೆಯನ್ನು ಹಂಚಿಕೆ ಮಾಡಲಾಗುತ್ತದೆ. ಇದರ ಕಾರ್ಯನಿರ್ವಹಣೆಯನ್ನೂ ಜನರು ಮೌಲ್ಯಮಾಪನ ಮಾಡಬಹುದು. ಯಾವುದಾದರೂ ಬೀದಿಯನ್ನು ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ, ಅದಕ್ಕೆ ಹೊಣೆಗಾರರಾದ ಪೌರಕಾರ್ಮಿಕರು ಅಥವಾ ಮೇಸ್ತ್ರಿ ವಿರುದ್ಧ ಕ್ರಮ ತೆಗೆದುಕೊಳ್ಳಲು ಈ ವ್ಯವಸ್ಥೆ ನೆರವಾಗಲಿದೆ. ಈಗಾಗಲೇ ಬೀದಿ ಸ್ವಚ್ಛಗೊಳಿಸುವ ಪೋರ್ಟಲ್ ಸ್ಥಾಪಿಸಲಿದ್ದೇವೆ. ಜನರು ಸುಲಭವಾಗಿ ತಮ್ಮ ಅಭಿಪ್ರಾಯ ನೀಡುವುದಕ್ಕೆ ಪೂರಕವಾಗಿ ಅದರಲ್ಲಿ ಕೆಲವು ಸುಧಾರಣೆ ಮಾಡಲಿದ್ದೇವೆ' ಎಂದು ವಿಶೇಷ ಆಯುಕ್ತ (ಕಸ ನಿರ್ವಹಣೆ) ಡಿ.ರಂದೀಪ್ 'ಪ್ರಜಾವಾಣಿ'ಗೆ ತಿಳಿಸಿದರು.

'ಯಾವ ಬೀದಿಯಲ್ಲಿ ಯಾವ ಪೌರಕಾರ್ಮಿಕರು ಕಾರ್ಯನಿರ್ವಹಿಸುತ್ತಾರೆ ಎಂಬುದನ್ನು ಮ್ಯಾಪಿಂಗ್ ಮಾಡಿಸಿದ್ದೇವೆ. ಈ ವಿವರಗಳನ್ನು ಆ್ಯಪ್‌ನಲ್ಲಿ ಅಳವಡಿಸುತ್ತೇವೆ. ಅದರಲ್ಲಿ ನಿರ್ದಿಷ್ಟ ದಿನ ನಿರ್ದಿಷ್ಟ ಬೀದಿಯ ಪೌರಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆಯೇ ಅಥವಾ ಗೈರು ಹಾಜರಾಗಿದ್ದಾರೆಯೇ ಎಂಬ ಮಾಹಿತಿ ಸಾರ್ವಜನಿಕರಿಗೆ ಒದಗಿಸಲಾಗುತ್ತದೆ. ಒಂದು ವೇಳೆ ಅವರು ರಜೆ ಹಾಕಿದ್ದರೆ ಆ ಬಗ್ಗೆಯೂ ಮಾಹಿತಿ ನೀಡಲಾಗುತ್ತದೆ. ಸಿಬ್ಬಂದಿ ಹಾಜರಾತಿ ಹಾಕಿಯೂ ಕೆಲಸ ಮಾಡದಿದ್ದರೆ ಸದ್ಯದ ವ್ಯವಸ್ಥೆಯಲ್ಲಿ ಪತ್ತೆಹಚ್ಚುವುದು ಕಷ್ಟ. ಬೀದಿಯ ಸ್ವಚ್ಛತಾ ಕಾರ್ಯದ ಕುರಿತು ಜನರು ಪ್ರತಿಕ್ರಿಯೆ ನೀಡಲು ಅವಕಾಶ ಕಲ್ಪಿಸಿದರೆ ಇದನ್ನು ಸುಲಭವಾಗಿ ಪತ್ತೆಹಚ್ಚಬಹುದು' ಎಂದು ಬಿಬಿಎಂಪಿ ಜಂಟಿ ಆಯುಕ್ತ (ಕಸ ನಿರ್ವಹಣೆ) ಸರ್ಫರಾಜ್ ಖಾನ್ ವಿವರಿಸಿದರು.

'ಪೌರಕಾರ್ಮಿಕರ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರು ಸುಖಾಸುಮ್ಮನೆ ದೂರು ನೀಡುವ ಸಾಧ್ಯತೆ ತೀರ ಕಡಿಮೆ. ಪೌರಕಾರ್ಮಿಕರ ವಿರುದ್ಧ ದೂರು ಬಂದರೂ, ತಕ್ಷಣವೇ ಅವರ ಮೇಲೆ ಕ್ರಮಕೈಗೊಳ್ಳುವುದಿಲ್ಲ. ಈ ಬಗ್ಗೆ ಪರಿಶೀಲನೆ ನಡೆಸಿದ ಬಳಿಕವೇ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ. ಬೀದಿಗಳ ಸ್ವಚ್ಛತೆ ಕಾಪಾಡುವ ಹೊಣೆ ಹೊತ್ತವರು ಈ ಕಾರ್ಯದಲ್ಲಿ ಪದೇ ಪದೇ ವೈಫಲ್ಯ ಕಂಡರೆ ಶಿಸ್ತುಕ್ರಮ ಅನಿವಾರ್ಯ ಆಗಲಿದೆ' ಎಂದು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

29 ಇನ್‌ಸ್ಪೆಕ್ಟರ್‌ಗಳಿಗೆ ಡಿವೈಎಸ್‌ಪಿ ಬಡ್ತಿ

ಬೆಂಗಳೂರು: 29 ಇನ್‌ಸ್ಪೆಕ್ಟರ್ (ಸಿವಿಲ್) ಅಧಿಕಾರಿಗಳಿಗೆ ಡಿವೈಎಸ್‌ಪಿ (ಸಿವಿಲ್) ಹುದ್ದೆಗೆ ಬಡ್ತಿ ನೀಡಿ ರಾಜ್ಯ ಸರ್ಕಾರ ಬುಧವಾರ ಆದೇಶ ಹೊರಡಿಸಿದೆ.

ಬಡ್ತಿ ಪಡೆದವರಿಗೆ ಡಿವೈಎಸ್‌ಪಿ ಹುದ್ದೆಯ ಸ್ಥಳಗಳನ್ನು ಸೂಚಿಸದೆ, ರಾಜ್ಯ ಪೊಲೀಸ್ ಪ್ರಧಾನ ಕಚೇರಿಗೆ ಬಂದು ವರದಿ ಮಾಡಿಕೊಳ್ಳುವಂತೆ ಆದೇಶದಲ್ಲಿ ತಿಳಿಸಿದೆ.

ಬಡ್ತಿ ಪಡೆದವರು: ಬಾಬಾಸಾಹೆಬ್ ಎಸ್. ಹುಲ್ಲಣ್ಣನವರ್, ಟಿ.ವಿ.ರಾಜಣ್ಣ, ನೇಮಿರಾಜ್, ಗೋಪಾಲಕೃಷ್ಣ, ಗಿರೀಶ್ ಭೋಜಣ್ಣನವರ್, ಆರ್. ಸುನೀಲಾ, ಎಲ್.ಕೆ.ರಮೇಶ್, ಬಿ.ಎಸ್.ಲಕ್ಷ್ಮಣ ಕುಮಾರ್, ವಿ.ಮರಿಯ ನಾರಾಯಣ, ಆರ್. ಗೋವಿಂದರಾಜು, ಸಂತೋಷ್ ಡಿ.ಸತ್ಯನಾಯಕ್, ಸಿ.ನರಸಿಂಹಯ್ಯ, ಬಿ.ಯು.ಪ್ರದೀಪ್, ಪಿ.ನರಸಿಂಹಮೂರ್ತಿ, ಡಿ.ಜಿ. ರಾಜಣ್ಣ, ಎಚ್.ಎಸ್.ಜಗದೀಶ್, ಬಿ.ಪ್ರಮೋದ್ ಕುಮಾರ್, ಎಂ.ಮುರಳೀಧರಪ್ಪ, ವಿಜಯ್ ಬಿರಾದಾರ್, ಮುತ್ತಪ್ಪ ಎಸ್.ಪಾಟೀಲ, ಟಿ.ಸಿ.ವೆಂಕಟೇಶ್, ರವೀಶ್ ನಾಯಕ್, ಎಸ್.ಮಹೇಶ್, ಜೆ.ಕೇಶವಮೂರ್ತಿ, ಪಿ.ಎಸ್.ಸೂರಜ್, ಪ್ರಸಾದ್ ಗೋಖಲೆ, ಕೆ.ಎಂ. ರಮೇಶ್, ಮೊಹಮ್ಮದ್ ಹನುಮತ್ ಖಾನ್, ಸಿದ್ದಲಿಂಗಪ್ಪ ಗೌಡ ಪಾಟೀಲ.

ಚಿನ್ನಾಭರಣ, ಬೈಕ್ ವಶ: ಬಂಧನ

ಬೆಂಗಳೂರು: ಮನೆಗಳಿಗೆ ನುಗ್ಗಿ ಚಿನ್ನಾಭರಣ ಹಾಗೂ ನಗರದ ವಿವಿಧ ಭಾಗಗಳಲ್ಲಿ ದ್ವಿಚಕ್ರ ವಾಹನಗಳನ್ನು ಕದಿಯುತ್ತಿದ್ದ ಆರೋಪಿಯನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

ರಾಜಾಜಿನಗರದ ಮಂಜುನಾಥ ನಗರದ ನಿವಾಸಿ ಪ್ರಶಾಂತ್ (21) ಬಂಧಿತ ಆರೋಪಿ.

ಕಳೆದ ಡಿಸೆಂಬರ್‌ನಲ್ಲಿ ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಚಿನ್ನಾಭರಣ ಕಳ್ಳತನವಾಗಿತ್ತು. ಮನೆಯ ಮಾಲೀಕರು ಕೆಲಸಕ್ಕೆ ತೆರಳುವ ಆತುರದಲ್ಲಿ ಮನೆಗೆ ಬೀಗ ಹಾಕುವುದನ್ನು ಮರೆತಿದ್ದರು. ಮಧ್ಯಾಹ್ನ ವಾಪಸ್ ಬಂದಾಗ ಮನೆಯಲ್ಲಿದ್ದ 17 ಗ್ರಾಂ. ಚಿನ್ನಾಭರಣ ಹಾಗೂ ₹15 ಸಾವಿರ ನಗದು ಕಳವಾಗಿರುವ ಕುರಿತು ಪೊಲೀಸರಿಗೆ ದೂರು ನೀಡಿದ್ದರು.

ಆರೋಪಿಯನ್ನು ವಿಚಾರಣೆ ನಡೆಸಿದಾಗ, ಮಾಗಡಿ ರಸ್ತೆ, ಬ್ಯಾಡರಹಳ್ಳಿ, ಕೆ.ಪಿ.ಅಗ್ರಹಾರ ವ್ಯಾಪ್ತಿಗಳಲ್ಲಿ ಚಿನ್ನಾಭರಣ ಹಾಗೂ ಮಹಾಲಕ್ಷ್ಮಿ ಬಡಾವಣೆ, ಸುಬ್ರಹ್ಮಣ್ಯ ನಗರ ವ್ಯಾಪ್ತಿಯಲ್ಲಿ ದ್ವಿಚಕ್ರ ವಾಹನಗಳನ್ನು ಕದ್ದಿರುವ ವಿಚಾರವನ್ನು ತಿಳಿಸಿದ್ದಾನೆ.

'ಆರೋಪಿಯಿಂದ ₹4.85 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಎರಡು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಸಿಎ ಜಾಗ ಗುತ್ತಿಗೆಗೆ: ವಿಚಾರಣೆ ರದ್ದುಪಡಿಸಲು ನಕಾರ

ಬೆಂಗಳೂರು: ನಾಗರಿಕ ಸೌಲಭ್ಯಗಳಿಗೆ(ಸಿಎ) ಮೀಸಲಿರಿಸಿದ ಜಾಗವನ್ನು ರಿಯಲ್ ಎಸ್ಟೇಟ್ ಸಂಸ್ಥೆಗೆ ಗುತ್ತಿಗೆ ಆಧಾರದಲ್ಲಿ ನೀಡಿದ ಪ್ರಕರಣದಲ್ಲಿ ಇಬ್ಬರು ಅಧಿಕಾರಿಗಳ ವಿರುದ್ಧ ವಿಚಾರಣೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿತು.

ಗ್ರಾಮ ಪಂಚಾಯಿತಿ ಅಧಿಕಾರಿಗಳಾಗಿದ್ದ ಎನ್.ಕೃಷ್ಣಪ್ಪ ಮತ್ತು ಎನ್.ರಾಮಮೂರ್ತಿ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ದೋಷಾರೋಪಪಟ್ಟಿ ಸಲ್ಲಿಸಿತ್ತು.

'ವಿಚಾರಣೆ ನಡೆಸಲು ಪೂರ್ವಾನುಮತಿ ಅಗತ್ಯವಿದೆ' ಎಂದು ಅರ್ಜಿದಾರರು ವಾದಿಸಿದ್ದು, 'ಕಚೇರಿ ದುರುಪಯೋಗಪಡಿಸಿಕೊಂಡ ಪ್ರಕರಣದಲ್ಲಿ ಪೂರ್ವಾನುಮತಿ ಅಗತ್ಯ ಇಲ್ಲ' ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಉಲ್ಲೇಖಿಸಿದರು.

ಗ್ರಾಮ ಪಂಚಾಯಿತಿಗೆ ಸೇರಿದ ಎರಡು ಜಾಗಗಳನ್ನು ನಾಗರಿಕ ಸೌಲಭ್ಯಕ್ಕಾಗಿ ಮೀಸಲಿರಿಸಲಾಗಿತ್ತು. ಆದರೆ, ಕ್ಲಬ್ ಹೌಸ್ ನಿರ್ಮಿಸಲು ಭೂಮಿ ಕೋರಿ ಫೋರ್ಟಿಯಸ್ ಲ್ಯಾಂಡ್ ಡೆವಲಪರ್ಸ್ ಸಂಸ್ಥೆ ಅರ್ಜಿ ಸಲ್ಲಿಸಿತ್ತು. 2016ರಲ್ಲಿ 30 ವರ್ಷಗಳ ಗುತ್ತಿಗೆಗೆ ನೀಡಲಾಯಿತು.

ಗ್ರಾಮಸ್ಥರಿಂದ ಬಂದ ದೂರುಗಳನ್ನು ಆಧರಿಸಿ ಅಂದಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಚ್.ಕೆ.ಪಾಟೀಲ ಅವರು ಎಸಿಬಿ ತನಿಖೆಗೆ ಆದೇಶಿಸಿದ್ದರು. ಗುತ್ತಿಗೆ ಪತ್ರ ರದ್ದುಗೊಳಿಸಿದ್ದರು.ತಾಲ್ಲೂಕುಪಂಚಾಯಿತಿಯಿಂದ ಅನುಮೋದನೆ ಪಡೆದಿಲ್ಲ ಎಂಬುದು ತನಿಖೆಯಿಂದ ಬೆಳಕಿಗೆ ಬಂದಿತ್ತು.

ಕ್ಷುಲ್ಲಕ ಕಾರಣಕ್ಕೆ ಜಗಳ: ಗಂಡನ ಮೇಲಿನ ಸಿಟ್ಟಿಗೆ ಕಂದಮ್ಮ ಬಲಿ

ಮೂರು ವರ್ಷದ ಮಗಳನ್ನು ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ತನ್ನ ಮೂರು ವರ್ಷದ ಮಗಳನ್ನು ತಾಯಿ ಕೊಲೆ ಮಾಡಿರುವ ಘಟನೆ ಅನ್ನಪೂರ್ಣೇಶ್ವರಿ ನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಸುಧಾ (26) ಮಗಳನ್ನು ಕೊಲೆ ಮಾಡಿದ ತಾಯಿ. ವಿನುತಾ ಕೊಲೆಯಾದ ಮಗಳು.

ತಿಂಡಿ ಖರೀದಿಸಲು ಹೊರಗಡೆ ತೆರಳಿದ್ದಾಗ ಮಗಳು ಕಾಣೆಯಾಗಿದ್ದಾಳೆ ಎಂದು ಸುಧಾ ದಂಪತಿ ಜ್ಞಾನಭಾರತಿ ಠಾಣೆಗೆ ದೂರು ನೀಡಿದ್ದರು. ಆದರೆ, ಬುಧವಾರ ಬೆಳಿಗ್ಗೆ ಅನ್ನಪೂರ್ಣೇಶ್ವರಿ ನಗರ ಠಾಣಾ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಮಗುವಿನ ಮೃತದೇಹ ಪತ್ತೆಯಾಗಿತ್ತು.

'ಸುಧಾಳ ಹೇಳಿಕೆಗಳಿಂದ ಅನುಮಾನಗೊಂಡ ಪೊಲೀಸರು, ಆಕೆಯನ್ನು ವಶಕ್ಕೆ ಪಡೆದು, ತಿಂಡಿ ತಿನ್ನಲು ತೆರಳಿದ್ದ ಜಾಗ ತೋರಿಸುವಂತೆ ಹೇಳಿದ್ದರು. ಇದರಿಂದ ಭಯಗೊಂಡ ಸುಧಾ, 'ಮಗಳನ್ನು ವೇಲ್‌ನಿಂದ ಕುತ್ತಿಗೆ ಬಿಗಿದು, ಕೊಲೆ ಮಾಡಿದ್ದಾಗಿ ತಪ್ಪೊಪ್ಪಿಕೊಂಡಳು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಈರಣ್ಣ ಹಾಗೂ ಆರೋಪಿ ಸುಧಾ ದಂಪತಿ ಮಲ್ಲತ್ತಹಳ್ಳಿಯ ಮನೆಯೊಂದರಲ್ಲಿ ವಾಸವಿದ್ದರು. ಇಬ್ಬರೂ ಕೆಲಸಕ್ಕೆ ತೆರಳುತ್ತಿದ್ದು, ಊಟಕ್ಕೆ ಮನೆಗೆ ಬಂದು ಹೋಗುತ್ತಿದ್ದರು. ಸುಧಾ ಮಂಗಳವಾರವೂ ಊಟಕ್ಕೆಂದು ಮನೆಗೆ ಬಂದು ಟಿ.ವಿ ವೀಕ್ಷಿಸುತ್ತಿದ್ದರು. ನಂತರ ಮನೆಗೆ ಬಂದಿದ್ದ ಪತಿ ಈರಣ್ಣ ಚಾನೆಲ್ ಬದಲಿಸಿದ್ದರು. ಈ ವಿಚಾರಕ್ಕೆ ದಂಪತಿ ಜಗಳವಾಡಿಕೊಂಡಿದ್ದರು'.

'ಯಾವಾಗಲೂ ನ್ಯೂಸ್ ಚಾನೆಲ್ ನೋಡುತ್ತೀಯಾ, ಹೀಗೆ ಮಾಡುವುದಾದರೆ ಮನೆಗೆ ಬರಬೇಡ' ಎಂದು ಸುಧಾ ಪತಿಯನ್ನು ಬೈದಿದ್ದಳು. ಈ ವೇಳೆ ವಿನುತಾ ತನ್ನ ತಾಯಿಯನ್ನು 'ಹುಚ್ಚಿ' ಎಂದು ಕರೆದಿದ್ದಳು. ಇದರಿಂದ ಕೋಪಗೊಂಡಿದ್ದ ತಾಯಿ ಸುಧಾ, ಮಗಳನ್ನು ಹೊರಗೆ ಕರೆದುಕೊಂಡು ಹೋಗಿ ಕೊಲೆ ಮಾಡಿದ್ದಾಳೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

'ಹೊರಗೆ ಹೋಗಿದ್ದ ತಾಯಿ–ಮಗಳು ರಾತ್ರಿಯಾದರೂ ಮನೆಗೆ ಬಂದಿರಲಿಲ್ಲ. ಆತಂಕಗೊಂಡ ಈರಣ್ಣ ಪತ್ನಿಗೆ ಕರೆ ಮಾಡಿದಾಗ, ಮಗಳು ತಿಂಡಿ ತಿನ್ನುತ್ತಿದ್ದ ವೇಳೆ ಕಾಣೆಯಾಗಿದ್ದಾಳೆ ಎಂದು ಸುಳ್ಳು ಹೇಳಿದ್ದಳು. ಬಳಿಕ ದಂಪತಿ ಜ್ಞಾನಭಾರತಿ ಠಾಣೆಗೆ ತೆರಳಿ ದೂರು ನೀಡಿದ್ದರು' ಎಂದರು.

ಹಿರಿಯೂರಿನ ಚಳ್ಳಕೆರೆ ರಸ್ತೆಯ ಬಳಿ ಬುಧವಾರ ಸಂಭವಿಸಿದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು

ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಹಿರಿಯೂರು: ನಗರದ ಚಳ್ಳಕೆರೆ ರಸ್ತೆಯ ಆರ್.ಕೆ. ಪವರ್ ಜೆನ್ ಕಾರ್ಖಾನೆ ಎದುರು ಬುಧವಾರ ಮರದ ತುಂಡುಗಳನ್ನು ಸಾಗಿಸುತ್ತಿದ್ದ ಲಾರಿಗೆ ಕಾರು ಡಿಕ್ಕಿ ಹೊಡೆದು ಕಾರಿನಲ್ಲಿದ್ದ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬೆಂಗಳೂರಿನ ಸಂಜಯ ನಗರದ ವೆಂಕಟರಾಮಯ್ಯ (48), ದೇವರಾಜ (38) ಮೃತಪಟ್ಟವರು. ಗಾಯಗೊಂಡಿದ್ದ ಜಯರಾಂ, ಗಿರೀಶ್ ಹಾಗೂ ಶ್ರೀನಿವಾಸ್ ಅವರನ್ನು ಬೆಂಗಳೂರಿನ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಿಂದ ಬಳ್ಳಾರಿ ಸಮೀಪದ ಪಾಂಡುರಂಗಸ್ವಾಮಿ ದೇವಸ್ಥಾನಕ್ಕೆ ಸ್ನೇಹಿತರೆಲ್ಲ ಕಾರಿನಲ್ಲಿ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೇಸ್‌ಬುಕ್ ಮೂಲಕ ಐಎಸ್‌ಐ ಸಂಪರ್ಕ ಪಡೆದ ಆರೋಪಿಗಳು

ಗುಜರಾತ್‌ನಲ್ಲಿ ಅಂಗಡಿಗಳಿಗೆ ಬೆಂಕಿ: ಐಎಸ್‌ಐ ಪಿತೂರಿ, ಮೂವರ ಬಂಧನ

ಅಹಮದಾಬಾದ್ (ಪಿಟಿಐ): ಪಾಕಿಸ್ತಾನದ ಗೂಢಚಾರ ಸಂಸ್ಥೆ ಐಎಸ್‌ಐ ನಿರ್ದೇಶನದ ಮೇರೆಗೆ ಭಾರತದಲ್ಲಿ ಭಯೋತ್ಪಾದನಾ ಚಟುವಟಿಕೆ ನಡೆಸುವ ಪಿತೂರಿಯ ಭಾಗವಾಗಿ ಏಳು ಅಂಗಡಿಗಳಿಗೆ ಬೆಂಕಿ ಹಚ್ಚಿದ್ದ ಮೂವರು ಆರೋಪಿಗಳನ್ನು ಗುಜರಾತ್ ಅಪರಾಧ ದಳದ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಹಣದ ಅಗತ್ಯವಿದ್ದವರಿಗೆ ಐಎಸ್‌ಐ ಆಮಿಷವೊಡ್ಡಿ ಭಯೋತ್ಪಾದನಾ ಚಟುವಟಿಕೆ ನಡೆಸುವ ಯೋಜನೆ ರೂಪಿಸಿತ್ತು ಎನ್ನಲಾಗಿದೆ.

ಆರೋಪಿಗಳ ವಿರುದ್ಧ ಐಪಿಸಿಯ ನಿಬಂಧನೆಗಳು ಹಾಗೂ ಸರ್ಕಾರದ ವಿರುದ್ಧ ಪಿತೂರಿ ಮತ್ತು ಕಠಿಣ ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ (ಯುಎಪಿಎ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

'ಭಾರತದಲ್ಲಿ ಐಎಸ್‌ಐ ಭಯೋತ್ಪಾದನೆ ಚಟುವಟಿಕೆಗಳನ್ನು ನಡೆಸುವುದು, ದೇಶದ ಆಂತರಿಕ ಭದ್ರತೆಗೆ ಅಪಾಯವನ್ನುಂಟು ಮಾಡುವುದು, ಆರ್ಥಿಕ ನಷ್ಟವನ್ನುಂಟು ಮಾಡುವ ಐಎಸ್‌ಐ ಯೋಜನೆಗಳ ಭಾಗವಾಗಿ ಗುಜರಾತಿನಲ್ಲಿ ಅಂಗಡಿಗಳಿಗೆ ಬೆಂಕಿ ಹಚ್ಚಲು ಮೂವರು ವ್ಯಕ್ತಿಗಳಿಗೆ ಆಮಿಷ ಒಡ್ಡಲಾಗಿತ್ತು ಎಂದು ಹೆಸರು ಹೇಳಲಿಚ್ಛಿಸದ ಐಎಸ್‌ಐ ಏಜೆಂಟ್ ಒಬ್ಬ ತಿಳಿಸಿದ್ದಾನೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾದ ಆರೋಪಿಗಳನ್ನು ಭೂಪೇಂದ್ರ ವಂಜಾರ, ಅನಿಲ್ ಖಾತಿಕ್ ಮತ್ತು ಅಂಕಿತ್ ಪಾಲ್ ಎಂದು ಗುರುತಿಸಲಾಗಿದೆ. ಪಾಲ್‌ಗೆ ಕೊರೊನಾ ಪಾಸಿಟಿವ್ ದೃಢಪಟ್ಟದ್ದರಿಂದ ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

'ಐಎಸ್‌ಐ ನಿರ್ದೇಶನದಿಂದ ತನ್ನನ್ನು ಬಾಬಾ ಬಾಯ್ ಎಂದು ಫೇಸ್‌ಬುಕ್‌ನಲ್ಲಿ ಗುರುತಿಸಿಕೊಂಡಿದ್ದ ಹಾಗೂ ಇದೇ ಹೆಸರನ್ನೇ ಹೋಲುವ ಹಲವು ಖಾತೆಗಳನ್ನೂ ಹೊಂದಿದ್ದ ವ್ಯಕ್ತಿಯೊಬ್ಬನ ಸಲಹೆ ಮೇರೆಗೆ ಮಾರ್ಚ್ 20ರ ರಾತ್ರಿ ಗುಜರಾತಿನ ಕಾಲುಪುರ್ ಪ್ರದೇಶದಲ್ಲಿ ಆರೋಪಿಗಳು ಏಳು ಅಂಗಡಿಗಳಿಗೆ ಬೆಂಕಿ ಹಚ್ಚಿದ್ದಾರೆ' ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ (ಅಪರಾಧ) ಪ್ರೇಮ್‌ವೀರ್ ಸಿಂಗ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಈ ಘಟನೆಯ ನಂತರ, 'ಐಎಸ್‌ಐ ನಿರ್ದೇಶನದ ಮೇರೆಗೆ ಅಂಗಡಿಗಳಿಗೆ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿದ್ದಾರೆ ಎಂದು ಗುಪ್ತಚರ ಇಲಾಖೆಯು ಮಾಹಿತಿಯನ್ನು ನಾವು ಸ್ವೀಕರಿಸಿದ್ದೇವೆ. ಈ ಬಗ್ಗೆ ವಿವರವಾದ ತನಿಖೆಯ ನಂತರವೇ ಆರೋಪಿಗಳನ್ನು ಬಂಧಿಸಲಾಗಿದೆ.ಕೃತ್ಯದ ಬಳಿಕ ಮೂವರು ಆರೋಪಿಗಳು ಐಎಸ್‌ಐ ಏಜೆಂಟ್‌ನಿಂದ ದುಬೈ–ಮುಂಬೈ ಮೂಲಕ ಕೊರಿಯರ್ ಮೂಲಕ ₹ 1.5 ಲಕ್ಷ ರೂಪಾಯಿ ಪಡೆದಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

ಫೇಸ್‌ಬುಕ್‌ನಿಂದ ಐಎಸ್‌ಐ ಸಂಪರ್ಕ

ಪ್ರಕರಣದ ಆರೋಪಿಗಳಲ್ಲೊಬ್ಬನಾದ ಭೂಪೇಂದ್ರ ವಂಜಾರ ಸಣ್ಣ ಅಪರಾಧಿಯಾಗಿದ್ದು, ಫೇಸ್‌ಬುಕ್ ಮೂಲಕ ಐಎಸ್‌ಐ ಸಂಪರ್ಕಕ್ಕೆ ಬಂದಿದ್ದಾನೆ ಎಂದು ಹೆಚ್ಚುವರಿ ಪೊಲೀಸ್ ಕಮಿಷನರ್ (ಅಪರಾಧ) ಪ್ರೇಮ್‌ವೀರ್ ಸಿಂಗ್ ತಿಳಿಸಿದ್ದಾರೆ.

'ಫೇಸ್‌ಬುಕ್ ಮೂಲಕವೇ ವಂಜಾರಗೆ ಹಣದ ಆಮಿಷವೊಡ್ಡಿದ ಬಾಬಾ ಬಾಯ್, ಜನರನ್ನು ಕೊಲ್ಲಲು ಮತ್ತು ಅಂಗಡಿಗಳನ್ನು ಸುಟ್ಟುಹಾಕಲು ನಿರ್ದೇಶಿಸಿದ್ದಾನೆ. ಗನ್ ಖರೀದಿಸಲು ಈ ಹಿಂದೆ ವಂಜಾರ ಐಎಸ್‌ಐ ಏಜೆಂಟ್‌ನಿಂದ ಪೇಟಿಎಂ ಮೂಲಕ ₹ 25 ಸಾವಿರ ಪಡೆದಿದ್ದ' ಎಂದೂ ಅವರು ಹೇಳಿದ್ದಾರೆ.

'ಅಪರಾಧದ ಮನಸ್ಥಿತಿ ಹೊಂದಿರುವ ಮತ್ತು ಹಣದ ಅಗತ್ಯವಿರುವ ಜನರನ್ನು ಗುರುತಿಸಿ, ಬಾಬಾ ಬಾಯ್ ಫೇಸ್‌ಬುಕ್ ಮೂಲಕ ಫ್ರೆಂಡ್ ರಿಕ್ವೆಸ್ಟ್ ಕಳುಹಿಸುತ್ತಿದ್ದ' ಎಂದು ಡಿಸಿಪಿ ಚೈತನ್ಯ ಮಾಂಡ್ಲಿಕ್ ಹೇಳಿದ್ದಾರೆ.

'ವಂಜಾರ ಜೊತೆಗೆ ಐಎಸ್‌ಐ ಏಜೆಂಟ್ ಚಾಟ್ ಮಾಡಿರುವ ಕೆಲವು ಐಪಿ ವಿಳಾಸಗಳನ್ನು ಪತ್ತೆ ಹಚ್ಚಿದ್ದೇವೆ. ಭಾರತದಲ್ಲಿ ಭಯೋತ್ಪಾದನೆಯನ್ನು ಹರಡಲು ಹಾಗೂ ಹಣದ ಮೂಲಕ ಜನರಿಗೆ ಆಮಿಷವೊಡ್ಡಿ ದೇಶದ ಆರ್ಥಿಕ ಭದ್ರತೆಗೆ ನಷ್ಟವನ್ನುಂಟು ಮಾಡುವ ವಿಷಯಗಳೂ ಇಲ್ಲಿವೆ' ಎಂದು ತಿಳಿಸಿದ್ದಾರೆ.

ಬೈಕ್‌ನಲ್ಲಿ ಹಿಂಬಾಲಿಸಿ ಮೊಬೈಲ್ ಕಳವು: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನಲ್ಲಿ ಹಿಂಬಾಲಿಸಿ, ಸಾರ್ವಜನಿಕರಿಂದ ಮೊಬೈಲ್‌ಗಳನ್ನು ಕದ್ದು ಪರಾರಿಯಾಗುತ್ತಿದ್ದ ಆರೋಪಿಯನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

ನೆಲಮಂಗಲ ಟೌನ್ ನಿವಾಸಿ ಮಹಮದ್ ಸೂಫಿಯಾನ್ (20) ಬಂಧಿತ ಆರೋಪಿ.

ಮಾ.11ರಂದು ವಿಜಯನಗರದ 9ನೇ ಅಡ್ಡರಸ್ತೆಯ ಮೆಡಿಕಲ್ ಶಾಪ್ ಮುಂಭಾಗ ನಡೆದುಕೊಂಡು ಹೋಗುತ್ತಿದ್ದ ದಂಪತಿಯನ್ನು ಆರೋಪಿ ಹಿಂಬಾಲಿಸಿದ್ದ. ಬಳಿಕ ಮಹಿಳೆಯ ಕೈಯಲ್ಲಿದ್ದ ಮೊಬೈಲ್ ಕಸಿದು ಅಲ್ಲಿಂದ ಪರಾರಿಯಾಗಿದ್ದ. ಈ ಸಂಬಂಧ ವಿಜಯನಗರ ಪೊಲೀಸರಿಗೆ ಪತಿ ದೂರು ನೀಡಿದ್ದರು.

'ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನಗರದ ವಿವಿಧ ಭಾಗಗಳಲ್ಲಿ ಮೊಬೈಲ್ ಸುಲಿಗೆ ಮಾಡುತ್ತಿದ್ದ ವಿಚಾರವನ್ನು ತಿಳಿಸಿದ್ದ. ಈ ಸಂಬಂಧ ಆರೋಪಿಯಿಂದ ₹75 ಸಾವಿರ ಬೆಲೆ ಬಾಳುವ ಐದು ಮೊಬೈಲ್‌ಗಳು ಹಾಗೂ ಕೃತ್ಯಕ್ಕೆ ಬಳಸುತ್ತಿದ್ದ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಪರೀಕ್ಷೆಯೇ ಅಂತಿಮವಲ್ಲ: ಪ್ರಧಾನಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪರೀಕ್ಷೆಗಳನ್ನು ದೀರ್ಘಾವಧಿಯಲ್ಲಿ ಜೀವನ ರೂಪಿಸುವ ಅವಕಾಶ ಎಂದು ಭಾವಿಸಬೇಕೇ ಹೊರತು ಅಂತಿಮ ಮೈಲಿಗಲ್ಲು ಎಂದಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ದೇಶದಾದ್ಯಂತ ವಿದ್ಯಾರ್ಥಿಗಳೊಂದಿಗೆ 'ಪರೀಕ್ಷಾ ಪೆ ಚರ್ಚಾ'ವರ್ಚುವಲ್ ಸಂವಾದದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ದೊಡ್ಡ ಕನಸುಗಳನ್ನು ಕಾಣಬೇಕು ಎಂದು ಹುರಿದುಂಬಿಸಿದರು.

ಈವೇಳೆಅವರುಅಧ್ಯಯನ,ಪರೀಕ್ಷೆ, ಕೋವಿಡ್ -19 ಸಾಂಕ್ರಾಮಿಕದ ನೆರಳಿನಲ್ಲಿ ಕಲಿಕೆ ಮತ್ತು ಪರೀಕ್ಷೆಯ ಪೂರ್ವಭಾವಿ ಒತ್ತಡ ನಿಭಾಯಿಸುವುದೂ ಸೇರಿದಂತೆ ಹಲವಾರು ವಿಷಯಗಳ ಕುರಿತು ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

ಮಕ್ಕಳೊಂದಿಗೆ ತೊಡಗಿಸಿಕೊಂಡು, ಅವರ ಬೇಕು, ಬೇಡಗಳನ್ನು ತಿಳಿಯುವ ಪ್ರಯತ್ನ ಮಾಡಿ ತಲೆಮಾರು ಅಂತರವನ್ನು ನಿವಾರಿಸುವ ಕೆಲಸವನ್ನು ಪೋಷಕರು ಮಾಡಬೇಕು ಎಂದು ಸಲಹೆ ನೀಡಿದರು.

ರಾಕೇಶ್ವರ ಸಿಂಗ್ ಮನ್ಹಾಸ್ ಅವರ ಬಿಡುಗಡೆಗೆ ಒತ್ತಾಯಿಸಿ ಜಮ್ಮುದಲ್ಲಿ ಮಾಜಿ ಸೈನಿಕರು ಬುಧವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ನಕ್ಸಲರಿಂದ ಅಪಹರಣ: ಸಿಆರ್‌ಪಿಎಫ್ ಕಮಾಂಡೊ ಚಿತ್ರ ಬಿಡುಗಡೆ

ಬಿಜಾಪುರ: ನಕ್ಸಲರು ಅಪಹರಿಸಿರುವ ಯೋಧ ರಾಕೇಶ್ವರ ಸಿಂಗ್ ಮನ್ಹಾಸ್ ಅವರ ಭಾವಚಿತ್ರವನ್ನು ಬುಧವಾರ ಬಿಡುಗಡೆ ಮಾಡಲಾಗಿದ್ದು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಕೇಂದ್ರೀಯ ಮೀಸಲು ಪೊಲೀಸ್ ಪಡೆಯ (ಸಿಆರ್‌ಪಿಎಫ್) ಕೋಬ್ರಾ ಕಮಾಂಡೊ ಪಡೆಗೆ ಸೇರಿರುವ ರಾಕೇಶ್ವರ್ ಸಿಂಗ್ ಅವರನ್ನು ಏಪ್ರಿಲ್ 3ರಂದು ಛತ್ತೀಸಗಡದ ಬಸ್ತಾರ್ ಪ್ರದೇಶದಲ್ಲಿ ನಡೆದ ಗುಂಡಿನ ದಾಳಿ ಸಂದರ್ಭದಲ್ಲಿ ಅಪಹರಿಸಲಾಗಿತ್ತು. ಈ ಗುಂಡಿನ ದಾಳಿಯಲ್ಲಿ 22 ಯೋಧರು ಹುತಾತ್ಮರಾಗಿದ್ದರು.

ಗುಡಿಸಲಲ್ಲಿ ಮನ್ಹಾಸ್ ಕುಳಿತಿರುವ ಚಿತ್ರವನ್ನು ಬಿಡುಗಡೆ ಮಾಡಲಾಗಿದೆ. ಈ ಚಿತ್ರದಲ್ಲಿ ಮನ್ಹಾಸ್ ಮಾತ್ರ ಇದ್ದು, ನಕ್ಸಲರು ಯಾರೂ ಕಾಣಿಸಿಕೊಂಡಿಲ್ಲ.

'ಪರಿಸ್ಥಿತಿಯ ಬಗ್ಗೆ ನಿಗಾವಹಿಸಲಾಗಿದೆ. ಯೋಧ ಮನ್ಹಾಸ್ ಸುರಕ್ಷಿತವಾಗಿ ಹಿಂತಿರುಗುವಂತೆ ಎಲ್ಲ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ' ಎಂದು ಬಸ್ತಾರ್ ವಲಯದ ಐಜಿಪಿ ಸುಂದರ್‌ರಾಜ್ ತಿಳಿಸಿದ್ದಾರೆ. 'ಸಂಘಟನೆಯ ಕಾರ್ಯಕರ್ತರು ಮನ್ಹಾಸ್ ಅವರನ್ನು ದಾಳಿ ನಡೆಸಿದ ಸ್ಥಳದಿಂದ ಅಪಹರಿಸಿದ್ದಾರೆ. ಸುರಕ್ಷಿತವಾಗಿ ಅವರನ್ನು ಬಿಡುಗಡೆ ಮಾಡಲು ಛತ್ತೀಸಗಡ ಸರ್ಕಾರ ಸಂಧಾನಕಾರರನ್ನು ನೇಮಿಸಬೇಕು' ಎಂದು ನಿಷೇಧಿತ ಸಿಪಿಐ (ಮಾವೋವಾದಿ) ಮಂಗಳವಾರ ಹಿಂದಿಯಲ್ಲಿ ಹೇಳಿಕೆ ಬಿಡುಗಡೆ ಮಾಡಿತ್ತು.

ದಂಡಕಾರಣ್ಯ ವಿಶೇಷ ವಲಯ ಸಮಿತಿ (ಡಿಕೆಎಸ್‌ಝಡ್‌ಸಿ) ವಕ್ತಾರ ವಿಕಲ್ಪ ಹೆಸರಿನಲ್ಲಿ ಈ ಹೇಳಿಕೆ ಬಿಡುಗಡೆ ಮಾಡಲಾಗಿತ್ತು.

'ಸುರಕ್ಷಿತವಾಗಿ ಬರುವ ವಿಶ್ವಾಸ'

ಸಿಆರ್‌ಪಿಎಫ್ ಕೋಬ್ರಾ ಕಮಾಂಡೊ ರಾಕೇಶ್ವರ್ ಸಿಂಗ್ ಮನ್ಹಾಸ್ ಸುರಕ್ಷಿತಾಗಿ ಹಿಂತಿರುಗುವ ವಿಶ್ವಾಸವಿದೆ ಎಂದು ಜಮ್ಮು ಮತ್ತು ಕಾಶ್ಮೀರ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಛತ್ತೀಸಗಡ ಮುಖ್ಯ ಮಂತ್ರಿ ಭೂಪೇಶ್ ಬಘೇಲ್ ಪರಿಸ್ಥಿತಿ ಬಗ್ಗೆ ನಿರಂತರ ನಿಗಾವಹಿಸಿದ್ದಾರೆ. ಮನ್ಹಾಸ್ ಬಿಡುಗಡೆ ಪ್ರಯತ್ನಗಳು ನಡೆದಿವೆ ಎಂದಿದ್ದಾರೆ.

ಒತ್ತುವರಿ ತೆರವುಗೊಳಿಸಿ ಸರ್ಕಾರಿ ಭೂಮಿ ಸಂರಕ್ಷಿಸಲು ಆಗ್ರಹ

ಸಂಪಿಗೇಹಳ್ಳಿ ಬಂಡೆಯಲ್ಲಿ ತ್ಯಾಜ್ಯ ವಿಲೇವಾರಿ

• ಡಿ.ಸುರೇಶ್

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಸಂಪಿಗೇಹಳ್ಳಿ-ಚೊಕ್ಕನಹಳ್ಳಿ ಬಂಡೆಪ್ರದೇಶದ ಜಾಗದಲ್ಲಿ ಖಾಸಗಿ ವ್ಯಕ್ತಿಗಳು ತ್ಯಾಜ್ಯ ವಿಲೇವಾರಿ ಮಾಡುತ್ತಿರುವುದನ್ನು ತಡೆಗಟ್ಟುವುದೂ ಸೇರಿದಂತೆ ಸರ್ಕಾರಿ ಜಾಗದ ಒತ್ತುವರಿ ತೆರವುಗೊಳಿಸಿ, ಈ ಐತಿಹಾಸಿಕ ಸ್ಥಳ ಸಂರಕ್ಷಿಸಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಖಾಸಗಿ ವ್ಯಕ್ತಿಗಳು ತ್ಯಾಜ್ಯ ಮಣ್ಣನ್ನು ತಂದು ಅಕ್ರಮವಾಗಿ ಇಲ್ಲಿ ಸುರಿಯುವ ಮೂಲಕ ಭೂಮಿಯನ್ನು ಸಮತಟ್ಟು ಮಾಡಲು ಪ್ರಯತ್ನಿಸುತ್ತಿದ್ದು, ನಂತರ ಈ ಜಾಗವನ್ನು ಕಬಳಿಸುವ ಹುನ್ನಾರ ನಡೆಸುತ್ತಿದ್ದಾರೆ. ಅಲ್ಲದೆ ಬಿಬಿಎಂಪಿಯವರೂ ಈ ಜಾಗದಲ್ಲಿ ತ್ಯಾಜ್ಯ ವಿಲೇವಾರಿ ಮಾಡುತ್ತಿದ್ದಾರೆ ಎಂದು ಆರೋಪಿಸಿರುವ ಸ್ಥಳೀಯ ನಿವಾಸಿಗಳು, ಇದೊಂದು ಐತಿಹಾಸಿಕ ಸ್ಥಳವಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಈ ಅಕ್ರಮ ಚಟುವಟಿಕೆಯನ್ನು ತಡೆಗಟ್ಟಬೇಕು ಎಂದು ಆಗ್ರಹಿಸಿದ್ದಾರೆ.

ಖಾಸಗಿಯವರು ಈ ಜಾಗವನ್ನು ಕಬಳಿಸುವ ಉದ್ದೇಶದಿಂದ ಇಲ್ಲಿ ಕಸ ಸುರಿಯುತ್ತಿರಬಹುದೆಂಬ ಸಂಶಯ ವ್ಯಕ್ತವಾಗಿದೆ.ಕೆರೆ ಮತ್ತು ಬಂಡೆಪ್ರದೇಶದ ಸುತ್ತಮುತ್ತಲಿನ ಸರ್ಕಾರಿ ಜಾಗವು ಒತ್ತುವರಿಯಾಗಿ ಭೂಗಳ್ಳರ ಪಾಲಾಗುತ್ತಿದೆ ಎಂದು ದೂರಿದ ಸ್ಥಳೀಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಿವಾಸಿ ಶೈಲಜಾ, 'ಕೂಡಲೇ ಇದನ್ನು ತಡೆಗಟ್ಟುವುದರ ಜೊತೆಗೆ ಈ ಸ್ಥಳಕ್ಕೆ ವಾಹನಗಳು ಬರದಂತೆ ತಡೆಗೋಡೆ ನಿರ್ಮಿಸಬೇಕು. ಬಂಡೆಯ ಪಕ್ಕದಲ್ಲಿ 7 ಎಕರೆ ವಿಸ್ತೀರ್ಣದಲ್ಲಿರುವ ವೆಂಕಟೇಶಪುರ ಕೆರೆಯನ್ನು ಅಭಿವೃದ್ಧಿಪಡಿಸಿದರೆ ಈ ಸ್ಥಳದ ಸ್ವರೂಪವೇ ಬದಲಾಗಲಿದೆ' ಎಂದು ತಿಳಿಸಿದರು.

ಬಂಡೆಪ್ರದೇಶದಲ್ಲಿ ತ್ಯಾಜ್ಯ ವಿಲೇವಾರಿ ಮಾಡಿರುವುದು

ಬಂಡೆಯ ಪಕ್ಕದಲ್ಲಿ 50 ಅಡಿಗಳಷ್ಟು ಆಳವಿರುವ ದೊಡ್ಡ ಹಳ್ಳವಿದ್ದು, ಇದರಲ್ಲಿ 20 ಅಡಿಗಳಷ್ಟು ಕೊಳಚೆನೀರು ಸಂಗ್ರಹವಾಗಿದೆ. ನೀರಿನ ಮೇಲೆ ಕಳೆ ಗಿಡಗಳು ಅವರಿಸಿಕೊಂಡಿರುವುದರಿಂದ ನೀರು ಸಂಗ್ರಹವಾಗಿರುವುದು ಗೋಚರಿಸದ ಪರಿಣಾಮ, ಜನರು ಹಾಗೂ ಪ್ರಾಣಿಗಳು ಈ ಹಳ್ಳಕ್ಕೆ ಬೀಳುವ ಸಂಭವ ಹೆಚ್ಚಾಗಿದ್ದು, ಈ ಸ್ಥಳವು ಅಪಾಯಕ್ಕೆ ಎಡೆಮಾಡಿಕೊಟ್ಟಿದೆ. ಆದ್ದರಿಂದ ಕೂಡಲೇ ತಡೆಗೋಡೆಯನ್ನು ನಿರ್ಮಿಸಬೇಕು ಎಂದು ಸ್ಥಳೀಯ ನಿವಾಸಿ ಶಿವಂ ಒತ್ತಾಯಿಸಿದರು.

ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಬಂಡೆಪ್ರದೇಶದ ಜಾಗದ ಸರ್ವೆ ನಡೆಸಿ, ಒತ್ತುವರಿಯಾಗಿರುವ ಸರ್ಕಾರಿ ಜಾಗವನ್ನು ತೆರವುಗೊಳಿಸಿ, ಗಡಿರೇಖೆಯನ್ನು ಗುರುತಿಸಬೇಕು. ನಂತರ ಆ ಭೂಮಿಯನ್ನು ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿರಿಸುವುದರ ಜೊತೆಗೆ ಈ ಐತಿಹಾಸಿಕ 'ಸಂಪಿಗೇಹಳ್ಳಿ ಸರ್ವೆ ಪಾಯಿಂಟ್' ಸ್ಥಳವನ್ನು ಅಭಿವೃದ್ಧಿಪಡಿಸಿ, ಪ್ರವಾಸಿ ತಾಣವನ್ನಾಗಿ ಮಾರ್ಪಡಿಸಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಅನುದಾನ ವಾಪಸ್

ಕೆರೆಗಳು ಮತ್ತು ರಾಜಕಾಲುವೆಗಳ ಅಭಿವೃದ್ಧಿಗಾಗಿ ಜೆಡಿ(ಎಸ್) ಹಾಗೂ ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಬಿಡುಗಡೆಯಾಗಿದ್ದ ಅನುದಾನವನ್ನು ಬಿಜೆಪಿ ಸರ್ಕಾರ ಕಿತ್ತುಕೊಂಡ ನಂತರ ವೆಂಕಟೇಶಪುರ ಕೆರೆ ಸೇರಿದಂತೆ ಹಲವು ಕೆರೆಗಳು ಮತ್ತು ರಾಜಕಾಲುವೆಗಳ ಅಭಿವೃದ್ಧಿ ಕಾಮಗಾರಿ ನನೆಗುದಿಗೆ ಬಿದ್ದಿದೆ. ಹಣ ಬಿಡುಗಡೆಗಾಗಿ ಮುಖ್ಯಮಂತ್ರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಸಂಪಿಗೇಹಳ್ಳಿ ಬಂಡೆಪ್ರದೇಶದ ಸುತ್ತಮುತ್ತಲಿನ ಜಾಗ ಒತ್ತುವರಿಯಾಗಿದ್ದರೆ ತೆರವುಗೊಳಿಸಲು ಹಾಗೂ ಕಸ ಹಾಕುವುದನ್ನು ತಡೆಗಟ್ಟಲು ಅಧಿಕಾರಿಗಳಿಗೆ ಸೂಚಿಸಲಾಗುವುದು.

-ಕೃಷ್ಣಬೈರೇಗೌಡ, ಶಾಸಕ

ಒತ್ತುವರಿ ತೆರವು ಶೀಘ್ರ

ಶೀಘ್ರದಲ್ಲೇ ಸಂಪಿಗೇಹಳ್ಳಿ ಬಂಡೆಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಲಾಗುವುದು. ಸರ್ವೆ ನಡೆಸಿ, ಒತ್ತುವರಿಯಾಗಿದ್ದರೆ ತೆರವುಗೊಳಿಸಿ, ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಲಾಗುವುದು. ಅಲ್ಲದೆ ಈ ಜಾಗವನ್ನು ಬಿಬಿಎಂಪಿಗೆ ಹಸ್ತಾಂತರಿಸುವ ಸಂಬಂಧ ಶಿಫಾರಸು ಮಾಡಲಾಗುವುದು.

-ಕೆ.ನರಸಿಂಹಮೂರ್ತಿ, ತಹಶೀಲ್ದಾರ್, ಯಲಹಂಕ ತಾಲ್ಲೂಕು

ಪ್ರವಾಸಿ ತಾಣವಾಗಿ ಅಭಿವೃದ್ಧಿಗೆ ಕ್ರಮ

ಬೆಂಗಳೂರು ಹೊರಹೊಲಯದ ಕೆಲವು ಸರ್ಕಾರಿ ಜಾಗಗಳನ್ನು ತಹಶೀಲ್ದಾರ್ ಅವರು ಇನ್ನೂ ಬಿಬಿಎಂಪಿಗೆ ಹಸ್ತಾಂತರಿಸಿಲ್ಲ. ಸಂಪಿಗೇಹಳ್ಳಿ ಬಂಡೆಯ ಸುತ್ತಮುತ್ತಲ ಸರ್ಕಾರಿ ಜಾಗ ಒತ್ತುವರಿಯಾಗಿದ್ದರೆ ತಹಶೀಲ್ದಾರ್ ಅವರು ನೋಟಿಸ್ ನೀಡಿ, ತೆರವುಗೊಳಿಸುವುದಾದರೆ ಸಂಪೂರ್ಣ ಸಹಕಾರ ನೀಡಲಾಗುವುದು. ಜಮೀನನ್ನು ಬಿಬಿಎಂಪಿಗೆ ಹಸ್ತಾಂತರಿಸಿದರೆ ಬೇಲಿ ನಿರ್ಮಿಸಿ, ನಾಮಫಲಕ ಅಳವಡಿಸಲಾಗುವುದು. ನಂತರ ಈ ಸ್ಥಳವನ್ನು ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಕುರಿತು ಚರ್ಚಿಸಲಾಗುವುದು.

-ಡಾ.ಅಶೋಕ್, ಜಂಟಿ ಆಯುಕ್ತ, ಬಿಬಿಎಂಪಿ ಯಲಹಂಕ ವಲಯ



ಯಶವಂತಪುರ ಡಿಪೋನಲ್ಲಿ ಸಾಲುಗಟ್ಟಿ ನಿಂತಿರುವ ಬಿಎಂಟಿಸಿ ಬಸ್‌ಗಳು(ಎಡಚಿತ್ರ). ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಖಾಸಗಿ ಬಸ್, ಮ್ಯಾಕ್ಸಿಕ್ಯಾಬ್ ಮತ್ತು ಆಟೋರಿಕ್ಷಾಗಳು ನಿಂತಿರುವುದು –ಪ್ರಜಾವಾಣಿ ಚಿತ್ರಗಳು/ಎಂ.ಎಸ್ ಮಂಜುನಾಥ್

ಪರದಾಡಿದ ಮಹಿಳೆಯರು–ವೃದ್ಧರು; ಪೊಲೀಸ್ ಭದ್ರತೆ ನಡುವೆ ಕೆಲ ಬಸ್‌ಗಳ ಸಂಚಾರ

ಸಾರಿಗೆ ಮುಷ್ಕರ: ಖಾಸಗಿ ವಾಹನಗಳ ದರ್ಬಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ನಿಲ್ದಾಣಗಳಲ್ಲಿ ಖಾಸಗಿ ಬಸ್‌ಗಳ ದರ್ಬಾರ್, ಎಲ್ಲ ಮಾರ್ಗಗಳಿಗೂ ಬಸ್‌ಗಳಿಲ್ಲದ ಪರದಾಡಿದ ಮಹಿಳೆಯರು–ವೃದ್ಧರು, ಪ್ರಯಾಣಿಕರಿಗಾಗಿ ಕಾದ ಖಾಸಗಿ ಬಸ್‌ಗಳು, ಪೊಲೀಸ್ ಭದ್ರತೆಯಲ್ಲಿ ಸಂಚರಿಸಿದ ಕೆಲವೇ ಬಸ್‌ಗಳು...

ಇದು ಸಾರಿಗೆ ನೌಕರರ ಮುಷ್ಕರದಿಂದ ಬುಧವಾರ ನಗರದಲ್ಲಿ ಕಂಡು ಬಂದ ದೃಶ್ಯ. ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಿಂದ ಕೂಡಿರುತ್ತಿದ್ದ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣಕ್ಕೆ ಬುಧವಾರ ಖಾಸಗಿ ಬಸ್‌ಗಳು ದಾಂಗುಡಿ ಇಟ್ಟಿದ್ದವು. ಸರ್ಕಾರಿ ಬಸ್‌ಗಳು ನಿಲ್ಲಬೇಕಿದ್ದ ಜಾಗದಲ್ಲಿ ಖಾಸಗಿ ಬಸ್‌ಗಳು ಸಾಲುಗಟ್ಟಿ ನಿಂತಿದ್ದವು.

ಶಾಂತಿನಗರ, ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣ, ಕಲಾಸಿಪಾಳ್ಯ ನಿಲ್ದಾಣಗಳಲ್ಲಿಯೂ ಖಾಸಗಿ ಬಸ್‌ಗಳು ನಿಂತಿದ್ದವು. ಬಸ್ ದರವನ್ನೂ ನಿಗಮಗಳೇ ನಿಗದಿ ಮಾಡಿ ಅದರ ಪಟ್ಟಿಯನ್ನು ನೀಡಿದ್ದವು. ಆದರೆ, ನಿಗದಿಗಿಂತ ಹೆಚ್ಚು ದರ ಪಡೆಯಲಾಗುತ್ತಿದೆ. ಹೊರ ಊರುಗಳಿಗೆ ತೆರಳುವ ಬಸ್‌ಗಳಲ್ಲಿ ದುಪ್ಪಟ್ಟು ದರ ಪಡೆದು ಪ್ರಯಾಣಿಕರನ್ನು ಕರೆದೊಯ್ಯಲಾಗುತ್ತದೆ ಎಂಬ ದೂರುಗಳು ಕೇಳಿ ಬಂದವು.

ಕಲಾಸಿಪಾಳ್ಯದಲ್ಲಿ ಖಾಸಗಿ ಬಸ್‌ಗಳಿಗೆ ಹತ್ತುತ್ತಿರುವ ಪ್ರಯಾಣಿಕರು

'ಸರ್ಕಾರಿ ಬಸ್‌ಗಳಿಗೆ ಡೀಸೆಲ್ ದರದಲ್ಲಿ ರಿಯಾಯಿತಿ ಸಿಗುತ್ತದೆ. ಖಾಸಗಿ ಬಸ್‌ಗಳಿಗೆ ರಿಯಾಯಿತಿ ಇರುವುದಿಲ್ಲ. ಹೀಗಾಗಿ, ₹10ರಿಂದ ₹20 ಹೆಚ್ಚಿನ ದರ ಪಡೆಯಬೇಕಿರುವುದು ಅನಿವಾರ್ಯ' ಎಂದು ಕಲಾಸಿಪಾಳ್ಯದಲ್ಲಿ ಬಸ್ ಚಾಲಕರು ಮತ್ತು ಮಾಲೀಕರು ಹೇಳಿದರು. ಈ ಸಂದರ್ಭದಲ್ಲಿ ಪ್ರಯಾಣಿಕರು ಮತ್ತು ಖಾಸಗಿ ಬಸ್ ಚಾಲಕರ ನಡುವೆ ಜಟಾಪಟಿಯೂ ನಡೆಯಿತು.

ನಿಲ್ದಾಣಗಳಲ್ಲಿ ಖಾಸಗಿ ಬಸ್‌ಗಳು ಸಾಲುಗಟ್ಟಿ ನಿಂತಿದ್ದರೂ, ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು. ಮುಷ್ಕರ ನಡೆಯಲಿರುವ ಮಾಹಿತಿ ಇದ್ದ ಕಾರಣ ಪ್ರಯಾಣಿಕರು ನಿಲ್ದಾಣಗಳತ್ತ ಬರಲಿಲ್ಲ. ಆದರೆ, ಅಲ್ಲಲ್ಲಿ ಇರುವ ಪಿಕ್‌ಅಪ್ ಪಾಯಿಂಟ್‌ಗಳ ಬಳಿ ಬಸ್‌ಗಳಿಗಾಗಿ ಪ್ರಯಾಣಿಕರು ಕಾದು ನಿಂತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಮಕ್ಕಳೊಂದಿಗೆ ಮಹಿಳೆಯರು, ವೃದ್ಧರು ಬಸ್‌ಗಾಗಿ ಕಾಯುತ್ತಿದ್ದರು. ಆಟೋರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಮುಷ್ಕರದ ಲಾಭ ಪಡೆದುಕೊಳ್ಳಲು ಪ್ರಯತ್ನಿಸಿದರು. ಮೀಟರ್ ಹಾಕದೆ ಕೇಳಿದಷ್ಟು ಹಣಕ್ಕೆ ಬೇಡಿಕೆ ಇಟ್ಟು ಪ್ರಯಾಣಿಕರನ್ನು ಕರೆದೊಯ್ಯುವುದೂ ಸಾಮಾನ್ಯವಾಗಿತ್ತು.

ಯಶವಂತಪುರದಲ್ಲಿ ಆಟೋರಿಕ್ಷಾಗಳೇ ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುತ್ತಿರುವುದು

ಬಿಎಂಟಿಸಿ ಚಾಲಕನಿಗೆ ಬೆದರಿಕೆ:ದೂರು

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ವೇಳೆ ಕರ್ತವ್ಯಕ್ಕೆ ಹಾಜರಾಗಿದ್ದ ಬಿಎಂಟಿಸಿ ಚಾಲಕರೊಬ್ಬರಿಗೆ ಕರ್ನಾಟಕ ರಸ್ತೆ ಸಾರಿಗೆ ನೌಕರರ ಕೂಟದ ಸದಸ್ಯನ ಹೆಸರಿನಲ್ಲಿ ಕರೆ ಮಾಡಿದ್ದ ವ್ಯಕ್ತಿಯೊಬ್ಬ ಜೀವ ಬೆದರಿಕೆ ಹಾಕಿರುವ ಕುರಿತು ಸುಬ್ರಹ್ಮಣ್ಯಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬಿಎಂಟಿಸಿ ಚಾಲಕ ತ್ಯಾಗರಾಜು ಬುಧವಾರ ಬೆಳಿಗ್ಗೆ 7.30ರ ವೇಳೆಗೆ ಕರ್ತವ್ಯಕ್ಕೆ ಹಾಜರಾಗಿದ್ದರು. ಈ ವೇಳೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ ತನ್ನ ಹೆಸರು ನಾಯಕ್, ಸಾರಿಗೆ ನೌಕರರ ಕೂಟದ ಸದಸ್ಯ ಎಂದು ಪರಿಚಯಿಸಿಕೊಂಡಿದ್ದ.

ಕೂಟದ ಗೌರವ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಹಾಗೂ ಅಧ್ಯಕ್ಷ ಚಂದ್ರಶೇಖರ್ ವಿರುದ್ಧ ದೂರು ದಾಖಲಿಸಿರುವುದನ್ನು ಪ್ರಶ್ನಿಸಿದ್ದ.'ಏನಾದರೂ ತೊಂದರೆಗಳನ್ನು ಮಾಡಿ, ಅದನ್ನು ತ್ಯಾಗರಾಜು ಆದ ನೀನೇ ಮಾಡಿದ್ದಾಗಿ ದೂರು ದಾಖಲಿಸುತ್ತೇನೆ' ಎಂದೂ ಬೆದರಿಸಿದ್ದ.

ಈ ವಿಚಾರವನ್ನು ತ್ಯಾಗರಾಜು ಡಿಪೋ ಮೇಲಧಿಕಾರಿಗಳಿಗೆ ತಿಳಿಸಿದ್ದರು. ಇದರನ್ವಯ ಚಾಲಕನಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಿ, ಬೆದರಿಕೆ ಹಾಕಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಎಂಟಿಸಿ ಅಧಿಕಾರಿಗಳು ದೂರು ನೀಡಿದ್ದಾರೆ.

ತರಬೇತಿ ಸಿಬ್ಬಂದಿ ವಿರುದ್ಧ ಕ್ರಮ: ಎಚ್ಚರಿಕೆ

ಬೆಂಗಳೂರು: ಮುಷ್ಕರದ ಕಾರಣಕ್ಕೆ ಕರ್ತವ್ಯಕ್ಕೆ ಹಾಜರಾಗದ ತರಬೇತಿ ಸಿಬ್ಬಂದಿಗೆ ಬಿಎಂಟಿಸಿ ನೋಟಿಸ್ ನೀಡಿದೆ.

ತರಬೇತಿ ಅವಧಿಯಲ್ಲಿರುವ 1,482 ಸಿಬ್ಬಂದಿಗೆ ನೋಟಿಸ್ ನೀಡಲಾಗಿದ್ದು, ಗುರುವಾರ ಕರ್ತವ್ಯಕ್ಕೆ ಹಾಜರಾಗದಿದ್ದರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದೆ.

'ನೀವು ಕರ್ತವ್ಯಕ್ಕೆ ಅನಧಿಕೃತವಾಗಿ ಗೈರಾಗಿದ್ದು, ನಿಗಮದ ದೈನಂದಿನ ಕಾರ್ಯಚರಣೆಗೆ ಅಡಚಣೆಯಾಗಿದೆ. ಸಂಸ್ಥೆಗೆ ಆರ್ಥಿಕ ನಷ್ಟ ಮತ್ತು ಸಂಸ್ಥೆಯ ಘನತಗೆ ಧಕ್ಕೆ ಉಂಟಾಗಲು ಕಾರಣಕರ್ತರಾಗಿದ್ದೀರಿ. ತರಬೇತಿ ಅವಧಿಯಲ್ಲಿ ಮುಷ್ಕರಕ್ಕೆ ಬೆಂಬಲ ನೀಡುವ ಮೂಲಕ ಷರತ್ತುಗಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದೀರಿ. ಗುರುವಾರ ಕರ್ತವ್ಯಕ್ಕೆ ಹಾಜರಾಗಬೇಕು' ಎಂದು ತಿಳಿಸಿದೆ.

ಮೆಟ್ರೊ ರೈಲು ಪ್ರಯಾಣಕ್ಕೆ ನಿರಾಸಕ್ತಿ

ನೌಕರರ ಮುಷ್ಕರ ಇದ್ದರೂ ಮೆಟ್ರೊ ರೈಲು ಪ್ರಯಾಣಕ್ಕೆ ಜನ ಹೆಚ್ಚು ಆಸಕ್ತಿ ತೋರಿಸಿಲ್ಲ. ಆದರೂ, 10 ನಿಮಿಷಕ್ಕೆ ಬದಲಾಗಿ ನಾಲ್ಕೂವರೆಯಿಂದ ಐದು ನಿಮಿಷಕ್ಕೆ ರೈಲುಗಳು ಬುಧವಾರ ಸಂಚರಿಸಿದವು.

ಪ್ರತಿನಿತ್ಯ 247 ಟ್ರಿಪ್ ಸಂಚರಿಸುತ್ತಿದ್ದ ರೈಲುಗಳು, ಬುಧವಾರ 289 ಟ್ರಿಪ್ ಸಂಚರಿಸಿದವು. ಪ್ರಯಾಣಿಕರ ಸಂಖ್ಯೆ ಸಾಮಾನ್ಯ ದಿನಗಳಿಗಿಂತ ಕಡಿಮೆ ಇತ್ತು. 1.27 ಲಕ್ಷ ಜನ ಪ್ರಯಾಣಿಸಿದರು. ಬೇರೆ ದಿನಗಳಲ್ಲಿ ಪ್ರಯಾಣಿಕರ ಸಂಖ್ಯೆ 1.60 ಲಕ್ಷ ಪ್ರಯಾಣಿಸುತ್ತಿದ್ದರು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಸನ್ಮಾನ

ಮುಷ್ಕರ ಇದ್ದರೂ ಉತ್ತರಹಳ್ಳಿ ಡಿಪೋ–33ರ ಚಾಲಕ ತ್ಯಾಗರಾಜು ಬಸ್ ಚಾಲನೆ ಮಾಡಿದರು. ಇದಕ್ಕಾಗಿ ಹೋಟೆಲ್ ಮಾಲೀಕ ಶ್ರೀಧರ ಭಟ್ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ವೀರಣ್ಣ ಸನ್ಮಾನ ಮಾಡಿದರು.

145 ಬಸ್ ಕಾರ್ಯಾಚರಣೆ

ಮುಷ್ಕರದ ನಡುವೆಯೂ 145 ಬಸ್‌ಗಳು ನಗರದಲ್ಲಿ ಕಾರ್ಯಾಚರಣೆ ನಡೆಸಿದವು ಎಂದು ಬಿಎಂಟಿಸಿ ಸ್ಪಷ್ಟಪಡಿಸಿದೆ.

ನಗರದಲ್ಲಿ 1124 ಖಾಸಗಿ ಬಸ್ ಮತ್ತು 2 ಸಾವಿರ ಮ್ಯಾಕ್ಸಿಕ್ಯಾಬ್‌ಗಳು ಸಂಚರಿಸಿದ್ದು, ಪ್ರಯಾಣಿಕರಿಗೆ ತೊಂದರೆ ಆಗಿಲ್ಲ ಎಂದು ತಿಳಿಸಿದೆ.

ಪ್ರಯಾಣಿಕ ಸಾವು

ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಚನ್ನಪ್ಪ ಎಂಬ ವ್ಯಕ್ತಿಯೊಬ್ಬರು ಹೃದಯಾಘಾತದಿಂದ ಮೃತಪಟ್ಟರು.

ಜಿಗಣಿಯಿಂದ ಬಂದಿದ್ದ ಅವರು ಬಸ್‌ಗಾಗಿ ಕಾಯುತ್ತಿದ್ದ ವೇಳೆ ಹೃದಯಾಘಾತ ಸಂಭವಿಸಿ ಬಸ್ ನಿಲ್ದಾಣದಲ್ಲೇ ಕುಸಿದು ಬಿದ್ದು ಅಸುನೀಗಿದರು.

'ಸಾರ್ವಜನಿಕ ಸಾರಿಗೆಯೂ ವಿದ್ಯುತ್ ಚಾಲಿತ'

ಬೆಂಗಳೂರು: 'ಬೆಂಗಳೂರು ಸೇರಿ ರಾಜ್ಯದ ಎಲ್ಲ ಕಡೆಗಳಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ವಿದ್ಯುತ್ ಚಾಲಿತ ವ್ಯವಸ್ಥೆಯಾಗಿ ಪರಿವರ್ತಿಸಲಾಗುವುದು' ಎಂದು ವಿಜ್ಞಾನ–ತಂತ್ರಜ್ಞಾನ, ಐಟಿ–ಬಿಟಿ ಸಚಿವರೂ ಆದ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥ ನಾರಾಯಣ ತಿಳಿಸಿದರು.

ಜಪಾನ್‌ನಲ್ಲಿ ನಡೆಯುತ್ತಿರುವ ಜಾಗತಿಕ ತಂತ್ರಜ್ಞಾನ ಆಡಳಿತ ಶೃಂಗಸಭೆಯಲ್ಲಿ ವರ್ಚುವಲ್ ಆಗಿ ಪಾಲ್ಗೊಂಡು ಮಾತನಾಡಿದ ಅವರು, ಆಡಳಿತ, ಅಭಿವೃದ್ಧಿ ಸೇರಿ ಎಲ್ಲ ಕ್ಷೇತ್ರಗಳಲ್ಲೂ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುವುದು ಎಂದರು.

ದುಪ್ಪಟ್ಟು ಬಾಡಿಗೆ: ಟ್ಯಾಕ್ಸಿಗಳದ್ದೇ ದರ್ಬಾರ್

ವಿಮಾನ ಪ್ರಯಾಣಿಕರಿಗೂ ತಟ್ಟಿದ ಬಿಸಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಸಾರಿಗೆ ನೌಕರರ ಮುಷ್ಕರದ ಬಿಸಿ ಇಲ್ಲಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಯಾಣಿಕರಿಗೂ ತಟ್ಟಿತು. ಬಿಎಂಟಿಸಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದರಿಂದ ಪ್ರಯಾಣಿಕರು ಪರದಾಡಬೇಕಾಯಿತು.

ಮಂಗಳವಾರ ಸಂಜೆಯಿಂದಲೇ ವಿಮಾನ ನಿಲ್ದಾಣಕ್ಕೆ ವಾಯುವಜ್ರ ಸೇರಿದಂತೆ ಬಿಎಂಟಿಸಿ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಬುಧವಾರ ಬಿಎಂಟಿಸಿ ಮತ್ತು ಖಾಸಗಿ ಬಸ್‌ಗಳು ವಿಮಾನ ನಿಲ್ದಾಣದ ಕಡೆಗೆ ಸುಳಿಯಲಿಲ್ಲ. ಇದರಿಂದಾಗಿ ಟ್ಯಾಕ್ಸಿ ಚಾಲಕರು ಕೇಳಿದಷ್ಟು ಹಣ ತೆತ್ತು ಪ್ರಯಾಣಿಕರು ಮನೆ ಸೇರಿಕೊಂಡರು.

ಎರಡರಿಂದ ಮೂರು ಪಟ್ಟು ದುಬಾರಿ ಬಾಡಿಗೆ ತೆರಲು ಸಾಧ್ಯವಾಗದ ಕೆಲವು ಪ್ರಯಾಣಿಕರು, ಸ್ನೇಹಿತರು ಮತ್ತು ಕುಟುಂಬದ ಸದಸ್ಯರಿಗೆ ಕರೆ ಮಾಡಿ ವಾಹನ ತರಿಸಿಕೊಂಡು ಅದರಲ್ಲಿ ತೆರಳಿದರು.

'ವಿಮಾನ ನಿಲ್ದಾಣಕ್ಕೆ ಪ್ರತಿದಿನ ಬೆಂಗಳೂರು ನಗರ ಸೇರಿದಂತೆ ವಿವಿಧೆಡೆಯಿಂದ 60 ಬಸ್‌ಗಳು 300 ಟ್ರಿಪ್ ಕಾರ್ಯಾಚರಣೆ ನಡೆಸುತ್ತವೆ. ಸಾರಿಗೆ ನೌಕರರ ಮುಷ್ಕರದಿಂದಾಗಿ ಒಂದೂ ಬಿಎಂಟಿಸಿ ಬಸ್ ಈ ಕಡೆಗೆ ಮುಖ ಮಾಡಿಲ್ಲ' ಎಂದು ಬಸ್ ನಿಲ್ದಾಣದ ಭದ್ರತಾ ಸಿಬ್ಬಂದಿ ಪವನ್ ಚವ್ಹಾಣ್ ಹೇಳಿದರು.

'ದೆಹಲಿಯಿಂದ ಈಗಷ್ಟೇ ಬಂದಿದ್ದೇನೆ. ರಾಜಮಹಲ್ ಪ್ಯಾಲೇಸ್ ಗುಟ್ಟಹಳ್ಳಿಗೆ ಹೋಗಬೇಕು. ಟ್ಯಾಕ್ಸಿಯವರು ₹ 1,800 ಬಾಡಿಗೆ ಕೇಳುತ್ತಿದ್ದಾರೆ' ಎಂದು ಪ್ರಯಾಣಿಕ ರಾಜೇಶ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

'ಲಾಕ್‌ಡೌನ್ ಸಮಯದಲ್ಲಿ ನಮ್ಮ ಪರಿಸ್ಥಿತಿ ಹೇಗಿತ್ತು ಎಂದು ಯಾರೊಬ್ಬರೂ ಕೇಳಲಿಲ್ಲ. ಪ್ರಸ್ತುತ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿದೆ. ಟೋಲ್ ದುಬಾರಿಯಾಗಿದೆ. ನಮ್ಮ ನೋವು ಕೇಳುವವರು ಯಾರು' ಎಂದು ಟ್ಯಾಕ್ಸಿ ಚಾಲಕರು ಪ್ರಶ್ನಿಸಿದರು. ಪ್ರಯಾಣಿಕರಿಂದ ಹೆಚ್ಚಿನ ಬಾಡಿಗೆ ವಸೂಲಿಯನ್ನು ಅವರು ಸಮರ್ಥಿಸಿಕೊಂಡರು.

ಜನರು ಮತ್ತು ಬಸ್ ಇಲ್ಲದೆ ಬಿಕೋ ಎನ್ನುತ್ತಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿರುವ ಬಿಎಂಟಿಸಿ ಬಸ್ ನಿಲ್ದಾಣ

ಬಿಎಂಟಿಸಿ ಸಂಚಾರ ಸ್ಥಗಿತ

ಸಾರಿಗೆ ನೌಕರರು ಮುಷ್ಕರ ನಡೆಸಿದ ಪರಿಣಾಮ ಪ್ರಯಾಣಿಕರು ಪರದಾಡಿದರು. ಕೊನೆಗೆ, ಖಾಸಗಿ ಬಸ್‌ಗಳ ಮೊರೆ ಹೋಗುವಂತಾಯಿತು.

ಸದಾ ಜನದಟ್ಟಣೆಯಿಂದ ತುಂಬಿರುತ್ತಿದ್ದ ಪಟ್ಟಣದ ಬಸ್‌ನಿಲ್ದಾಣದಲ್ಲಿ ಪ್ರಯಾಣಿಕರ ಕೊರತೆ ಇತ್ತು. ಸಾರಿಗೆ ಬಸ್‌ಗಳು ಮತ್ತು ಬಿಎಂಟಿಸಿ ಬಸ್‌ಗಳು ರಸ್ತೆಗಿಳಿಯಲಿಲ್ಲ. ಸರ್ಕಾರ ಖಾಸಗಿ ಬಸ್ ಸಂಚಾರದ ವ್ಯವಸ್ಥೆ ಮಾಡಿದ್ದರೂ ದುಪ್ಪಟ್ಟು ದರ ನೀಡಿ ನಿರ್ವಾಹಕರನ್ನು ಶಪಿಸುತ್ತಲೇ ಪ್ರಯಾಣಿಕರು ತೆರಳಿದರು. ಕೆಲವು ಪ್ರಯಾಣಿಕರು ನಿಗದಿತ ಸಮಯಕ್ಕೆ ತುರ್ತಾಗಿ ಹೋಗಬೇಕಾದ ಅನಿವಾರ್ಯತೆಯಿಂದ ಖಾಸಗಿ ಬಸ್ ಹತ್ತಿ ತೆರಳುತ್ತಿದ್ದುದು ಸಾಮಾನ್ಯವಾಗಿತ್ತು.

'ದೇವನಹಳ್ಳಿ ಬಸ್‌ನಿಲ್ದಾಣದಿಂದ ಚಿಕ್ಕಬಳ್ಳಾಪುರದ ಕಡೆಗೆ 10 ನಿಮಿಷಗಳಿಗೊಮ್ಮೆ ಮತ್ತು ಬೆಂಗಳೂರು ನಗರದ ಕಡೆಗೆ 20 ನಿಮಿಷಗಳಿಗೊಮ್ಮೆ ಖಾಸಗಿ ಬಸ್ ಕಾರ್ಯಾಚರಣೆ ವ್ಯವಸ್ಥೆ ಮಾಡಲಾಗಿದೆ. ಒಟ್ಟು 60 ಖಾಸಗಿ ಬಸ್‌ಗಳನ್ನು ಪ್ರಯಾಣಿಕರಿಗಾಗಿ ನಿಯೋಜನೆ ಮಾಡಲಾಗಿದೆ. ಪ್ರಯಾಣಿಕರಿಂದ ಹೆಚ್ಚು ಹಣ ವಸೂಲಿ ಮಾಡದಂತೆ ಬಸ್ ಮಾಲೀಕರು ಮತ್ತು ನಿರ್ವಾಹಕರಿಗೆ ಸೂಚಿಸಲಾಗಿದೆ' ಎಂದು ಆರ್‌ಟಿಓ ಉಮೇಶ್ ತಿಳಿಸಿದರು.

ಸಾರಿಗೆ ಸಿಬ್ಬಂದಿಗೆ ಸರ್ಕಾರಿ ನೌಕರರಿಗಿಂತ ಹೆಚ್ಚು ಸವಲತ್ತು

ವಿವರ ಪಟ್ಟಿ ಬಿಡುಗಡೆ ಮಾಡಿದ ಕೆಎಸ್‌ಆರ್‌ಟಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು:ಸಾರಿಗೆ ಸಂಸ್ಥೆ ನೌಕರರಿಗೆ ಸರ್ಕಾರಿ ನೌಕರರಿಗಿಂತಲೂ ಹೆಚ್ಚಿನ ಸವಲತ್ತುಗಳನ್ನು ನೀಡುತ್ತಿದ್ದು, ಈ ಸಂಬಂಧ ಕೆಎಸ್‌ಆರ್‌ಟಿಸಿ ಪಟ್ಟಿಯೊಂದನ್ನು ಬಿಡುಗಡೆ ಮಾಡಿದೆ.

ಮನೆ ಬಾಡಿಗೆ ಭತ್ಯೆ, ತುಟ್ಟಿಭತ್ಯೆ, ನಗರ ಪರಿಹಾರ ಭತ್ಯೆ, ರಜೆ ಸೌಲಭ್ಯ, ಪ್ರಯಾಣ ಭತ್ಯೆ, ಶವಸಂಸ್ಕಾರ, ಅನುಕಂಪದ ನೌಕರಿ ಸೌಕರ್ಯಗಳನ್ನು ಸರ್ಕಾರಿ ನೌಕರರಂತೆಯೇ ಯತಾವತ್ತಾಗಿ ಅಳವಡಿಸಿಕೊಳ್ಳಲಾಗಿದೆ.

ಸರ್ಕಾರಿ ವಾಹನ ಚಾಲಕರಿಗೆ ಸಮವಸ್ತ್ರಕ್ಕೆ ತಿಂಗಳಿಗೆ ₹400 ನೀಡಲಾಗುತ್ತದೆ. ಸಾರಿಗೆ ನೌಕರರಿಗೆ ವರ್ಷಕ್ಕೆ ಎರಡು ಜೊತೆ ಸಮವಸ್ತ್ರ ₹175 ಹೊಲಿಗೆ ಭತ್ಯೆ ಮತ್ತು ಅವುಗಳನ್ನು ಸ್ವಚ್ಛಗೊಳಿಸಲು ತಿಂಗಳಿಗೆ ₹35 ನೀಡಲಾಗುತ್ತಿದೆ. ಬೆಚ್ಚನೆಯ ಉಡುಪು ಭತ್ಯೆಯಾಗಿ ಸರ್ಕಾರಿ ನೌಕರರಿಗೆ ಎರಡು ವರ್ಷಗಳಿಗೊಮ್ಮೆ ₹3,600 ರಿಂದ ₹5,000 ನೀಡಲಾಗುತ್ತಿದೆ. ಸಾರಿಗೆ ನೌಕರರಿಗೆ ನಾಲ್ಕು ವರ್ಷಗಳಿಗೊಮ್ಮೆ ಜರ್ಸಿ ಮತ್ತು ಮಳೆ ಕೋಟು ಖರೀದಿಗೆ ₹600 ನೀಡಲಾಗುತ್ತಿದೆ.

ಸರ್ಕಾರಿ ನೌಕರರಿಗೆ ಹಬ್ಬದ ಮುಂಗಡವಾಗಿ ವರ್ಷಕ್ಕೆ ₹10 ಸಾವಿರ ನೀಡುತ್ತಿದ್ದರೆ, ಸಾರಿಗೆ ನೌಕರರಿಗೆ ₹5 ಸಾವಿರ ನೀಡಲಾಗುತ್ತಿದೆ. ಸ್ವಯಂ ನಿವೃತ್ತಿ ಪಡೆಯುವ ಸರ್ಕಾರಿ ನೌಕರರಿಗೆ ಯಾವುದೇ ಹೆಚ್ಚುವರಿ ಆರ್ಥಿಕ ಸೌಲಭ್ಯ ಇರುವುದಿಲ್ಲ. ವೈದ್ಯಕೀಯವಾಗಿ ಅಸಮರ್ಥರಾಗಿರುವ ಸಾರಿಗೆ ನೌಕರರು ಸ್ವಯಂ ನಿವೃತ್ತಿ ಬಯಸಿದರೆ ₹6 ಲಕ್ಷ ಹೆಚ್ಚುವರಿ ಆರ್ಥಿಕ ನೆರವು, ವಿಶೇಷ ಪ್ರಕರಣಗಳಲ್ಲಿ ₹10 ಲಕ್ಷದ ತನಕ ನೀಡಲಾಗುತ್ತದೆ. ನಾಲ್ಕು ವರ್ಷಕ್ಕೊಮ್ಮೆ ಕುಟುಂಬ ಸಮೇತ 4 ಸಾವಿರ ಕಿಲೋ ಮೀಟರ್ ಪ್ರಯಾಣಿಸಲು ಪ್ರಯಾಣ ದರ ನೀಡಲಾಗುತ್ತಿದೆ.

2006ರ ನಂತರ ಸರ್ಕಾರಿ ಸೇವೆಗೆ ಸೇರಿದವರು ನಿವೃತ್ತಿ ವೇತನದ ಬದಲು ಎನ್‌ಪಿಎಸ್ ಯೋಜನೆಯಡಿ ಪಿಂಚಣಿ ಪಡೆಯುತ್ತಾರೆ. ಪಿಎಫ್(ಭವಿಷ್ಯನಿಧಿ) ಸೌಲಭ್ಯ ಇರುವುದಿಲ್ಲ. ಸಾರಿಗೆ ನೌಕರರಿಗೆ ಪಿಎಫ್ ಸೌಲಭ್ಯ ಇದೆ. ಇದಕ್ಕೆ ನಿಗಮಗಳ ಕಡೆಯಿಂದ ಪಾವತಿಯಾಗುವ ಹಣದಲ್ಲಿ ಕಡಿತ ಮಾಡಿ ಪಿಂಚಣಿಗೆ ಪಾವತಿಸಲಾಗುತ್ತಿದೆ ಎಂದು ನಿಗಮ ವಿವರಿಸಿದೆ.

ಸರ್ಕಾರಿ ನೌಕರರಿಗೆ ಇಲ್ಲದಿರುವ ಹೆಚ್ಚುವರಿ ಸೌಲಭ್ಯಗಳೆಂದರೆ ಬೋನಸ್, ಉಚಿತ ಬಸ್ ಪಾಸ್, ವರ್ಷಕ್ಕೊಮ್ಮೆ ಕುಟುಂಬ ಸಮೇತ ಪ್ರಯಾಣಿಸಲು ಉಚಿತ ಪಾಸ್, ನೌಕರರ ಮಕ್ಕಳು ಶಾಲೆ, ಕಾಲೇಜುಗಳಿಗೆ ತೆರಳಲು ಉಚಿತ ಪಾಸ್, ಸಾರಿಗೆ ಆದಾಯದಲ್ಲಿ ಶೇ 3 ರಷ್ಟು ಪ್ರೋತ್ಸಾಹ ಧನ, ಮನೆ ಕಟ್ಟಲು, ಖರೀದಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಡೆಯುವ ₹5 ಲಕ್ಷ ಸಾಲಕ್ಕೆ ಶೇ 4 ರಷ್ಟು ಬಡ್ಡಿ ಸಹಾಯ ಧನ, ವಾರ್ಷಿಕ ಗರಿಷ್ಠ ₹20 ಸಾವಿರ ಬಡ್ಡಿ ಸಹಾಯಧನ ಮತ್ತು ಸೇವಾವಧಿಯಲ್ಲಿ ₹1 ಲಕ್ಷ ಬಡ್ಡಿ ಸಹಾಯಧನ ನೀಡಲಾಗುತ್ತಿದೆ ಎಂದು ತಿಳಿಸಿದೆ.

264 ಬಸ್‌ಗಳ ಕಾರ್ಯಾಚರಣೆ

ಮುಷ್ಕರದ ನಡುವೆಯೂ ನಿಗಮದ 264 ಬಸ್‌ಗಳು ಕಾರ್ಯಾಚರಣೆ ಮಾಡಿವೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಕೆಎಸ್‌ಆರ್‌ಟಿಸಿ ವ್ಯಾಪ್ತಿಯಲ್ಲಿ 3,152, ಎನ್‌ಡಬ್ಲ್ಯೂಕೆಆರ್‌ಟಿಸಿ ವ್ಯಾಪ್ತಿಯಲ್ಲಿ 1,645 ಮತ್ತು ಎನ್‌ಇಕೆಆರ್‌ಟಿಸಿ ವ್ಯಾಪ್ತಿಯಲ್ಲಿ 3,234 ಖಾಸಗಿ ಬಸ್‌ಗಳು ಕಾರ್ಯಾಚರಣೆ ಮಾಡಿವೆ ಎಂದು ವಿವರಿಸಿದೆ.

ಬಸ್ ಮೇಲೆ ಕಲ್ಲು ತೂರಿದ ಕಾರಣಕ್ಕೆ ಅತ್ತಿಬೆಲೆ ವ್ಯಾಪ್ತಿಯಲ್ಲಿ ದೂರು ದಾಖಲಾಗಿದೆ. ಹೊರ ರಾಜ್ಯಗಳ 470 ಬಸ್‌ಗಳು ಬೆಂಗಳೂರಿನಿಂದ ಕಾರ್ಯಾಚರಣೆ ಮಾಡಿವೆ ಎಂದು ಹೇಳಿದೆ.

ನೂತನ ಗೋಪುರ ಕುಂಭ ಪ್ರತಿಷ್ಠಾಪನೆ ಸಂದರ್ಭದಲ್ಲಿ ಪದ್ಮಾವತಿ ಅಮ್ಮನವರ ಉತ್ಸವ ನಡೆಯಿತು.

ಗೋಪುರ ಕುಂಭ ಪ್ರತಿಷ್ಠಾಪನೆ

ನೆಲಮಂಗಲ: ತಾಲ್ಲೂಕಿನ ಬಸವನಹಳ್ಳಿಯ ಪುರಾತನ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಜೀರ್ಣೋದ್ಧಾರ ಮತ್ತು ನೂತನವಾಗಿ ನಿರ್ಮಿಸಿರುವ ಪದ್ಮಾವತಿ ಅಮ್ಮನವರ ವಿಮಾನಗೋಪುರದ ಕುಂಭ ಪ್ರತಿಷ್ಠಾಪನೆ, ಪ್ರಾಕಾರ ದೇವತೆಗಳ ಕುಂಭಾಭಿಷೇಕ ಬುಧವಾರ ನಡೆಯಿತು. ಮೈಲನಹಳ್ಳಿ ವೆಂಕಟಗಿರಿಯಪ್ಪ ಅವರ ಕುಟುಂಬದವರು ಗೋಪುರ ನಿರ್ಮಾಣದ ವೆಚ್ಚ ಭರಿಸಿದ್ದಾರೆ.

ನಿಧನವಾರ್ತೆ

ಶಾರದಾ ಸಿಂಹ

ಬೆಂಗಳೂರು: ಹಿರಿಯ ನಟ ದಿವಂಗತ ಸಿ.ಆರ್.ಸಿಂಹ ಅವರ ಪತ್ನಿ ಶಾರದಾ ಸಿಂಹ (73) ಹೃದಯಾಘಾತದಿಂದ ಬುಧವಾರ ನಿಧನರಾದರು.

ಕೋವಿಡ್ ಕಾರಣ ಅವರು ಎರಡು ದಿನಗಳ ಹಿಂದೆ ರಾಜರಾಜೇಶ್ವರಿ ನಗರದ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ ಮಕ್ಕಳಾದ ಅಖಿಲಾ ಮತ್ತು ಋತ್ವಿಕ್ ಸಿಂಹ ಇದ್ದಾರೆ. 'ಸಿ.ಆರ್.ಸಿಂಹ ಉತ್ತಮ ನಟ ಮತ್ತು ನಿರ್ದೇಶಕರಾಗಿ ರೂಪುಗೊಳ್ಳುವಲ್ಲಿ ಶಾರದಾ ಪಾತ್ರ ಪ್ರಮುಖವಾಗಿತ್ತು. ಅವರು ರಂಗಭೂಮಿಯ ಪ್ರೇರಕ ಶಕ್ತಿಯಾಗಿದ್ದರು. ಅನೇಕ ನಾಟಕಗಳಲ್ಲೂ ಅಭಿನಯಿಸಿದ್ದರು. ಸಿಂಹ ಅವರ ಎಲ್ಲ ನಾಟಕಗಳಿಗೆ ತಾಂತ್ರಿಕ ನೆರವು ನೀಡಿದ್ದರು' ಎಂದು ರಂಗಕರ್ಮಿ ಶ್ರೀನಿವಾಸ ಕಪ್ಪಣ್ಣ 'ಪ್ರಜಾವಾಣಿ'ಗೆ ತಿಳಿಸಿದರು. 'ಕೆಂಗೇರಿಯ ಚಿತಾಗಾರದಲ್ಲಿ ಗುರುವಾರ ಬೆಳಿಗ್ಗೆ 10 ಗಂಟೆಗೆ ಅಂತ್ಯಸಂಸ್ಕಾರ ನಡೆಯಲಿದೆ' ಎಂದರು.

ಕೋವಿಲ್ ತಾಯಿ

ಬೊಮ್ಮನಹಳ್ಳಿ: ಬೇಗೂರು ವಾರ್ಡ್ ಮೈಕೋಲೇಔಟ್ ನಿವಾಸಿ ಕೋವಿಲ್ ತಾಯಿ (68) ಅನಾರೋಗ್ಯದಿಂದ ಬುಧವಾರ ನಿಧನರಾದರು. ಪತಿ, ಇಬ್ಬರು ಪುತ್ರರು, ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆಯು ಗುರುವಾರ ನಡೆಯಲಿದೆ.

'ಮರಾಠ ಅಭಿವೃದ್ಧಿ ನಿಗಮಕ್ಕೆ ₹ 50 ಕೋಟಿ'

ರಾಮದುರ್ಗ (ಬೆಳಗಾವಿ ಜಿಲ್ಲೆ): 'ಮರಾಠ ಅಭಿವೃದ್ಧಿ ನಿಗಮಕ್ಕೆ ಮಂಗಳವಾರವಷ್ಟೆ ₹ 50 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಇಲ್ಲಿನ ಸಾಲಹಳ್ಳಿಯಲ್ಲಿ ಬುಧವಾರ ನಡೆದ ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಸಮುದಾಯದೊಂದಿಗೆ ನಮ್ಮ ಸರ್ಕಾರವಿದೆ' ಎಂದು ಹೇಳಿದ್ದಾರೆ.

ಹೆಬ್ಬಾಳ ಜಂಕ್ಷನ್‌ನಲ್ಲಿ ದಟ್ಟಣೆ ನಿವಾರಣೆಗೆ ಕ್ರಮ–ಕಾಮಗಾರಿ ಸ್ಥಗಿತ

ಮೇಲ್ಸೇತುವೆ ಪುನರ್ ವಿನ್ಯಾಸಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಚಾರ ದಟ್ಟಣೆಯನ್ನು ನಿಯಂತ್ರಿಸುವ ಉದ್ದೇಶದಿಂದ ಹೆಬ್ಬಾಳ ಮೇಲ್ಸೇತುವೆಯನ್ನು ಪುನರ್‌ವಿನ್ಯಾಸಗೊಳಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮುಂದಾಗಿತ್ತು. ಆದರೆ, ಈ ವಿನ್ಯಾಸಕ್ಕೆ ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಯೋಜನೆ ನನೆಗುದಿಗೆ ಬಿದ್ದಿದೆ.

ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ಮಾರ್ಗದಲ್ಲಿ ಮೇಲ್ಸೇತುವೆಗೆ ಹೊಂದಿಕೊಂಡಂತೆ ಐದು ಲೇನ್‌ಗಳನ್ನು ಮತ್ತು ಅದರ ವಿರುದ್ಧ ದಿಕ್ಕಿನಲ್ಲಿ ಐದು ಲೇನ್‌ಗಳನ್ನು ನಿರ್ಮಿಸುವ ರೀತಿಯಲ್ಲಿ ಬಿಡಿಎ ವಿನ್ಯಾಸ ರೂಪಿಸಬೇಕಾಗಿದೆ. ಈ ಪೈಕಿ, ಮೇಲ್ಸೇತುವೆಯ ಎರಡನೇ ಮಟ್ಟದಲ್ಲಿ ಮೆಟ್ರೊ ಮಾರ್ಗ ಬರುವಂತೆ ವಿನ್ಯಾಸ ರೂಪಿಸಬೇಕು ಎಂದು ಬಿಎಂಆರ್‌ಸಿಎಲ್ ಹೇಳಿದೆ.

ಈ ಮೊದಲು, ವಿಮಾನ ನಿಲ್ದಾಣದಿಂದ ನಗರಕ್ಕೆ ಬರುವ ದಿಕ್ಕಿನಲ್ಲಿ ಕೇವಲ ಎರಡು ಲೇನ್‌ಗಳ ನಿರ್ಮಾಣ ಕಾಮಗಾರಿಯನ್ನು ಬಿಡಿಎ ಆರಂಭಿಸಿತ್ತು. ಈಗ ಆ ಕಾಮಗಾರಿ ಸ್ಥಗಿತಗೊಂಡಿದೆ.

'ಬಿಡಿಎ ರೂಪಿಸಿರುವ ವಿನ್ಯಾಸಕ್ಕೆ ಬಿಎಂಆರ್‌ಸಿಎಲ್ ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಹಲವು ತಿಂಗಳುಗಳ ಹಿಂದೆಯೇ ಕಾಮಗಾರಿ ಸ್ಥಗಿತಗೊಂಡಿದೆ. ವಿಮಾನ ನಿಲ್ದಾಣ ಮಾರ್ಗಕ್ಕೆ ಈ ಮೇಲ್ಸೇತುವೆಯಿಂದ ಅಡ್ಡಿ ಉಂಟಾಗುತ್ತದೆ ಎಂಬುದು ನಿಗಮದ ಆಕ್ಷೇಪಕ್ಕೆ ಕಾರಣ. ಮೇಲ್ಸೇತುವೆಯ ಎರಡನೇ ಮಟ್ಟದಲ್ಲಿ ಮೆಟ್ರೊ ರೈಲು ಮಾರ್ಗ ನಿರ್ಮಿಸಬೇಕು ಎಂದು ನಿಗಮ ಬಯಸುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಉದ್ದೇಶಿತ ಮೇಲ್ಸೇತುವೆಯ ವಿನ್ಯಾಸ ಬದಲಿಸಬೇಕು ಬಿಎಂಆರ್‌ಸಿಎಲ್ ಒತ್ತಾಯಿಸುತ್ತಿದೆ' ಎಂದು ಬಿಡಿಎ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

'ಈ ಕುರಿತು ಸರ್ಕಾರ ರಚಿಸಿರುವ ತಾಂತ್ರಿಕ ಸಮಿತಿಯು ಬಿಎಂಆರ್‌ಸಿಎಲ್, ಬಿಡಿಎ, ಸಂಚಾರ ಪೊಲೀಸರು, ಬಿಎಂಟಿಸಿ, ಕೆಆರ್‌ಡಿಸಿಎಲ್ ಹಾಗೂ ಲೋಕೋಪಯೋಗಿ ಇಲಾಖೆಯ ಪ್ರತಿನಿಧಿಗಳಿಗೆ ಆರು ತಿಂಗಳ ಹಿಂದೆಯೇ ಈ ಬಗ್ಗೆ ವಿವರವಾಗಿ ಪ್ರಾತ್ಯಕ್ಷಿಕೆ ನೀಡಿದೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

'ಬಿಡಿಎ ರೂಪಿಸಿರುವ ವಿನ್ಯಾಸದಂತೆ ಮೇಲ್ಸೇತುವೆ ನಿರ್ಮಿಸಿದರೆ ಹೊರ ವರ್ತುಲ ರಸ್ತೆ ಮತ್ತು ಪಶ್ಚಿಮ ಮೆಟ್ರೊ ರೈಲು ಸಂಪರ್ಕ ಮಾರ್ಗ ನಿರ್ಮಿಸಲು ಸಾಧ್ಯವಾಗುವುದೇ ಇಲ್ಲ. ಈ ಸಂಬಂಧ ನೇಮಿಸಲಾಗಿದ್ದ 'ರೈಟ್ಸ್' ಕನ್ಸಲ್ಟಂಟ್ ಕಂಪನಿಯು ಕರಡು ವರದಿಯನ್ನು ಸಲ್ಲಿಸಿದೆ. ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿಯು ಈ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲಿದೆ' ಎಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ 'ಪ್ರಜಾವಾಣಿ'ಗೆ ತಿಳಿಸಿದರು.

'ಕೇವಲ ನಿಗಮದ ನಿರ್ಧಾರವಲ್ಲ'

'ವಿನ್ಯಾಸಕ್ಕೆ ಆಕ್ಷೇಪಿಸಿರುವುದು ಕೇವಲ ನಿಗಮದ ನಿರ್ಧಾರವಲ್ಲ. ಸರ್ಕಾರದ ಮಟ್ಟದಲ್ಲಿಯೇ ಈ ಬಗ್ಗೆ ನಿರ್ಧಾರವಾಗಿದೆ. ಮೇಲ್ಸೇತುವೆಯ ಸಾಮರ್ಥ್ಯ, ಮೆಟ್ರೊ ಮಾರ್ಗ, ಉಪನಗರ ರೈಲು ಮತ್ತು ಬಿಎಂಟಿಸಿ ಬಸ್ ಸೇರಿದಂತೆ ಬಹುಮಾದರಿ ಸಾರಿಗೆ ವ್ಯವಸ್ಥೆ ರೂಪಿಸುವುದು ಸೇರಿದಂತೆ ಹಲವು ಅಂಶಗಳ ಬಗ್ಗೆ ಸಮಗ್ರ ಅಧ್ಯಯನ ವರದಿ ಸಿದ್ಧಪಡಿಸುವಂತೆ ನಿಗಮಕ್ಕೆ ಸರ್ಕಾರ ನಿರ್ದೇಶನ ನೀಡಿತ್ತು. ಆದರೆ, ಬಿಡಿಎ ರೂಪಿಸಿರುವ ವಿನ್ಯಾಸವು ಒಂದು ಸಮಸ್ಯೆಗೆ ಮಾತ್ರ ಪರಿಹಾರ ಒದಗಿಸುವಂತಿದೆ. ಈ ನಿಟ್ಟಿನಲ್ಲಿ ವಿನ್ಯಾಸ ಬದಲಾವಣೆಗೆ ಸರ್ಕಾರವೇ ತೀರ್ಮಾನಿಸಿದೆ' ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಜಯ್ ಸೇಠ್ ಸ್ಪಷ್ಟಪಡಿಸಿದರು.

ಅರುಣ್‌ಸಿಂಗ್ 4 ದಿನ ರಾಜ್ಯಕ್ಕೆ

ಬೆಂಗಳೂರು: ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಅವರು ಗುರುವಾರದಿಂದ ಏ.8 ರವರೆಗೆ ರಾಜ್ಯ ಪ್ರವಾಸಕ್ಕೆ ಬರಲಿದ್ದು, ಮೂರು ಕ್ಷೇತ್ರಗಳ ಉಪಚುನಾವಣೆ ಪ್ರಚಾರದಲ್ಲಿ ಪಾಲ್ಗೊಳ್ಳಲಿದ್ದಾರೆ.

ಗ್ರಾಮೀಣಾಭಿವೃದ್ಧಿ ಸಚಿವ ಕೆ.ಎಸ್.ಈಶ್ವರಪ್ಪ ಮತ್ತು ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಕಾರಣ ಅವರನ್ನು ಕರೆಸಿ ತಿಳಿ ಹೇಳುವ ಸಾಧ್ಯತೆ ಇದೆ ಎಂದು ಮೂಲಗಳಿವೆ.

ಏ. 8 ರಂದು ಮಧ್ಯಾಹ್ನ 1.30 ಕ್ಕೆ ನಗರಕ್ಕೆ ಬಂದು ವಿಮಾನದ ಮೂಲಕ ಮಂಗಳೂರಿಗೆ ತೆರಳುವರು. ರಾತ್ರಿ ಪುತ್ತೂರಿನ ಕುಂಜಾಡಿಯಲ್ಲಿ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ, ರಾತ್ರಿ ಮಂಗಳೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಏ.9 ರಂದು ಬೆಳಗಾವಿಯಲ್ಲಿ, 10ರಂದು ಮಸ್ಕಿ, 11 ರಂದು ಬಸವಕಲ್ಯಾಣದಲ್ಲಿ ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸುವರು. ಏ.11ರ ಸಂಜೆ ಹೈದರಾಬಾದ್ ವಿಮಾನ ನಿಲ್ದಾಣದಿಂದ ದೆಹಲಿಗೆ ಹಿಂತಿರುಗಲಿದ್ದಾರೆ.

ನಿಧನ

ಶ್ರೀಮತಿ ಬಿ ಟಿ ಶಾರದಮ್ಮ
ವಯಸ್ಸು ಸುಮಾರು 81 ವರ್ಷ
ಲೇಟ್ ಸಿ.ಜೆ ಕೆಂಪೇಗೌಡರ ಧರ್ಮಪತ್ನಿ
ದಿನಾಂಕ 07.04.2021 ಬುಧವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿನಾಂಕ 08–04–2021 ಗುರುವಾರದಂದು ಮಧ್ಯಾಹ್ನ ಮಧ್ಯಾಹ್ನ 11 ರಿಂದ 12 ಗಂಟೆಗೆ ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆಯನ್ನು ನೆರವೇರಿಸಲಾಗುವುದು.
ದುಃಖತಪ್ತರು
ಮಕ್ಕಳಾದ ಶ್ರೀಮತಿ ಸಿ.ಕೆ. ಜ್ಯೋತಿ, ಸಿ.ಕೆ. ಸುಮನ್ (ಆಶು), ಸಿ.ಕೆ. ರೂಪ ಮತ್ತು ಸಿ.ಕೆ. ರಂಜನ ಹಾಗೂ ಅಳಿಯಂದಿರು ಮತ್ತು ಮೊಮ್ಮಕ್ಕಳು

ಮನೆಗೆ ಬೆಂಕಿ ಹಚ್ಚಿದ ಪ್ರಕರಣ: ಮತ್ತೊಬ್ಬ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಮುಗುಟಗೇರಿ ಗ್ರಾಮದಲ್ಲಿ ಮನೆಗೆ ಬೆಂಕಿ ಹಚ್ಚಿದ ಪ್ರಕರಣದಲ್ಲಿ, ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಮತ್ತೊಬ್ಬ ಮಹಿಳೆ ಬುಧವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಕೆದಮುಳ್ಳೂರಿನ ಬ್ಯಾರಿಕಾಡು ನಿವಾಸಿ ಪಾಚೇ (65) ಅವರು ಮೈಸೂರಿನ ಆಸ್ಪತ್ರೆಯಲ್ಲಿ ಸಾವಿಗೀಡಾಗಿದ್ದಾರೆ. ಇಡೀ ಪ್ರಕರಣದಲ್ಲಿ ಆರೋಪಿಯೂ ಸೇರಿ ಒಟ್ಟು 9 ಮಂದಿ ಮೃತಪಟ್ಟಿದ್ದಾರೆ. ಘಟನೆ ನಡೆದ ದಿನ, ಇಬ್ಬರು ಮಾತ್ರ ಅಪಾಯದಿಂದ ಪಾರಾಗಿದ್ದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕಾಲಿವುಡ್ ತಾರಾದಂಪತಿಗೆ ಜೈಲು

ಪ್ರಜಾವಾಣಿ ವಾರ್ತೆ

ಚೆನ್ನೈ: ಸಾಲ ಮರುಪಾವತಿಗೆ ವಿಫಲವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಲಿವುಡ್‌ನ ತಾರಾ ದಂಪತಿಗೆ ಇಲ್ಲಿನ ವಿಶೇಷ ನ್ಯಾಯಾಲಯ ಒಂದು ವರ್ಷದ ಜೈಲು ಶಿಕ್ಷೆ ಮತ್ತು ₹ 5 ಕೋಟಿ ದಂಡ ವಿಧಿಸಿದೆ. ಶರತ್‌ಕುಮಾರ್ ಮತ್ತು ಅವರ ಪತ್ನಿ ರಾಧಿಕಾ ಶರತ್ ಕುಮಾರ್ ಶಿಕ್ಷೆಗೆ ಒಳಗಾದವರು.

2015ರಲ್ಲಿ ಈ ದಂಪತಿ ಇಲ್ಲಿನ ರೇಡಿಯನ್ಸ್ ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನಿಂದ ಸಾಲ ಪಡೆದಿದ್ದರು. ಆ ಹಣದಿಂದ ತಮ್ಮದೇ ನಿರ್ಮಾಣ ಸಂಸ್ಥೆಯ (ಮ್ಯಾಜಿಕ್ ಫ್ರೇಮ್ಸ್) ಮೂಲಕ 'ಇದು ಎನ್ನ ಮಾಯಂ' ಹೆಸರಿನ ಸಿನಿಮಾ ನಿರ್ಮಿಸಿದ್ದರು. ಶರತ್ ಅವರು ಇದೇ ಸಂಸ್ಥೆಯಿಂದ ₹ 50 ಲಕ್ಷ ಕೈಸಾಲವನ್ನೂ ಪಡೆದಿದ್ದರು. ಸಾಲ ಮರುಪಾವತಿ ಸಂಬಂಧಿಸಿದಂತೆ ನೀಡಲಾದ ಚೆಕ್ ಬೌನ್ಸ್ ಆಗಿತ್ತು. ಪ್ರಕರಣ ಸಂಬಂಧಿಸಿ ರೇಡಿಯನ್ಸ್ ಗ್ರೂಪ್ ಕೋರ್ಟ್ ಮೆಟ್ಟಿಲೇರಿತ್ತು. ಶರತ್ ವಿರುದ್ಧ 7 ಮತ್ತು ರಾಧಿಕಾ ವಿರುದ್ಧ 2 ಪ್ರಕರಣಗಳು ದಾಖಲಾಗಿದ್ದವು. ಶಾಸಕ ಮತ್ತು ಸಂಸದರಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯವು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ಶರತ್ ಕುಮಾರ್, ರಾಧಿಕಾ ಮತ್ತು ಲಿಸ್ಟಿನ್ ಸ್ಟೀಫನ್ ಅವರು ಮ್ಯಾಜಿಕ್ ಫ್ರೇಮ್ಸ್‌ನ ಪಾಲುದಾರರಾಗಿದ್ದಾರೆ.

ಈ ಪ್ರಕರಣವು ಸೈದಾಪೇಟ್‌ನ ತ್ವರಿತಗತಿ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಗಾಗಿತ್ತು. ಈ ವೇಳೆ ತಾರಾ ದಂಪತಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ನ್ಯಾಯಾಲಯ ಆದೇಶಿಸಿತ್ತು. ಅದನ್ನು ಪ್ರಶ್ನಿಸಿ ದಂಪತಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಈ ಮಧ್ಯೆ ಪ್ರಕರಣವು ಶಾಸಕ ಮತ್ತು ಸಂಸದರಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸಲ್ಪಟ್ಟಿತ್ತು. ಬುಧವಾರ ಈ ಪ್ರಕರಣದ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಎನ್. ಅಲಿಸಿಯಾ ಅವರು ಈ ದಂಪತಿಗಳಿಗೆ ಶಿಕ್ಷೆ ಪ್ರಕಟಿಸಿದರು. ಈ ಸಮಸ್ಯೆಯನ್ನು ಶೀಘ್ರ ಬಗೆಹರಿಸಿಕೊಳ್ಳುತ್ತೇವೆ. ಅಲ್ಲಿಯವರೆಗೆ ಶಿಕ್ಷೆಯನ್ನು ತಡೆಹಿಡಿಯಬೇಕು ಎಂದು ಶರತ್ ಅವರು ಸಲ್ಲಿಸಿದ್ದ ಅರ್ಜಿಯನ್ನೂ ನ್ಯಾಯಾಲಯ ಮಾನ್ಯ ಮಾಡಿದೆ.

ವಿದ್ಯುತ್ ತಗುಲಿ ನಾಲ್ವರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಇಂಡ್ಲಬೆಲೆ ಬಳಿ ಬುಧವಾರ ಅಪಾರ್ಟ್‌ಮೆಂಟ್ ನಿರ್ಮಾಣದ ಭೂಮಿಪೂಜೆಗಾಗಿ ಶಾಮಿಯಾನ ಹಾಕುತ್ತಿದ್ದ ವೇಳೆ ಆಕಸ್ಮಿಕವಾಗಿ ವಿದ್ಯುತ್ ತಗುಲಿ ನಾಲ್ವರು ಕಾರ್ಮಿಕರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಮೃತ ಕಾರ್ಮಿಕರನ್ನು ಕಲಬುರ್ಗಿಯ ಆಕಾಶ್ (30), ಚಾಮರಾಜನಗರ ಜಿಲ್ಲೆಯ ಹನೂರಿನ ಮಾದೇಶ್ (35), ಟಿ. ನರಸೀಪುರದ ವಿಷಕಂಠ (35) ಮತ್ತು ಜಾರ್ಖಂಡ್ ಮೂಲದ ವಿಜಯ್ ಸಿಂಗ್ (30) ಎಂದು ಗುರುತಿಸಲಾಗಿದೆ.

ಕಲಬುರ್ಗಿಯ ಅರುಣ್‌ಕುಮಾರ್ (20), ಬೀರಣ್ಣ (19), ಬಿಹಾರದ ದೀಪಕ್‌ಕುಮಾರ್ (20) ಜಾರ್ಖಂಡ್‌ನ ವಿಷ್ಣುಕುಮಾರ್ (19) ಮತ್ತು ಗುರುದೇವ್ (25) ಗಾಯಗೊಂಡಿದ್ದಾರೆ. ಈ ಪೈಕಿ ಇಬ್ಬರ ಸ್ಥಿತಿ ಗಂಭೀರವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ಉಷಾಕಿರಣ ಟೆಂಟ್‌ಹೌಸ್ ಮಾಲೀಕ ಜಗದೀಶ್ ಮತ್ತು ಅಪಾರ್ಟ್‌ಮೆಂಟ್ ಸೈಟ್ ಎಂಜಿನಿಯರ್ ರಾಮಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆಗೆ ಕಾರಣ ಏನು?: ಇಂಡ್ಲಬೆಲೆ ಬಳಿ ಜಿ.ಆರ್. ಸಂಸ್ಕೃತಿ ಅಪಾರ್ಟ್‌ಮೆಂಟ್ ನಿರ್ಮಾಣಕ್ಕೆ ಗುರುವಾರ ಭೂಮಿಪೂಜೆ ನಿಗದಿಯಾಗಿತ್ತು. ಕನ್ನಲ್ಲಿಯ ಉಷಾಕಿರಣ್ ಟೆಂಟ್‌ಹೌಸ್‌ಗೆ ಶಾಮಿಯಾನ ಹಾಕುವ ಕೆಲಸ ವಹಿಸಲಾಗಿತ್ತು. ಶಾಮಿಯಾನ ಹಾಕಿ ವೇದಿಕೆ ಸಿದ್ಧಪಡಿಸುವ ಸಂದರ್ಭದಲ್ಲಿ ಶಾಮಿಯಾನದ ಕಬ್ಬಿಣದ ಕಂಬವೊಂದು ಆಕಸ್ಮಿಕವಾಗಿ ವಿದ್ಯುತ್ ತಂತಿಗೆ ತಗುಲಿದೆ. ಕಂಬದಲ್ಲಿ ವಿದ್ಯುತ್ ಪ್ರವಹಿಸಿದ ಕಾರಣ ಅದನ್ನು ಹಿಡಿದಿದ್ದ ನಾಲ್ವರು ಕಾರ್ಮಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅವರ ಜತೆ ಕೆಲಸ ಮಾಡುತ್ತಿದ್ದ ಉಳಿದ ಐವರು ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

'ಶಾಮಿಯಾನ ಹಾಕುತ್ತಿದ್ದ ಸ್ಥಳದ ಮೇಲ್ಭಾಗದಲ್ಲಿ 66:11 ಕೆ.ವಿ ವಿದ್ಯುತ್ ಲೈನ್ ಹಾದುಹೋಗಿತ್ತು. ಕಾರ್ಮಿಕರು ವೇದಿಕೆ ಸಿದ್ಧಪಡಿಸುವ ಭರದಲ್ಲಿ ವಿದ್ಯುತ್ ತಂತಿಯ ಬಗ್ಗೆ ಗಮನಹರಿಸದಿರುವುದು ಈ ಅವಘಡಕ್ಕೆ ಕಾರಣ' ಎಂದು ಅತ್ತಿಬೆಲೆ ಪೊಲೀಸರು ತಿಳಿಸಿದ್ದಾರೆ.

ಕೇಂದ್ರ ವಲಯ ಐಜಿಪಿ ಚಂದ್ರಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರವಿ ಡಿ. ಚನ್ನಣ್ಣನವರ್, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮೀ ಗಣೇಶ್, ತಹಶೀಲ್ದಾರ್ ಪಿ. ದಿನೇಶ್, ಡಿವೈಎಸ್‌ಪಿ ಡಾ.ಎಚ್.ಎಂ.ಮಹದೇವಪ್ಪ, ಸರ್ಕಲ್ ಇನ್‌ಸ್ಪೆಕ್ಟರ್ ಕೆ. ವಿಶ್ವನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಅತ್ತಿಬೆಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ facebook LIVE fb.com/prajavani.net

ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ

ಸುಬ್ಬರಾಜು, ಆಂಗ್ಲ ಭಾಷಾ ಉಪನ್ಯಾಸಕರು, ದಾವಣಗೆರೆ ಇವರಿಂದ 2ನೇ ಪಿಯು ವಿದ್ಯಾರ್ಥಿಗಳಿಗಾಗಿ ಉಪನ್ಯಾಸ

ಇಂದಿನ ವಿಷಯ: ಇಂಗ್ಲಿಷ್

ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ

ಇಂದು ಸಂಜೆ 4.30 ರಿಂದ 6.00

ತಹಶೀಲ್ದಾರ್, ಸಿಪಿಐಗೆ ಮೂರು ವರ್ಷ ಜೈಲು ಶಿಕ್ಷೆ

ರಾಯಚೂರು: ಜಿಲ್ಲೆಯ ಮಾನ್ವಿ ತಾಲ್ಲೂಕಿನ ತಡಕಲ್ ಗ್ರಾಮದ ರೈತರ ಮೇಲೆ 25 ವರ್ಷಗಳ ಹಿಂದೆ ಹಲ್ಲೆ ನಡೆಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಗಿನ ಮಾನ್ವಿ ಸಿಪಿಐ ಆಗಿದ್ದ ಕಾಶಿನಾಥ ಎಸ್.ಅಡಿ ಹಾಗೂ ಅಂದಿನ ತಹಶೀಲ್ದಾರ್ ರಾಮಾಚಾರಿ ಅವರಿಗೆ ಇಲ್ಲಿಯ ನ್ಯಾಯಾಲಯ ಮೂರು ವರ್ಷ ಜೈಲು ಶಿಕ್ಷೆ ಮತ್ತು ₹ 25 ಸಾವಿರ ದಂಡ ವಿಧಿಸಿದೆ.

ನ್ಯಾಯಾಧೀಶ ಅವಿನಾಶ ಘಾಳಿ ಅವರು ವಿಚಾರಣೆ ನಡೆಸಿ, ತೀರ್ಪು ಪ್ರಕಟಿಸಿದರು.

ಆರ್‌ಡಿಸಿಸಿ ಬ್ಯಾಂಕಿನ ಅಧಿಕಾರಿಗಳೊಂದಿಗೆ ಸಾಲ ವಸೂಲಾತಿಗಾಗಿ ಆಗಮಿಸಿದ್ದ ಈ ಅಧಿಕಾರಿಗಳು, ರೈತರ ದಿನಬಳಕೆ ವಸ್ತುಗಳ ಜಪ್ತಿಗೆ ಮುಂದಾಗಿದ್ದರು. ಆಗ ರೈತ ಸಂಘಟನೆಯಿಂದ ಪ್ರತಿಭಟನೆ ನಡೆಸಲಾಗಿತ್ತು. ಈ ವೇಳೆ ಶಂಕರಗೌಡ ಹಾಗೂ ಬಸನಗೌಡ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಅವರ ಮೇಲೆ ಹಲ್ಲೆ ನಡೆಸಿ, ಜೀವ ಬೆದರಿಕೆ ಹಾಕಿದ್ದರು. ಆರೋಪ ಸಾಬೀತಾಗಿದ್ದರಿಂದ ನ್ಯಾಯಾಲಯ ಶಿಕ್ಷೆ ವಿಧಿಸಿದೆ.

ಪ್ರೇಮಿಗಳು ಪರಾರಿ: ಪ್ರಿಯಕರನ ಮನೆಗೆ ಬೆಂಕಿ

ಆನೇಕಲ್: ವಾರದ ಹಿಂದೆ ಯುವ ಪ್ರೇಮಿಗಳಿಬ್ಬರು ಪರಾರಿಯಾದ ಘಟನೆಯಿಂದ ರೊಚ್ಚಿಗೆದ್ದ ಗುಂಪೊಂದು ಬುಧವಾರ ಪ್ರಿಯಕರನ ಮನೆಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದೆ.

ಪ್ರೀತಿಸುತ್ತಿದ್ದ ಗೋಣಿಘಟ್ಟಪುರದ ಯುವಕ ಮತ್ತು ಮಾರತ್‌ಹಳ್ಳಿಯ ಯುವತಿಯ ಮದುವೆಗೆ ಕುಟುಂಬದವರ ಒಪ್ಪಿಗೆ ಇರಲಿಲ್ಲ. ಇದರಿಂದ ಹತಾಶರಾದ ಪ್ರೇಮಿಗಳು ವಾರದ ಹಿಂದೆ ಮನೆಬಿಟ್ಟು ಹೋಗಿದ್ದರು.

ಪ್ರೇಮಿಗಳು ಮದುವೆಯಾಗಿದ್ದಾರೆ ಎಂಬ ಸುದ್ದಿ ತಿಳಿಯುತ್ತಲೇ ಯುವಕನ ಕುಟುಂಬದ ಸದಸ್ಯರು ಕೂಡ ಮನೆಬಿಟ್ಟು ತೆರಳಿದ್ದರು. ಈ ವೇಳೆ ಗುಂಪುವೊಂದು ತಾಲ್ಲೂಕಿನ ಗೋಣಿಘಟ್ಟಪುರದಲ್ಲಿರುವ ಯುವಕನ ಮನೆಗೆ ಬೆಂಕಿ ಹಚ್ಚಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು
ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(70ಇ/19–20)2021–22:ಜೆಇ–2 ದಿನಾಂಕ: 06.04.2021

ಟೆಂಡರ್ ಸಮಯಾವಧಿ ವಿಸ್ತರಣೆ (ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಮೂಲಕ)

ದಿನಾಂಕ 11.02.201ರ ಹೊಸ ದಿಗಂತ ಮತ್ತು ಪ್ರಜವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾದ ಈ ಕಛೇರಿಯ ಪ್ರಕಟಣೆ ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ(70ಇ/19–20)2020–21:ಜೆಇ–2 :ದಿನಾಂಕ : 08.02.2021 ಪ್ರಕಟಣೆಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳು'ಯಡಿ ಇಂಡೆಟ್ ನಂ.135508 (ಅಂ.ಮೊತ್ತ :'58.24 ಲಕ್ಷ) ರ ಕಾಮಗಾರಿಗೆ ಸಮಯಾವದಿ ವಿಸ್ತರಣೆ ಮಾಡಲಾಗಿದೆ.
ಟೆಂಡರನ್ನು ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಆನ್‌ಲೈನ್ ಮುಖಾಂತರ **ದಿನಾಂಕಃ 23.4.2021 ರ ಅಪರಾಹ್ನ 4.00 ಗಂಟೆ (16:00 ಗಂಟೆ)** ಒಳಗೆ ಸಲ್ಲಿಸತಕ್ಕದು. **ಈ ಪ್ರಕಟಣೆಗೆ ಸಂಬಂಧಿಸಿದಂತೆ ಮುಂದಿನ ವಿಸ್ತರಣೆ/ಕರೆ/ತಿದ್ದುಪಡಿ/ಟೆಂಡರು ಮುಂದೂಡಿಕೆ/ರದ್ಧತಿ ಪ್ರಕಟಣೆಯನ್ನು ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ ಮೂಲಕ ಮಾತ್ರ ನೀಡಲಾಗುವುದು.** ಕರ್ನಾಟಕ ಸರಕಾರದ ಸಾರ್ವಜನಿಕ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಂತರ್‌ಜಾಲದ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಟೆಂಡರು ಡಾಕ್ಯುಮೆಂಟ್‌ಗಳನ್ನು **Download** ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಮತ್ತು ಅಂತರ್‌ಜಾಲದ ಮೂಲಕ ಪಡೆಯಬಹುದಾಗಿದೆ.
DIPR/MNG/MCA/19/21-22 dt. 07.4.2021 ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ದಾವಣಗೆರೆ ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ – 577 007
ಫ್ಯಾಕ್ಸ್: 08192-208008 ಫೋ.ನಂ: 08192-208029/ 208444
ಇ–ಮೇಲ್: registrar@davangereuniversity.ac.in
ವೆಬ್‌ಸೈಟ್: www.davangereuniversity.ac.in
ಸಂಖ್ಯೆ:ದಾವಿ/ಶೈ/ಪಿಹೆಚ್.ಡಿ/317/2021–22/105 ದಿನಾಂಕ:06.04.2021

ಅಧಿಸೂಚನೆ

ವಿಷಯ: ವಿಶ್ವವಿದ್ಯಾನಿಲಯದಲ್ಲಿ 2021–22ನೇ ಸಾಲಿನ Ph.D./PDF/D.Sc./D.Litt. ಸಂಶೋಧನಾ ಸ್ಥಾನಗಳಿಗೆ ಅರ್ಜಿಗಳನ್ನು ಅಹ್ವಾನಿಸುವ ಬಗ್ಗೆ.
ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 06.04.2021.
ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ 2021–22ನೇ ಶೈಕ್ಷಣಿಕ ಸಾಲಿನಲ್ಲಿ ಲಭ್ಯವಿರುವ Ph.D./PDF/D.Sc./D.Litt. ಸಂಶೋಧನಾ ಸ್ಥಾನಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.davangereuniversity.ac.in ಸಂಪರ್ಕಿಸುವುದು.
ಸಹಿ/–
ಕುಲಸಚಿವರು

NATIONAL ASSESSMENT AND ACCREDITATION COUNCIL(NAAC)
(An Autonomous Institution of the University Grants Commission)
P.O.Box No. 1075, Nagarbhavi, Bengaluru- 560072.
Website : www.naac.gov.in
NAAC/Admin/Engg/2021/Solar Date: 08-04-2021

Design, Supply, Installation and Commissioning of Solar water heater with heat pump, Replacing existing light fixtures with LED lightings and LED strip lighting in NAAC

Sealed tenders are invited from the reputed public sector undertakings (PSU's) who are well experienced for carrying out the work of design, Supply, Installation and Commissioning of Solar water heater with heat pump, Replacing existing light fixtures with LED lightings and LED strip lighting in NAAC. The nature of engagement is purely contractual and on mutually agreed terms and conditions. The EMD for the above work **Rs. 63,150.00/-**.
The last date for submission of application is **30.04.2021.** For further details, please visit the website **www.naac.gov.in**
Contact: The Administrative Officer, NAAC, Jnanabharathi Road, Nagarbhavi, Bengaluru – 560 072. **Ph:** 23005101/ 23005139, **Time:** 10.00 AM to 1.00 PM and 2.30 PM to 5.00 PM **(Monday to Friday)**
Sd/- Administrative Officer, NAAC

ಕಾರ್ಯಪಾಲಕ ಅಭಿಯಂತರರು
ಲೋಕೋಪಯೋಗಿ ಇಲಾಖೆ
ನಂ.1 ಕಟ್ಟಡಗಳ ವಿಭಾಗ, ಎಸ್.ಜೆ.ಪಿ. ಆವರಣ, ಬೆಂಗಳೂರು.
ದೂರವಾಣಿ: 080–22255210
(ಐ.ಎಸ್.ಓ.9001–2008 ಮಾನ್ಯತೆ ಪಡೆದಿರುವ ವಿಭಾಗ)
ಐಎಫ್‌ಟಿ ಸಂ: ಕಾಅ/ಕವಿ.1/ಎಇ–1/01/2021–22 ದಿನಾಂಕ: 05.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮೇಲ್ಕಂಡ ಇಲಾಖೆಯು ಕೆಳಕಂಡ ಕಾಮಗಾರಿಗಳಿಗಾಗಿ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **(http://eproc.karnataka.gov.in)** ಮೂಲಕ ಅರ್ಹ 3ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಕಾಮಗಾರಿ ವಿವರ: (1) ನವ ದೆಹಲಿಯಲ್ಲಿ, ಆರ್.ಕೆ.ಪುರಂ ಫೇಸ್–1ರಲ್ಲಿ ಆರ್‌ಸಿಸಿ ಸದಸ್ಯರುಗಳ ಡಿಸ್ಟ್ರೆಸಸ್‌ನ ರಿಸ್ಟೋರೇಷನ್ ಮತ್ತು ಕರ್ನಾಟಕ ಭವನ ಸಿಬ್ಬಂದಿಗಳ ವಸತಿಗೃಹಕ್ಕೆ ಅಭಿವೃದ್ಧಿ ಕಾಮಗಾರಿಗಳು (ಒಳಾಂಗಣ ಹಾಗೂ ಹೊರಾಂಗಣ) (6 ಬ್ಲಾಕ್‌ಗಳಿರುವ 48 ಸಂಖ್ಯೆ ವಸತಿಗೃಹಗಳು) (ಕೆಪಿಡಬ್ಲ್ಯೂಡಿ/2020–21/ಬಿಡಿ/ಕಾಮಗಾರಿ–ಇಂಡೆಂಟ್132879). **ಕಾಮಗಾರಿಯ ಅಂದಾಜು ಮೌಲ್ಯ:** ರೂ.213.02 ಲಕ್ಷಗಳು. **ಇಎಂಡಿ:** ರೂ.3,20,000/–.
(2) ನವ ದೆಹಲಿಯಲ್ಲಿ, ಆರ್.ಕೆ.ಪುರಂ ಫೇಸ್–2ರಲ್ಲಿ ಆರ್‌ಸಿಸಿ ಸದಸ್ಯರುಗಳ ಡಿಸ್ಟ್ರೆಸಸ್‌ನ ರಿಸ್ಟೋರೇಷನ್ ಮತ್ತು ಕರ್ನಾಟಕ ಭವನ ಸಿಬ್ಬಂದಿಗಳ ವಸತಿಗೃಹಕ್ಕೆ ಅಭಿವೃದ್ಧಿ ಕಾಮಗಾರಿಗಳು (ಒಳಾಂಗಣ ಹಾಗೂ ಹೊರಾಂಗಣ) (6 ಬ್ಲಾಕ್‌ಗಳಿರುವ 48 ಸಂಖ್ಯೆ ವಸತಿಗೃಹಗಳು) (ಕೆಪಿಡಬ್ಲ್ಯೂಡಿ/2020–21/ಬಿಡಿ/ಕಾಮಗಾರಿ–ಇಂಡೆಂಟ್132945). **ಕಾಮಗಾರಿಯ ಅಂದಾಜು ಮೌಲ್ಯ:** ರೂ.211.89 ಲಕ್ಷಗಳು. **ಇಎಂಡಿ:** ರೂ.3,17,000/–. **ಮೇಲ್ಕಂಡ ಕಾಮಗಾರಿಗಳ ಕಾಲಾವಧಿ:** ಮಳೆಗಾಲ ಸೇರಿ ತಲಾ 6 ತಿಂಗಳು. **ದಾಸ್ತಾವೇಜು ಬೆಲೆ:** ಇ–ಪೋರ್ಟಲ್‌ನಲ್ಲಿ ತಿಳಿಸಿರುವಂತೆ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ **ದಿನಾಂಕ: 12.04.2021, ಸಂಜೆ 4.00 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ **ದಿನಾಂಕ: 15.04.2021, ಬೆಳಿಗ್ಗೆ 11.00 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮೂಲಕ ಪಡೆಯಬಹುದು.
ವಾಸಾಸಂಇ/ಉನಿ.ನ/62/ಎಂಸಿಎ/2021–22
ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಕಾರಿ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ,
Website: https://www.kpwd.gov.in , E-mail : eeudp@kpwd.gov.in
ನಂ/ಪಿಡಬ್ಲ್ಯೂಡಿ/ಯುಡಿಎನ್/ಎನ್‌ಐಟಿ–01/2021–22/ಎಇ2 ದಿನಾಂಕ: 06.04.2021

ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗಳಿಗೆ 'ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್' https://www.eproc.Karnataka.gov.in" ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ:21.04.2021** ಸಂಜೆ – 5.00 ಘಂಟೆಯವರೆಗೆ ಅರ್ಹ **ಗುತ್ತಿಗೆದಾರರು : 3ನೇ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರು ಟೆಂಡರು ಸಲ್ಲಿಸಬಹುದಾಗಿದೆ.**

ಕ್ರ ಸಂ	ಕಾಮಗಾರಿಯ ಹೆಸರು	ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)
1	ಕುಂದಾಪುರ ತಾಲೂಕು, ಕೋಟೇಶ್ವರ ಗ್ರಾಮ ಪಂಚಾಯತ್ ವ್ಯಾಪ್ತಿಯ ಅಂಕದಕಟ್ಟೆ ಶಾಲೆ ಸಮೀಪದ ರಸ್ತೆ ಅಭಿವೃದ್ಧಿ.	43.43	86,900.00
2	ಕಾರ್ಕಳ ತಾಲೂಕು, ನಕ್ರೆ – ರಂಗನಪಲ್ಕೆ ರಸ್ತೆ ಕಿ.ಮೀ.0.60 ರಿಮದ 2.50ರ ವರೆಗೆ ಮಳೆಯಿಂದ ಹಾನಿಗೊಂಡಿರುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು.	66.27	1,33,900.00
3	ಕಾರ್ಕಳ ತಾಲೂಕು, ಅಜೆಕಾರು – ಮಿಯಾರು ರಸ್ತೆ ಕಿ.ಮೀ. 13.50 ರಿಂದ 14.20ರ ವರೆಗೆ ಮಳೆಯಿಂದ ಹಾನಿಗೊಂಡಿರುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು	63.06	1,26,200.00
4	ಕಾರ್ಕಳ ತಾಲೂಕು, ಸೀತಾನದಿ – ಬ್ರಹ್ಮಾವರ ರಸ್ತೆ ಕಿ.ಮೀ. 0.30ರಿಂದ 2.30ರ ವರೆಗೆ ಮಳೆಯಿಂದ ಹಾನಿಗೊಂಡಿರುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು.	66.27	1,32,600.00
5	ಕಾರ್ಕಳ ತಾಲೂಕು, ಮುನಿಯಾಲು – ಕಬ್ಬಿನಾಲೆ – ಬಚ್ಚಪ್ಪು – ಹೆಬ್ರಿ ರಸ್ತೆ ಕಿ.ಮೀ. 13.00 ರಿಂದ 15.00ರ ಅವರೆಗೆ (ಬಚ್ಚಪ್ಪು ಜಂಕ್ಷನ್ ಬಳಿ) ಮಳೆಯಿಂದ ಹಾನಿಗೊಂಡಿರುವ ರಸ್ತೆಯನ್ನು ಅಭಿವೃದ್ಧಿಪಡಿಸುವುದು.	65.40	1,30,900.00

ಹೆಚ್ಚಿನ ವಿವರಗಳಿಗೆ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ, ಉಡುಪಿ
ವಾಸಾಇಂ/ಸನಿಉ/ಎಂಸಿಎ/20/21–22 ದಿ:07.4.2021

ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು–572 103,
ದೂರವಾಣಿ : 0816–2254546
ಸಂಖ್ಯೆ:TUT/DEV/VGST/LE/2021-22/3728/Call-2 Dated :07.04.2021

ಮರು ಟೆಂಡರ್ ಪ್ರಕಟಣೆ (ಇ–ಪೋರ್ಟಲ್ ಮುಖಾಂತರ)

ತುಮಕೂರು ವಿಶ್ವವಿದ್ಯಾನಿಲಯಕ್ಕೆ Vision Group on Science and Technology (VGST) ಯಿಂದ ಮಂಜೂರಾಗಿರುವ ಸಂಶೋಧನಾ ಯೋಜನೆಯಡಿಯಲ್ಲಿ ಪ್ರಾಯೋಗಿಕ ಉಪಕರಣಗಳನ್ನು ಸರಬರಾಜು ಪಡೆಯಲು ಅರ್ಹ ಟೆಂಡರ್‌ದಾರರಿಂದ ಮರು ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ದಿನಾಂಕಗಳ ವಿವರಗಳು

ಟೆಂಡರ್ ಶೀರ್ಷಿಕೆ	ಪ್ರಾರಂಭದ ದಿನಾಂಕ	ಕೊನೆಯ ದಿನಾಂಕ	ತಾಂತ್ರಿಕ & ಆರ್ಥಿಕ ಬಿಡ್ ತೆರೆಯುವ ದಿನಾಂಕ
Tand for Supply and Installation of Laboratory Equipment's under VGST Projest DOS&R in Bio-Chemistry, Tumkur University, Tumkur	08.04.2021	08.05.2021	11.05.2021

ಟೆಂಡರ್ ಮೌಲ್ಯ ಮತ್ತು ಇ.ಎಂ.ಡಿ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ವೀಕ್ಷಿಸಿ, ಅರ್ಜಿ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕೆಳಕಂಡ ಅಧಿಕಾರಿಯ ಕಚೇರಿಯಲ್ಲಿ ಸಂಪರ್ಕಿಸುವುದು.
ಸಹಿ/– ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು
ದೂರವಾಣಿ ಸಂಖ್ಯೆ: 080–26632884, ಫ್ಯಾಕ್ಸ್ ಸಂಖ್ಯೆ: 080–26532884
ಸಂಖ್ಯೆ:ಕಾಇಂ:ಸನೀಮತ್ತುಅಂಅವಿ:/ಸಇ–3/ಟೆಂಡರ್/01/2021–22 ದಿನಾಂಕ: 06–04–2021

ಐಟಂವಾರು ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಬೆಂಗಳೂರು ಇವರಿಂದ ಈ ಕೆಳಕಂಡ ಲೆಕ್ಕಶೀರ್ಷಿಕೆ 4702-A&B ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ–2000ರ KW4 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಸೂಚನೆ ಮತ್ತು ನಿಬಂಧನೆಗಳಿಗೆ ಒಳಪಟ್ಟು, ಟೆಂಡರ್‌ಗಳನ್ನು ಇ–ಪ್ರೊಕ್ಯೂರ್ಮೆಂಟ್ ಪದ್ಧತಿಯ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರಗಳು: (1) ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಕಸಬಾ ಹೋಬಳಿ, ಗಾಣಾಳು ಸರ್ವೆ ನಂ. 144, 89, 88 ಮತ್ತು 87ರ ಜಮೀನಿನ ಹತ್ತಿರ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ನಿರ್ಮಾಣ, ಅಣಜವಾಡಿ ಗ್ರಾಮದಿಂದ ವೀರೇಗೌಡನದೊಡ್ಡಿಗೆ ಹೋಗುವ ರಸ್ತೆಯ ಹರಿಯುವ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಕಮ್ ಪಾತ್‌ವೇ, ಸಿಂಗಸಂದ್ರ ಗ್ರಾಮದಿಂದ ಚಿಕ್ಕೇನಹಳ್ಳಿ ಮುಖ್ಯರಸ್ತೆಗೆ ಹಾದು ಹೋಗುವ ಸ್ಥಳದಲ್ಲಿ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಕಮ್ ಪಾತ್‌ವೇ, ಅರಳಾಳು ಗ್ರಾಮದಿಂದ ಚೀರಣಕುಪ್ಪೆಗೆ ಹೋಗುವ ರಸ್ತೆಯ ಅಡ್ಡಲಾಗಿ ಹರಿಯುವ ಅರ್ಕಾವತಿ ನದಿಗೆ ಅಡ್ಡಲಾಗಿ ಚೆಕ್ ಡ್ಯಾಂ ಕಮ್ ಪಾತ್‌ವೇ ಮತ್ತು ರಕ್ಷಣಾ ಕಾಮಗಾರಿ. **ಲೆಕ್ಕಶೀರ್ಷಿಕೆ: 4711 ಪ್ರವಾಹ ನಿಯಂತ್ರಣ. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 1937.00. ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:** 11 ತಿಂಗಳು ಮಳೆಗಾಲ ಸೇರಿದಂತೆ.

(2) ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಮರಳವಾಡಿ ಹೋಬಳಿ ಚಿಕ್ಕಮರಳವಾಡ್ಡಿ ಗ್ರಾಮದ ಹತ್ತಿರ ದೊಡ್ಡಹಳ್ಳಕ್ಕೆ ಚೆಕ್ ಡ್ಯಾಂ ಕಮ್ ಪಾತ್‌ವೇ ನಿರ್ಮಾಣ, ಮರಳವಾಡಿ ಹೋಬಳಿ ಮುರಳಿದೊಡ್ಡಿ ಗ್ರಾಮದ ಹತ್ತಿರ ಮತ್ತು ಎಸ್.ಎಲ್.ಎನ್. ದೊಡ್ಡಿ ಗ್ರಾಮದ ಹತ್ತಿರ ದೊಡ್ಡ ಹಳ್ಳಕ್ಕೆ ಚೆಕ್ ಡ್ಯಾಂ ನಿರ್ಮಾಣ ಕಾಮಗಾರಿಗಳು (ಪ್ಯಾಕೇಜ್). **ಲೆಕ್ಕಶೀರ್ಷಿಕೆ: 4702 ಅಣೆಕಟ್ಟು, ಪಿಕಪ್–ಪ್ರಧಾನ ಕಾಮಗಾರಿಗಳು. ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 400.00. ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:** 9 ತಿಂಗಳು ಮಳೆಗಾಲ ಸೇರಿದಂತೆ.

(1) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ : **12/05/2021ರ 16.30 ಗಂಟೆಯವರೆಗೆ.** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದಾದ ದಿನಾಂಕ ಮತ್ತು ವೇಳೆ: **13/05/2021ರ 16.30 ಗಂಟೆಯವರೆಗೆ,** (3) ಪೂರ್ವ ಟೆಂಡರ್ ಸಭೆಯ: **07/05/2021ರ 11.30 ಗಂಟೆಯವರೆಗೆ.** (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ : **15/05/2021ರ 11.30 ಗಂಟೆಯವರೆಗೆ.** (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ ಮತ್ತು ವೇಳೆ : **ಅರ್ಹ ಗುತ್ತಿಗೆದಾರರಿಗೆ ತಿಳಿಸಲಾಗುವುದು.** (5) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರು ಡಾಕ್ಯುಮೆಂಟ್‌ನಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. (6) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. (7) ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್ಮೆಂಟ್ ಪದ್ಧತಿಯ ಮುಖಾಂತರ ವೆಬ್‌ಸೈಟ್ ವಿಳಾಸ **https://www.eproc.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. (8) ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮುಖಾಂತರ (9) ಸರ್ಕಾರದ ಆದೇಶ ಸಂ:ಆಇ 675 ವೆಚ್ಚ–12/2020 ಬೆಂಗಳೂರು ದಿನಾಂಕ: 22/12/2020ರ ಪ್ರಕಾರ ಇ.ಎಂ.ಡಿ. ಬದಲಾಗಿ ಆದೇಶದ ಅನುಬಂಧದಲ್ಲಿ ಲಗತ್ತಿಸಿರುವ ಇ.ಎಂ.ಡಿ ಡಿಕ್ಲರೇಷನ್ ನಮೂನೆಯನ್ನು ಇ–ಪ್ರಾಕ್‌ನಲ್ಲಿ ಅಪ್ಲೋಡ್ ಮಾಡತಕ್ಕದ್ದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
DIPR/DDU/Shirdi Sai/070/2021-22 ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ
ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರು–1 (ಕೆರೆಗಳು) ರವರ ಕಚೇರಿ, 3ನೇ ಮಹಡಿ, ಹೊಸ ಕಟ್ಟಡ, ನರಸಿಂಹರಾಜ ಚೌಕ, ಬೆಂಗಳೂರು–560 002.
ಸಂಖ್ಯೆ: ಕಾಪಾಅ–1(ಕೆರೆಗಳು)/ಟೆಂಡರ್/01/2021–22 ದಿನಾಂಕ: 07.04.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಬಿಯಂತರು–1 (ಕೆರೆಗಳು), ಬೃ.ಬೆಂ.ಮ.ಪಾಲಿಕೆ, ಬೆಂಗಳೂರು ಇವರ ಪರವಾಗಿ, ಅರ್ಹ ಟೆಂಡರ್‌ದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಟೆಂಡರ್‌ಗಳು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ–675 ಖರ್ಚು ವೆಚ್ಚಗಳು–12/2020 ದಿನಾಂಕ: 22.12.2020ರ ರೀತಿ ಟೆಂಡರ್ ದಾಖಲೆಯಲ್ಲಿ ಸೂಚಿಸಿರುವಂತೆ ಇಎಂಡಿ ಘೋಷಣೆ ನಮೂನೆಯನ್ನು ಒಳಗೊಂಡಿರತಕ್ಕದ್ದು.

ಕ್ರ. ಸಂ.	ಕಾಮಗಾರಿಯ ಹೆಸರು	ಕಾಮಗಾರಿಗಿಟ್ಟ ಅಂದಾಜು ಮೊತ್ತ (₹. ಲಕ್ಷಗಳಲ್ಲಿ)
1.	ವೆಂಗಯ್ಯನ ಕೆರೆಯನ್ನು ಸುಧಾರಣೆ ಮಾಡುವುದು. (3ನೇ ಕರೆ)	200.00
	ಟೆಂಡರ್ ದಸ್ತಾವೇಜಿನ ಶುಲ್ಕ (₹.ಗಳಲ್ಲಿ): ಇ–ಪೋರ್ಟಲ್ ಪ್ರಕಾರ	

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್–ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ **08.04.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ದಿನಾಂಕ: **19.04.2021**ರ ಸಂಜೆ **4:00** ಗಂಟೆಯವರೆಗೆ ಅಥವಾ ಮುಂಚಿತವಾಗಿ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: **15.04.2021**ರ ಮಧ್ಯಾಹ್ನ **3:30** ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಕೆರೆಗಳು ಇಲ್ಲಿ ನಡೆಸಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **20.04.2021**ರ ಸಂಜೆ **4:30** ಗಂಟೆಗೆ ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು)ರವರ ಕಚೇರಿ ಇಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು)
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ, ಮೈಸೂರು
ಸಂ:ಬಿ1/ಬಿಯುಡಿ/ಟೆಂಡರ್/ಸಿಆರ್–01/2021–22 ದಿ: 29.03.2021

ಸವಿವರ ಇ–ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ವೇದಿಕೆ)

ಕರ್ನಾಟಕ ರಾಜ್ಯದ ಮೈಸೂರು ಅರಣ್ಯ ವೃತ್ತದ ವ್ಯಾಪ್ತಿಗೆ ಒಳಪಡುವ ಮೈಸೂರು ವಿಭಾಗ ಕಛೇರಿ, ಉಪವಿಭಾಗ ಕಛೇರಿ ಹಾಗೂ ವಲಯ ಕಛೇರಿಗಳಿಗೆ ಅಗತ್ಯವಿರುವ ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಕಛೇರಿ ಸೇವಕರು ಹಾಗೂ ಕಾವಲುಗಾರರು ಸೇರಿದಂತೆ ಒಟ್ಟು 46 ಮಂದಿಯ ಸೇವೆ ಅವಶ್ಯವಿದ್ದು, 2021–22ನೇ ಸಾಲಿನ ಆರ್ಥಿಕ ವರ್ಷದಲ್ಲಿ 12 ತಿಂಗಳ ಅವಧಿಗೆ ಅಂದರೆ ದಿ: 01.04.2021 ರಿಂದ 31.03.2022 ರವರೆಗೆ ತಾತ್ಕಾಲಿಕವಾಗಿ ಮಾನವ ಹೊರ ಸಂಪನ್ಮೂಲ ಏಜೆನ್ಸಿ ಮೂಲಕ ಪಡೆಯಲು ಇ–ಪ್ರಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.
1) ಏಜೆನ್ಸಿಯವರು http://eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. **2)** ಒಟ್ಟು 46 ಮಂದಿಗಳ ಮಜೂರಿ ಪಾವತಿಗಿರುವ ಅಂದಾಜು ಮೊತ್ತ ರೂ.96.767 ಲಕ್ಷಗಳು. **3)** ಸದರಿ ಕಾಮಗಾರಿಯ ಇ.ಎಂ.ಡಿ. ಮೊತ್ತಕ್ಕೆ ಸರ್ಕಾರಿ ಆದೇಶದ ಸಂಖ್ಯೆ: ಆಇ675ವೆಚ್ಚ–12/2020 ಬೆಂಗಳೂರು ದಿನಾಂಕ: 22.12.2020ರ ರೀತ್ಯಾ ದೃಢೀಕರಣ ಪತ್ರ ಲಗತ್ತಿಸಿರಬೇಕು. **4)** ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿ: 26.04.2021 ಅಪರಾಹ್ನ 4.00 ಘಂಟೆವರೆಗೆ. **5)** ಏಜೆನ್ಸಿಯವರು ಅಂತರ್ಜಾಲದ ಮೂಲಕ ಇ–ಪ್ರಕ್ಯೂರ್ ಮೆಂಟ್ ವೇದಿಕೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿ: 27.04.2021 ಸಂಜೆ 4.00 ಘಂಟೆವರೆಗೆ. **6)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿ: 29.04.2021 ಸಂಜೆ 4.00 ಘಂಟೆ ನಂತರ. **7)** ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿ: 30.04.2021 ಸಂಜೆ 4.00 ಘಂಟೆ. **8)** ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ಅಂತರ್ಜಾಲ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ 0821–2483853 ನ್ನು ಕೆಲಸದ ದಿನಗಳಲ್ಲಿ ಸಂಪರ್ಕಿಸುವುದು. **9)** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ http://eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲಾಗುವುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ, ಮೈಸೂರು ವಿಭಾಗ, ಮೈಸೂರು
DIPR/DDMYS/MCA/15/2020-21

ನಿಮ್ಮ ಉತ್ತರವು ಎ ಬಿ ಸಿ ಸಾಲಿನ ಕ್ರಮದಲ್ಲಿ ಇದ್ದು, ಪ್ರತಿ ಸಾಲು ಎಡದಿಂದ ಬಲಕ್ಕೆ ಇರಬೇಕು.

ಮಾದರಿ ಉದಾಹರಣೆಗೆ ಇಲ್ಲಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ
ಚಿ ತ್ರ ಬಂ ಧ
ಕಣ್ಣಿಗೆ ಗೊಂದಲವಾಗಿ ಕಾಣುವ ಚಿತ್ರವನ್ನು ಕಲ್ಪನೆಯಲ್ಲಿ ಚಿತ್ರಿಸಿ ಬಹುಮಾನ ಗೆಲ್ಲಿ

ಹೆಚ್ಚು ಹೆಚ್ಚು ಭಾಗವಹಿಸಿ ಬಂಪರ್ ಬಹುಮಾನವನ್ನು ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ.
ಈ ಸ್ಪರ್ಧೆಯು ಒಂದು ವಾರಕ್ಕೆ ಮೂರು ದಿನಗಳು ಮಾತ್ರ ಪ್ರಕಟವಾಗುವುದು.

ಬಂಪರ್ ಬಹುಮಾನ
ONE PLUS 7 PRO ಮೊಬೈಲ್

14 ಅದೃಷ್ಟಶಾಲಿಗಳಿಗೆ, ಪ್ರತಿದಿನ ₹500 ಬೆಲೆಯ ಅಮೆಜಾನ್ ಗಿಫ್ಟ್ ವೌಚರ್

ಸರಿಯಾದ ಉತ್ತರದ ಕ್ರಮವನ್ನು PVCB A <3ಸಂಖ್ಯೆ> B <3ಸಂಖ್ಯೆ> C <3ಸಂಖ್ಯೆ> ಎಂದು ಟೈಪ್ ಮಾಡಿ, ಇಂದು ರಾತ್ರಿ 8 ರೊಳಗೆ 9246020020 ಗೆ SMS ಮಾಡಿ.
ಉತ್ತರಿಸುವ ಕ್ರಮದ ಉದಾಹರಣೆ: PVCB A143 B276 C859

ಮನೆಗೆ ತೆರಳಿದ ರಮೇಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ಕೋವಿಡ್-19ನಿಂದಾಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಾಗಿದ್ದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಬುಧವಾರ ಬೆಳಿಗ್ಗೆ ಮನೆಗೆ ತೆರಳಿದರು. ಏ.1ರಂದು ಅವರಿಗೆ ಕೋವಿಡ್–19 ದೃಢಪಟ್ಟಿತ್ತು. ಚಿಕಿತ್ಸೆ ನೀಡಿದ್ದ ವೈದ್ಯರು, ಮನೆಯಲ್ಲಿ ಪ್ರತ್ಯೇಕ ವಾಸವಿರುವಂತೆ ತಿಳಿಸಿದ್ದರು.

ಏ.4ರಂದು ರಾತ್ರಿ 10.30ರ ಸುಮಾರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಅವರು ಆಸ್ಪತ್ರೆಗೆ ದಾಖಲಾಗಿದ್ದರು. ಬಿ.ಪಿ ಮತ್ತು ಸಕ್ಕರೆ ಪ್ರಮಾಣ ಜಾಸ್ತಿಯಾಗಿದ್ದರಿಂದ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಆರೋಗ್ಯ ಸುಧಾರಿಸಿದ್ದರಿಂದ ಅವರನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಗಿದೆ ಎಂದು ವೈದ್ಯರು ಮಾಹಿತಿ ನೀಡಿದರು.

ಪಿಪಿಇ ಕಿಟ್ ಧರಿಸಿದ್ದ ಚಾಲಕ, ಅವರನ್ನು ಆಸ್ಪತ್ರೆಯಿಂದ ಮನೆಗೆ ಕರೆದೊಯ್ದರು. ಈ ವೇಳೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಲು ರಮೇಶ ನಿರಾಕರಿಸಿದರು.

ಅಲೆಮಾರಿಗಳಿಗೆ ಪ್ರತ್ಯೇಕ ಸ್ಮಶಾನ: ರವೀಂದ್ರ ಶೆಟ್ಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಅಲೆಮಾರಿ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಜಿಲ್ಲೆಗಳಲ್ಲಿ, ಪ್ರತ್ಯೇಕ ಸ್ಮಶಾನ ನಿರ್ಮಾಣಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ರಾಜ್ಯ ಅಲೆಮಾರಿ ಹಾಗೂ ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಹೇಳಿದರು.

‘ಕೊರಟಗೆರೆ ತಾಲ್ಲೂಕಿನಲ್ಲಿ ಈಚೆಗೆ ಮಗುವಿನ ಶವ ಸಂಸ್ಕಾರಕ್ಕೆ ಅಡ್ಡಿಪಡಿಸಿದ ಪ್ರಕರಣ ಬೇಸರ ತರಿಸಿದೆ. ಈ ಘಟನೆಯ ಬಳಿಕ ಪ್ರತ್ಯೇಕ ಸ್ಮಶಾನ ಅಗತ್ಯವೆಂದು ನನಗೆ ಅನಿಸಿತು. ಘಟನಾ ಸ್ಥಳಕ್ಕೆ ತೆರಳಿ ದಾಖಲೆ ಪರಿಶೀಲಿಸಿದ್ದು, ಅದು ಅಲೆಮಾರಿ (ದೊಂಬಿದಾಸ) ಕುಟುಂಬ ಎಂಬುದು ಗೊತ್ತಾಗಿದೆ. ಆದರೆ, ಜಾತಿ ಪ್ರಮಾಣಪತ್ರದಲ್ಲಿ ಅಲೆಮಾರಿ ಎಂದು ನಮೂದಾಗಿಲ್ಲ. ಆ ಕುಟುಂಬಕ್ಕೆ ಹಣಕಾಸಿನ ನೆರವು ನೀಡಲಾಗಿದೆ’ ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನಿಗಮದ ವ್ಯಾಪ್ತಿಯಲ್ಲಿ 46 ಜಾತಿಗಳಿದ್ದು (ಪ್ರವರ್ಗ-1), ಜಾತಿ ಪ್ರಮಾಣಪತ್ರ ನೀಡಿಕೆಯಲ್ಲಿ ಗೊಂದಲವಿದೆ. ಪ್ರಮಾಣಪತ್ರದಲ್ಲಿ ಅಲೆಮಾರಿ ಎಂದು ನಮೂದಾಗುತ್ತಿಲ್ಲ. ಈ ಗೊಂದಲ ಇತ್ಯರ್ಥಕ್ಕೆ ಕ್ರಮ ವಹಿಸಲಾಗುವುದು. ಸರ್ಕಾರದ ಸೌಲಭ್ಯ ಪಡೆಯಲು ಇದರಿಂದ ಸಹಾಯವಾಗಲಿದೆ’ ಎಂದರು.

ರಾಜ್ಯದಲ್ಲಿ ಅಲೆಮಾರಿ ಹಾಗೂ ಅರೆ ಅಲೆಮಾರಿ ಸಮುದಾಯದ ಸುಮಾರು 70 ಲಕ್ಷ ಜನಸಂಖ್ಯೆ ಇರಬಹುದೆಂದು ಅಂದಾಜಿಸಲಾಗಿದೆ. ಈ ಬಗ್ಗೆ ಸಮೀಕ್ಷೆ ನಡೆಸಲು ಅಧಿಕಾರಿಗಳಿಗೆ ಸೂಚಿಸಿದ್ದಾಗಿ ಹೇಳಿದರು.

ಕಾಲೊನಿ ನಿರ್ಮಾಣ: ಸರ್ಕಾರದಿಂದ ಜಾಗ ಪಡೆದು, ಪ್ರತಿ ಜಿಲ್ಲೆಯಲ್ಲಿ ಅಲೆಮಾರಿಗಳು ಹೆಚ್ಚಿರುವ ಕಡೆ ಕಾಲೊನಿ ನಿರ್ಮಿಸುವ ಯೋಜನೆಯನ್ನು ನಿಗಮ ಹೊಂದಿದೆ. ಈ ವಿಚಾರವಾಗಿ ಮುಖ್ಯಮಂತ್ರಿ ಹಾಗೂ ವಸತಿ ಸಚಿವರ ಜೊತೆ ಚರ್ಚಿಸಲಾಗುವುದು ಎಂದು ತಿಳಿಸಿದರು.

‘ಅಲೆಮಾರಿಗಳ ಅಭಿವೃದ್ಧಿಗಾಗಿ ಇದೇ ಮೊದಲ ಬಾರಿ ನಿಗಮ ಸ್ಥಾಪಿಸಿದ್ದು, ಅದರ ಪ್ರಥಮ ಅಧ್ಯಕ್ಷನಾಗಿದ್ದೇನೆ. ₹ 250 ಕೋಟಿ ಅನುದಾನಕ್ಕಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಬೇಡಿಕೆ ಸಲ್ಲಿಸಲಿದ್ದೇನೆ’ ಎಂದರು.

ಚಿರತೆಯನ್ನು ದೊಣ್ಣೆಯಿಂದ ಓಡಿಸಿದ ಮಹಿಳೆ

ಹೆನ್ನಿ ಹೊನ್ನನೆ (ಕಾರ್ಗಲ್, ಶಿವಮೊಗ್ಗ ಜಿ.): ಇಲ್ಲಿಗೆ ಸಮೀಪದ ಹೆನ್ನಿ ಹೊನ್ನನೆ ಕಾಡಿನಲ್ಲಿ ರಾತ್ರಿ ವೇಳೆ ಒಂಟಿ ಮನೆಗೆ ನುಗ್ಗಿ ನಾಯಿಯೊಂದನ್ನು ಬೇಟೆಯಾಡಲು ಹೊಂಚು ಹಾಕಿದ ಚಿರತೆಯನ್ನು ಮನೆಯ ಯಜಮಾನಿ ದೊಣ್ಣೆಯಿಂದ ಬೆದರಿಸಿ ಓಡಿಸಿದ್ದಾರೆ.

ಪದ್ಮಾವತಿ ಅವರು ಹೆನ್ನಿ ಸರ್ಕಾರಿ ಶಾಲೆಯಲ್ಲಿ ಬಿಸಿಯೂಟದ ಅಡುಗೆ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಪತಿ ಮೃತಪಟ್ಟಿದ್ದು, ಇಬ್ಬರು ಮಕ್ಕಳೊಂದಿಗೆ ಹೊನ್ನನೆ ಕಂದಾಯ ಮಜಿರೆ ಗ್ರಾಮದಲ್ಲಿ ವಾಸವಾಗಿದ್ದಾರೆ. ಅವರು ಮನೆಯ ಕಾವಲಿಗೆಂದು ನಾಯಿಯೊಂದನ್ನು ಸಾಕಿದ್ದರು.

ಸೋಮವಾರ ರಾತ್ರಿ 8 ಗಂಟೆ ಸಮಯದಲ್ಲಿ ಸಾಕುನಾಯಿಯು ಭಯದೊಂದಿಗೆ ಕುಂಯ್‌ಗುಡುತ್ತಿರುವ ಸದ್ದು ಕೇಳಿ ಕಳ್ಳರು ಯಾರಾದರು ಮನೆಗೆ ಬಂದಿರಬಹುದು ಎಂದು ಭಾವಿಸಿದ ಪದ್ಮಾವತಿ, ಕೈಗೆ ಸಿಕ್ಕ ದೊಣ್ಣೆಯನ್ನು ಹಿಡಿದು ಒಳಮನೆಯ ಬಾಗಿಲು ತೆರೆದರು. ವರಾಂಡದಲ್ಲಿದ್ದ ನಾಯಿಯನ್ನು ಹೊತ್ತೊಯ್ಯಲು ಚಿರತೆ ಪ್ರಯತ್ನ ಮಾಡುತ್ತಿರುವುದನ್ನು ಕಂಡರು.

‘ಜೋರಾಗಿ ಕೂಗುತ್ತಾ ಚಿರತೆಯತ್ತ ದೊಣ್ಣೆ ಹಿಡಿದುಕೊಂಡು ಬೆನ್ನತ್ತಿದೆ. ಭಯಗೊಂಡ ಚಿರತೆ ನಾಯಿಯನ್ನು ಅಲ್ಲಿಯೇ ಬಿಟ್ಟು ಓಡಿಹೋಯಿತು’ ಎಂದು ಪದ್ಮಾವತಿ ತಿಳಿಸಿದರು. ಸಣ್ಣ ಮಕ್ಕಳೊಂದಿಗೆ ಒಂಟಿಯಾಗಿದ್ದರೂ ಧೈರ್ಯದಿಂದ ಚಿರತೆಯನ್ನು ಹಿಮ್ಮೆಟ್ಟಿಸಿದ ಮಹಿಳೆಯ ಸಾಹಸವನ್ನು ಗ್ರಾಮಸ್ಥರು ಕೊಂಡಾಡಿದ್ದಾರೆ.

ತಿರುಪತಿ: ಏ.12ರಿಂದ ಟೋಕನ್ ವಿತರಣೆ ಸ್ಥಗಿತ

ಹೈದರಾಬಾದ್: ತಿರುಪತಿಯಲ್ಲಿ ಸರ್ವದರ್ಶನ ಟೋಕನ್‌ಗಳ ವಿತರಣೆಯನ್ನು ಏಪ್ರಿಲ್ 12ರಿಂದ ಸ್ಥಗಿತಗೊಳಿಸಲು ತಿರುಮಲ ತಿರುಪತಿ ದೇವಸ್ಥಾನ ಆಡಳಿತ ಮಂಡಳಿ ನಿರ್ಧರಿಸಿದೆ. ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ.

‘ತಿರುಪತಿಯಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ. ಟೋಕನ್‌ಗಳಿಗಾಗಿ ಸಾವಿರಾರು ಭಕ್ತಾದಿಗಳು ಭೂದೇವಿ ಕಾಂಪ್ಲೆಕ್ಸ್ ಮತ್ತು ವಿಷ್ಣು ನಿವಾಸದಲ್ಲಿ ಕಾಯಬೇಕಾಗುವುದರಿಂದ ವೈರಸ್ ಹಬ್ಬುವ ಸಾಧ್ಯತೆಗಳು ಹೆಚ್ಚು. ಹೀಗಾಗಿ, ಭಕ್ತಾದಿಗಳ ಸುರಕ್ಷತೆಯ ದೃಷ್ಟಿಯಿಂದ ಟೋಕನ್ ವಿತರಣೆಯನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗುವುದು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸರ್ವದರ್ಶನ ಟೋಕನ್‌ಗಳನ್ನು ಏಪ್ರಿಲ್ 11ರ ಸಂಜೆಯವರೆಗೆ ವಿತರಿಸಲಾಗುವುದು. ₹300ಕ್ಕೆ ಆನ್‌ಲೈನ್ ಕೋಟಾದ ಅಡಿಯಲ್ಲಿ ನೀಡುವ ಟೋಕನ್‌ಗಳ ವಿತರಣೆ ಮುಂದುವರಿಯಲಿದೆ. ಪ್ರತಿ ದಿನ ಆನ್‌ಲೈನ್‌ನಲ್ಲಿ ಸುಮಾರು 15 ಸಾವಿರ ಟೋಕನ್‌ಗಳನ್ನು ನೀಡಲಾಗುವುದು’ ಎಂದು ತಿಳಿಸಿದ್ದಾರೆ.

ಪಿಯು ಉಪನ್ಯಾಸಕರ ವರ್ಗಾವಣೆ: ಸುಗ್ರೀವಾಜ್ಞೆಗೆ ಆಗ್ರಹ

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರ ವರ್ಗಾವಣೆಗೂ ಸುಗ್ರೀವಾಜ್ಞೆ ಹೊರಡಿಸಬೇಕು. ಇಲ್ಲದೇ ಇದ್ದರೆ ಅನಿರ್ದಿಷ್ಟಾವಧಿ ಸತ್ಯಾಗ್ರಹ ನಡೆಸುವುದಾಗಿ ಸರ್ಕಾರಿ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಸಂಘ ಎಚ್ಚರಿಕೆ ನೀಡಿದೆ.

‘ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ವರ್ಗಾವಣೆಗೆ ರೂಪಿಸಿರುವ ಕಾಯ್ದೆ ತಿದ್ದುಪಡಿಗೆ ಸುಗ್ರೀವಾಜ್ಞೆ ಹೊರಡಿಸಲು ಸರ್ಕಾರ ಚಿಂತನೆ ನಡೆಸಿದೆ. ಈ ಸುಗ್ರೀವಾಜ್ಞೆಯ ಜೊತೆಗೆ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ವರ್ಗಾವಣೆಗೂ ಸುಗ್ರೀವಾಜ್ಞೆ ಹೊರಡಿಸಬೇಕು. ಇಲ್ಲವಾದರೆ ಸರ್ಕಾರದ ವರ್ಗಾವಣೆ ವಿರೋಧಿ ನಿಲುವು ಖಂಡಿಸಿ ಸತ್ಯಾಗ್ರಹ ಹಮ್ಮಿಕೊಳ್ಳುವುದು ಅನಿವಾರ್ಯವಾಗಲಿದೆ’ ಎಂದು ಎಂದು ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ ತಿಳಿಸಿದ್ದಾರೆ.

2020-21ನೇ ಸಾಲಿನ ಸರ್ಕಾರಿ ಪಿಯು ಕಾಲೇಜುಗಳ ಉಪನ್ಯಾಸಕರ ವೃಂದದ ವರ್ಗಾವಣೆ ಪ್ರಕ್ರಿಯೆಯನ್ನು ಆರಂಭಿಸುವ ಮೊದಲು ಈಗಾಗಲೇ ಅಸ್ತಿತ್ವದಲ್ಲಿರುವ ಪಿಯು ಉಪನ್ಯಾಸಕರ ವರ್ಗಾವಣೆ ಕಾಯ್ದೆ ರದ್ದುಪಡಿಸಿ, ಪಾರದರ್ಶಕ ಹಾಗೂ ವೈಜ್ಞಾನಿಕವಾಗಿ ಕಾಯ್ದೆ ರೂಪಿಸುವಂತೆ ಸರ್ಕಾರಕ್ಕೆ ಹಾಗೂ ಪಿಯು ಇಲಾಖೆಗೆ ಹಲವು ಬಾರಿ ಮನವಿ ಸಲ್ಲಿಸಿದ್ದೇವೆ. ಹೊಸ ಕಾಯ್ದೆಯ ಕರಡು ಸಿದ್ಧವಾಗಿದ್ದರೂ ಬಜೆಟ್ ಅಧಿವೇಶನದಲ್ಲಿ ಮಂಡನೆಯಾಗಿಲ್ಲ. ಹೀಗಾಗಿ, ಹಲವು ವರ್ಷಗಳಿಂದ ವರ್ಗಾವಣೆಗಾಗಿ ಕಾಯುತ್ತಿರುವ ಉಪನ್ಯಾಸಕರಿಗೆ ನಿರಾಸೆಯಾಗಿದೆ. ಉಪನ್ಯಾಸಕರ ವರ್ಗಾವಣೆಯನ್ನು ಸರ್ಕಾರ ಪದೇ ಪದೇ ನಿರ್ಲಕ್ಷಿಸುತ್ತಿದೆ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ
ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

ಸಂಖ್ಯೆ:ಕಾಪಾಅ/ಗ್ರಾನೀಸಮತ್ತುನೈ/ವಿಯಾ/ಟೆ.ಪ್ರ/ಪಿ.ಬಿ/JJM/2020–21/02 ದಿನಾಂಕ:05–04–2021

ಅಲ್ಪಾವಧಿ ಟೆಂಡರ ಪ್ರಕಟಣೆ (ದ್ವಿ ಲಕೋಟೆ) “ಇ–ಪ್ರೊಕ್ಯೂರ್‌ಮೆಂಟ್” ಮೂಲಕ–2ನೇ ಕರೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: 1) RAMASAMUDRA - Est Cost Rs. 313.00 lakhs - Indent No. 32755 & 2) HALIGERA - Est Cost Rs. 259.00 lakhs- Indent No. 27532 **in YADGIR Tq,** 2) ಲೆಕ್ಕ ಶೀರ್ಷಿಕೆ: Jal Jeevan Mission- 2020-21, 3) ಗುತ್ತಿಗೆದಾರರ, ಅರ್ಹತೆ : 3ನೇ ಹಾಗೂ ಮೇಲ್ಪಟ್ಟು ದರ್ಜೆ, 4) ಟೆಂಡರ ಫಾರಂ ಪಡೆಯುವ ದಿನಾಂಕ: **07–04–2021 ರಿಂದ 15–04–2021.** 5) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ. 6) Pre Bid Meeting Date : 09-04-2021 & Address : Office of the Executive Engineer, RDW&S Division Yadgir at 11.00 am, 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **15–04–2021 ಸಾಯಂಕಾಲ 4.30 ಗಂಟೆವರೆಗೆ.** 8) ತಾಂತ್ರಿಕ ಬಿಡ್ಡ್ ತೆರೆಯುವ ದಿನಾಂಕ: **16–04–2021 ಸಾಯಂಕಾಲ 5.00 ಗಂಟೆಯ ನಂತರ.** 9) ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: **19–04–2021 ಬೆಳಿಗ್ಗೆ 11.00 ಗಂಟೆಯ ನಂತರ,** 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರ ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರೈಲ್ವೇ ನಿಲ್ದಾಣದ ಹತ್ತಿರ ಯಾದಗಿರ. 11) ಅಂತರ್ಜಾಲ ತಾಣದ ವಿಳಾಸ: www.eproc.karnataka.gov.in.

ಸಹಿ/– ಕಾರ್ಯಪಾಲಕ ಇಂಜಿನೀಯರರು,
ವಾ.ಸಾ.ಸಂ.ಇ/ಯಾದಗಿರಿ/13/ಎಂಸಿ&ಎ/2021–22 ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ.

ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ) ಧಾರವಾಡ
ಬೇಲೂರು ಕೈಗಾರಿಕಾ ವಸಾಹತು, ಧಾರವಾಡ–580 011

ನಂ : ವಾಲ್ಮಿ/ಸರ್ವಿಸ್ ಟೆಂಡರ್/2021–22/35 ದಿನಾಂಕ : 06–04–2021

ಟೆಂಡರ ಪ್ರಕಟಣೆ

ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆ (ವಾಲ್ಮಿ), ಧಾರವಾಡವು ನೋಂದಾಯಿತ ಅರ್ಹ ಗುತ್ತಿಗೆದಾರಿಂದ ವಾಲ್ಮಿ ಪ್ರಾಂಗಣ ಧಾರವಾಡಕ್ಕೆ 01/04/2021 ರಿಂದ 31/03/2022 ರವರೆಗೆ ಒಂದು ವರ್ಷದ ಅವಧಿಗೆ ಈ ಕೆಳಕಂಡ ಸೇವೆಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಸೇವೆ 1: ವಾಲ್ಮಿ ಸಂಸ್ಥೆಯ ಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸಲು ಪದವೀಧರ ಇಂಜಿನಿಯರ್–3, ಪದವೀಧರ ಸಹಾಯಕ–4, ಕಿರಿಯ ಸಹಾಯಕರು (ಎಸ್.ಎಸ್.ಎಲ್.ಸಿ ಪಾಸ್)–5, ವಾಹನ ಚಾಲಕರು–5 (1 ಎಲ್.ಎಂ.ವಿ + 4 ಹೆಚ್.ಎಂ.ವಿ), ಅಟೆಂಡರ್/ ಕೇರ್ ಟೇಕರ್–1, ಜವಾನ–5, ಗಾರ್ಡನರ್–1. ಈ ರೀತಿ **ಮಾನವ ಸಂಪನ್ಮೂಲ ಪೂರೈಸಲು** ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ, ಲೈಸನ್ಸ್ ಹೊಂದಿದ, ಕಳೆದ ಐದು ವರ್ಷಗಳ ಅವಧಿಯಲ್ಲಿ ಯಾವುದಾದರು ಒಂದು ವರ್ಷ ಇಂಥ ಕೆಲಸ ನಿರ್ವಹಿಸಿದ ಅನುಭವವಿರುವ ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ಇಎಂಡಿ ಮೊತ್ತ ರೂ. **46700.00/–** (ರೂಪಾಯಿ ನಾಲವತ್ತಾರು ಸಾವಿರದ ಏಳು ನೂರು ಮಾತ್ರ) ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಸಲ್ಲಿಸಬೇಕಾಗುವುದು.

ಸೇವೆ 2: ವಾಲ್ಮಿ ಸಂಸ್ಥೆಯ ಪ್ರಾಂಗಣದಲ್ಲಿರುವ ಸಂಸ್ಥೆಯ ಸ್ಥಿರ ಹಾಗೂ ಚರಾಸ್ತಿಗಳ ಸಂರಕ್ಷಣೆ ಹಾಗೂ ಭದ್ರತಾ ಕೆಲಸವನ್ನು ನಿರ್ವಹಿಸಲು ಪ್ರತಿದಿನ ಮೂರು ಶಿಫ್ಟ್‌ಗಳಲ್ಲಿ, ಪ್ರತಿ ಶಿಫ್ಟ್‌ನಲ್ಲಿ ಒಬ್ಬ ಸೆಕ್ಯೂರಿಟಿ ಸೂಪರ್‌ವೈಜರ್ ಹಾಗೂ ಮೂರು ಸೆಕ್ಯೂರಿಟಿ ಗಾರ್ಡ್‌ಗಳ ಮೂಲಕ **ಸೆಕ್ಯೂರಿಟಿ ಸರ್ವಿಸ್** ಒದಗಿಸಲು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ, ಲೈಸೆನ್ಸ್ ಹೊಂದಿದ ಕಳೆದ ಐದು ವರ್ಷಗಳ ಅವಧಿಯಲ್ಲಿ ಯಾವುದಾದರು ಒಂದು ವರ್ಷ ಇಂಥ ಕೆಲಸ ನಿರ್ವಹಿಸಿದ ಅನುಭವವಿರುವ ಆಸಕ್ತ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ಇಎಂಡಿ ಮೊತ್ತ ರೂ. **21,400/–** (ರೂಪಾಯಿ ಇಪ್ಪತ್ತೊಂದು ಸಾವಿರದ ನಾಲ್ಕು ನೂರು ಮಾತ್ರ) ವನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಸಲ್ಲಿಸಬೇಕಾಗುವುದು.

ಸೇವೆ 3: ವಾಲ್ಮಿ ಸಂಸ್ಥೆಯಲ್ಲಿ ತರಬೇತಿ ಶಿಬಿರಾರ್ಥಿಗಳಿಗೆ ಮತ್ತು ಸಂಸ್ಥೆಗೆ ಭೇಟಿ ನೀಡುವ ಅತಿಥಿ/ ಸಂಪನ್ಮೂಲ ವ್ಯಕ್ತಿಗಳಿಗೆ / ಸಮಾವೇಶಗಳನ್ನು ಏರ್ಪಡಿಸಿದಾಗ ಬೇಡಿಕೆಗೆ ಅನುಸಾರ ಯಾವುದೇ ಸಮಯದಲ್ಲಿ **ಊಟ ಮತ್ತು ಉಪಹಾರ** ವನ್ನು ಸಿದ್ಧಪಡಿಸಿ ಒದಗಿಸಲು, ತೃಪ್ತಿಕರ ಸೇವೆ ಸಲ್ಲಿಸಿದ ಕನಿಷ್ಠ ಕಳೆದ ಐದು ವರ್ಷಗಳ ಅವಧಿಯಲ್ಲಿ ಯಾವುದಾದರು ಒಂದು ವರ್ಷ ಅನುಭವವಿರುವ ಹಾಗೂ ಆರೋಗ್ಯಾಧಿಕಾರಿಗಳಿಂದ ಲೈಸೆನ್ಸ್ ಪಡೆದಿರುವ ಹಾಗೂ ಪ್ಯಾನ್‌ಕಾರ್ಡ್ ಹಾಗೂ ಇತರೇ ಪ್ರಮಾಣ ಪತ್ರಗಳನ್ನು ಹೊಂದಿರುವ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್‌ನ ಇಎಂಡಿ ಮೊತ್ತ ರೂ. **1,00,000/–** (ರೂಪಾಯಿ ಒಂದು ಲಕ್ಷ ಐವತ್ತು ಸಾವಿರ ಮಾತ್ರ) ವನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಸಲ್ಲಿಸಬೇಕಾಗುವುದು.

ಸೇವೆ 4: ವಾಲ್ಮಿ ಸಂಸ್ಥೆಯ ಕಾರ್ಯಾಲಯದ, ಹಾಸ್ಟೇಲ್ ಹಾಗೂ ಮಂಥನ ಆವರಣದಲ್ಲಿ ರೆಸಿಡೆನ್ಸಿಯಲ್, ಅಕಾಡೆಮಿಕ್ ಬಿಲ್ಡಿಂಗ್ಸ ಕೆಲಸ ನಿರ್ವಹಿಸಲು ಅಗತ್ಯವಿರುವ **ಹೌಸ ಕೀಪಿಂಗ್** ಸೇವೆ ಒದಗಿಸಲು ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ, ಲೈಸನ್ಸ್ ಹೊಂದಿದ, ಕಳೆದ ಐದು ವರ್ಷಗಳ ಅವಧಿಯಲ್ಲಿ ಯಾವುದಾದರು ಒಂದು ವರ್ಷ ಇಂಥ ಕೆಲಸ ನಿರ್ವಹಿಸಿದ ಅನುಭವವಿರುವ ಆಸಕ್ತ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ಇಎಂಡಿ ಮೊತ್ತ ರೂ. **25,000/–** (ರೂಪಾಯಿ ಇಪ್ಪತ್ತೈದು ಸಾವಿರ ಮಾತ್ರ) ವನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ ಸಲ್ಲಿಸಬೇಕಾಗುವುದು.

ಸೂಚನೆಗಳು :

1. ವಿದ್ಯುನ್ಮಾನ ಸಂಗ್ರಹಣಾ ವೇದಿಕೆಯಲ್ಲಿ ಟೆಂಡರ್ ಪಡೆಯುವ ಮತ್ತು ಸಲ್ಲಿಸುವ ದಿನಾಂಕ ಮತ್ತು ಸಮಯ : **07.04.2021** ರ ಬೆಳಿಗ್ಗೆ 11.00 ಗಂಟೆಯಿಂದ ದಿನಾಂಕ : **21–04–2021** ರ ಸಂಜೆ 4.30 ಗಂಟೆವರೆಗೆ.
2. ಟೆಂಡರ್ ತರೆಯುವ ದಿನಾಂಕ : **22–04–2021** ರ ಬೆಳಿಗ್ಗೆ 4.35 ಗಂಟೆಗೆ.
3. ಸೇವೆಗಳ ಟೆಂಡರ್ ಕುರಿತು ಮಾಹಿತಿಗಾಗಿ **https://eproc.karnataka.gov.in** ಜಾಲತಾಣಕ್ಕೆ ಭೇಟಿ ನೀಡಿ ಪಡೆಯಬಹುದು.
4. ಹೆಚ್ಚಿನ ವಿವರಗಳಿಗಾಗಿ ಕಚೇರಿ ಅವಧಿಯಲ್ಲಿ ಸಹಾಯಕ ನಿರ್ದೇಶಕರನ್ನು ದೂರವಾಣಿ ಮೂಲಕ (ಕಚೇರಿ ದೂರವಾಣಿ **0836–2486893**) ಅಥವಾ ಖುದ್ದಾಗಿ ಸಂಪರ್ಕಿಸಿ ವಿವರಗಳನ್ನು ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು,
ವಾಲ್ಮಿ, ಧಾರವಾಡ.

ವಾಸಾಸಂಇ/ಧಾರವಾಡ/ಎಂಸಿಎ/20/2021–22

@SudhaWeekly
ಸುಧಾ ಸದಾ ನಿಮ್ಮ ಸಂಗಾತಿ

ಈ ವಾರದ ವಿಶೇಷ

ಯೂರಿ ಗಗಾರಿನ್ ಅಂತರಿಕ್ಷ ಯಾತ್ರೆ ಯಶಸ್ವಿಗೊಳಿಸಿದ ದಿನಕ್ಕೀಗ ಅರವತ್ತು ವರ್ಷ. ಈ ಆರು ದಶಕಗಳಲ್ಲಿ ಮನುಷ್ಯ ಅನೇಕ ವಿಜಯ ಪತಾಕೆಗಳನ್ನು ನೆಟ್ಟಿದ್ದಾನೆ. ‘ಚಂದ್ರ ಸ್ಪರ್ಧೆ’ ಚಂದ ಸ್ಪರ್ಧೆಯಾಗಿ ಹೊಸ ಕನಸುಗಳ ಬೀಜ ಬಿತ್ತಿದೆ. ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಯಾತ್ರಿಗಳು ತಿಂಗಳುಗಟ್ಟಲೆ ನೆಲೆಸಿದ್ದಾರೆ. ಮನುಷ್ಯನ ಆಸೆಗಣ್ಣು ಮಂಗಳನತ್ತಲೂ ಹರಿದಿದೆ. ಬಾಹ್ಯಾಕಾಶದ ನಾಳೆಯ ಸಾಧ್ಯತೆಗಳತ್ತ ಡಾ. ಬಿ.ಆರ್. ಗುರುಪ್ರಸಾದ್ ಅವರ ಮಾಹಿತಿಪೂರ್ಣ ವಿಶ್ಲೇಷಣೆ.

60 ವರ್ಷಗಳ ಸಾಹಸ ಕಥನ

ರಸಿಕರ ಕಂಗಳ ಸೆಳೆಯುವ ನೋಟ...

ಮೊಬೈಲ್ ಇಲ್ಲದೆ ಮಕ್ಕಳು ಊಟ ಮಾಡಲ್ವಾ?

ಹೂ ಒಣಗಿ ಅಗರಬತ್ತಿಯಾಗಿ...

ಹಬ್ಬಕ್ಕೆ ಹೊಸ ಸೀರೆ

ಹೆರಿಗೆ ಹೊತ್ತಲ್ಲಿ ಬಳಸುವ ಎಪಿಡ್ಯೂರಲ್ ಸುರಕ್ಷಿತವೆ?

ಬಂತಿದೋ ಯುಗಾದಿ ಲಸಿಕೆ

ಬಜಾರಿಗಳ ಹಜಾರದಲ್ಲಿ ಕೋಮಲ ಗುಲಾಬಿ!

ಮತ್ತೊಬ್ಬಳು ಮಯೂರಿ!

ಫಾಲ್ಕೆ ಬೆಳಕಿನಡಿ ಆತ್ಮವಿಮರ್ಶಕ ರಜನಿಕಾಂತ



feedback@sudha.co.in ಇದೀಗ ಮಾರುಕಟ್ಟೆಯಲ್ಲಿ

SHAKTHI Education Trust

SHAKTHI PU COLLEGE
Shakthinagar, Mangaluru
www.shakthi.edu.in



REGISTRATION OPEN

Science
PCMB Physics, Chemistry Mathematics and Biology
PCMC Physics, Chemistry Mathematics and Computer Science

Commerce
EBAC Economics, Business Studies Accountancy and Computer Science
EBAS Economics, Business Studies Accountancy and Statistics

LANGUAGES:
▸ English ▸ Kannada / Hindi / Sanskrit / French

SHAKTHI COACHING ACADEMY
Coaching available for **KCET / NEET / JEE**

SHAKTHI ADVANCED COMMERCE LEARNING
CA, CS – Foundation Course CLAT

Fee concession available for meritorious students

SHAKTHI Grade 1 to 10 **RESIDENTIAL SCHOOL (CBSE)**
Affiliated to CBSE Board, New Delhi (Affn No.: 830956)

AMENITIES
- CBSE Curriculum.
- Excellent teacher-pupil ratio.
- Value-based teaching with emphasis on discipline and training towards making students self-reliant.
- Activity-oriented methodologies, designed to meet international standards.
- Co-curricular activities that form an integral part of learning.
- Regular interaction with parents for a supportive learning environment.

Hostel Facilities Available (BOYS AND GIRLS) Class 4 onwards

SHAKTHI ADVANCED LEARNING

SHAKTHI ADVANCED LEARNING (SAL)
▸ Prepare Your children with confidence and ethics to face competitive exams.
▸ Gain confidence to compete in the world through Shakthi Advanced Learning.

SHAKTHI RESEARCH FORUM(SRF)
▸ To foster critical thinking and analytical skills through hands and on learning.

Shakthi PU College & Residential School
Near Shree Gopalakrishna Temple, Shakthinagar, Mangaluru - 575016
Ph: 0824 2230452 | 0824 2231452 | 9686000046 | 9611588813
Website: shakthi.edu.in | Email: info@shakthi.edu.in

www.tarjani.co

ಸಾರಿಗೆ ನೌಕರರ ಮುಷ್ಕರ: ಪರದಾಡಿದ ಪ್ರಯಾಣಿಕರು ● ಬಸ್ ನಿಲ್ದಾಣದಿಂದಲೇ ಖಾಸಗಿ ಬಸ್‌ಗಳ ಸಂಚಾರ

ವಿದ್ಯಾರ್ಥಿಗಳ ಪರದಾಟ; ದುಪ್ಪಟ್ಟು ದರಕ್ಕೆ ಕಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಸಾರಿಗೆ ನೌಕರರ ಮುಷ್ಕರ ದಿಂದಾಗಿ ಮೈಸೂರು ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ನಡೆಯುತ್ತಿದ್ದ ಪರೀಕ್ಷೆಗಳಿಗೆ ಹಾಜರಾಗಲು ಪದವಿ ವಿಭಾಗದ ವಿದ್ಯಾರ್ಥಿಗಳು ಪರದಾಡಿದರು.

ನಗರದ ವಿವಿಧ ಭಾಗಗಳು ಹಾಗೂ ಗ್ರಾಮಾಂತರ ಭಾಗಗಳ ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಬಸ್ ಸಿಗಲಿಲ್ಲ. ಖಾಸಗಿ ಬಸ್‌ಗಳ ನಿರ್ವಾಹಕರು ವಿದ್ಯಾರ್ಥಿ ಬಸ್‌ಪಾಸ್‌ಗಳಿಗೆ ಮಾನ್ಯತೆ ನೀಡಲಿಲ್ಲ. ಅನಿವಾರ್ಯವಾಗಿ ಹಣ ಕೊಟ್ಟೇ ಸಂಚರಿಸಬೇಕಾದ ಪರಿಸ್ಥಿತಿ ಉಂಟಾಯಿತು.

ಮುಷ್ಕರ ಇದ್ದಾಗ್ಯೂ ಪರೀಕ್ಷೆಗಳನ್ನು ಮುಂದಕ್ಕೆ ಹಾಕದ ವಿಶ್ವವಿದ್ಯಾನಿಲಯದ ಕ್ರಮಕ್ಕೆ ವಿದ್ಯಾರ್ಥಿಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಯಿತು.

ಇನ್ನುಳಿದಂತೆ, ಖಾಸಗಿ ವಾಹನಗಳಿಗೆ ಅವಕಾಶ ನೀಡಿದ್ದರಿಂದ ಪ್ರಯಾಣಿಕರಿಗೆ ಹೆಚ್ಚಿನ ತೊಂದರೆಯಾಗಲಿಲ್ಲ.

ಮಂಡ್ಯ ಜಿಲ್ಲೆಯಲ್ಲಿ 455 ಮಾರ್ಗಗಳಲ್ಲಿ ಖಾಸಗಿ ಬಸ್ಸುಗಳು ಸಂಚರಿಸಿದ್ದು, ಪ್ರಯಾಣಿಕರಿಂದ ನಿಗದಿತ ದರವನ್ನಷ್ಟೇ ಪಡೆದಿವೆ.

ಮದ್ದೂರು- ಕೊಪ್ಪ ಮಾರ್ಗದಲ್ಲಿ ಸಾರಿಗೆ ಸಂಸ್ಥೆಯ ಎರಡು ಬಸ್‌ಗಳು ಸಂಚರಿಸಿದ್ದು, ಮೂವರು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಿದ್ದರು.

ಮೈಸೂರಿನ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್‌ನಿಲ್ದಾಣದಲ್ಲಿ ಬುಧವಾರ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರು ಸಂಚರಿಸಿದರು

ಚಾಮರಾಜನಗರ ಜಿಲ್ಲೆಯಲ್ಲಿ 100 ಖಾಸಗಿ ಬಸ್ಸುಗಳು ಸಂಚರಿಸಿದವು. ಪ್ರಯಾಣಿಕರಿಗೆ ಹೆಚ್ಚಿನ ತೊಂದರೆ ಆಗಿಲ್ಲ.

ಕೊಡಗು ಜಿಲ್ಲೆಯ ಒಳಗೆ ಸಂಚರಿಸಲು ಪ್ರಯಾಣಿಕರು ಖಾಸಗಿ ಬಸ್ ಸೇವೆ ನಂಬಿಕೊಂಡಿದ್ದಾರೆ. ದೂರದ ಪ್ರಯಾಣಕ್ಕೆ ಮಾತ್ರ ಕೆಎಸ್‌ಆರ್‌ಟಿಸಿ ಬಸ್ ಸೇವೆ ಅವಲಂಬಿಸಿದ್ದಾರೆ. ಹೀಗಾಗಿ, ಮಡಿಕೇರಿಯಿಂದ ಮೈಸೂರು, ಬೆಂಗಳೂರು, ಮಂಗಳೂರು ಹಾಗೂ ಉಡುಪಿ ಜಿಲ್ಲೆಗಳಿಗೆ ತೆರಳಬೇಕಿದ್ದ ಪ್ರಯಾಣಿಕರು ಪರದಾಡಿದರು.

ಹಾಸನ ಜಿಲ್ಲೆಯಲ್ಲಿ, ಖಾಸಗಿ ವಾಹನಗಳ ಟಿಕೆಟ್ ದರವನ್ನು ಒಂದೂವರೆಯಿಂದ ಎರಡು ಪಟ್ಟು ಹೆಚ್ಚಿಸಲಾಗಿತ್ತು. ಕೆಲವರು ಚೌಕಾಶಿಗಿಳಿದರೆ, ಮತ್ತೆ ಕೆಲವು ಪ್ರಯಾಣಿಕರು ಆಕ್ರೋಶ ವ್ಯಕ್ತಪಡಿಸಿ, ವಿಧಿ ಇಲ್ಲದೇ ಖಾಸಗಿ ಬಸ್ಸಿನಲ್ಲಿ ಪ್ರಯಾಣಿಸಿದರು.

ವಿದ್ಯಾರ್ಥಿಗಳಿಗೆ ತೊಂದರೆಯಾಗಿಲ್ಲ. ಬಹುತೇಕ ವಿಷಯಗಳ ಪರೀಕ್ಷೆ ಮುಗಿದಿದ್ದು, ಅನುತ್ತೀರ್ಣರಾಗಿದ್ದವರಿಗೆ ಮಾತ್ರವೇ ಈಗ ಪರೀಕ್ಷೆ ನಡೆಯುತ್ತಿದೆ

ಪ್ರೊ.ಎ.ಪಿ.ಜ್ಞಾನಪ್ರಕಾಶ್, ಕುಲಸಚಿವ, ಪರೀಕ್ಷಾಂಗ ವಿಭಾಗ, ಮೈಸೂರು ವಿಶ್ವವಿದ್ಯಾಲಯ

ಪಾದಯಾತ್ರೆ ಹೊರಟ ಸಾರಿಗೆ ನೌಕರ

ಚನ್ನರಾಯಪಟ್ಟಣ (ಹಾಸನ): ಸಾರಿಗೆ ನೌಕರರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ, ಪಟ್ಟಣದ ಬಸ್ ನಿಲ್ದಾಣದಿಂದ ಸಾರಿಗೆ ನೌಕರರೊಬ್ಬರು ಏಕಾಂಗಿಯಾಗಿ ಪಾದಯಾತ್ರೆ ಹೊರಟಿರುವ ದೃಶ್ಯ ಈ ಭಾಗದ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಅರಕಲಗೂಡು ಘಟಕದಲ್ಲಿ ಚಾಲಕ/ನಿರ್ವಾಹಕರಾಗಿ ಕಾರ್ಯ ನಿರ್ವಹಿಸುತ್ತಿರುವ, ತಾಲ್ಲೂಕಿನ ಕಾಂತರಾಜಪುರದ ನಿವಾಸಿ ಪ್ರದೀಪ್ ಅವರು ನೌಕರರ ಸಮಸ್ಯೆಗೆ ಸ್ಪಂದಿಸುವಂತೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಮಾಡಿರುವುದು ವಿಡಿಯೊದಲ್ಲಿದೆ.

‘ಮುಖ್ಯಮಂತ್ರಿ ಮನೆವರೆಗೆ ಪಾದಯಾತ್ರೆ ಹೋಗುತ್ತಿದ್ದೇನೆ. ಇದು ನನ್ನೊಬ್ಬನ ಪಾದಯಾತ್ರೆಯಲ್ಲ. ನಾಲ್ಕು ನಿಗಮಗಳ 1.30 ಲಕ್ಷ ನೌಕರರ ಪಾದಯಾತ್ರೆ. ದಯವಿಟ್ಟು ಸಹಕರಿಸಿ. ಸರ್ಕಾರಕ್ಕೆ, ನಮ್ಮ ಸಮಸ್ಯೆ ಮನದಟ್ಟಾಗಬೇಕು. ಹೀಗೆಯೇ ಬಿಟ್ಟರೆ ತಾರತಮ್ಯ ಮಾಡುತ್ತಾರೆ. ಈ ಹೋರಾಟ ಯಶಸ್ವಿಯಾಗಬೇಕು. ಮುಷ್ಕರವನ್ನು ಹೀಗೆಯೇ ಮುಂದುವರೆಸೋಣ. ಕಾರ್ಮಿಕರು ಈ ವಿಡಿಯೊ ಶೇರ್ ಮಾಡಬೇಕು’ ಎಂದು ಮನವಿ ಮಾಡಿದ್ದಾರೆ.

ಚನ್ನರಾಯಪಟ್ಟಣದಿಂದ ಬೆಂಗಳೂರಿಗೆ ಪಾದಯಾತ್ರೆ ಹೊರಟಿರುವ ಬಸ್ ನಿರ್ವಾಹಕ ಪ್ರದೀಪ್

ಸುದ್ದಿ 2 ನಿಮಿಷ

‘ಬೆದರಿಕೆಗೆ ಸರ್ಕಾರ ಮಣಿಯಲ್ಲ’

ಚಿಕ್ಕಮಗಳೂರು: ‘ರೈತ ನಾಯಕರಾಗಿದ್ದ ಕೋಡಿಹಳ್ಳಿ ಚಂದ್ರಶೇಖರ್ ಈಗ ಕಾರ್ಮಿಕ ನಾಯಕರಾಗಿದ್ದಾರೆ. ಅರಾಜಕತೆ ಸೃಷ್ಟಿಸುವುದು ನಾಯಕತ್ವದ ಲಕ್ಷಣವಲ್ಲ. ಸಂದರ್ಭ, ಪರಿಸ್ಥಿತಿ ಅರ್ಥಮಾಡಿಕೊಂಡು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಮುಂದಾಗಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಶಾಸಕ ಸಿ.ಟಿ.ರವಿ ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಅತಿ ಒತ್ತಡ ಹೇರಿದರೆ ಸಂಬಂಧ ಮುರಿದು ಹೋಗುತ್ತದೆ. ಬೆದರಿಕೆಗಳ ಮೂಲಕ ಸರ್ಕಾರವನ್ನು ಮಣಿಸಲು ಸಾಧ್ಯವಿಲ್ಲ’ ಎಂದರು.

‘ಸಾರಿಗೆ ಸಚಿವರು ಮೇ 2ರವರೆಗೆ ಕಾಲಾವಕಾಶ ನೀಡುವಂತೆ ನೌಕರರಿಗೆ ಕೇಳಿದ್ದಾರೆ. ನೌಕರರು ಇನ್ನೊಂದು ತಿಂಗಳು ಕಾಯಬೇಕು. ಮುಷ್ಕರ ವಾಪಸ್ ಪಡೆಯಬೇಕು’ ಎಂದು ಮನವಿ ಮಾಡಿದರು.

‘2018ರಲ್ಲಿ ಟಿಕೆಟ್ ನೀಡಿಕೆ ಸಂದರ್ಭದಲ್ಲಿ ಬಿ.ಎಸ್. ಯಡಿಯೂರಪ್ಪ ಅವರೇ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಸಮರ್ಥಿಸಿಕೊಂಡಿದ್ದರು. ಮುಖ್ಯಮಂತ್ರಿ ಮತ್ತು ಯತ್ನಾಳ್ ಅವರ ನಡುವೆ ವ್ಯಕ್ತಿಗತ ಸಂಬಂಧ ಇದೆ. ಅವರೇ ಸಮಸ್ಯೆ ಬಗೆಹರಿಸಿಕೊಳ್ಳುತ್ತಾರೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಖಾಸಗಿ ವಾಹನಗಳ ವ್ಯವಸ್ಥೆ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ನೌಕರರು ಕೆಲಸದಿಂದ ದೂರ ಉಳಿದಿದ್ದು, ಖಾಸಗಿ ಬಸ್‌ಗಳ ಸಂಚಾರ ಹೆಚ್ಚಾಗಿತ್ತು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಜನರು ಖಾಸಗಿ ಬಸ್‌ಗಳನ್ನೇ ಹೆಚ್ಚಾಗಿ ಅವಲಂಬಿಸಿದ್ದು, ನಿತ್ಯದ ಸಂಚಾರಕ್ಕೆ ಯಾವುದೇ ತೊಂದರೆ ಆಗಲಿಲ್ಲ. ದೂರದ ಊರುಗಳಿಗೆ ಹೋಗುವ ಜನರ ಪರದಾಡಿದರು. ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸಂಚಾರ ಸಂಪೂರ್ಣ ಸ್ಥಗಿತವಾಗಿದ್ದು, ಜನರು ಖಾಸಗಿ ವಾಹನಗಳಲ್ಲಿ ಪ್ರಯಾಣಿಸಿದರು. ಸುಬ್ರಹ್ಮಣ್ಯ, ಧರ್ಮಸ್ಥಳ ಮತ್ತಿತರ ತೀರ್ಥಕ್ಷೇತ್ರಗಳಲ್ಲಿ ಬಂದಿದ್ದ ಜನರು ಮರಳಿ ಊರುಗಳಿಗೆ ತೆರಳಲು ತೊಂದರೆ ಅನುಭವಿಸುವಂತಾಯಿತು.

‘ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಸ್ಥಗಿತವಾಗಿದ್ದು, ರಾಜ್ಯದಲ್ಲಿ ಬುಧವಾರ 2 ಸಾವಿರ ಖಾಸಗಿ ಬಸ್‌ಗಳನ್ನು ಓಡಿಸಲಾಗಿದೆ’ ಎಂದು ಖಾಸಗಿ ಬಸ್ ಮಾಲೀಕರ ಸಂಘದ ಉಪಾಧ್ಯಕ್ಷ ಕೆ.ಕೆ.ಬಾಲಕೃಷ್ಣ ಭಟ್ ತಿಳಿಸಿದ್ದಾರೆ.

ಕೆಲಸಕ್ಕೆ ಹಾಜರಾಗಿ ಚಳವಳಿ ನಡೆಸಿ: ರೈತ ಸಂಘದ ಸಲಹೆ

ಮೈಸೂರು: ಕೆಲಸಕ್ಕೆ ಹಾಜರಾಗಿ ಚಳವಳಿ ನಡೆಸುವಂತೆ ಕರ್ನಾಟಕ ರಾಜ್ಯ ರೈತ ಸಂಘ ಕೆಎಸ್‌ಆರ್‌ಟಿಸಿ ನೌಕರರಿಗೆ ಸಲಹೆ ನೀಡಿದೆ.

‘ಈ ಮಾದರಿಯ ಮುಷ್ಕರಕ್ಕೆ ಸಂಘದ ಸಹಮತ ಇಲ್ಲ. ಸಾರ್ವಜನಿಕರಿಗೆ ತೊಂದರೆಯಾಗುವಂತಹ ಇಂತಹ ಮುಷ್ಕರದ ಬದಲು ಕೆಲಸಕ್ಕೆ ಹಾಜರಾಗಿ, ವಿಶಿಷ್ಟವಾಗಿ ಹಾಗೂ ನಿರಂತರವಾಗಿ ಚಳವಳಿ ನಡೆಸುವ ಮೂಲಕ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು’ ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

‘ಸರ್ಕಾರವೂ ಬಡ ಹಾಗೂ ಮಧ್ಯಮ ವರ್ಗದವರೇ ಹೆಚ್ಚಾಗಿರುವ ಕೆಎಸ್‌ಆರ್‌ಟಿಸಿ ನೌಕರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಬೇಕು’ ಎಂದು ಮನವಿ ಮಾಡಿದ್ದಾರೆ.

ಆಗ ಅಮಾನತು, ಈಗ ಸನ್ಮಾನಿಸಿ ಕರ್ತವ್ಯಕ್ಕೆ ನಿಯೋಜನೆ!

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕರ್ತವ್ಯ ಲೋಪದ ಆರೋಪದ ಮೇರೆಗೆ ಮೂರು ತಿಂಗಳ ಹಿಂದೆ ಅಮಾನತಾಗಿದ್ದ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಕೊಪ್ಪಳ ಘಟಕದ ಚಾಲಕ ಕಂ ನಿರ್ವಾಹಕ ಮುತ್ತುರಾಜ ಕುಲಕರ್ಣಿ ಅವರ ಅಮಾನತು ರದ್ದುಪಡಿಸಿದ ಅಧಿಕಾರಿಗಳು, ಅವರನ್ನು ಸನ್ಮಾನಿಸಿ ಕೆಲಸಕ್ಕೆ ನಿಯೋಜಿಸಿದರು.

‘ಅಮಾನತು ಆದೇಶ ವಾಪಸ್ ಪಡೆದು ಕೆಲಸಕ್ಕೆ ನಿಯೋಜಿಸುವಂತೆ ಎರಡು ತಿಂಗಳಿನಿಂದ ಕಚೇರಿಗೆ ಅಲೆದರೂ ಪ್ರಯೋಜನವಾಗಿರಲಿಲ್ಲ. ಆದರೆ, ಮಂಗಳವಾರ ಕೆಲಸಕ್ಕೆ ಹಾಜರಾದರೆ ಅಮಾನತು ಆದೇಶ ರದ್ದುಪಡಿಸುವುದಾಗಿ ಅಧಿಕಾರಿಗಳು ಹೇಳಿದ್ದರಿಂದ ಕೆಲಸಕ್ಕೆ ಹಾಜರಾಗಿದ್ದೇನೆ’ ಎಂದು ಮುತ್ತುರಾಜ ಪ್ರತಿಕ್ರಿಯಿಸಿದರು.

ಹೊಸಪೇಟೆ ಮಾರ್ಗದ ಬಸ್‌ನಲ್ಲಿ ಮುತ್ತುರಾಜ ಕಾರ್ಯನಿರ್ವಹಿಸಿದರು.

21 ನೌಕರರ ವಿರುದ್ಧ ಎಫ್‌ಐಆರ್

ಸಾರಿಗೆ ನೌಕರರ ಮುಷ್ಕರಕ್ಕೆ ಬೆಂಬಲ ನೀಡಿದ್ದಕ್ಕೆ ಮುಂಜಾಗ್ರತಾ ಕ್ರಮವಾಗಿ ಮತ್ತು ಶಾಂತಿ ಪಾಲನೆಗಾಗಿ ಕುಷ್ಟಗಿ ಸಾರಿಗೆ ಘಟಕದ 21 ನೌಕರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ನೌಕರರನ್ನು ತಾಲ್ಲೂಕು ದಂಡಾಧಿಕಾರಿ ಎದುರು ಹಾಜರುಪಡಿಸಿ, ನಂತರ ಬಿಡಲಾಗಿದೆ ಎಂದು ಕುಷ್ಟಗಿ ಠಾಣೆ ಸಬ್‌ಇನ್‌ಸ್ಪೆಕ್ಟರ್ ತಿಮ್ಮಣ್ಣ ನಾಯಕ ತಿಳಿಸಿದರು.

ಈ ಕುರಿತು ಮಾಹಿತಿ ನೀಡಿದ ತಹಶೀಲ್ದಾರ್ ಎಂ.ಸಿದ್ದೇಶ, ‘ಕೆಲ ನೌಕರರನ್ನು ಪೊಲೀಸರು ಹಾಜರುಪಡಿಸಿದ್ದರು. ಅವರು ಕರ್ತವ್ಯಕ್ಕೆ ಹಾಜರಾಗುತ್ತೇವೆ ಎಂದು ಒಪ್ಪಿದ್ದರಿಂದ ಅವರಿಂದ ಮುಚ್ಚಳಿಕೆ ಬರೆಸಿಕೊಂಡಿಲ್ಲ’ ಎಂದರು.

‘ಒಬ್ಬರು ಮಾತ್ರ ಕರ್ತವ್ಯಕ್ಕೆ ಹಾಜರಾಗಿದ್ದರೆ, ಉಳಿದವರು ಗೈರಾಗಿದ್ದರು’ ಎಂದು ಘಟಕ ವ್ಯವಸ್ಥಾಪಕ ಸಂತೋಷ್‌ಕುಮಾರ್ ಶೆಟ್ಟಿ ತಿಳಿಸಿದರು.

‘6ನೇ ವೇತನ ಆಯೋಗದ ಶಿಫಾರಸು ಜಾರಿ ಇಲ್ಲ’

ರಾಮನಗರ: ಕೆಎಸ್‌ಆರ್‌ಟಿಸಿ ನೌಕರರಿಗೆ ಆರನೇ ವೇತನ ಆಯೋಗದಂತೆ ವೇತನ ನೀಡಲು ಆಗದು. ಶೇ 8ರಷ್ಟು ವೇತನ ಹೆಚ್ಚಳಕ್ಕೆ ಒಪ್ಪಿ ಸಾರಿಗೆ ನೌಕರರು ಕೆಲಸಕ್ಕೆ ಹಾಜರಾಗಬೇಕು ಎಂದು ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಬುಧವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಕೆಎಸ್‌ಆರ್‌ಟಿಸಿ ಒಂದು ಸ್ವಾಯತ್ತ ಸಂಸ್ಥೆ. ಹೀಗಾಗಿ ಅವುಗಳ ಆದಾಯ ಆಧರಿಸಿ ವೇತನ ನೀಡಲು ಸಾಧ್ಯ’ ಎಂದರು.

ಕೆಎಸ್‌ಆರ್‌ಟಿಸಿ ಖಾಸಗೀಕರಣ ಇಲ್ಲ: ‘ಸಂಸ್ಥೆ ಲಾಭದಲ್ಲಿ ನಡೆದರೆ ಕಾರ್ಮಿಕರಿಗೆ ಅನುಕೂಲ ಆಗಲಿದೆ. ಕೆಎಸ್‌ಆರ್‌ಟಿಸಿಯನ್ನು ಖಾಸಗೀಕರಣ ಮಾಡಲು ಸರ್ಕಾರ ಮುಂದಾಗಿಲ್ಲ. ಆದರೆ, ಸಾರ್ವಜನಿಕರಿಗೆ ತೊಂದರೆ ಆಗಬಾರದು ಎಂಬ ಕಾರಣಕ್ಕೆ ಖಾಸಗಿ ವಾಹನಗಳ ಓಡಾಟಕ್ಕೆ ಅವಕಾಶ ನೀಡಲಾಗಿದೆ’ ಎಂದು ಅವರು ಸ್ಪಷ್ಟನೆ ನೀಡಿದರು.

‘ಸಂಬಳ ಸಾಕಾಗದಿದ್ದರೆ ಕೆಲಸ ಬಿಡಲಿ’

ತಿಪಟೂರು: ಸಾರಿಗೆ ನೌಕರರ ಮುಷ್ಕರದಿಂದ ಬಸ್ ಇಲ್ಲ ಎಂದು ಕರೆ ಮಾಡಿದ ಪ್ರಯಾಣಿಕನಿಗೆ ‘ಸಾರಿಗೆ ನೌಕರರಿಗೆ ಸಂಬಳ ಸಾಕಾಗದಿದ್ದರೆ ಕೆಲಸ ಬಿಡಲಿ’ ಎಂದು ತಿಪಟೂರು ಶಾಸಕ ಬಿ.ಸಿ.ನಾಗೇಶ್ ಹೇಳಿರುವ ಆಡಿಯೊ ತುಣುಕು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರಯಾಣಿಕರೊಬ್ಬರು ತಿಪಟೂರಿನಿಂದ ಚನ್ನರಾಯಪಟ್ಟಣಕ್ಕೆ ತೆರಳಲು ಬಸ್ ಇಲ್ಲ ಎಂದು ಕರೆ ಮಾಡಿದಾಗ, ‘ಯಾರದ್ದೋ ಮಾತು ಕೇಳಿ ಪ್ರತಿಭಟನೆ ಮಾಡುತ್ತಿರುವ ಕಂಡಕ್ಟರನ್ನು ಹಿಡಿದು ಹೊಡೆಯಿರಿ’ ಎಂದು ಹೇಳಿದ್ದಾರೆ.

‘ಕೋವಿಡ್ ಸಂದರ್ಭದಲ್ಲಿ ಮನೆಯಲ್ಲಿದ್ದವರಿಗೆ ಸಂಬಳ ಕೊಡಲಾಗಿದೆ. ಚುನಾವಣೆ ನಂತರ ಸಂಬಳ ಏರಿಕೆ ಮಾಡುವುದಾಗಿ ತಿಳಿಸಿದ್ದರೂ ಪ್ರತಿಭಟನೆ ಮಾಡಿದರೆ ಏನು ಮಾಡುವುದು. ಕೆಲಸ ಬಿಟ್ಟರೆ ಇತರರಿಗಾದರೂ ಕೆಲಸ ಸಿಗುತ್ತದೆ’ ಎಂದು ಹೇಳಿರುವುದು ಆಡಿಯೊದಲ್ಲಿದೆ.

ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಿರುವುದು

25 ಆಟೋ, 2 ಟೆಂಪೊಗಳಿಂದ ಉಚಿತ ಸಾರಿಗೆ ವ್ಯವಸ್ಥೆ

ರಾಜರಾಜೇಶ್ವರಿನಗರ: ಸಾರಿಗೆ ಮುಷ್ಕರದ ವೇಳೆ ಕೂಲಿ ಕಾರ್ಮಿಕರು, ರೋಗಿಗಳು, ಶಾಲಾ ಕಾಲೇಜು ಮಕ್ಕಳಿಗೆ, ಮಧ್ಯಮ ವರ್ಗದವರಿಗೆ, ತುರ್ತು ಕೆಲಸ ಇರುವ ನಾಗರಿಕರಿಗೆ, ಬಡವರಿಗೆ ಅನುಕೂಲ ಕಲ್ಪಿಸಲು ಕನ್ನಲ್ಲಿ ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ ವತಿಯಿಂದ ಉಚಿತವಾಗಿ 2 ಟೆಂಪೊ ಟ್ರಾವೆಲರ್, 25 ಆಟೊಗಳ ವ್ಯವಸ್ಥೆ ಮಾಡಲಾಗಿತ್ತು.

ಕನ್ನಲ್ಲಿಯಿಂದ ಕೊಡಿಗೇಹಳ್ಳಿ, ದೊಡ್ಡಗೊಲ್ಲರಹಟ್ಟಿ, ಬ್ಯಾಡರಹಳ್ಳಿ, ಸುಂಕದಕಟ್ಟೆ, ಹೌಸಿಂಗ್ ಬೋರ್ಡ್ ಮೂಲಕ ಟೋಲ್ ಗೇಟ್ ವರೆಗೆ ವಾಹನ ಸಂಚಾರಕ್ಕೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಕನ್ನಲ್ಲಿ ವೀರಶೈವ ನಿತ್ಯಾನ್ನ ದಾಸೋಹ ಸೇವಾ ಸಮಿತಿ ಅಧ್ಯಕ್ಷ ಡಾ.ಎಸ್.ಶಾಂತರಾಜ್, ‘ಉಚಿತ ಸೇವೆ ಕೇವಲ ಬಸ್ ಮುಷ್ಕರ ಕೈಬಿಡುವವರೆಗೆ ಮಾತ್ರ ಇರಲಿದೆ‘ ಎಂದರು.

‘ಬೇಡಿಕೆ ಈಡೇರಿಸುವುದಿಲ್ಲ’

ಮಂಗಳೂರು: ‘ಮುಷ್ಕರ ನಡೆಸುತ್ತಿರುವ ಸಾರಿಗೆ ನೌಕರರ ಬೇಡಿಕೆ ಈಡೇರಿಸಲು ಸಾಧ್ಯವಿಲ್ಲ. ಸರ್ಕಾರ ಈಡೇರಿಸುವುದೂ ಇಲ್ಲ’ ಎಂದು ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ನಗರದಲ್ಲಿ ಬುಧವಾರ ಮಾತನಾಡಿದ ಅವರು, ‘ಅವು (ಕೆಎಸ್‌ಆರ್‌ಟಿಸಿ) ನಿಗಮಗಳು. ಅಲ್ಲಿನ ಸಿಬ್ಬಂದಿಯನ್ನು ಸರ್ಕಾರಿ ನೌಕರರನ್ನಾಗಿ ಮಾಡಿದರೆ, ಉಳಿದ ಎಲ್ಲರೂ ಕೇಳುತ್ತಾರೆ. ಅವರ ಬೇಡಿಕೆಯು ಶೇ 1ರಷ್ಟೂ ನ್ಯಾಯ ಬದ್ಧವಾಗಿಲ್ಲ. ‘ಇದೊಂದು ಕಾನೂನು ವಿರೋಧಿ ಹೋರಾಟ. ಅದನ್ನು ಹೇಗೆ ಬಗ್ಗುಬಡಿಯಬೇಕು ಎಂದು ಸರ್ಕಾರಕ್ಕೆ ಗೊತ್ತಿದೆ’ ಎಂದರು.

ಬಾಣಂತಿಯನ್ನು ಮನೆಗೆ ತಲುಪಿಸುವ ಮೂಲಕ ಮಾನವೀಯತೆ ಮೆರೆದ ವಿಜಯಪುರ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಸುಜಾತಾ ಕಳ್ಳಿಮನಿ ಅವರನ್ನು ಕುಟುಂಬದವರು ಸನ್ಮಾನಿಸಿದರು

ಬಾಣಂತಿ, ಹಸುಗೂಸನ್ನು ಮನೆಗೆ ತಲುಪಿಸಿದ ಜಿ.ಪಂ.ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಊರಿಗೆ ತೆರಳಲು ಬಸ್ ಇಲ್ಲದೇ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಒಂದೂವರೆ ತಿಂಗಳ ಹಸುಗೂಸಿನೊಂದಿಗೆ ಗೋಳಾಡುತ್ತಿದ್ದ ಬಾಣಂತಿಯನ್ನು ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಸುಜಾತಾ ಸೋಮನಾಥ ಕಳ್ಳಿಮನಿ ಅವರು ತಮ್ಮ ಸರ್ಕಾರಿ ಕಾರಿನಲ್ಲೇ ಕರೆದುಕೊಂಡು ಹೋಗಿ ಮನೆ ತಲುಪಿಸಿ ಮಾನವೀಯತೆ ಮೆರೆದಿದ್ದಾರೆ.

ಇಂಡಿ ತಾಲ್ಲೂಕಿನ ಲಾಳಸಂಗಿ ಗ್ರಾಮದ ಸಾವಿತ್ರಿ ಬಡಿಗೇರ ಮಗುವಿಗೆ ಚಿಕಿತ್ಸೆ ಕೊಡಿಸಲು ಆಸ್ಪತ್ರೆಗೆ ಬಂದಿದ್ದರು. ಆದರೆ, ಮುಷ್ಕರದ ಹಿನ್ನೆಲೆಯಲ್ಲಿ ಸ್ವಗ್ರಾಮಕ್ಕೆ ಮರಳಲು ಬಸ್ ಇಲ್ಲದೇ ಪರದಾಡುತ್ತಿರುವುದನ್ನು ತಿಳಿದ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಸುಜಾತಾ ಕಳ್ಳಿಮನಿ, ಬಾಣಂತಿ, ಮಗುವನ್ನು ಮನೆಗೆ ಸುರಕ್ಷಿತವಾಗಿ ಬಿಟ್ಟು ಬಂದರು.

ಅಧ್ಯಕ್ಷೆಯ ಸಾಮಾಜಿಕ ಕಾಳಜಿ ಕಂಡ ಕುಟುಂಬದವರು ಹಾಗೂ ಗ್ರಾಮಸ್ಥರು ಸನ್ಮಾನ ಮಾಡಿ ಕಳುಹಿಸಿದರು.

ಮುಷ್ಕರ: ಸಾರಿಗೆ ಸಂಚಾರ ಅಸ್ತವ್ಯಸ್ತ

ಒಂದನೇ ಪುಟದಿಂದ...

ಪ್ರಯಾಣಿಕರ ಪರದಾಟ: ಬೆಂಗಳೂರಿನಲ್ಲಿ ಬಿಎಂಟಿಸಿ ಬಸ್‌ಗಳು ರಸ್ತೆಗೆ ಇಳಿಯದ ಕಾರಣ ಜನತೆ ಅಕ್ಷರಶಃ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿತ್ತು. ಬಿಎಂಟಿಸಿಯ 145 ಬಸ್‌ಗಳು ಮಾತ್ರ ಬುಧವಾರ ಬೆರಳೆಣಿಕೆಯಷ್ಟು ಟ್ರಿಪ್ ಸಂಚರಿಸಿವೆ. ಮೆಟ್ರೊ ರೈಲಿನಲ್ಲಿ ಕೋವಿಡ್ ಮಾರ್ಗಸೂಚಿಯನ್ನು ಲೆಕ್ಕಿಸದೇ ನೂಕು ನುಗ್ಗಲಿನಲ್ಲಿ ಜನರು ಪ್ರಯಾಣಿಸಿದರು. ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಸ್ ಸೇವೆ ಸಂಪೂರ್ಣ ಸ್ಥಗಿತವಾಗಿತ್ತು.

ಆಟೊ ರಿಕ್ಷಾ, ಟ್ಯಾಕ್ಸಿಗಳಿಗೆ ಭಾರೀ ಬೇಡಿಕೆ ಸೃಷ್ಟಿಯಾಗಿತ್ತು. ಬಿಎಂಟಿಸಿ ಮಾರ್ಗಗಳಲ್ಲೂ ಖಾಸಗಿ ಬಸ್‌ಗಳನ್ನು ಓಡಿಸಲು ಸಾರಿಗೆ ಇಲಾಖೆ ಪ್ರಯತ್ನಿಸುತ್ತಿದೆ. ಆದರೆ, ಮೊದಲ ದಿನ ಖಾಸಗಿ ಬಸ್‌ಗಳ ಮಾಲೀಕರಿಂದ ನಿರೀಕ್ಷಿತ ಸ್ಪಂದನೆ ದೊರಕಿಲ್ಲ. ಕೆಲವೆಡೆ ಖಾಸಗಿ ಬಸ್‌ಗಳು ಸಂಚರಿಸಿದರೂ ಬಿಎಂಟಿಸಿ ಟಿಕೆಟ್ ದರವನ್ನು ಪಾಲಿಸಿಲ್ಲ ಎಂಬ ದೂರುಗಳಿವೆ.

ಸರ್ಕಾರಿ ಸಾರಿಗೆ ನಿಗಮಗಳ ಬಸ್‌ಗಳ ಸೌಲಭ್ಯ ಹೆಚ್ಚಿನ ಪ್ರಮಾಣದಲ್ಲಿ ಇರುವ ಜಿಲ್ಲೆಗಳಲ್ಲಿ ಮೊದಲ ದಿನವೇ ಸಮಸ್ಯೆ ಗೋಚರಿಸಿದೆ. ಕರಾವಳಿ ಜಿಲ್ಲೆಗಳು ಸೇರಿದಂತೆ ಖಾಸಗಿ ಬಸ್‌ಗಳ ಸೇವೆಯ ಪ್ರಾಬಲ್ಯ ಇರುವ ಜಿಲ್ಲೆಗಳಲ್ಲಿ ಹೆಚ್ಚೇನೂ ತೊಂದರೆ ಎದುರಾಗಿಲ್ಲ.

ವಿದ್ಯಾರ್ಥಿಗಳಿಗೆ ಸಂಕಷ್ಟ: ಸಾರಿಗೆ ನೌಕರರ ಮುಷ್ಕರ ಇರುವುದರಿಂದ ರಾಜ್ಯದ ಕೆಲವು ವಿಶ್ವವಿದ್ಯಾಲಯಗಳು ಮೊದಲೇ ನಿಗದಿಯಾಗಿದ್ದ ಪರೀಕ್ಷೆಗಳನ್ನು ಮುಂದೂಡಿವೆ. ಆದರೆ, ಮೈಸೂರು ವಿಶ್ವವಿದ್ಯಾಲಯ ಬುಧವಾರವೂ ಪರೀಕ್ಷೆಗಳನ್ನು ನಡೆಸಿತು. ಸಕಾಲಕ್ಕೆ ಬಸ್ ಸೌಲಭ್ಯ ಇಲ್ಲದೇ ವಿದ್ಯಾರ್ಥಿಗಳು ತೊಂದರೆ ಎದುರಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ಮೊದಲ ಮತ್ತು ಮೂರನೇ ವರ್ಷದ ಪದವಿ ತರಗತಿಗಳ ಪರೀಕ್ಷೆಗಳು ಗುರುವಾರದಿಂದ ಆರಂಭವಾಗಲಿವೆ. ಸಾರಿಗೆ ನೌಕರರ ಮುಷ್ಕರವಿದ್ದರೂ ಪರೀಕ್ಷೆಗಳು ನಿಗದಿಯಂತೆ ನಡೆಯಲಿವೆ ಎಂದು ವಿಶ್ವವಿದ್ಯಾಲಯದ ಆಡಳಿತ ಪ್ರಕಟಿಸಿದೆ.

‘ಪರ್ಯಾಯ ಸಾರಿಗೆ ವ್ಯವಸ್ಥೆಗೆ ಸಿದ್ಧ’

ವೇತನ ಹೆಚ್ಚಳಕ್ಕೆ ಕ್ರಮ ಪ್ರಕ್ರಿಯೆ ಆರಂಭಿಸಿದ್ದರೂ, ಸಾರಿಗೆ ನಿಗಮಗಳ ನೌಕರರು ಕೆಲವರ ಚಿತಾವಣೆಯಿಂದ ಮುಷ್ಕರ ಆರಂಭಿಸಿದ್ದಾರೆ. ಜನರಿಗೆ ತೊಂದರೆಯಾಗುವುದನ್ನು ತಪ್ಪಿಸಲು ಪರ್ಯಾಯ ಸಾರಿಗೆ ವ್ಯವಸ್ಥೆ ಕಲ್ಪಿಸಲು ಸಾರಿಗೆ ಇಲಾಖೆ ಸಿದ್ಧವಾಗಿದೆ ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಪರವಾನಗಿ ಹಿಂದಿರುಗಿಸಿದ್ದ ಖಾಸಗಿ ಪ್ರಯಾಣಿಕ ವಾಹನಗಳಿಗೆ ತೆರಿಗೆ ವಿನಾಯಿತಿಯೊಂದಿಗೆ ಸಂಚಾರಕ್ಕೆ ಅನುಮತಿ ನೀಡಲಾಗಿದೆ. ಮುಷ್ಕರದ ಅವಧಿಯಲ್ಲಿ ಸಾರಿಗೆ ಸೌಲಭ್ಯ ಒದಗಿಸುವ ಖಾಸಗಿ ಪ್ರಯಾಣಿಕ ವಾಹನಗಳಿಗೆ ರಹದಾರಿ (ಪರ್ಮಿಟ್) ಪಡೆಯುವುದರಿಂದಲೂ ವಿನಾಯಿತಿ ನೀಡಲಾಗಿದೆ. ಖಾಸಗಿ ಬಸ್‌ಗಳು ಸರ್ಕಾರಿ ಬಸ್ ನಿಲ್ದಾಣಗಳ ಬಳಕೆಗೂ ಅನುಮತಿ ನೀಡಿ ಆದೇಶ ಹೊರಡಿಸಲಾಗಿದೆ ಎಂದು ತಿಳಿಸಿದ್ದಾರೆ. ಟ್ಯಾಕ್ಸಿ, ಮಿನಿ ಬಸ್ ಮತ್ತು ಖಾಸಗಿ ಬಸ್‌ಗಳ ಮಾಲೀಕರ ಸಂಘದೊಂದಿಗೆ ಮಾತುಕತೆ ನಡೆಸಿದ್ದು, ಪರ್ಯಾಯ ಸಾರಿಗೆ ಒದಗಿಸಲು ಮನವಿ ಮಾಡಲಾಗಿದೆ. ಬೆಂಗಳೂರಿನಲ್ಲಿ ಮೆಟ್ರೊ ರೈಲು ಸಂಚಾರ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

₹ 17 ಕೋಟಿ ನಷ್ಟ?

ಸಾರಿಗೆ ನೌಕರರ ಮುಷ್ಕರದಿಂದ ರಾಜ್ಯ ಸರ್ಕಾರಿ ಸ್ವಾಮ್ಯದ ನಾಲ್ಕು ಸಾರಿಗೆ ನಿಗಮಗಳಿಗೆ ಮೊದಲ ದಿನವೇ ₹ 17 ಕೋಟಿ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ₹ 7 ಕೋಟಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ ₹ 3 ಕೋಟಿ ಹಾಗೂ ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ ಮತ್ತು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಿಗೆ ತಲಾ ₹ 3.5 ಕೋಟಿ ನಷ್ಟವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ಪ್ರಕ್ರಿಯೆ ಆರಂಭಿಸಲಾಗಿದೆ. ಚುನಾವಣಾ ಆಯೋಗ ಅನುಮತಿ ನೀಡಿದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು

ಲಕ್ಷ್ಮಣ ಸವದಿ, ಉಪ ಮುಖ್ಯಮಂತ್ರಿ

‘ಮುಷ್ಕರ ಮುಂದುವರಿಯಲಿದೆ’

ಮುಷ್ಕರ ಗುರುವಾರವೂ ಮುಂದುವರಿಯಲಿದೆ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಿಕೊಂಡೇ ಹೋರಾಟ ಮುಂದುವರಿಸಲಾಗುವುದು ಎಂದು ಸಾರಿಗೆ ನೌಕರರ ಒಕ್ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ತಿಳಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಠ, ಮಂದಿರಗಳಿಗೆ ಕೋಟಿಗಟ್ಟಲೆ ಹಣ ನೀಡುವ ಸರ್ಕಾರ, ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ಕೋವಿಡ್ ಸಂಕಷ್ಟದ ಕಾರಣ ಹೇಳುತ್ತಿದೆ. ನೌಕರರಿಗೆ ಮಾರ್ಚ್ ತಿಂಗಳ ವೇತನವನ್ನೂ ನೀಡಿಲ್ಲ’ ಎಂದರು.

ಮಾತುಕತೆಗೆ ಆಗ್ರಹ: ರಾಜ್ಯ ಸರ್ಕಾರ ನೌಕರರನ್ನು ತಕ್ಷಣವೇ ಮಾತುಕತೆಗೆ ಆಹ್ವಾನಿಸಿ, ಸಮಸ್ಯೆ ಇತ್ಯರ್ಥಪಡಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್ ಒತ್ತಾಯಿಸಿದ್ದಾರೆ.

‘ಕ್ಯಾಚ್ ದ ರೈನ್’ ಯೋಜನೆಗೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವ್ಯರ್ಥವಾಗುವ ಮಳೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವ ‘ಕ್ಯಾಚ್‌ದ ರೈನ್’ ವಿನೂತನ ಯೋಜನೆಯನ್ನು ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಜಾರಿ ಮಾಡಲಾಗುತ್ತಿದ್ದು, ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ನರೇಂದ್ರ ಶರ್ಮ ಅವರು ಇದೇ 9ರಂದು ಹುಬ್ಬಳ್ಳಿಯಲ್ಲಿ ಯೋಜನೆಗೆ ಚಾಲನೆ ನೀಡಲಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ‘ಈ ಯೋಜನೆಯಲ್ಲಿ ಕೆರೆಕಟ್ಟೆಗಳು, ಹಳ್ಳ-ಕೊಳ್ಳಗಳು, ಚೆಕ್‌ಡ್ಯಾಂ, ಬೋರ್‌ವೆಲ್ ಸೇರಿದಂತೆ ಮತ್ತಿತರ ಕಡೆ ಇಂಗು ಗುಂಡಿಗಳ ಮೂಲಕ ಮಳೆ ನೀರು ಸಂಗ್ರಹಿಸಲಾಗುವುದು. ವಿಧಾನಸಭಾ ಕ್ಷೇತ್ರಗಳಲ್ಲಿ ಈ ಯೋಜನೆಗೆ ಶಾಸಕರು ಚಾಲನೆ ನೀಡಲಿದ್ದಾರೆ’ ಎಂದರು.

‘100 ದಿನದಲ್ಲಿ ಎಲ್ಲ ಕ್ಷೇತ್ರಗಳಿಗೂ ಯೋಜನೆ ತಲುಪಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಜೂನ್, ಜುಲೈ ತಿಂಗಳಲ್ಲಿ ಮಳೆಗಾಲ ಆರಂಭ ಆಗುವುದರಿಂದ ಆ ಸಂದರ್ಭದಲ್ಲಿ ಕಾಮಗಾರಿ ನಡೆಸಲು ಸಾಧ್ಯವಿಲ್ಲ. ಹೀಗಾಗಿ, ಎಷ್ಟು ಸಾಧ್ಯವೋ ಅಷ್ಟು ಬೇಗ ಕೆಲಸ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ’ ಎಂದರು.

‘ರಾಜ್ಯಪಾಲರಿಂದ ಸ್ಪಷ್ಟೀಕರಣ ಕೇಳಿದ್ದೆ, ದೂರು ಕೊಟ್ಟಿಲ್ಲ’

ಯಡಿಯೂರಪ್ಪ ನಮ್ಮ ನಾಯಕ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಬದಲಾವಣೆ ಆಗುವುದಿಲ್ಲ ಎಂಬ ವಿಶ್ವಾಸ ಇದೆ. ಈಗಲೂ ನಮಗೆ ಅವರೇ ನಾಯಕ’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಇನ್ನೊಂದು ಇಲಾಖೆಯನ್ನು ಮುಖ್ಯಮಂತ್ರಿ ನೇರವಾಗಿ ನಿಭಾಯಿಸಲು ಬರುವುದಿಲ್ಲ. ಆದರೆ, ಹಣ ಬಿಡುಗಡೆ ಮಾಡಬಹುದು. ರಾಜ್ಯಪಾಲರು ಗುಜರಾತ್‌ನಲ್ಲಿ ಹಣಕಾಸು ಸಚಿವರಾಗಿದ್ದವರು. ಹೀಗಾಗಿ, ಈ ಬಗ್ಗೆ ಸ್ಪಷ್ಟೀಕರಣಕ್ಕಾಗಿ ಅವರ ಬಳಿ ಹೋಗಿದ್ದೆ. ಯಡಿಯೂರಪ್ಪನವರ ವಿರುದ್ಧ ದೂರು ಕೊಟ್ಟಿಲ್ಲ. ಮುಂದೆಯೂ ಕೊಡುವುದಿಲ್ಲ’ ಎಂದರು.



‘ಸಿ.ಟಿ. ರವಿ ಪಕ್ಷದ ನಾಯಕರು. ಈ ವಿಷಯವನ್ನು ಅವರ ಗಮನಕ್ಕೆ ತಾರದೆ ದೇವೇಗೌಡರಿಗೆ, ಡಿ.ಕೆ. ಶಿವಕುಮಾರ್‌ಗೆ ಹೇಳಲು ಆಗುತ್ತಾ? ಅಮಿತ್ ಶಾ, ಸಿ.ಟಿ ರವಿ, ಅರುಣ್ ಸಿಂಗ್ ನಮ್ಮ ಪಕ್ಷದ ಕುಟುಂಬದವರು. ಕುಟುಂಬ ಅಂದಾಗ ಇಲಾಖೆಯಲ್ಲಿ ಆದ ವಿಷಯದ ಬಗ್ಗೆ ಅವರ ಗಮನಕ್ಕೆ ತಂದಿದ್ದೇನೆ. ಇದು ಬಿಟ್ಟು ನಾನು ಯಾರಿಗೂ ದೂರು ಕೊಟ್ಟಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಸತ್ಯ ಕಂಡಾಗ ನಾನು ಮುನ್ನುಗ್ಗುವವನು. ಕುತ್ತಿಗೆ ಕೊಯ್ದರೂ ದಾರಿ ತಪ್ಪುವುದಿಲ್ಲ. ನಾನು ನಮ್ಮ ರಾಷ್ಟ್ರೀಯ ನಾಯಕರನ್ನು ಭೇಟಿ ಮಾಡಲು ಯಾವನದ್ದಾದರೂ ಅನುಮತಿ ಪಡೆಯಬೇಕಾ’ ಎಂದೂ ಪ್ರಶ್ನಿಸಿದರು.

‘ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಸೂಕ್ತ ದಾಖಲೆ ಕೊಟ್ಟು ಮಾತಾಡಬೇಕು. ಅದು ಬಿಟ್ಟು ಸುಮ್ಮನೆ ಏನೇನೋ ಮಾತನಾಡುವುದು ಸರಿಯಲ್ಲ’ ಎಂದರು.

ಈಶ್ವರಪ್ಪ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬ ವಿರೋಧ ಪಕ್ಷ ನಾಯಕ ಸಿದ್ದರಾಮಯ್ಯ ಮಾತಿಗೆ ತಿರುಗೇಟು ನೀಡಿದ ಈಶ್ವರಪ್ಪ, ‘ಕಥೆ ಕಟ್ಟುವುದರಲ್ಲಿ ಸಿದ್ದರಾಮಯ್ಯ ನಿಸ್ಸೀಮ. ಅವರಿಗೆ ಜ್ಞಾನಪೀಠ ಪ್ರಶಸ್ತಿಯೊ ಅಥವಾ ನೊಬೆಲ್ ಪ್ರಶಸ್ತಿಯೊ ಕೊಡಬೇಕು. ಅವರಿಗೆ ಮಾಡಲು ಯಾವುದೇ ಉದ್ಯೋಗ ಇಲ್ಲ’ ಎಂದರು.

‘ಸಿದ್ದರಾಮಯ್ಯ ಅವರನ್ನು ಅವರ ಪಕ್ಷವೇ ತಿರಸ್ಕರಿಸಿದೆ. ಮುಖ್ಯಮಂತ್ರಿ ಸ್ಥಾನ ಕಳೆದುಕೊಂಡ ಮೇಲೆ ಅವರಿಗೆ ಹುಚ್ಚು ಹಿಡಿದಿದೆ. ಮೈಸೂರು ಮೇಯರ್ ಚುನಾವಣೆಯಲ್ಲಿ ಅವರ ಸ್ಥಿತಿ ನೋಡಿದ್ದೇವೆ. ನಾನು ರಾಜೀನಾಮೆ ಕೊಡಬೇಕಾ? ಅವರು ಕೊಡಬೇಕಾ? ಎಂಬುದನ್ನು ಮೊದಲು ನಿರ್ಧರಿಸಲಿ’ ಎಂದರು.

ಮೇ 2ರ ನಂತರ ಯಡಿಯೂರಪ್ಪ ಬದಲಾವಣೆ ಖಚಿತ: ಯತ್ನಾಳ್

‘ಫೆಡರಲ್ ಬ್ಯಾಂಕ್ ವ್ಯವಹಾರ: ವಿಜಯೇಂದ್ರ ವಿಚಾರಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇ 2ರ ನಂತರ ಮುಖ್ಯಮಂತ್ರಿ ಸ್ಥಾನದಿಂದ ಯಡಿಯೂರಪ್ಪ ಬದಲಾವಣೆ ಖಚಿತ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಮತ್ತೊಮ್ಮೆ ಗುಡುಗಿದ್ದಾರೆ.

ವಿಧಾನಸೌಧದಲ್ಲಿ ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, ‘ಇನ್ನು ಕೆಲವೇ ದಿನಗಳಲ್ಲೇ ಅಪ್ಪ (ಯಡಿಯೂರಪ್ಪ), ಮಗನ (ವಿಜಯೇಂದ್ರ) ನಿಜ ಬಣ್ಣ ಬಯಲಾಗಲಿದೆ. ವಿಜಯೇಂದ್ರ ಎಷ್ಟು ಲೂಟಿ ಮಾಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಫೆಡರಲ್ ಬ್ಯಾಂಕ್ ವ್ಯವಹಾರದಲ್ಲಿ ವಿಜಯೇಂದ್ರ ಅವರನ್ನು ಜಾರಿ ನಿರ್ದೇಶನಾಲಯದವರು (ಇ.ಡಿ) ಕರೆದುಕೊಂಡು ಹೋಗಿಲ್ಲ ಎಂದು ಹೇಳಲಿ. ನಾನು ಅವರಿಗೆ ಸವಾಲು ಹಾಕ್ತೇನೆ’ ಎಂದರು.

‘ಡಿ.ಕೆ. ಶಿವಕುಮಾರ್ ಅವರನ್ನು ಇ.ಡಿಯವರು ಕರೆದುಕೊಂಡು ಹೋಗಿ ವಿಚಾರಣೆ ಮಾಡಿದ್ದರಲ್ಲ, ಅಲ್ಲಿಗೇ ವಿಜಯೇಂದ್ರ ಅವರನ್ನೂ ಕರೆದುಕೊಂಡು ಹೋಗಿ ವಿಚಾರಣೆ ಮಾಡಿದ್ದಾರೆ. ಸೂಟು-ಬೂಟು ಹಾಕೊಂಡು ಹೋಗಿದ್ದರು. ಅದೆನ್ನೆಲ್ಲಾ ಬಿಚ್ಚಿಸಿ, ಡಿ.ಕೆ. ಶಿವಕುಮಾರ್ ಥರ ವಿಚಾರಣೆ ಮಾಡಿದ್ದಾರೆ. ಇದೆಲ್ಲವೂ ಸ್ವಲ್ಪ ದಿನಗಳಲ್ಲೇ ಗೊತ್ತಾಗಲಿದೆ’ ಎಂದು ಯತ್ನಾಳ್ ಹೇಳಿದರು.

‘ಯಾರೋ ಒಬ್ಬರು ಚಿಲ್ಲರೆ–ಪಲ್ಲರೆಗಳ ಕೈಯಲ್ಲಿ ಮಾತನಾಡಿಸುತ್ತಾರೆ. ತಾಕತ್ತಿದ್ದರೆ ನನ್ನ ಬಗ್ಗೆ ಅಪ್ಪ- ಮಗ ಮಾತನಾಡಲಿ’ ಎಂದು ಯಡಿಯೂರಪ್ಪ ಮತ್ತು ವಿಜಯೇಂದ್ರಗೆ ಸವಾಲು ಹಾಕಿದ ಯತ್ನಾಳ್, ‘ಯಾರ ಯಾರ ನಾಯಕತ್ವ ಎಷ್ಟೆಷ್ಟು ಎನ್ನುವುದು ಗೊತ್ತಾಗುತ್ತದೆ’ ಎಂದರು.

ಪಕ್ಷದ ವೇದಿಕೆಯಲ್ಲಿ ಮಾತನಾಡುವಂತೆ ಈಶ್ವರಪ್ಪ ನೀಡಿದ ಸಲಹೆಗೆ ಪ್ರತಿಕ್ರಿಯಿಸಿದ ಯತ್ನಾಳ್, ‘ಪಕ್ಷದ ವೇದಿಕೆ ಅನ್ನೋದು ಏನು? ರಾಜ್ಯಪಾಲರ ಕಚೇರಿಯಾ’ ಎಂದು ಪ್ರಶ್ನಿಸುವ ಮೂಲಕ ಪರೋಕ್ಷವಾಗಿ ತಿರುಗೇಟು ನೀಡಿದರು.

‘ಏಪ್ರಿಲ್ 17ರ ನಂತರ ಯಡಿಯೂರಪ್ಪ ವಿರುದ್ಧ ಕೆಲವು ಶಾಸಕರು, ಸಚಿವರು ರೊಚ್ಚಿಗೇಳುವವರಿದ್ದಾರೆ. ಸೂರ್ಯ ಚಂದ್ರ ಇರುವವರೆಗೆ ಯಡಿಯೂರಪ್ಪ ಅವರೇ ಮುಖ್ಯಮಂತ್ರಿ ಅಂದ್ರೆ ಏನರ್ಥ? ಅವರ ಕುಟುಂಬದವರಿಗೇನಾದರೂ ರಾಜ್ಯವನ್ನು ಬರೆದುಕೊಟ್ಟಿದ್ದಾರಾ? ಪಕ್ಷದ ಸಿದ್ಧಾಂತದ ಅನ್ವಯ 2 ವರ್ಷ ಅವಕಾಶ ಕೊಟ್ಟಿದ್ದೇ ದೊಡ್ಡದು’ ಎಂದೂ ಹೇಳಿದರು.

ಪಡಿತರ ಅಕ್ಕಿ ಕಳ್ಳಸಾಗಣೆ: ಲಾರಿ ಮಾಲೀಕನ ಬಂಧನ

ಒಂದನೇ ಪುಟದಿಂದ...

‘ಪ್ರಕರಣ ದಾಖಲಾದ ದಿನದಿಂದಲೂ ಆರೋಪಿ ತಲೆಮರೆಸಿಕೊಂಡಿದ್ದರು. ಕೋಲಾರ ಗ್ರಾಮಾಂತರ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಕಿರಣ್‌ಕುಮಾರ್ ನೇತೃತ್ವದ ತಂಡ ಖಚಿತ ಮಾಹಿತಿ ಆಧರಿಸಿ ಮಂಗಳವಾರ ಬೆಂಗಳೂರಿನಲ್ಲಿ ಬಂಧಿಸಿದೆ. ಆರೋಪಿಯನ್ನು ಬುಧವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮತ್ತಷ್ಟು ಆರೋಪಿಗಳಿಗೆ ಶೋಧ: ಪ್ರಕರಣದಲ್ಲಿ ಪಡಿತರ ಅಕ್ಕಿಯನ್ನು ಬೆಂಗಳೂರಿನಲ್ಲಿ ಉಗ್ರಾಣದಿಂದ ಪೂರೈಕೆ ಮಾಡಿದ್ದ ವ್ಯಕ್ತಿ, ಅದನ್ನು ಖರೀದಿಸಿ ಬಂಗಾರಪೇಟೆಗೆ ಸಾಗಿಸುತ್ತಿದ್ದವರು ಹಾಗೂ ಅಲ್ಲಿ ಖರೀದಿಸುತ್ತಿದ್ದ ವ್ಯಕ್ತಿಯ ಪತ್ತೆಗೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಕೆಲವು ಆರೋಪಿಗಳಿಗೆ ಶೋಧ ನಡೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಪ್ರಮುಖ ವಿಷಯವಾಗಿ ವಿಜ್ಞಾನ ಮತ್ತು ತಂತ್ರಜ್ಞಾನ

ಸ್ವಯಂ ಅಧ್ಯಯನ ಎಂಬ ರಹದಾರಿ

> ಪರೀಕ್ಷೆಯ ಸಫಲತೆಯಲ್ಲಿ ತರಬೇತಿಯ ಮಾರ್ಗ ಸೂಕ್ತವೋ ಅಥವಾ ಸ್ವಯಂ ಅಧ್ಯಯನ ಸೂಕ್ತವೂ ಎಂಬ ಚರ್ಚೆ ಅಪ್ರಸ್ತುತ. ತರಬೇತಿಯ ಜೊತೆಗೆ ನಿಮ್ಮ ನಿರಂತರ ಅಭ್ಯಾಸ, ಸತತ ಪರಿಶ್ರಮ ಸೇರಿದಾಗ ಮಾತ್ರ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ.

ಅರುಣ ಬ. ಚೂರಿ

ಸ್ಪರ್ಧಾತ್ಮಕ ಪರೀಕ್ಷೆಯ ತಯಾರಿ ವಿಷಯಕ್ಕೆ ಬಂದರೆ ಒಂದು ಸ್ವಯಂ ಅಧ್ಯಯನ ಮತ್ತೊಂದು ತರಬೇತಿಯೊಂದಿಗೆ ಅಧ್ಯಯನ. ಈ ಲೇಖನದಲ್ಲಿ ಸ್ವಯಂ ಅಧ್ಯಯನದ ಮಹತ್ವ ಹಾಗೂ ಅನುಕೂಲತೆಗಳ ಬಗ್ಗೆ ತಿಳಿಯೋಣ.

ತರಬೇತಿ ಆಯ್ಕೆ ಅಷ್ಟೇ, ಅನಿವಾರ್ಯವಲ್ಲ

ಮೊಟ್ಟ ಮೊದಲು ನೀವು ಪ್ರಥಮ ಬಾರಿ ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಬೇಕಾದರೂ ತರಬೇತಿ ಅತ್ಯವಶ್ಯ ಎಂಬ ಮನೋಭಾವನೆಯಿಂದ ಹೊರ ಬನ್ನಿ. ನೀವು ಎದುರಿಸುತ್ತಿರುವ ಪರೀಕ್ಷೆ ಪ್ರಥಮ ಬಾರಿಯದ್ದಾಗಿರಲಿ ಅಥವಾ ಪುನರಾವರ್ತನೆಯದ್ದಾಗಿರಲಿ, ನಿಮ್ಮ ಪ್ರಯತ್ನ ಸಮರ್ಪಕವಾಗಿ ಇದ್ದಾಗ ಮಾತ್ರ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಾಧ್ಯ. ಪರೀಕ್ಷೆಯ ಸಫಲತೆಯಲ್ಲಿ ತರಬೇತಿಯ ಮಾರ್ಗ ಸೂಕ್ತವೋ ಅಥವಾ ಸ್ವಯಂ ಅಧ್ಯಯನ ಸೂಕ್ತವೋ ಎಂಬ ಚರ್ಚೆ ಅಪ್ರಸ್ತುತ. ಅಷ್ಟಕ್ಕೂ ತರಬೇತಿಯಿಂದ ದೊರೆಯುವುದು ಮೂಲಭೂತ ಜ್ಞಾನ, ಪೂರ್ತಿ ಪಠ್ಯಕ್ರಮವನ್ನು ಒಳಗೊಂಡ ಕೆಲವು ಪ್ರಶ್ನೆಗಳಿಗೆ ಉತ್ತರಿಸುವ ಮಾರ್ಗದರ್ಶನ ಹಾಗೂ ಅಧ್ಯಯನ ಸಾಮಗ್ರಿಗಳು ಮಾತ್ರವೇ ಹೊರತು ಅದರ ಜೊತೆಗೆ ನಿಮ್ಮ ನಿರಂತರ ಅಭ್ಯಾಸ, ಸತತ ಪರಿಶ್ರಮ ಸೇರಿದಾಗ ಮಾತ್ರ ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಸಾಧ್ಯ.

ಮೋಟಿವೇಟ್– ಮಾಕ್‌ಟೆಸ್ಟ್– ಮಿಸ್ಟೇಕ್ (ಎಂಎಂಎಂ)

- **ಮೋಟಿವೇಟ್:** ಆನ್‌ಲೈನ್ ಅಧ್ಯಯನಕ್ಕೆ ಅತ್ಯವಶ್ಯವಾಗಿ ಇರುವುದು ಸ್ವಯಂ ಪ್ರೇರಣೆ. ಇಲ್ಲಿ ಯಾರೂ ಸಹ ನಿಮ್ಮ ಗುರಿ ಪೂರ್ಣಗೊಳಿಸಲು ಪ್ರೇರೇಪಿಸುವುದಿಲ್ಲ. ಬದಲಾಗಿ ನೀವೇ ನಿಮ್ಮ ದಿನದ, ವಾರದ ಹಾಗೂ ತಿಂಗಳಿನ ಅಧ್ಯಯನವನ್ನು ಹಂತಹಂತವಾಗಿ ಪೂರ್ತಿಗೊಳಿಸಬೇಕು.
- **ಮಾಕ್‌ಟೆಸ್ಟ್:** ಪಠ್ಯಕ್ರಮ ಅನುಸಾರ ಅಧ್ಯಯನ ಮುಗಿದ ನಂತರ ಮಾದರಿ ಪ್ರಶ್ನೆ ಪತ್ರಿಕೆಗಳು ಹಾಗೂ ಹಿಂದಿನ ವರ್ಷಗಳ ಪ್ರಶ್ನೆಪತ್ರಿಕೆಗಳಿಗೆ ಸಮಯ ಮಿತಿಯೊಂದಿಗೆ ಉತ್ತರಿಸಬೇಕು. ನಂತರ ನೀವು ಉತ್ತರಿಸಿದ ಮಾದರಿ ಪ್ರಶ್ನೆಪತ್ರಿಕೆಯನ್ನು ಅವಲೋಕಿಸಬೇಕು. ಫಲಿತಾಂಶ ನಿಮ್ಮ ದೌರ್ಬಲ್ಯ ಹಾಗೂ ಪ್ರಾಬಲ್ಯವನ್ನು ತೋರಿಸುವುದರ ಮುಖಾಂತರ ನೀವು ಯಾವ ವಿಷಯದಲ್ಲಿ ಇನ್ನಷ್ಟು ಅಭ್ಯಾಸ ನಡೆಸಬೇಕು ಎಂಬುದನ್ನು ಸ್ಕೋರ್ ಮುಖಾಂತರ ತಿಳಿಸುತ್ತದೆ. ಇದಲ್ಲದೇ ಪ್ರಶ್ನೆಪತ್ರಿಕೆಯ ಕ್ಲಿಷ್ಟತೆಯ ಮಟ್ಟ (ಸುಲಭ, ಮಧ್ಯಮ ಅಥವಾ ಕ್ಲಿಷ್ಟ) ಯಾವುದು? ಹಾಗೂ ಫಲಿತಾಂಶದಲ್ಲಿ ನಿಮ್ಮ ಸ್ಥಾನ ಎಷ್ಟು.. ಹೀಗೆ ಬಹುತೇಕ ಎಲ್ಲಾ ಆಯಾಮಗಳಲ್ಲಿ ನಿಮ್ಮ ಫಲಿತಾಂಶದ ವಿಶ್ಲೇಷಣೆ ದೊರಕುತ್ತದೆ. ಹೀಗಾಗಿ ದಿನಕ್ಕೆ ಕನಿಷ್ಠ ಎರಡು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ತೆಗೆದುಕೊಂಡು ಅವಲೋಕಿಸುವುದು ಬಹಳ ಮುಖ್ಯ.
- **ಮಿಸ್ಟೇಕ್:** ತಪ್ಪುಗಳಿಂದ ಕಲಿಯಿರಿ. ಇದು ಸ್ವಯಂ ಅಧ್ಯಯನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಅಧ್ಯಯನದಲ್ಲಿ ಅಥವಾ ಮಾದರಿ ಪ್ರಶ್ನೆಪತ್ರಿಕೆ ಬಿಡಿಸುವಾಗ ಸಣ್ಣ ಅಥವಾ ದೊಡ್ಡ ತಪ್ಪು ಮಾಡಿದಾಗ ಅದರಿಂದ ಎದೆಗುಂದದೆ ಸ್ವಯಂ ಅಧ್ಯಯನ ಅಸಾಧ್ಯ ಎಂದು ಕೈ ಚೆಲ್ಲದಿರಿ. ಬದಲಾಗಿ ಫಲಿತಾಂಶದಲ್ಲಿ ದೊರಕುವ ಉತ್ತರದ ವಿವರಣೆಯನ್ನು ನೋಡಿ ಇನ್ನೂ ಅರ್ಥವಾಗದಿದ್ದಲ್ಲಿ ಡೌಟ್ ಸೆಷನ್ ಅಥವಾ 24x7 ಅಧ್ಯಯನ ಗ್ರೂಪ್‌ನಲ್ಲಿ ನಿಮ್ಮ ಪ್ರಶ್ನೆಗಳನ್ನು ಪೋಸ್ಟ್ ಮಾಡಿ ವಿವರವಾದ ಉತ್ತರವನ್ನು ಪಡೆದುಕೊಳ್ಳಿ. ಇದರಿಂದ ಈ ತಪ್ಪುಗಳು ಮತ್ತೊಮ್ಮೆ ನಿಮ್ಮಿಂದ ಜರುಗಲು ಸಾಧ್ಯವಿಲ್ಲ. ಕಾರಣ ಅದಕ್ಕೆ ವ್ಯಯಿಸಿದ ಸಮಯ ಹಾಗೂ ಗ್ರೂಪ್‌ನಿಂದ ಹೆಚ್ಚು ಜನ ನೀಡಿದ ಸವಿವರವಾದ ಉತ್ತರಗಳು ನೀವು ಇನ್ನೊಮ್ಮೆ ಅಂತಹ ತಪ್ಪು ಮಾಡದಂತೆ ತಡೆಯುತ್ತವೆ.

ಆನ್‌ಲೈನ್ ಕೋರ್ಸ್‌ಗಳ ಜಾಣ್ಮೆಯ ಆಯ್ಕೆ

ಇಂದಿನ ಆನ್‌ಲೈನ್ ಯುಗದಲ್ಲಿ ತರಬೇತಿಯ ಸಹಾಯವಿಲ್ಲದೆ ಕೇವಲ ಉಚಿತ ಅಥವಾ ಶುಲ್ಕ ಸಹಿತ ಕೋರ್ಸ್‌ಗಳ ಸಹಾಯದಿಂದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಬಹುದು. ಹಾಗೆಂದ ಮಾತ್ರಕ್ಕೆ ಕೇವಲ ಶಾರ್ಟ್ ಟ್ರಿಕ್ ಮೊರೆ ಹೋದರೆ ಸಾಲದು. ವಿದ್ಯಾರ್ಥಿಗಳು ಆನ್‌ಲೈನ್ ಶುಲ್ಕ ಸಹಿತ ಕೋರ್ಸ್‌ಗಳನ್ನು ಖರೀದಿಸುವಾಗ ಕೇವಲ ತಾವು ಎದುರಿಸಬೇಕಾದ ಪರೀಕ್ಷಾ ಕೋರ್ಸ್‌ಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕೇ ಹೊರತು ಕಾಂಬೋ ಅಥವಾ ಡಿಸ್ಕೌಂಟ್ ಎಂಬ ನೆಪದಲ್ಲಿ ನೀವು ತಯಾರಿ ನಡೆಸದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಸೂಕ್ತವಲ್ಲ. ಉದಾಹರಣೆಗೆ ಬ್ಯಾಂಕಿಂಗ್ + ರೈಲ್ವೆ + ಎಸ್‌ಎಸ್‌ಸಿ. ಇದರಿಂದ ನಿಮ್ಮ ಹಣವು ವ್ಯರ್ಥ ಹಾಗೂ ನೀವು ಬ್ಯಾಂಕಿಂಗ್ ಪರೀಕ್ಷೆಗೆ ತಯಾರಿ ನಡೆಸಿದ್ದಲ್ಲಿ ಒಂದು ವೇಳೆ ನಿಮ್ಮ ಪ್ರಥಮ ಪ್ರಯತ್ನ ವಿಫಲವಾದಲ್ಲಿ ಇತರೆ ಪರೀಕ್ಷೆಗಳು ಎದುರಾದಾಗ ನಿಮ್ಮ ಹತ್ತಿರ ಇರುವ ಅಧ್ಯಯನ ಸಾಮಗ್ರಿಗಳ ಕಾರಣದಿಂದ ನೀವು ಇತರೆ ಪರೀಕ್ಷೆಗಳತ್ತ ಒಲವು ತೋರಿಸಬಹುದು. ಆಗ ನಿಮ್ಮ ಗುರಿ ಕೇಂದ್ರೀಕೃತವಾಗಿರದ ಕಾರಣ ಯಾವುದೇ ಒಂದು ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅಸಾಧ್ಯ. ಆದ್ದರಿಂದ ನಿಮಗೆ ಸೂಕ್ತವೆನಿಸುವ ಕೇವಲ ಒಂದು ಗುರಿಯನ್ನು ಆಯ್ಕೆ ಮಾಡಿಕೊಂಡು ಅದರತ್ತ ನಿಮ್ಮ ಅಭ್ಯಾಸವನ್ನು ಕೇಂದ್ರೀಕೃತಗೊಳಿಸಿ.

ಆನ್‌ಲೈನ್ ಅಧ್ಯಯನದ ಬಹು ಮುಖ್ಯ ಪ್ರಯೋಜನವೆಂದರೆ ಇದರಲ್ಲಿ ಪ್ರತಿದಿನದ ಹಾಗೂ ವಾರದ ಮತ್ತು ತಿಂಗಳಿನ ವಿಷಯದ ಗುರಿಗಳನ್ನು ಪಠ್ಯಕ್ರಮ ಅನುಸಾರವಾಗಿ ನಿಗದಿಪಡಿಸಿರುತ್ತಾರೆ. ಇವುಗಳನ್ನು ನೀವು ನಿಗದಿಯಂತೆ ಪೂರ್ಣಗೊಳಿಸುತ್ತಾ ಬಂದರೆ ಸಾಕು, ನಿಮ್ಮ ಸಂಪೂರ್ಣ ಅಧ್ಯಯನ ಪಠ್ಯಕ್ರಮ ಅನುಸಾರವಾಗಿ ಪೂರ್ಣಗೊಳ್ಳುತ್ತದೆ. ಇದಲ್ಲದೆ ಯಾವುದೇ ಕಾನ್ಸೆಪ್ಟ್‌ಗೆ ಸಂಬಂಧಿಸಿದಂತೆ ಅಥವಾ ಯಾವುದೇ ಪ್ರಶ್ನೆಗಳಿಗೆ ಉತ್ತರ ದೊರೆಯದೇ ಇದ್ದರೆ ಆನ್‌ಲೈನ್ ಸಂಶಯ ನಿವಾರಣೆ ಸೆಷನ್‌ಗಳ ಮೂಲಕ ಉತ್ತರ ಪಡೆಯಬಹುದು ಅಥವಾ ವಾಟ್ಸ್‌ಆ್ಯಪ್ ಮುಂತಾದ 24x7 ಅಧ್ಯಯನ ಗ್ರೂಪ್‌ಗಳಲ್ಲಿ ತಮ್ಮ ಪ್ರಶ್ನೆಗಳನ್ನು ಪೋಸ್ಟ್ ಮಾಡುವುದರ ಮುಖಾಂತರ ತಕ್ಷಣ ವಿವರವಾದ ಉತ್ತರಗಳನ್ನು ಪಡೆಯಬಹುದು.

ಆನ್‌ಲೈನ್ v/s ಆಫ್‌ಲೈನ್ ತರಬೇತಿಯ ವೆಚ್ಚ

ಈಗಿರುವ ಕೋವಿಡ್-19 ಸಂದರ್ಭದಲ್ಲಿ ತರಬೇತಿಗಾಗಿ ಬೇರೊಂದು ಸ್ಥಳಕ್ಕೆ ಬಂದು ನೆಲೆಸಿ ಪಿಜಿ ಅಥವಾ ಕೊಠಡಿ ಬಾಡಿಗೆಗಾಗಿ ಹಣ, ತರಬೇತಿಯ ವೆಚ್ಚ, ಪ್ರಯಾಣದ ಖರ್ಚು ಹಾಗೂ ಇನ್ನಿತರ ವೆಚ್ಚಗಳನ್ನೆಲ್ಲ ಗಮನಿಸಿದರೆ ಈ ವೆಚ್ಚ ಗುಣಮಟ್ಟದ ಆನ್‌ಲೈನ್ ಶುಲ್ಕ ಸಹಿತ ಕೋರ್ಸ್‌ಗಿಂತಲೂ ಅಧಿಕ. ಅಲ್ಲದೆ ಸದ್ಯದ ಪರಿಸ್ಥಿತಿಯಲ್ಲಿ ಸುರಕ್ಷಿತ ಕೂಡ ಅಲ್ಲ.

ಬಿ.ಎನ್. ಸುರೇಶ್

ಸಾಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯವು ಯುಪಿಎಸ್‌ಸಿ ಪರೀಕ್ಷೆ ಮಾತ್ರವಲ್ಲ, ಕೆಪಿಎಸ್‌ಸಿಯ ವಿವಿಧ ಹುದ್ದೆಗಳ ಪರೀಕ್ಷೆಗಳಲ್ಲಿಯೂ ಪ್ರಮುಖ ವಿಷಯವಾಗಿದೆ. ವಿಜ್ಞಾನ ವಿಷಯದಿಂದ ನಾಗರಿಕ ಸೇವಾ ಪೂರ್ವಭಾವಿ ಪರೀಕ್ಷೆಯಲ್ಲಿ 10 ರಿಂದ 20 ಪ್ರಶ್ನೆಗಳು ಬರುತ್ತವೆ. ಮುಖ್ಯ ಪರೀಕ್ಷೆಯ ಸಾಮಾನ್ಯ ಜ್ಞಾನ ಪತ್ರಿಕೆ-3 ವಿವರಣಾತ್ಮಾಕ ಪತ್ರಿಕೆಗೆ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯದ ತಯಾರಿ ನಡೆಸಬೇಕಾಗುತ್ತದೆ.

ಇತ್ತೀಚೆಗೆ ನಡೆದ ಪೊಲೀಸ್ ಸಬ್-ಇನ್‌ಸ್ಪೆಕ್ಟರ್ ಮತ್ತು ಎಫ್‌ಡಿಎ ಪರೀಕ್ಷೆಗಳಲ್ಲಿ 30ಕ್ಕಿಂತ ಅಧಿಕ ಸಂಖ್ಯೆಯ ಪ್ರಶ್ನೆಗಳು ವಿಜ್ಞಾನ ವಿಷಯದಿಂದ ಬಂದಿರುವುದು 'ಟ್ರೆಂಡ್ ಬ್ರೇಕರ್' ಎಂದೇ ಹೇಳಬಹುದು. ಕಳೆದೆರಡು ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ನೋಡಿದರೆ, ಯಾರೂ ಊಹಿಸಲಾಗದಷ್ಟು ಪ್ರಶ್ನೆಗಳು ವಿಜ್ಞಾನ ವಿಷಯದಿಂದ ಬಂದಿರುವುದು ಗಮನಾರ್ಹ ಬದಲಾವಣೆ. ಇದು ಮುಂಬರುವ ಪರೀಕ್ಷೆಗಳಲ್ಲಿ ಈ ವಿಷಯಕ್ಕೆ ನೀಡಬೇಕಾದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.

ವಿಜ್ಞಾನ ವಿಷಯವನ್ನು ಆಳವಾಗಿ ವಿಶ್ಲೇಷಿಸುತ್ತಾ ಹೋದರೆ ಇದನ್ನು ಐದು ಪ್ರಮುಖ ಭಾಗಗಳಾಗಿ ವಿಂಗಡಿಸಬಹುದು.

1) ಜೀವ ವಿಜ್ಞಾನ 2) ಭೌತ ವಿಜ್ಞಾನ 3) ರಸಾಯನ ವಿಜ್ಞಾನ 4) ತಂತ್ರಜ್ಞಾನ 5) ಪರಿಸರ ಅಧ್ಯಯನ

ಜೀವ ವಿಜ್ಞಾನ ಎಂದರೆ ಒಂದು ಸಣ್ಣ ಸೂಕ್ಷ್ಮ ಜೀವಿಯಿಂದ ಪ್ರಾರಂಭವಾಗಿ ಮನುಷ್ಯನವರೆಗೂ ಅಧ್ಯಯನ ಮಾಡುವ ವಿಷಯವಾಗಿದೆ. ಇದರಲ್ಲಿ ಮುಖ್ಯವಾಗಿ ಮಾನವ ಅಂಗಾಂಗ ವ್ಯವಸ್ಥೆ, ಆಹಾರದಲ್ಲಿನ ಪೋಷಾಂಶಗಳು, ರೋಗಗಳು, ವಿಟಮಿನ್‌ಗಳು ಮತ್ತು ಇತರ ವಿಷಯಗಳ ಬಗ್ಗೆ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಇದರೊಂದಿಗೆ ಸ್ವಲ್ಪ ಮಟ್ಟಿಗೆ ಸಸ್ಯ ಸಾಮ್ರಾಜ್ಯದ ಬಗ್ಗೆಯೂ ತಿಳಿಯುವ ಅವಶ್ಯಕತೆ ಇದೆ.

ಭೌತ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಭೌತಿಕ ಲಕ್ಷಣಗಳು ಅಂದರೆ ಬೆಳಕು, ಶಬ್ದ, ಚಲನೆ ಹೀಗೆ ನಮ್ಮ ದಿನ ನಿತ್ಯದ ಜೀವನದಲ್ಲಿ ನಾವು ನಮ್ಮ ಪರಿಸರದೊಂದಿಗಿನ ಒಡನಾಟದಲ್ಲಿ ಬರುವ ಮುಖ್ಯ ಭೌತಿಕ ಲಕ್ಷಣಗಳನ್ನು ತಿಳಿಯುವ ವಿಷಯವಾಗಿದೆ.

ರಸಾಯನ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ನಾವು ಬಳಸುವ ಗಾಜು, ಸಾಬೂನು, ಸಿಮೆಂಟ್, ಲೋಹಗಳು, ಅಲೋಹಗಳು ಇವುಗಳ ತಯಾರಿಕೆ ಇತ್ಯಾದಿ ವಸ್ತುಗಳ ಕುರಿತು ಅಧ್ಯಯನ ನಡೆಸುವ ವಿಷಯವಾಗಿದೆ. ಅನೇಕ ವಸ್ತುಗಳ ಉತ್ಪಾದನೆಯಲ್ಲಿ ಬಳಸುವ ರಾಸಾಯನಿಕ ವಸ್ತುಗಳ ಕುರಿತು ಅಧ್ಯಯನ ನಡೆಸುವ ವಿಷಯವೂ ಹೌದು.

> ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಉತ್ತಮ ರೆಫರೆನ್ಸ್ ಪುಸ್ತಕಗಳು ಮಾರುಕಟ್ಟೆಯಲ್ಲಿ ಲಭ್ಯವಿರುವುದಿಲ್ಲ. ವಿವಿಧ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಬೇಕಾಗುತ್ತದೆ. ಮೂಲ ವಿಷಯಕ್ಕೆ ಸಂಬಂಧಿಸಿದಂತೆ ಸ್ಪರ್ಧಾರ್ಥಿಗಳು ಎನ್‌ಸಿಇಆರ್‌ಟಿ (6 ರಿಂದ 10ನೇ ತರಗತಿ ಪುಸ್ತಕಗಳು ಹಾಗೂ 11 ಮತ್ತು 12ನೇ ತರಗತಿಗಳ ಪುಸ್ತಕಗಳು ಜೀವ ವಿಜ್ಞಾನಕ್ಕೆ ಹೆಚ್ಚು ಒತ್ತು ನೀಡುತ್ತವೆ) ಹಾಗೂ ಡಿಎಸ್‌ಇಆರ್‌ಟಿ ಯ 6 ರಿಂದ 10 ನೇ ತರಗತಿಯ ಪುಸ್ತಕಗಳನ್ನು ಕಡ್ಡಾಯವಾಗಿ ಓದುವುದು. ಇಂಗ್ಲಿಷ್‌ನಲ್ಲಿ ದೊರೆಯುವ ಸೈನ್ಸ್ ರಿಪೋರ್ಟರ್, ಡೌನ್ ಟು ಅರ್ಥ, ಯೋಜನಾ, ಕುರುಕ್ಷೇತ್ರ ನಿಯತಕಾಲಿಕಗಳು ಹಾಗೂ ಇಸ್ರೋ ಮತ್ತು ಡಿಆರ್‌ಡಿಓ ವೆಬ್‌ಸೈಟ್‌ನಲ್ಲಿ ದೊರಕುವ ಮಾಹಿತಿಯನ್ನು ಕಲೆಹಾಕಬಹುದು. ಪರೀಕ್ಷಾ ತಯಾರಿಯನ್ನು ಇನ್ನೂ ಹೆಚ್ಚು ಚುರುಕುಗೊಳಿಸಲು ಈ ಪುಸ್ತಕಗಳನ್ನು ಕೂಡ ಅಧ್ಯಯನ ಮಾಡಬಹುದು.
>
> 1. Lucent's Publication Series
> 2. Environment by Shankar IAS Academy
> 3. 4G Science- Ravi H. N
> 4. ಸಮಗ್ರ ವಿಜ್ಞಾನ- ವಿಆರ್‌ಎಸ್
> 5. ಪರಿಸರ ಅಧ್ಯಯನ- ವಿನೋದ್ ಕುಮಾರ್ ಚವ್ಹಾಣ್
> 6. ವಿಜ್ಞಾನ ಮತ್ತು ತಂತ್ರಜ್ಞಾನ -ಹರಿ ಪ್ರಸಾದ್
> 7. ನಿತ್ಯ ಜೀವನದ ವಿಜ್ಞಾನ ಮತ್ತು ಅನ್ವಯಿಕ ವಿಜ್ಞಾನ -ಕೆ.ಎಂ. ಸುರೇಶ್

ಪ್ರಚಲಿತ ವಿಷಯ ಸಂಯೋಜನೆ

ಪ್ರಸ್ತುತದಲ್ಲಿ ಇರುವ ತಂತ್ರಜ್ಞಾನ ವಿಷಯಕ್ಕೆ ಪ್ರಚಲಿತ ಘಟನೆಗಳನ್ನು ಸಂಯೋಜಿಸಿ ಪ್ರಶ್ನೆಗಳನ್ನು ಈ ಕೆಳಗಿನ ವಿಷಯಗಳ ಬಗ್ಗೆ ಕೇಳಲಾಗುತ್ತದೆ. ಉದಾಹರಣೆಗೆ ರಾಕೆಟ್ ಉಡಾವಣೆ: ತಯಾರಿಕೆ, ಇಸ್ರೋ, ಇನ್ನಿತರ ಬಾಹ್ಯಕಾಶ ಸಂಸ್ಥೆಗಳು, ನ್ಯಾನೋ ಟೆಕ್ನಾಲಜಿ, ಬಯೋಟೆಕ್ನಾಲಜಿ, ರೋಬೊಟಿಕ್ಸ್, ರಕ್ಷಣಾ ವಿಭಾಗ, ಕೃತಕ ಬುದ್ಧಿಮತ್ತೆ, ಇದರ ಜೊತೆಗೆ ತಾಂತ್ರಿಕ ಪದಗಳು, ನೊಬೆಲ್ ಪ್ರಶಸ್ತಿಗಳು, ಹೊಸ ಆವಿಷ್ಕಾರಗಳು ಮತ್ತು ಅನ್ವೇಷಣೆಗಳು ಮತ್ತು ಇತರ ವಿಷಯಗಳ ಬಗ್ಗೆ ಅಧ್ಯಯನ ನಡೆಸಬೇಕಾಗುತ್ತದೆ.

ಪರಿಸರ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೂಲ ಪರಿಕಲ್ಪನೆಗಳು, ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಸಮ್ಮೇಳನಗಳು, ಪರಿಸರಕ್ಕೆ ಸಂಬಂಧಿಸಿದ ದಿನಗಳು ಮತ್ತು ಆಚರಣೆಗಳು, ಸಸ್ಯ ಸಂಪನ್ಮೂಲಗಳು, ಅರಣ್ಯ ವರದಿ, ರಾಷ್ಟ್ರೀಯ ಉದ್ಯಾನವನಗಳು, ಹುಲಿ ಸಂರಕ್ಷಣಾ ತಾಣಗಳು, ಅಳಿವಿನಂಚಿನಲ್ಲಿರುವ ಪ್ರಾಣಿ ಮತ್ತು ಸಸ್ಯವರ್ಗ ಮತ್ತು ಇನ್ನಿತರ ವಿಷಯಗಳನ್ನು ತಿಳಿಯುವುದು ಕೂಡ ಅವಶ್ಯ.

ಇದರೊಂದಿಗೆ ಅನ್ವಯಿಕ ವಿಜ್ಞಾನ (ದಿನ ನಿತ್ಯ ವಿಜ್ಞಾನ) ವಿಷಯಗಳ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಮೇಲಿನ ಎಲ್ಲವೂ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಪಕ್ಷಿ ನೋಟವಾಗಿದ್ದು, ಪುಸ್ತಕ ಅಧ್ಯಯನದ ಜೊತೆಗೆ ನಮ್ಮ ಸುತ್ತಮುತ್ತ ನಡೆಯುವ ವಿಸ್ಮಯಗಳ ಕುರಿತು ಕುತೂಹಲ ಮನೋಭಾವ ಬೆಳೆಸಿಕೊಳ್ಳುವುದು ಈ ವಿಷಯವನ್ನು ಅರ್ಥೈಸಿಕೊಳ್ಳಲು ಹೆಚ್ಚು ಸಹಾಯ ಮಾಡುತ್ತದೆ.

(ಲೇಖಕ: ನಿರ್ದೇಶಕರು, ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ, ಬೆಂಗಳೂರು)

ಪ್ರಜಾವಾಣಿ ಉದ್ಯೋಗ ವಾರ್ತೆ

ಎನ್‌ಟಿಆರ್‌ಒನಲ್ಲಿ 45 ತಾಂತ್ರಿಕ ಸಹಾಯಕ ಹುದ್ದೆಗಳು

ರಾಷ್ಟ್ರೀಯ ತಾಂತ್ರಿಕ ಸಂಶೋಧನಾ ಸಂಸ್ಥೆ (ಎನ್‌ಟಿಆರ್‌ಒ) ತನ್ನಲ್ಲಿ ಖಾಲಿ ಇರುವ 45 ತಾಂತ್ರಿಕ ಸಹಾಯಕರ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ತಾಂತ್ರಿಕ ಸಹಾಯಕರು
- **ಸ್ಥಳ:** ಭಾರತದೆಲ್ಲೆಡೆ
- **ಹುದ್ದೆಗಳ ಸಂಖ್ಯೆ:** 45
- **ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿದ್ಯಾಸಂಸ್ಥೆಯಿಂದ 10ನೇ ತರಗತಿ, ಐಟಿಐ, ಡಿಪ್ಲೊಮಾ ಹಾಗೂ ಪದವಿ ಮುಗಿಸಿರಬೇಕು.
- **ವಯೋಮಿತಿ:** ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ 56 ವರ್ಷ ಮೀರಿರಬಾರದು.
- **ನೇಮಕಾತಿ ಪ್ರಕ್ರಿಯೆ:** ಕಂಪ್ಯೂಟರ್ ಆಧಾರಿತ ಪರೀಕ್ಷೆ ಫಲಿತಾಂಶದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುತ್ತದೆ.
- **ಅರ್ಜಿ ಶುಲ್ಕ:** ಇಲ್ಲ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಏಪ್ರಿಲ್ 12, 2021
- **ಹೆಚ್ಚಿನ ಮಾಹಿತಿಗೆ:** https://ntro.gov.in/ntroWeb/loadRecruitmentsHome.do

ಕೆಎಪಿಎಲ್‌ನಲ್ಲಿ ಹುದ್ದೆಗಳು

ಕರ್ನಾಟಕ ಆ್ಯಂಟಿಬಯೋಟಿಕ್ಸ್ ಅಂಡ್ ಫಾರ್ಮಾಸ್ಯುಟಿಕಲ್ಸ್ ಲಿಮಿಟೆಡ್(ಕೆಎಪಿಎಲ್) ಸಂಸ್ಥೆ ವಿವಿಧ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಅರ್ಜಿ ಸಲ್ಲಿಸಬಹುದು.

- **ಹುದ್ದೆ:** ಏರಿಯಾ ಮ್ಯಾನೇಜರ್, ಏರಿಯಾ ಸೇಲ್ಸ್ ಮ್ಯಾನೇಜರ್ ಹಾಗೂ ಇನ್ನಿತರ ಹುದ್ದೆಗಳು ಸಂಖ್ಯೆ: 25
- **ಸ್ಥಳ:** ಭಾರತದೆಲ್ಲೆಡೆ
- **ವಿದ್ಯಾರ್ಹತೆ:** ಫಾರ್ಮಸಿ, ಬಿಎಸ್‌ಸಿ, ಬಿಕಾಂ, ಬಿಎ ಪದವಿ ಪಡೆದಿರಬೇಕು.
- **ನೇಮಕಾತಿ ಪ್ರಕ್ರಿಯೆ:** ಲಿಖಿತ ಪರೀಕ್ಷೆ ಹಾಗೂ ವೈಯಕ್ತಿಕ ಸಂದರ್ಶನ
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** ಏಪ್ರಿಲ್ 15, 2021
- **ಅರ್ಜಿ ಸಲ್ಲಿಕೆ ವಿಧಾನ:** https://www.kaplindia.com/job-postings/#

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ತ್ರಿಕೋನಮಿತಿ ನಿತ್ಯ ಸಮೀಕರಣಗಳು

(ಮುಂದುವರಿದ ಭಾಗ)

ಗಣಿತ · **ಎಸ್ಸೆಸ್ಸೆಲ್ಸಿ**

ಉದಾಹರಣೆ: $sec^2o = 1 + ton^2o$ ನಿತ್ಯ ಸಮೀಕರಣ ಬಳಸಿ

$$\frac{\sin\theta - \cos\theta +}{\sin\theta + \cos\theta - 1} = \frac{1}{sec\theta - ton\theta}$$

ಎಂದು ಸಾಧಿಸಿ

ಪರಿಹಾರ: $sec\theta$ ಮತ್ತು $ton\theta$ ಇರುವಂತಹ ನಿತ್ಯ ಸಮೀಕರಣವನ್ನು ಅನ್ವಯಿಸುವುದರಿಂದ ಎಡಭಾಗದ ಅಂಶ ಮತ್ತು ಛೇದಗಳೆರಡನ್ನು $\cos\theta$ ದಿಂದ ಭಾಗಿಸುವುದರಿಂದ ಅದನ್ನು $sec\theta$ ಮತ್ತು $ton\theta$ ರೂಪಕ್ಕೆ ಪರಿವರ್ತಿಸೋಣ

ಎಡಭಾಗ $= \frac{(to\ ^2\theta - se\ ^2\theta) - 1)(ton\theta - sec\theta)}{(ton\theta + sec\theta) + 1)(ton\theta - sec\theta)}$

$$= \frac{ton\theta - sec\theta - 1}{ton\theta + sec\theta + 1}$$

$ton\theta - sec\theta$ ವನ್ನು ಅಂಶ ಮತ್ತು ಛೇದಗಳಿಗೆ ಗುಣಿಸುವುದರಿಂದ

$$= \frac{(ton\theta - sec\theta) - 1)(ton\theta - sec\theta)}{(ton\theta + sec\theta) + 1)(ton\theta - sec\theta)}$$

$$= \frac{(ton^2\theta - sec^2\theta) - 1)(ton\theta - sec\theta)}{(ton\theta + sec\theta) + 1)(ton\theta - sec\theta)}$$

$$= \frac{-1 - ton\theta + sec\theta}{(ton\theta + sec\theta + 1)\ (ton\theta - sec\theta}$$

$$= \frac{-1}{(ton\theta - sec\theta)} = \frac{1}{(sec\theta - ton\theta)}$$

ಉದಾಹರಣೆ: $secA\,(1 - \sin A + tinA) = 1$ ಎಂದು ಸಾಧಿಸಿ

ಪರಿಹಾರ : ಇಲ್ಲಿ

ಎಡಭಾಗ $= secA\,(1 - \sin A)(secA + tonA)$

$$\left(\frac{1}{\cos A}\right)(1 - \sin A)\left(\frac{1}{\cos A} + \frac{\sin A}{\cos A}\right)$$

$$\frac{(1 - \sin A)(1 + \sin A)}{\cos^2 A}$$

$$\frac{(1 - \sin^2 A)}{\cos^2 A}$$

$$\frac{\cos^2 A}{\cos^2 A}$$

ಉದಾಹರಣೆ: $\frac{1 + to\ ^2A}{1 + co\ ^2A}$

ಪರಿಹಾರ : $\frac{1 + ton^2A}{1 + cot^2A} = ton^2A$ ಎಂದು ನಿರೂಪಿಸಿ

ನಿತ್ಯ ಸಮೀಕರಣಗಳಲ್ಲಿ ಬಳಸಿ

$$= \frac{\sec^2 A}{\text{cosec}^2 A}$$

$$= \frac{\sin^2 A}{\cos^2 A}$$

$$= ton^2 A$$

ಪ್ರಜಾವಾಣಿ ನೋಡಿಯೊ https://bit.ly/2PGUdmU

ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಕ್ವಾಡ್ರಾಟಿಕ್ ಇಕ್ವೇಷನ್_ಸಾಲ್ವಿಂಗ್ ದ ರೂಟ್ಸ್ ಆಫ್ ಕ್ಯು.ಇ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಅಮೈನೋ ಆಮ್ಲಗಳ ವರ್ಗೀಕರಣ

ರಸಾಯನ ಶಾಸ್ತ್ರ · **ದ್ವಿತೀಯ ಪಿಯುಸಿ**

ಅಮೈನೋ ಆಮ್ಲಗಳನ್ನು ಅವುಗಳ ಅಣುಗಳಲ್ಲಿರುವ ಅಮೈನೋ ಮತ್ತು ಕಾರ್ಬಾಕ್ಸಿಲ್ ಗುಂಪುಗಳ ತುಲನಾತ್ಮಕ ಸಂಖ್ಯೆಗಳನ್ನಾಧರಿಸಿ ಆಮ್ಲೀಯ, ಪ್ರತ್ಯಾಮ್ಲೀಯ ಮತ್ತು ತಟಸ್ಥ ಎಂಬುದಾಗಿ ವರ್ಗೀಕರಿಸಲಾಗಿದೆ.

ದೇಹದಲ್ಲಿ ಉತ್ಪತ್ತಿಯಾಗಬಲ್ಲ ಅಮೈನೋ ಆಮ್ಲಗಳನ್ನು ಅನವಶ್ಯಕ ಅಮೈನೋ ಆಮ್ಲಗಳೆಂದು ಕರೆಯಲಾಗುತ್ತದೆ. ಅಮೈನೋ ಆಮ್ಲಗಳು ದೇಹದಲ್ಲಿ ಉತ್ಪತ್ತಿಯಾಗುವುದಿಲ್ಲವೋ ಮತ್ತು ನಮ್ಮ ಆಹಾರದ ಮೂಲಕ ಪಡೆಯಬೇಕೋ ಅವುಗಳನ್ನು ಅವಶ್ಯಕ ಅಮೈನೋ ಆಮ್ಲಗಳೆಂದು ಕರೆಯಲಾಗುತ್ತದೆ.

ಅಮೈನೋ ಆಮ್ಲಗಳು ಸಾಮಾನ್ಯವಾಗಿ ಬಣ್ಣರಹಿತ ಸ್ಫಟಿಕ ರೂಪದ ಘನವಸ್ತುಗಳಾಗಿವೆ. ಅವು ನೀರಿನಲ್ಲಿ ಕರಗಬಲ್ಲವು. ಹೆಚ್ಚಿನ ಉಷ್ಣತೆಯಲ್ಲಿ ಕರಗುವ ಘನವಸ್ತುಗಳು ಮತ್ತು ಸರಳ ಅಮೈನುಗಳು ಅಥವಾ ಕಾರ್ಬಾಕ್ಸಿಲ್ ಆಮ್ಲಗಳಂತಲ್ಲದೆ ಬದಲಿಗೆ ಲವಣಗಳಂತೆ ವರ್ತಿಸುತ್ತವೆ. ಅವುಗಳ ಒಂದೇ ಅಣುವಿನಲ್ಲಿರುವ ಎರಡೂ ಆಮ್ಲೀಯ (ಕಾರ್ಬಾಕ್ಸಿಲ್) ಮತ್ತು ಪ್ರತ್ಯಾಮ್ಲೀಯ ಗುಂಪುಗಳೆರೆಡು ಈ ವರ್ತನೆಗೆ ಕಾರಣವಾಗಿದೆ. ಜಲೀಯ ದ್ರಾವಣದಲ್ಲಿ ಕಾರ್ಬಾಕ್ಸಿಲ್ ಗುಂಪು ಒಂದು ಪ್ರೋಟಾನ್ ಅನ್ನು ಕಳೆದುಕೊಂಡು ಮತ್ತು ಅಮೈನೋ ಗುಂಪು ಒಂದು ಪ್ರೋಟಾನ್ ಅನ್ನು ಪಡೆದುಕೊಂಡು ಒಂದು ಝ್ವಿಟ್ಟರ್ ಅಯಾನ್ ಎಂಬ ದ್ವಿಧ್ರುವ ಅಯಾನ್ ಅನ್ನು ಕೂಡುತ್ತದೆ.

ಆಮ್ಲ ಮತ್ತು ಪ್ರತ್ಯಾಮ್ಲಗಳೆರಡರ ಜತೆಯೂ ವರ್ತಿಸುವುದರಿಂದ ಒಂದು ಝ್ವಿಟ್ಟರ್ ಅಯಾನಿಕ್ ರೂಪದಲ್ಲಿ ಅಮೈನೋ ಆಮ್ಲಗಳು ಉಭಯ ವರ್ತನೆಯನ್ನು ತೋರಿಸುತ್ತದೆ.

$$\underset{NH_2}{R - CH} - \overset{O}{C} - O - H \rightleftharpoons \underset{{}^{+}NH_3}{R - CH} - C - O$$

ಝ್ವಿಟ್ಟರ್ ಅಯಾನಿಕ್

$\alpha -$ ಕಾರ್ಬನ್ ಪರಮಾಣು ಅಸಮ್ಮಿತವಾದುದರಿಂದ ಗ್ಲೈಸಿನ್ ಅನ್ನು ಹೊರತುಪಡಿಸಿ ಉಳಿದ ಎಲ್ಲಾ ನೈಸರ್ಗಿಕವಾಗಿ ದೊರಕುವ $\alpha -$ ಅಮೈನೋ ಆಮ್ಲಗಳು ದ್ಯುತಿ ಪಟುತ್ವವನ್ನು ಹೊಂದಿವೆ. ಇವುಗಳು D ಮತ್ತು L ಎರಡೂ ರೂಪಗಳಲ್ಲಿ ಅಸ್ತಿತ್ವದಲ್ಲಿವೆ. ಹೆಚ್ಚಿನ ನೈಸರ್ಗಿಕವಾಗಿ ದೊರಕುವ ಅಮೈನೋ ಆಮ್ಲಗಳು L ವಿನ್ಯಾಸವನ್ನು ಹೊಂದಿವೆ. NH_2 ಗುಂಪನ್ನು ಎಡಗಡೆಯಲ್ಲಿ ಬರೆಯುವ ಮೂಲಕ $L -$ ಅಮೈನೋ ಆಮ್ಲಗಳನ್ನು ಪ್ರತಿನಿಧಿಸುವರು.

ಪ್ರೊಟೀನ್‌ಗಳ ರಚನೆ

ಪ್ರೊಟೀನ್‌ಗಳು ಅಮೈನೋ ಆಮ್ಲಗಳ ಪಾಲಿಮರ್‌ಗಳು ಮತ್ತು ಅವುಗಳು ಒಂದಕ್ಕೊಂದು ಪೆಪ್ಟೈಡ್ ಜೋಡಣೆ ಮೂಲಕ ಪರಸ್ಪರ ಸಂಪರ್ಕ ಹೊಂದಿದೆ. ರಾಸಾಯನಿಕವಾಗಿ ಪೆಪ್ಟೈಡ್ ಜೋಡಣೆಯು $-COOH$ ಗುಂಪು ಮತ್ತು $-NH_2$ ಗುಂಪುಗಳ ನಡುವೆ ಉಂಟಾದ ಒಂದು ಅಮೈಡ್ ಬಂಧವಾಗಿದೆ.

ಎರಡು ಒಂದೇ ರೀತಿಯ ಅಥವಾ ಬೇರೆ ಬೇರೆ ಅಮೈನೋ ಆಮ್ಲಗಳ ನಡುವಿನ ಪ್ರತಿಕ್ರಿಯೆಯು ಒಂದು ಅಣುವಿನ ಅಮೈನೋ ಗ್ರೂಪ್ ಮತ್ತು ಇನ್ನೊಂದರ ಕಾರ್ಬಾಕ್ಸಿಲ್ ಗ್ರೂಪಿನ ಸಂಯೋಜನೆಯ ಮೂಲಕ ನಡೆಯುತ್ತದೆ. ಈ ಕ್ರಿಯೆಯ ಉತ್ಪನ್ನವನ್ನು ಡೈಪೆಪ್ಟೈಡ್ ಎಂದು ಕರೆಯಲಾಗುತ್ತದೆ. ಏಕೆಂದರೆ ಇದು ಎರಡು ಅಮೈನೋ ಆಮ್ಲಗಳಿಂದ ಮಾಡಲ್ಪಟ್ಟಿದೆ.

$$H_2N - CH_2 - COOH + H_2N - \underset{CH_3}{CH} - COOH$$

$$\downarrow -H_2O$$

$$H_2N - CH_2 - \mathbf{CO} - \mathbf{NH} + \underset{CH_3}{CH} - COOH$$

ಪೆಪ್ಟೈಡ್ ಜೋಡಣೆ

ಒಂದು ಡೈಪೆಪ್ಟೈಡ್‌ಗೆ ಮೂರನೇ ಅಮೈನೋ ಆಮ್ಲ ಒಂದು ಸೇರಿದರೆ ಸಿಗುವ ಉತ್ಪನ್ನವನ್ನು ಟ್ರೈಪೆಪ್ಟೈಡ್ ಎಂದು ಕರೆಯಲಾಗುತ್ತದೆ. ಒಂದು ಟ್ರೈಪೆಪ್ಟೈಡ್ ಎರಡು ಪೆಪ್ಟೈಡ್ ಬಂಧಗಳಿಂದ ಜೋಡಣೆಯಾಗಿರುವ ಮೂರು ಅಮೈನೋ ಆಮ್ಲಗಳನ್ನು ಹೊಂದಿರುತ್ತದೆ. ಅಂತೆಯೇ ನಾಲ್ಕು, ಐದು ಅಥವಾ ಆರು ಅಮೈನೋ ಆಮ್ಲ ಜೋಡಣೆಯಾದಾಗ, ಉತ್ಪನ್ನಗಳನ್ನು ಅನುಕ್ರಮವಾಗಿ ಟೆಟ್ರಾಪೆಪ್ಟೈಡ್, ಪೆಂಟಾ ಪೆಪ್ಟೈಡ್ ಅಥವಾ ಹೆಕ್ಸಾ ಪೆಪ್ಟೈಡ್ ಎನ್ನಲಾಗುತ್ತದೆ. ಅಮೈನೋ ಆಮ್ಲ ಉಳಿಕೆಯನ್ನು ಹೊಂದಿರುವ ಅಣುತೂಕ 10000 u ಗಿಂತ ಹೆಚ್ಚಿರುವ ಒಂದು ಪಾಲಿ ಪೆಪ್ಟೈಡ್ ಅನ್ನು ಪ್ರೊಟೀನ್ ಎನ್ನುತ್ತಾರೆ.

(ಮುಂದುವರಿಯುವುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ https://bit.ly/2PFCNHa

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ಎಲೆಕ್ಟ್ರೊ ಮ್ಯಾಗ್ನೆಟಿಕ್ ವೇವ್ಸ್_ಎಲೆಕ್ಟ್ರೊ ಮ್ಯಾಗ್ನೆಟಿಕ್ ಸ್ಪೆಕ್ಟ್ರಂ' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು · ಉದ್ರೇಕದ ಸಮಸ್ಯೆ · ಲೈಂಗಿಕ ನಿರಾಸಕ್ತಿ · ನಿದ್ರಾ ಸ್ಖಲನ · ಶೀಘ್ರ ಸ್ಖಲನ · ಲಿಂಗ ಚಿಕ್ಕದಾಗುವುದು · ನರ ದೌರ್ಬಲ್ಯ · ಅವಧಿಗೆ ಮೊದಲೇ ಸ್ಖಲನ · ಆತಂಕ, ದೌರ್ಬಲ್ಯ · ಕಡಿಮೆ ವೀರ್ಯಾಣು · ಮುಷ್ಠಿ ಮೈಥುನದ ಅಡ್ಡಪರಿಣಾಮ
100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಉದಾಸೀನವು ಇಷ್ಟಪಡದೆ ಇರುವುದಕ್ಕಿಂತಲೂ ಹೆಚ್ಚಿನ ಹಾನಿಯನ್ನು ಉಂಟು ಮಾಡುತ್ತದೆ.

-ಜೆ.ಕೆ.ರೋಲಿಂಗ್

ಸರ್ಕಾರ–ನೌಕರರ ಹಗ್ಗಜಗ್ಗಾಟ ಸಾರ್ವಜನಿಕ ಹಿತಾಸಕ್ತಿಗೆ ಪೆಟ್ಟು

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸಾರ್ವಜನಿಕ ಹಿತಾಸಕ್ತಿಯ ಕಾರ್ಯಗಳಿಗೆ ಎಲ್ಲಕ್ಕಿಂತಲೂ ಹೆಚ್ಚಿನ ಆದ್ಯತೆ. ಜನಸಾಮಾನ್ಯರ ನಿತ್ಯದ ಅಗತ್ಯ ಎನಿಸಿದ ಸಾರಿಗೆ ಸೌಕರ್ಯವನ್ನು ಒದಗಿಸಲು ರಾಜ್ಯ ಸರ್ಕಾರವು ಸಾರಿಗೆ ನಿಗಮಗಳನ್ನು ರಚಿಸಿದ್ದು ಇದೇ ಕಾರಣದಿಂದ. ವೇತನ ಹೆಚ್ಚಳದ ಬೇಡಿಕೆಯೊಂದಿಗೆ ಈಗ ಮುಷ್ಕರಕ್ಕೆ ಇಳಿದಿರುವ ಸಾರಿಗೆ ನೌಕರರ ಕೂಟವಾಗಲೀ ಮುಷ್ಕರವನ್ನು ತಡೆಯುವಲ್ಲಿ ವಿಫಲವಾದ ಸರ್ಕಾರವಾಗಲೀ ಸಾರಿಗೆ ನಿಗಮಗಳ ಈ ಮೂಲ ಉದ್ದೇಶವನ್ನೇ ಮರೆತಿರುವಂತೆ ತೋರುತ್ತಿದೆ. ಇಲ್ಲದಿದ್ದರೆ ಹೀಗೆ ಹೊಣೆ ಮರೆತು ಮುಷ್ಕರಕ್ಕೆ ಕಾರಣವಾಗಿ ಜನರ ಓಡಾಟಕ್ಕೆ ಸಂಚಕಾರವನ್ನು ತರುತ್ತಿರಲಿಲ್ಲ. ಅವರ ಪರದಾಟಕ್ಕೆ ಕಾರಣವೂ ಆಗುತ್ತಿರಲಿಲ್ಲ. ಆರನೇ ವೇತನ ಆಯೋಗದ ಶಿಫಾರಸುಗಳನ್ನು ತಮಗೂ ಅನ್ವಯಿಸಬೇಕು ಎನ್ನುವುದೂ ಸೇರಿದಂತೆ ಒಂಬತ್ತು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ನಾಲ್ಕೂ ಸಾರಿಗೆ ನಿಗಮಗಳ ನೌಕರರು ಕಳೆದ ಡಿಸೆಂಬರ್‌ನಲ್ಲಿ ಸುದೀರ್ಘ ಮುಷ್ಕರ ನಡೆಸಿದ್ದರು. ಎಂಟು ಬೇಡಿಕೆಗಳನ್ನು ಈಡೇರಿಸಲು ಒಪ್ಪಿದ್ದ ರಾಜ್ಯ ಸರ್ಕಾರ, ವೇತನ ಹೆಚ್ಚಳಕ್ಕೆ ಸಂಬಂಧಿಸಿದ ಬೇಡಿಕೆ ಕುರಿತು ತೀರ್ಮಾನ ಕೈಗೊಳ್ಳಲು ಕಾಲಾವಕಾಶ ಕೇಳಿತ್ತು. ನಂತರದ ದಿನಗಳಲ್ಲಿ ಪರಿಹಾರ ಸೂತ್ರವೊಂದನ್ನು ರೂಪಿಸಲು ಎರಡೂ ಕಡೆಗಳಿಂದ ಪ್ರಾಮಾಣಿಕ ಪ್ರಯತ್ನಗಳು ನಡೆಯದೆ, ಒಣಪ್ರತಿಷ್ಠೆಯಲ್ಲಿಯೇ ಕಾಲ ಕಳೆದಿದ್ದರಿಂದ ಈಗಿನ ಸನ್ನಿವೇಶ ಸೃಷ್ಟಿಯಾಗಿದೆ. ಇಬ್ಬರ ಜಗಳದಲ್ಲಿ ಬಸವಳಿಯುತ್ತಿರುವುದು ಮಾತ್ರ ಪ್ರಯಾಣಿಕರು. ಆದರೆ, ಅವರಿಗೆ ಆಗುತ್ತಿರುವ ತೊಂದರೆಯನ್ನು ಯಾರೂ ಗಣನೆಗೆ ತೆಗೆದುಕೊಳ್ಳುತ್ತಿರುವಂತೆ ಕಾಣುತ್ತಿಲ್ಲ. ಕೋವಿಡ್ ಪ್ರಕರಣಗಳು ಮತ್ತೆ ಏರುಗತಿಯಲ್ಲಿರುವ ಈ ಸಂದರ್ಭದಲ್ಲಿ ಪರಸ್ಪರ ಅಂತರವನ್ನು ಕಾಯ್ದುಕೊಳ್ಳಬೇಕಾದ ಅಗತ್ಯ ಎಷ್ಟಿದೆ ಎಂಬುದನ್ನು ರಾಜ್ಯ ಸರ್ಕಾರದ ಆರೋಗ್ಯ ಇಲಾಖೆಯ ಮಾರ್ಗಸೂಚಿ ಸ್ಪಷ್ಟಪಡಿಸುತ್ತದೆ. ಅದೇ ಸರ್ಕಾರದ ಸಾರಿಗೆ ಇಲಾಖೆಯು ನಿಗಮಗಳ ಬಸ್ ಸೇವೆಯಿಲ್ಲದೆ ಖಾಸಗಿ ವಾಹನಗಳಲ್ಲಿ ಜನ ಕಿಕ್ಕಿರಿದು ತುಂಬಿಕೊಂಡು ಹೋಗುವುದನ್ನು ಅಸಹಾಯಕವಾಗಿ ನೋಡುತ್ತಾ ಕುಳಿತಿದೆ. ಇದರಿಂದ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯಲ್ಲಿ ಏನಾದರೂ ಏರುಪೇರು ಉಂಟಾದರೆ ಯಾರು ಹೊಣೆ?

ಸರ್ಕಾರ ಹಾಗೂ ನೌಕರರ ಕೂಟದ ಪ್ರತಿನಿಧಿಗಳು ಒಣಪ್ರತಿಷ್ಠೆಯನ್ನು ಬದಿಗಿಟ್ಟು, ಮಾತುಕತೆ ಮೂಲಕ ಕಾರ್ಯಸಾಧುವಾದ ಪರಿಹಾರ ಸೂತ್ರವನ್ನು ಕಂಡುಕೊಳ್ಳಬೇಕು

ಲಾಕ್‌ಡೌನ್ ಅವಧಿಯಲ್ಲಿ ಬಸ್ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದಲ್ಲದೆ ನಂತರದ ಅವಧಿಯಲ್ಲೂ ಪೂರ್ಣ ಪ್ರಮಾಣದಲ್ಲಿ ಬಸ್‌ಗಳ ಕಾರ್ಯಾಚರಣೆ ಪುನರಾರಂಭವಾಗದ ಕಾರಣ ಸಾರಿಗೆ ನಿಗಮಗಳು ನಷ್ಟದ ಸುಳಿಗೆ ಸಿಲುಕಿವೆ. ಪ್ರತಿದಿನ ₹ 4 ಕೋಟಿ ನಷ್ಟ ಆಗುತ್ತಿದೆ ಎನ್ನುವುದು ಸಾರಿಗೆ ಇಲಾಖೆ ನೀಡುವ ಮಾಹಿತಿ. ಕಳೆದ ವರ್ಷ ನಿಗಮಗಳ ನೌಕರರಿಗೆ ಸಂಬಳ ನೀಡಲು ರಾಜ್ಯ ಸರ್ಕಾರ ₹ 2,100 ಕೋಟಿ ಬಿಡುಗಡೆ ಮಾಡಿದೆಯಂತೆ. ಲಾಕ್‌ಡೌನ್‌ಗಿಂತ ಮೊದಲು ಸಾರಿಗೆ ನಿಗಮಗಳ ಬಸ್‌ಗಳಲ್ಲಿ ನಿತ್ಯ 45 ಲಕ್ಷ ಜನ ಪ್ರಯಾಣ ಮಾಡುತ್ತಿದ್ದರು. ಸದ್ಯ ಆ ಸಂಖ್ಯೆ ಅರ್ಧಕ್ಕೆ ಇಳಿದಿದೆ ಎಂದೂ ಸಾರಿಗೆ ಇಲಾಖೆ ಮಾಹಿತಿ ನೀಡಿದೆ. ತುಂಬಾ ಅಸಾಧಾರಣವಾದ ಸಂದರ್ಭ ಇದು. ಸ್ಥಗಿತಗೊಂಡಿದ್ದ ರೈಲುಗಳ ಓಡಾಟ ಕೂಡ ಇನ್ನೂ ಪೂರ್ಣಪ್ರಮಾಣದಲ್ಲಿ ಪುನರಾರಂಭವಾಗಿಲ್ಲ. ಜನಸಾಮಾನ್ಯರು ಪ್ರಯಾಣಕ್ಕೆ ಈಗ ಬಹುಪಾಲು ಸಾರಿಗೆ ನಿಗಮಗಳ ಬಸ್‌ಗಳನ್ನೇ ಅವಲಂಬಿಸಿದ್ದಾರೆ. ಮುಷ್ಕರದ ಕಾರಣದಿಂದ ಅವುಗಳು ರಸ್ತೆಗೆ ಇಳಿಯದ ಕಾರಣ ಖಾಸಗಿ ವಾಹನಗಳು ಪ್ರಯಾಣಿಕರನ್ನು ಸುಲಿಗೆ ಮಾಡುವಲ್ಲಿ ನಿರತವಾಗಿವೆ ಎನ್ನುವ ವರದಿಗಳು ಇವೆ. ಕೊರೊನಾ ಸಂಕಷ್ಟದಿಂದ ಬೆಂದು ಬಸವಳಿದ ಜನಸಾಮಾನ್ಯರು ಇನ್ನಷ್ಟು ಸಂಕಷ್ಟ ಅನುಭವಿಸದಂತೆ ನೋಡಿಕೊಳ್ಳುವುದು ಸರ್ಕಾರದ ಹೊಣೆ. ಅದಕ್ಕೆ ಸಹಕರಿಸುವುದು ಸರ್ಕಾರಿ ಸ್ವಾಮ್ಯದಲ್ಲಿರುವ ಸಾರಿಗೆ ನಿಗಮಗಳ ನೌಕರರ ಕರ್ತವ್ಯ. ನೌಕರರ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು. ಸರ್ಕಾರದ ಸಮಸ್ಯೆಗಳನ್ನು ನೌಕರರೂ ಅರ್ಥಮಾಡಿಕೊಳ್ಳಬೇಕು. ಸರ್ಕಾರ ಹಾಗೂ ನೌಕರರ ಕೂಟದ ಪ್ರತಿನಿಧಿಗಳು ಒಣ ಪ್ರತಿಷ್ಠೆಯನ್ನು ಬದಿಗಿಟ್ಟು, ಮಾತುಕತೆ ನಡೆಸಿ ಕಾರ್ಯಸಾಧುವಾದ ಪರಿಹಾರ ಸೂತ್ರವನ್ನು ಕಂಡುಕೊಳ್ಳಬೇಕು. ಮೊದಲೇ ಹಣಕಾಸಿನ ಬಿಕ್ಕಟ್ಟಿನಿಂದ ಜರ್ಜರಿತವಾಗಿರುವ ನಿಗಮಗಳು ಮುಷ್ಕರದಿಂದ ಇನ್ನಷ್ಟು ಸಂಕಷ್ಟ ಅನುಭವಿಸಲಿವೆ ಎಂಬುದನ್ನು ಇಬ್ಬರೂ ಗಮನದಲ್ಲಿ ಇಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಜನಸಾಮಾನ್ಯರು ಪರದಾಡದಂತೆ ನೋಡಿಕೊಳ್ಳುವುದು ಸರ್ಕಾರ ಹಾಗೂ ನೌಕರರ ಆದ್ಯತೆಯಾಗಬೇಕು.

ದಿನದ ಟ್ವೀಟ್

ಪರಿಣಾಮಕಾರಿ ಕಾರ್ಯತಂತ್ರ

ಪರಸ್ಪರ ಅಂತರ ಕಾಯ್ದುಕೊಳ್ಳುವಂತೆ ಜನರಿಗೆ ಕಟ್ಟುನಿಟ್ಟಿನ ಸೂಚನೆ ನೀಡುವುದು ಕೆಲಸ ಮಾಡುವಂತೆ ಕಾಣುತ್ತಿಲ್ಲ. ಹಾಗೆಂದು ಲಾಕ್‌ಡೌನ್ ಕೂಡ ಸೋಂಕು ಹರಡುವಿಕೆ ತಡೆಗೆ ಇರುವ ಆಯ್ಕೆಯಲ್ಲ. ಹೀಗಾಗಿ, ಸೋಂಕಿನಿಂದ ಹೆಚ್ಚು ತೊಂದರೆಗೀಡಾಗಿರುವ ಪ್ರದೇಶಗಳಲ್ಲಿ ಸಾರ್ವತ್ರಿಕ ಲಸಿಕೆ ನೀಡಿಕೆಗೆ ಗಮನ ಕೇಂದ್ರೀಕರಿಸುವುದು ಅತ್ಯಂತ ಹೆಚ್ಚು ಪರಿಣಾಮಕಾರಿ ಕಾರ್ಯತಂತ್ರವಾಗಬಲ್ಲದು.

ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಸಂಸ್ಥೆ

25 ವರ್ಷಗಳ ಹಿಂದೆ

ಸೋಮವಾರ, 8-4-1996

- **ಚುನಾವಣೆ: ಕಪ್ಪುಹಣ ತಡೆಗೆ ಕಠಿಣ ಕ್ರಮ**

ನವದೆಹಲಿ, ಏ. 7 (ಪಿಟಿಐ, ಯುಎನ್‌ಐ)– ಚುನಾವಣಾ ವೆಚ್ಚದ ಬಗ್ಗೆ ಸುಪ್ರೀಂ ಕೋರ್ಟ್ ಇತ್ತೀಚೆಗೆ ನೀಡಿರುವ ಆದೇಶದ ಹಿನ್ನೆಲೆಯಲ್ಲಿ ಚುನಾವಣೆ ವೇಳೆ ಹಣದ ‘ದುರುಪಯೋಗ’ ಆಗುವುದನ್ನು ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಚುನಾವಣಾ ಅಧಿಕಾರಿಗಳಿಗೆ ಚುನಾವಣಾ ಆಯೋಗ ಇಂದು ಆದೇಶಿಸಿದೆ. ಸಂಸತ್ ಸದಸ್ಯರ ಚುನಾವಣಾ ವೆಚ್ಚದ ಮಿತಿಯನ್ನು ಹೆಚ್ಚಿಸುವಂತೆ ಆಯುಕ್ತ ಡಾ. ಜಿ.ವಿ.ಜಿ. ಕೃಷ್ಣಮೂರ್ತಿ ಕೇಂದ್ರಕ್ಕೆ ಸಲಹೆ ಮಾಡಿದ್ದಾರೆ.

ಚುನಾವಣೆಯಲ್ಲಿ ಕಪ್ಪುಹಣ ಚಲಾವಣೆಯಾಗುವುದನ್ನು ತಪ್ಪಿಸುವ ಯತ್ನವಾಗಿ ಆಯೋಗವು ಮುಖ್ಯ ಚುನಾವಣಾಧಿಕಾರಿಗಳು, ರಾಜಕೀಯ ಪಕ್ಷಗಳು, ಕಂದಾಯ ಕಾರ್ಯದರ್ಶಿಗಳು ಮತ್ತು ಚುನಾವಣಾ ವೆಚ್ಚ ಪರಿಶೀಲನಾ ವೀಕ್ಷಕರಿಗೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ.

- **ಹಿಂದುತ್ವದ ಆಧಾರದಲ್ಲಿ ಸ್ಥಿರ ಸರ್ಕಾರ: ಬಿಜೆಪಿ ಭರವಸೆ**

ನವದೆಹಲಿ, ಏ. 7 (ಪಿಟಿಐ, ಯುಎನ್‌ಐ)– ದೇಶದಲ್ಲಿ ರಾಜಕೀಯ ಮತ್ತು ಆರ್ಥಿಕ ಸ್ಥಿರತೆಯನ್ನು ತಂದು ಹಿಂದುತ್ವ ಹಾಗೂ ಸ್ವದೇಶಿ ಆಧಾರದಲ್ಲಿ ಕೇಂದ್ರದಲ್ಲಿ ಶುದ್ಧ ಮತ್ತು ಪರಿಪೂರ್ಣ ಸರ್ಕಾರ ನೀಡುವುದಾಗಿ ಭಾರತೀಯ ಜನತಾ ಪಕ್ಷವು ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದೆ.

ಪಕ್ಷದ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆಗೊಳಿಸಿದರು. ‘ಸುರಕ್ಷಾ, ಶುಚಿತ್ವ, ಸ್ವದೇಶಿ ಮತ್ತು ಸಾಮರಸ್ಯ’ ತತ್ವದ ಆಧಾರದಲ್ಲಿ ಈಗಿನ ಸರ್ಕಾರವನ್ನು ಕೆಳಗಿಳಿಸಿ ಶುದ್ಧ ಹಾಗೂ ಜವಾಬ್ದಾರಿಯುತ ಸರ್ಕಾರವನ್ನು ನೀಡುವುದಾಗಿ ಅಡ್ವಾಣಿ ಪ್ರಕಟಿಸಿದರು.

50 ವರ್ಷಗಳ ಹಿಂದೆ

ಗುರುವಾರ, 8-4-1971

- **ಇನ್ನು ಉತ್ತಮ ಕನ್ನಡ ಚಿತ್ರಗಳಿಗೆ ಮಾತ್ರ ಸಹಾಯಧನ ನೀಡಿಕೆ?**

ಬೆಂಗಳೂರು, ಏ. 7– ಇನ್ನು ಮುಂದೆ ಕನ್ನಡ ಚಲನಚಿತ್ರಗಳಲ್ಲಿ ಉತ್ತಮವಾದವು ಎಂದು ನಿರ್ಧರಿಸಲಾಗುವ ಚಿತ್ರಗಳಿಗೆ ಮಾತ್ರ ಸರ್ಕಾರದ ಸಹಾಯಧನ ದೊರೆಯುವ ಸಂಭವವಿದೆ.

ಕೆಟ್ಟ ಚಲನಚಿತ್ರಗಳಿಗೆ ಸಹಾಯಧನ ನೀಡುವುದು ‘ಸಾರ್ವಜನಿಕ ಹಣದ ಪೋಲು’ ಎಂದು ರಾಜ್ಯಪಾಲ ಶ್ರೀ ಧರ್ಮವೀರ ಅವರು ಬೆಳಿಗ್ಗೆ ವರದಿಗಾರರಿಗೆ ತಿಳಿಸಿದರು.

ರಾಜ್ಯದಲ್ಲಿ ತಯಾರಾಗುವ ಚಲನಚಿತ್ರಗಳಿಗೆ ತಲಾ 5 ಸಾವಿರ ರೂ. ಸಹಾಯಧನ ನೀಡುವ ಯೋಜನೆಯನ್ನು 1971ರ ಮಾರ್ಚಿ ಅಂತ್ಯದವರೆಗೆ ಶ್ರೀ ವೀರೇಂದ್ರ ಪಾಟೀಲರ ಮಂತ್ರಿಮಂಡಲ ನಿರ್ಧರಿಸಿತ್ತು.

- **ಭಾರತ ‘ಕೈವಾಡ’ ಚೀನೀ ಆರೋಪ**

ಟೋಕಿಯೊ, ಏ. 7– ಭಾರತವು ಪಾಕಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ‘ಕೈ ಹಾಕುತ್ತಿದೆ’ ಎಂದೂ ನವದೆಹಲಿಯಲ್ಲಿರುವ ಚೀನೀ ರಾಯಭಾರಿ ಕಚೇರಿ ವಿರುದ್ಧ ‘ಪ್ರಚೋದನೆಗಳ ಬಗೆಗೆ ಕಂಡೂ ಕಾಣದಂತೆ’ ಇದೆಯೆಂದೂ ಕಮ್ಯುನಿಸ್ಟ್ ಚೀನಾ ಆರೋಪಿಸಿರುವುದಾಗಿ ನವಚೀನಾ ವಾರ್ತಾ ಸಂಸ್ಥೆ ಇಂದು ತಿಳಿಸಿದೆ.

ಕೋವಿಡ್ ಇಲ್ಲದವರೇ ಕೊರೊನಾ ಮಾರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾದಾರು ಜೋಕೆ!

ಶಕ್ತ ಭಾರತದ ಅಸ್ವಸ್ಥ ಮುಖಗಳು

ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಈಗಿನ ಸಿ.ಡಿ ಪ್ರಕರಣದ ಅತಿ ದೊಡ್ಡ ಅಡ್ಡಪರಿಣಾಮ ಏನು ಗೊತ್ತೆ? ಜನರು ಕಾಯಿಲೆಗೆ ಬಲಿಯಾಗುವ ಸಾಧ್ಯತೆ ಹೆಚ್ಚಿದೆ. ಹೇಗೆಂದರೆ, ಕೋವಿಡ್– 19 ಕಾಯಿಲೆ ಹಿಂದಿನ ಎಲ್ಲ ದಾಖಲೆಗಳನ್ನು ಮೀರಿ, ಏಕಕಾಲಕ್ಕೆ 12 ಲಕ್ಷ ಜನರನ್ನು ಮಲಗಿಸುತ್ತಿರುವಾಗ ಅದನ್ನು ಕಡೆಗಣಿಸಿ ಈ ಕಿರುಪರದೆಯ ಸುದ್ದಿ ಮಾಧ್ಯಮಗಳು ಬೇರೆಯದೇ ಹಾಸಿಗೆಯ ರೋಚಕ ಧಾರಾವಾಹಿಯನ್ನೇ ಮುನ್ನಡೆಸುತ್ತಿವೆ. ಕಳೆದ ವರ್ಷ ಲಸಿಕೆಯೇ ಇಲ್ಲದಿದ್ದಾಗ ಇವು ಅಬ್ಬರಿಸಿ ಬೊಬ್ಬಿರಿದು ಕೊರೊನಾ ಕರಾಳತೆಯನ್ನು ಬಿಂಬಿಸುತ್ತಿದ್ದವು. ಈಗ, ಲಸಿಕೆ ನಮ್ಮ ಕೈಗೆಟಕುತ್ತಿರುವಾಗ, ಕೊರೊನಾ ಹಾವಳಿ ಇನ್ನೂ ಜಾಸ್ತಿ ಆಗುತ್ತಿರುವಾಗ, ಮಾಧ್ಯಮಗಳಲ್ಲಿ ಈ ಕಡೆ ಸಿ.ಡಿ, ಆ ಕಡೆ ದೀದಿ.

ನಮ್ಮ ಸರ್ಕಾರಗಳೂ ಅಷ್ಟೆ. ಕಳೆದ ವರ್ಷ ಏಪ್ರಿಲ್ 5ರಂದು ರಾತ್ರಿ 9ಕ್ಕೆ 9 ನಿಮಿಷಗಳ ಕಾಲ ದೀಪ ಹೊತ್ತಿಸಿ ಸಾಮೂಹಿಕ ಜಾಗೃತಿ ಮೂಡಿಸಿ ಮಾರಿಯನ್ನು ಓಡಿಸಬೇಕೆಂದು ಪ್ರಧಾನಿಯವರು ಮಾಡಿದ 9 ನಿಮಿಷಗಳ ಭಾಷಣ ನಮಗೆಲ್ಲ ನೆನಪಿದೆ. ಮುಖವಸ್ತ್ರದ, ದೈಹಿಕ ಅಂತರದ ಅಗತ್ಯವನ್ನು ಒತ್ತಿ ಒತ್ತಿ ಹೇಳಿದ್ದ ಅವರು ಈಗಿನ ಚುನಾವಣಾ ಪ್ರಚಾರದ ಭರಾಟೆಯಲ್ಲಿ ಅವನ್ನೆಲ್ಲ ಮರೆತರು. ನಾಲ್ಕು ರಾಜ್ಯಗಳಲ್ಲಿ ದಿನವೂ ಅದೆಷ್ಟೊ ಸಾವಿರ ಸಭಿಕರು ಒತ್ತೊತ್ತಾಗಿ, ಮುಖಗವಸು ಇಲ್ಲದೆ ಕೂತಿರುವಾಗ ಎಚ್ಚರಿಕೆಯ ಒಂದು ಮಾತೂ ಅವರಿಂದ ಬರಲಿಲ್ಲ. ದೀದಿಯನ್ನು, ಪ್ರತಿಪಕ್ಷಗಳನ್ನು ಛೇಡಿಸುವುದೇ ಆಯಿತು. ರಾಷ್ಟ್ರದ ಆಂತರಿಕ ಭದ್ರತೆಯ ಹೊಣೆ ಹೊತ್ತ ಗೃಹ ಸಚಿವರೂ ರ‍್ಯಾಲಿಗಳಲ್ಲಿ ಆ ಬಗ್ಗೆ ಸೊಲ್ಲೆತ್ತಲಿಲ್ಲ (ಗುಜರಾತಿನಲ್ಲಿ ಮಾಸ್ಕ್ ಹಾಕಿಕೊಳ್ಳದೇ ಓಡಾಡಿದವರಿಂದ ₹ 168 ಕೋಟಿ ವಸೂಲಿ ಮಾಡಲಾಗಿದೆ). ಇನ್ನು, ಚುನಾವಣಾ ಆಯೋಗವೂ ಅಷ್ಟೆ. ಮಹಾಮಾರಿಗೆ ಔತಣ ಕೊಡಬಲ್ಲ ಅಂಥ ಸಭೆಗಳನ್ನು ತಡೆಯುವ ಪರಮಾಧಿಕಾರ ಇದ್ದರೂ ಅದನ್ನು ಚಲಾಯಿಸಲಿಲ್ಲ. ನಮ್ಮ ಮುಖ್ಯಮಂತ್ರಿಯವರೋ ವೈದ್ಯತಜ್ಞರ ಖಡಕ್ ಸಲಹೆಗಿಂತ ಸಿನಿಮಾದವರ, ಜಿಮ್‌ನವರ ಕಣ್ಣೀರಿಗೆ ಮಿಡಿದರು.

ಇಷ್ಟರಮಟ್ಟಿಗೆ ಜನನಾಯಕರ ವಿವೇಕವನ್ನು ನುಂಗಿ ನೊಣೆಯುವ ತಾಕತ್ತು ಈ ವೈರಸ್‌ಗೆ ಬಂತು ಹೇಗೊ? ಅಥವಾ ಬುದ್ಧಿಗೆ ಮಂಕು ಕವಿಯಬಲ್ಲ ಇನ್ನೊಂದು ಬಗೆಯ ಮೈಂಡ್ ವೈರಸ್ (ಅದಕ್ಕೆ ‘ಮೀಮ್’ ಎನ್ನುತ್ತಾರೆ) ನಮ್ಮಲ್ಲಿ ಹಾಸುಹೊಕ್ಕಾಗಿದೆಯೆ? ನಿನ್ನೆಯ ‘ವಿಶ್ವ ಆರೋಗ್ಯ ದಿನ’ದಂದು ಯಾವ ಆರೋಗ್ಯತಜ್ಞರೂ ಇಂಥ ಮೀಮ್ ಬಗ್ಗೆ ಎಚ್ಚರಿಸಿಲ್ಲ ಯಾಕೊ?

ಇದೇ ವೈದ್ಯತಜ್ಞರು ಮುಂದೊಡ್ಡುವ ಅಂಕಿಸಂಖ್ಯೆಗಳ ಪ್ರಕಾರ, ಭಾರತದ ಜನಾರೋಗ್ಯ ತೀರ ಗಂಭೀರ ಸ್ಥಿತಿಯನ್ನು ತಲುಪುತ್ತಿದೆ. ನಮ್ಮ ದೇಶ ಕೋವಿಡ್ ಕಾಯಿಲೆಯ ಜಾಗತಿಕ ದಾಖಲೆಯನ್ನು ಮೀರುತ್ತಿದೆ. ತುಸು ಹಿಂದಷ್ಟೆ ಬ್ರೆಝಿಲ್ ದೇಶದಲ್ಲಿ ಏಕಕಾಲಕ್ಕೆ 13 ಲಕ್ಷ ಜನ ಹಾಸಿಗೆ ಹಿಡಿದಿದ್ದು ವಿಶ್ವದಾಖಲೆ ಆಗಿತ್ತು. ಈಗ ನಮ್ಮ ದೇಶದಲ್ಲಿ ಅಂಥವರ ಸಂಖ್ಯೆ 12.7 ಲಕ್ಷಕ್ಕೆ ಬಂದಿದೆ. ಸದ್ಯವೇ ವಿಶ್ವದಾಖಲೆ ನಮ್ಮದಾಗಲಿದೆ. ಅತ್ತ ಅಮೆರಿಕ ಇನ್ನೊಂದು ರೀತಿಯ ದಾಖಲೆ ಮಾಡಿತ್ತು: ಪ್ರತಿದಿನ ಒಂದು ಲಕ್ಷ ಹೊಸ ರೋಗಿಗಳು ಸೃಷ್ಟಿಯಾಗುತ್ತಿದ್ದರು. ಆ ಸಂಖ್ಯೆಯನ್ನು ತಲುಪಿದ ಎರಡನೇ ದೇಶವಾಗಿ ಇಂಡಿಯಾ ಹೊಮ್ಮುತ್ತಿದೆ. ಒಟ್ಟೂ ಮರಣದ ಸಂಖ್ಯೆಯಲ್ಲೂ ನಾವು ಅವೆರಡರ ನಂತರ ಮೂರನೇ ಸ್ಥಾನಕ್ಕೆ (166 ಸಾವಿರ) ಏರಿದ್ದೇವೆ. ಚೀನಾದಲ್ಲಿ ಗತಿಸಿದವರು ಕೇವಲ 4636.

ಹಾಗೆ ನೋಡಿದರೆ ನಾವು ತುಂಬ ಗಟ್ಟಿ ಜನ. ಅಮೆರಿಕದಲ್ಲಿ ಪ್ರತಿ ಲಕ್ಷ ಜನರಿಗೆ 170 ಸಾವು, ಬ್ರೆಝಿಲ್‌ನಲ್ಲಿ 157 ಆದರೆ ನಮ್ಮಲ್ಲಿ ಬರೀ 12 ಅಷ್ಟೆ. ಅತ್ತ ಇಂಗ್ಲೆಂಡ್, ಇಟಲಿ, ಫ್ರಾನ್ಸ್‌ಗಳಲ್ಲಿ ಸಾವಿನ ಪ್ರಮಾಣ ಅಮೆರಿಕಕ್ಕಿಂತ ಹೆಚ್ಚಿಗೆ ಇದೆ. ಝೆಕ್ ದೇಶ ಬಿಡಿ, ಲಕ್ಷಕ್ಕೆ 250 ಸಾವು. ಭಾರತದಲ್ಲಿ ಕೋವಿಡ್ ಸಾವಿನ ಸಂಖ್ಯೆ ತೀರ ಕಡಿಮೆ ಯಾಕೆ ಅನ್ನೋದರಲ್ಲೂ ಒಂದು ವ್ಯಂಗ್ಯ ಇದೆ: ಯಾವ ದೇಶದಲ್ಲಿ ಆರೋಗ್ಯ ಸೇವಾ ವ್ಯವಸ್ಥೆ ತುಂಬ ಚೆನ್ನಾಗಿದೆಯೊ ಅಲ್ಲಿ 80- 90 ಮೀರಿದ ಹಿರಿಯರ ಸಂಖ್ಯೆಯೂ ಸಹಜವಾಗಿ ಜಾಸ್ತಿಯೇ ಇದೆ/ಇತ್ತು. ಹಾಗಾಗಿ ಅಲ್ಲಿ ಕೋವಿಡ್ ಸಾವಿನ ಪ್ರಮಾಣವೂ ಜಾಸ್ತಿ ಇದೆ. ನಮ್ಮಲ್ಲಿ ಅನುಕೂಲಸ್ಥ ವರ್ಗ ಬಿಟ್ಟರೆ, ಇನ್ನಿತರ ವರ್ಗಗಳಲ್ಲಿ ಹಿರಿಯರ ಪ್ರಮಾಣ ಹೆಚ್ಚಿಗೆ ಇಲ್ಲ. ಅವರೆಲ್ಲ ಸ್ವಾಸ್ಥ್ಯ ಸೌಕರ್ಯಗಳ ಅಭಾವದಿಂದಾಗಿ ಮೊದಲೇ ಹೊರಟು ಹೋಗಿದ್ದಾರೆ. ಈಗ ಏನಿದ್ದರೂ 60- 70ರ ಕಿರಿಯ ವೃದ್ಧರು, ಅದರಲ್ಲೂ ಕಾಯಿಲೆಪೀಡಿತರು ತುಂಬ ಹುಷಾರಾಗಿರಬೇಕು. ಇನ್ನುಳಿದವರೂ ಲಸಿಕೆ ಹಾಕಿಸಿಕೊಳ್ಳದಿದ್ದರೆ ಗೃಹಬಂಧನ, ಆಸ್ಪತ್ರೆವಾಸ, ಗಳಿಕೆ ಇಳಿತಗಳ ಸಾಲು ಸಂಕಟಗಳು ತಪ್ಪಿದ್ದಲ್ಲ.

ಲಸಿಕೆನೂ ಹಾಕಿಸಿಕೊಂಡಿಲ್ಲ; ಮುಖಗವಸೂ ಇಲ್ಲ; ದೈಹಿಕ ಅಂತರವನ್ನೂ ಕಾಪಾಡಿಕೊಳ್ಳುವುದಿಲ್ಲ- ಅಂಥ ನಿಷ್ಕಾಳಜಿಯ ಜನರಿಂದಾಗಿ ದೇಶದ ಆಸ್ಪತ್ರೆಗಳು ತುಂಬಿ ತುಳುಕುತ್ತಿವೆ. ಇವರಿಗೆ ಜಾಗ ಸಾಲುತ್ತಿಲ್ಲವೆಂದು ದೊಡ್ಡ ಆಸ್ಪತ್ರೆಗಳ ಇತರ ರೋಗಿಗಳನ್ನು ಮನೆಗೆ ಕಳುಹಿಸಲಾಗುತ್ತಿದೆ. ಕೋವಿಡ್ ಅಂಟಿಸಿಕೊಂಡವರು ಆಸ್ಪತ್ರೆಯಲ್ಲಿ ವಿರಮಿಸಿ ವಾಸಿಯಾಗಿ ಮನೆಗೆ ಬರುತ್ತಾರೆ. ಆದರೆ ಅವರಿಗಾಗಿ ಬೆಡ್ ಖಾಲಿ ಮಾಡಬೇಕಾದ ಹೃದ್ರೋಗಿಗಳು, ಕಿಡ್ನಿ-ಶ್ವಾಸಕೋಶ ಕಾಯಿಲೆಯವರು, ಶಸ್ತ್ರಚಿಕಿತ್ಸೆ, ಡಯಾಲಿಸಿಸ್‌ಗಾಗಿ ಕಾದಿದ್ದವರು, ಅಪಘಾತ-ಆಕಸ್ಮಿಕದಿಂದಾಗಿ ಆಸ್ಪತ್ರೆ ಸೇರಿದವರು ಅರ್ಧಕ್ಕೇ ಮನೆಗೆ ಹೋಗಬೇಕಾಗುತ್ತದೆ, ಕೋವಿಡ್ ಅಂಟಿಸಿಕೊಂಡೇ ಹಿಂದಿರುಗಬಹುದು! ಜೀವ ಕಳೆದುಕೊಳ್ಳಲೂಬಹುದು. ಈಗ ಕಂಡಿತೆ ಇನ್ನೊಂದು ವ್ಯಂಗ್ಯ? ಕೋವಿಡ್ ಕಾಯಿಲೆಯಿಂದಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕಷ್ಟಕ್ಕೀಡಾಗುವವರು, ಸಾಯುವವರು ಯಾರೆಂದರೆ ಕೋವಿಡ್ ಇರದಿದ್ದ ಇತರ ರೋಗಿಗಳು!

ಈ ವಿಕ್ಷಿಪ್ತ ಸಂದರ್ಭದಲ್ಲೂ ಲಸಿಕೆಯ ಕುರಿತು ಅಪಪ್ರಚಾರದ ಗುಸುಗುಸು ಹೆಚ್ಚಾಗುತ್ತಿದೆ. ವಾಸ್ತವ ಏನೆಂದರೆ, ಲಸಿಕೆ ಎಂದರೆ (ಉದಾ: ಅದು ಕೋವಿಶೀಲ್ಡ್ ಆಗಿದ್ದರೆ) ಅದರಲ್ಲಿ ಲಕ್ಷಾಂತರ ಬಂಜೆ ಕೊರೊನಾ ಇರುತ್ತವೆ. ಅವು ನಮ್ಮ ದೇಹದೊಳಕ್ಕೆ ಹೋಗಿ ಮರಿ ಹಾಕಲಾರವು; ಆದರೆ ತಂತಮ್ಮ ಅಂಟುಮುಳ್ಳುಗಳ ಪ್ರೋಟೀನನ್ನು ಮಾತ್ರ ಉತ್ಪಾದನೆ ಮಾಡುತ್ತವೆ. ಈ ಪ್ರೋಟೀನನ್ನು ನೋಡಿದಾಕ್ಷಣ ನಮ್ಮ ರಕ್ತಕಣಗಳು ಪ್ರಬಲ ಕೊರೊನಾದ ಅಂಟುಮುಳ್ಳುಗಳನ್ನೂ ತರಿದು ಹಾಕಬಲ್ಲ ಹೊಸ ಶಸ್ತ್ರಾಸ್ತ್ರಗಳನ್ನು ಸಜ್ಜು ಮಾಡುತ್ತವೆ. ಅದರ ಅಡ್ಡ ಪರಿಣಾಮಗಳು ‘ತೀರ ಕಮ್ಮಿ; ತೀರ ತಾತ್ಕಾಲಿಕ’ ಎಂದು ವೈದ್ಯತಜ್ಞರು ಹೇಳುತ್ತಿದ್ದಾರೆ. ಅವರನ್ನು ನಂಬೋಣ. ಹಾಗಿದ್ದರೆ, ಲಸಿಕೆ ಹಾಕಿಸಿಕೊಂಡು ಮುಖವಸ್ತ್ರವಿಲ್ಲದೆ ಓಡಾಡಬಹುದೆ? ಊಂಹೂ. ಆಗಲೂ ನಿಮ್ಮ ಕೈ, ಉಗುಳು, ಸಿಂಬಳಕ್ಕೆ ತಾಜಾ ಕೊರೊನಾ ಅಂಟಿಕೊಂಡು ಇತರರಿಗೆ ಮರುಪ್ರಸಾರ ಮಾಡಬಹುದು. ಹುಷಾರಾಗಿರಿ.

ಇದನ್ನೆಲ್ಲ ಮತ್ತೆ ಯಾಕೆ ಇಲ್ಲಿ ಹೇಳಬೇಕಾಯಿತು ಗೊತ್ತೆ? ನಿನ್ನೆ ‘ವಿಶ್ವ ಆರೋಗ್ಯ ದಿನ’ವಾಗಿದ್ದರೂ ಜನಜಾಗೃತಿಯ ಯಾವ ವಿಶೇಷ ಕಾರ್ಯಕ್ರಮವನ್ನೂ ಸರ್ಕಾರ ಹಾಕಿಕೊಂಡಿರಲಿಲ್ಲ. ಕೊರೊನಾ ಮಾರಿಯ ಅಬ್ಬರದ ಮರುಕುಣಿತದ ಕುರಿತು ಸರಳ ತಿಳಿವಳಿಕೆಯ ಒಂದಾದರೂ ಜನಹಿತದ ಜಾಹೀರಾತು ನಿನ್ನೆ ಬರಲಿಲ್ಲ.

ಈಗ ಈ ಇಡೀ ಅಪಧ್ಯಾಯದ ಕೊನೆಯ ವ್ಯಂಗ್ಯಕ್ಕೆ ಬರೋಣ: ಕೋವಿಡ್ ಹೇಗೆ ಪ್ರಜೆಗಳ ದುರ್ಬಲ ಅಂಗಾಂಗಗಳ ಮೇಲೆ ದಾಳಿ ಮಾಡುತ್ತದೋ ಅದೇ ರೀತಿ ಸರ್ಕಾರದ ಕೋವಿಡ್ ಪ್ರತಿಬಂಧಕ ಕ್ರಮಗಳೂ ಸಮಾಜದ ದುರ್ಬಲ, ಶ್ರಮಿಕ ವರ್ಗವನ್ನೇ ಹಿಂಡಿ ಹಿಪ್ಪೆ ಮಾಡಿವೆ. ಇತ್ತ ಸರ್ಕಾರ ನೀಡಿದ ‘ತುರ್ತು-ಚಿಕಿತ್ಸೆ’ಯ ಫಲವಾಗಿ ಶ್ರೀಮಂತರ ಸಂಪತ್ತು ಇದೇ ಅವಧಿಯಲ್ಲಿ 43 ಲಕ್ಷ ಕೋಟಿಯಷ್ಟು ಹೆಚ್ಚಾಗಿದೆ. 38 ಹೊಸ ಕೋಟ್ಯಧೀಶರು ಸೃಷ್ಟಿಯಾಗಿದ್ದಾರೆ. ನಾವೀಗ ಎರಡು ಕಾರಣಗಳಿಂದ ಹುಷಾರಾಗಿರಬೇಕು: ಒಂದು, ಕೊರೊನಾದ ಕರಾಳ ಹೆಡೆ; ಇನ್ನೊಂದು, ಪ್ರಭುತ್ವದ ನಿರಾಳ ನಡೆ.

ಚುರುಮುರಿ

ಪ್ರಮೀಳೆ ಮತ್ತು ಪಾಲಿಟಿಕ್ಸ್!

• ಎಸ್.ಬಿ.ರಂಗನಾಥ್

ಫುಲ್ ಖುಷಿಯಲ್ಲಿದ್ದ ಹೋಂ ಮಿನಿಸ್ಟರ್, ಆಟಿಕೆ ಪಿಸ್ತೂಲನ್ನು ನನ್ನೆಡೆಗೆ ಗುರಿಯಿಟ್ಟು ‘ಹ್ಯಾಂಡ್ಸಪ್’ ಎಂದರು.

ನಾನು ‘ನೆಲ ಒರೆಸಿ, ಪಾತ್ರೆ ತೊಳೆದು, ಬಟ್ಟೆ ಒಗೆದು ಕೈ ಬಿದ್ದು ಹೋಗಿದೆ. ಎತ್ತೋಕಾಗಲ್ಲ ಮೇಡಂ’ ಎಂದೆ.

‘ನೀವು ಕೈಲಾಗದ ಗಂಡಸ್ರು. ಅದಕ್ಕೇ ಚೀನಾ, ಪಾಕಿಸ್ತಾನ ಹಾಗೆ ನಮ್ಮ ಮೇಲೇರಿ ಬರ್ತಿರೋದು’.

‘ಹೌದಮ್ಮ, ನಾವೇನೋ ಕೈಲಾಗದೋರು. ಕೈಲಾಗೋ ನೀವ್ಯಾಕೆ ರಣರಂಗಕ್ಕಿಳೀಬಾರದು?’

‘ಆ ಕಾಲ ಈಗ ಬಂದಿದೆ. ಪೇಪರ್ ನೋಡ್ರಿಲ್ಲಿ’ ಎಂದು ಪತ್ರಿಕೆ ಮುಂದೆ ಹಿಡಿದಳು. ಭಾರತೀಯ ಸೇನೆಗೆ ಪ್ರಮೀಳಾ ಪಡೆ ಎಂಬ ಶೀರ್ಷಿಕೆಯಡಿ ವಿವರಗಳಿದ್ದವು.

‘ಇದುವರೆಗೆ ಸೇನೆಯಲ್ಲಿ ಅಧಿಕಾರಿಗಳಾಗಿ ಮಾತ್ರ ನಮ್ಗೆ ಅವಕಾಶವಿತ್ತು. ಈಗ ಸೈನಿಕರಾಗಿಯೂ ಸೇರಬೌದು. ಮುಂದಿನ ತಿಂಗಳು ನಮ್ಮ ಮೊದಲ ಮಹಿಳಾ ಪಡೆ ಸೈನ್ಯ ಸೇರ್ತಿದೆ’.

‘ಹಾಗಾದ್ರೆ ನೀರಸ ಸೈನಿಕ ಜೀವನದಲ್ಲಿ ಹೊಸ ಹುರುಪು, ಹುಮ್ಮಸ್ಸು ಮೂಡುತ್ತೇನ್ನು’.

‘ಷಟಪ್, ನಿಮ್ದು ಚೀಪ್ ಜೋಕ್... ಸೈನ್ಯಕ್ಕೆ ಆಯ್ಕೆ ಆಗಿರೋರಲ್ಲಿ ನಮ್ಮವರು ಎಂಟು ಯುವತಿಯರಿದಾರೆ. ಎಲ್ರೂ ಕಲ್ಯಾಣ ಕರ್ನಾಟಕದೋರು. ಅಲ್ದೆ ಕರಾವಳಿಯ ಮೂವರು ಹುಡುಗೀರು ಬಿಎಸ್‌ಎಫ್‌ಗೆ ಸೆಲೆಕ್ಟ್ ಆಗಿದಾರೆ’.

‘ಅದೇನು ಹಾಗೆ?’

‘ಅವ್ರ ಬಹುತೇಕ ಮನೆಗಳಲ್ಲಿ ಸೇನೆಗೆ ಸೇರಿದವರಿದಾರಂತೆ. ಅವರದು ವಂಶಪರಂಪರಾಗತ ದೇಶಸೇವೆ’.

‘ನಮ್ಮ ದಕ್ಷಿಣ ಕರ್ನಾಟಕದಲ್ಲೂ ವಂಶ ಪರಂಪರಾಗತ ದೇಶಸೇವೆ ಮಾಡೋರಿದಾರಲ್ಲ’

‘ಅಂದ್ರೆ?’

‘ನಮ್ಮ ರಾಜಕೀಯದಲ್ಲಿ ತಾತ, ಮಗ, ಸೊಸೆ, ಮೊಮ್ಮಕ್ಕಳು ಎಲ್ಲರೂ ಮಾಡ್ತಿರೋದು ಕಡಿಮೆ ದೇಶಸೇವೆನಾ? ಇದು ಯುದ್ಧ ಭೂಮೀಲಿ ಸಲ್ಲಿಸೋ ಸೇವೆಗಿಂತ ಕಷ್ಟದಾಯಕ. ಅಲ್ಲಿ ಶತ್ರುಗಳು ಯಾರೂಂತ ಗೊತ್ತಿರುತ್ತೆ. ಇಲ್ಲಿ ಶತ್ರುಗಳು, ಮಿತ್ರರು ಅದಲು ಬದಲಾಗ್ತಿರ್ತಾರೆ!

‘ಹಾಗಾದ್ರೆ ಕಲ್ಯಾಣ, ಕರಾವಳಿ, ದಕ್ಷಿಣ ಕರ್ನಾಟಕಗಳನ್ನ ಆಗಾಗ ಇಂಟರ್‌ಚೇಂಜ್ ಮಾಡ್ತಿದ್ರೆ ಹೇಗೆ?’

‘ಹೌದ್ಹೌದು, ಆಗ ಪ್ರತ್ಯೇಕ ಕರ್ನಾಟಕ, ಉತ್ತರ ಕರ್ನಾಟಕದ ಕೂಗು ಇರೋಲ್ಲ!’ ಎಂದು ನಾನು ಕಣ್ಣು ಹೊಡೆದೆ!

ಸಂಗತ

ಸಹಕಾರಿ ದುಡ್ಡು ಯಲ್ಲಮ್ಮನ ಜಾತ್ರೆ!

ಖಾಸಗಿ ಕಾರ್ಖಾನೆಗಳಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಬೇಕಾದ ಸಹಕಾರಿ ಸಕ್ಕರೆ ಕಾರ್ಖಾನೆಗಳು ಬಂದ್ ಆಗುತ್ತಿರುವುದು, ಖಾಸಗಿ ಕಂಪನಿಗಳ ಪಾಲಾಗುತ್ತಿರುವುದು ಕಳವಳಕಾರಿ

• ಮಲ್ಲಿಕಾರ್ಜುನ ಹೆಗ್ಗಳಗಿ

ಬಳ್ಳಾರಿ ಜಿಲ್ಲೆಯ ಕಂಪ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಯು ತೀವ್ರ ಆರ್ಥಿಕ ಮುಗ್ಗಟ್ಟಿನಿಂದ ಬಾಗಿಲು ಮುಚ್ಚಿತು. ಆಡಳಿತ ಮಂಡಳಿಯವರ ಒಂದು ವಿವೇಚನಾರಹಿತ ನಿರ್ಧಾರ ಈ ದೊಡ್ಡ ಅನಾಹುತಕ್ಕೆ ಕಾರಣವಾಯಿತು. ಕಾರ್ಖಾನೆಯ ಉದ್ಯೋಗಿಗಳಿಗೆ ಒಂದೇ ವರ್ಷದ ಅವಧಿಯಲ್ಲಿ 450 ಆರ್‌ಸಿಸಿ ಮನೆಗಳನ್ನು ಕಟ್ಟಲು ನಿರ್ಧರಿಸಿ ಪ್ರಭಾವಿ ಗುತ್ತಿಗೆದಾರರಿಗೆ ಗುತ್ತಿಗೆ ನೀಡಲಾಯಿತು.

ಕಾರ್ಮಿಕರ ವಾಸಕ್ಕೆ ಒಳ್ಳೆಯ ಮನೆಗಳನ್ನು ನಿರ್ಮಿಸುವ ಅವರ ನಿರ್ಧಾರ ಘನವಾದದ್ದು. ಆದರೆ ಸಕ್ಕರೆ ಮಾರಾಟದಿಂದ ಬಂದ ಎಲ್ಲ ಹಣವನ್ನು ಮನೆಗಳನ್ನು ಕಟ್ಟುವುದಕ್ಕೆ ವ್ಯಯ ಮಾಡಿದ್ದರಿಂದ ಕಾರ್ಖಾನೆಗೆ ಕಬ್ಬು ಪೂರೈಸಿದ ರೈತರಿಗೆ ಹಣ ಪಾವತಿ ಸಾಧ್ಯವಾಗಲಿಲ್ಲ. ರೈತರ ಹೋರಾಟ, ದೊಂಬಿ ನಡೆದು ಕಾರ್ಖಾನೆ ತಣ್ಣಗೆ ಕಣ್ಣು ಮುಚ್ಚಿತು. ಕಾರ್ಖಾನೆ ಕಟ್ಟಿದ ಹೊಸ ಮನೆಯಲ್ಲಿ ವಾಸವಾಗಿದ್ದ ಕಾರ್ಮಿಕನೊಬ್ಬ ಉದ್ಯೋಗ ಕಳೆದುಕೊಂಡ ಸಂಕಟದಲ್ಲಿ ಮನೆಯಲ್ಲಿಯೇ ನೇಣು ಹಾಕಿಕೊಂಡು ಸಾವಿಗೆ ಶರಣಾದ ನೋವಿನ ಸಂಗತಿ ಎಲ್ಲರ ಮನಸ್ಸಿನಲ್ಲಿ ಉಳಿದಿದೆ.

ಸಕ್ಕರೆ ಸಚಿವ ಎಂ.ಟಿ.ಬಿ. ನಾಗರಾಜ್ ಈಚೆಗೆ ವಿಧಾನಮಂಡಲ ಅಧಿವೇಶನದಲ್ಲಿ ಸದಸ್ಯರೊಬ್ಬರ ಪ್ರಶ್ನೆಗೆ ರಾಜ್ಯದ ಸಹಕಾರಿ ಸಕ್ಕರೆ ಕಾರ್ಖಾನೆಗಳ ಸ್ಥಿತಿಗತಿ ಕುರಿತು ನೀಡಿದ ಉತ್ತರ ಅವುಗಳ ಶೋಚನೀಯ ಸ್ಥಿತಿಗೆ ಸಾಕ್ಷಿಯಾಗಿದೆ. ಅವರ ಪ್ರಕಾರ, ‘ರಾಜ್ಯದಲ್ಲಿ ಒಟ್ಟು 30 ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಟ್ಟಲಾಗಿದೆ. ಇವುಗಳಲ್ಲಿ 17 ಕಾರ್ಖಾನೆಗಳು ಹಾನಿ ಅನುಭವಿಸಿ ಸ್ಥಗಿತಗೊಂಡಿವೆ. ಈ ಪೈಕಿ, ದೀರ್ಘಕಾಲ ಸ್ಥಗಿತಗೊಂಡ 8 ಕಾರ್ಖಾನೆಗಳನ್ನು 40 ವರ್ಷಗಳ ಲೀಸ್ ಮೇಲೆ ನಡೆಸಲು ಖಾಸಗಿ ಉದ್ದಿಮೆಗಳಿಗೆ ಒಪ್ಪಿಸಲಾಗಿದೆ. ಮತ್ತೆ ಐದು ಕಾರ್ಖಾನೆಗಳನ್ನು ಗುತ್ತಿಗೆ ಕೊಡುವ ಬಗ್ಗೆ ಪರಿಶೀಲನೆ ನಡೆದಿದೆ. ನಾಲ್ಕು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ಕಾಯಂ ಆಗಿ ಸಮಾಪನೆ ಮಾಡಲಾಗಿದೆ. ರಾಜ್ಯದ 30 ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಕೇವಲ 13 ಸಹಕಾರಿ ರಂಗದಲ್ಲಿ ಉಳಿದು ಉತ್ಪಾದನೆಯಲ್ಲಿ ತೊಡಗಿವೆ’.

ಖಾಸಗಿ ಕಾರ್ಖಾನೆಗಳಿಗೆ ಪ್ರತಿಸ್ಪರ್ಧಿಯಾಗಿ ನಿಲ್ಲಬೇಕಾದ ಸಹಕಾರಿ ಸಕ್ಕರೆ ಕಾರ್ಖಾನೆಗಳು ಬಂದ್ ಆಗುತ್ತಿರುವುದು ಮತ್ತು ಲೀಸ್ ಮೇಲೆ ಖಾಸಗಿ ಕಂಪನಿಗಳ ಪಾಲಾಗುತ್ತಿರುವುದು ಕಳವಳಕಾರಿ ಸಂಗತಿ. ಸಹಕಾರಿ ತತ್ವ ಕ್ರಮೇಣ ಹಿನ್ನೆಲೆಗೆ ಸರಿಯುತ್ತಿರುವುದು ದಟ್ಟವಾಗಿ ಕಾಣುತ್ತಿದೆ. ಸಹಕಾರಿ ಸಕ್ಕರೆ ಕಾರ್ಖಾನೆಗಳ ನಷ್ಟಕ್ಕೆ ಬದ್ಧತೆ, ಉದ್ಯಮಶೀಲತೆ, ಹೊಸ ಹೊಸ ತಂತ್ರಜ್ಞಾನಗಳ ಅಳವಡಿಕೆ, ಪ್ರಾಮಾಣಿಕತೆ ಹಾಗೂ ಮಿತವ್ಯಯದ ಕೊರತೆ ಮುಖ್ಯ ಕಾರಣಗಳಾಗಿವೆ.

ತಂದೆ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ, ಮಗ ಖಾಸಗಿ ಕಾರ್ಖಾನೆಯ ಮಾಲೀಕ, ಅಣ್ಣ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷ, ತಮ್ಮ ಖಾಸಗಿ ಕಾರ್ಖಾನೆಯ ಒಡೆಯ. ಹೀಗೆ ಒಂದೇ ಕುಟುಂಬದ ಹಿಡಿತದಲ್ಲಿ ಸಹಕಾರಿ-ಖಾಸಗಿ ಕಾರ್ಖಾನೆಗಳಿರುವ ಬಹಳಷ್ಟು ಉದಾಹರಣೆಗಳು ರಾಜ್ಯದಲ್ಲಿವೆ. ಹೆಚ್ಚು ಸಕ್ಕರೆ ಇಳುವರಿಯ ಉತ್ತಮ ಗುಣಮಟ್ಟದ ಕಬ್ಬನ್ನು ತಮ್ಮ ಖಾಸಗಿ ಕಾರ್ಖಾನೆಗೆ ಕಳುಹಿಸಿ, ಕಳಪೆ ಗುಣಮಟ್ಟದ ಕಬ್ಬನ್ನು ಸಹಕಾರಿ ಕಾರ್ಖಾನೆಗಳಿಗೆ ಹಂಚಿಕೆ ಮಾಡುವ ಸಹಕಾರಿ ಮುಖಂಡರಿದ್ದಾರೆ.

ಕೈಗಾರಿಕೆಗಳನ್ನು ನಡೆಸುವುದು ಒಂದು ಕಲೆ. ಇಲ್ಲಿ ವ್ಯವಹಾರ, ವ್ಯಾಪಾರ, ಹಣದ ಝೇಂಕಾರ ಇರುವುದರಿಂದ ಆರ್ಥಿಕ ಶಿಸ್ತು ಮತ್ತು ಸಮಯಪಾಲನೆ ಮುಖ್ಯ. ಪರಧನದ ಮಾಯೆಗೆ ಸೋಲದ ಸಂಯಮವೂ ಬೇಕು. ‘ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ’ ಎನ್ನುವ ಭಾವನೆಯ ಜನರು ಬಹಳ ಹಾನಿಯುಂಟು ಮಾಡುತ್ತಾರೆ.

ಕಬ್ಬು ಕೂಡ ಕಲ್ಪವೃಕ್ಷವಿದ್ದಂತೆ. ಕಬ್ಬಿನಿಂದ ಸಕ್ಕರೆ, ಇಥೆನಾಲ್, ಆಲ್ಕೊಹಾಲ್, ವಿದ್ಯುತ್, ಸಾವಯವ ಗೊಬ್ಬರ, ಔಷಧಗಳು ಉತ್ಪಾದನೆಯಾಗುತ್ತವೆ. ಈ ಎಲ್ಲ ವಸ್ತುಗಳು ಮೌಲ್ಯವರ್ಧನೆಗೊಂಡು ಮಾರಾಟವಾಗುತ್ತವೆ. ಹೀಗಿದ್ದರೂ ಹಾನಿಯಾಗುತ್ತದೆ ಎಂದರೆ ಅದಕ್ಕೆ ಬದ್ಧತೆಯ ಕೊರತೆಯೇ ಕಾರಣ ಎಂದು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.



ಸಹಕಾರಿ ಸಕ್ಕರೆ ಕಾರ್ಖಾನೆಗಳ ನಿರ್ವಹಣೆಯಲ್ಲಿ ದೇಶಕ್ಕೆ ಗುಜರಾತ್ ರಾಜ್ಯ ಮಾದರಿಯಾಗಿದೆ. ಅಲ್ಲಿ 18 ಸಕ್ಕರೆ ಕಾರ್ಖಾನೆಗಳಿವೆ. ಇವೆಲ್ಲವೂ ಸಹಕಾರಿ ರಂಗಕ್ಕೆ ಸೇರಿವೆ. ಇಲ್ಲಿ ಒಂದೂ ಖಾಸಗಿ ಸಕ್ಕರೆ ಕಾರ್ಖಾನೆ ಇಲ್ಲವೆಂಬುದು ಗಮನಾರ್ಹ. ಈ ಕಾರ್ಖಾನೆಗಳು ಕಬ್ಬಿಗೆ ಅತೀ ಹೆಚ್ಚು ಬೆಲೆ ನೀಡುತ್ತಿರುವುದು ಬಹುದೊಡ್ಡ ಸಾಧನೆ. ಕಾರ್ಖಾನೆ ವಿಷಯದಲ್ಲಿ ಗುಜರಾತಿನಲ್ಲಿ ರಾಜಕೀಯ ಮೇಲಾಟ ನಡೆಯುವುದಿಲ್ಲ. ಆಡಳಿತವು ಪೂರ್ಣ ಪಾರದರ್ಶಕವಾಗಿ ನಡೆಯುತ್ತಿದೆ.

ಕರ್ನಾಟಕದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಹಕಾರಿ ಇಲಾಖೆ ಉಪನಿಬಂಧಕರನ್ನು ಮ್ಯಾನೇಜಿಂಗ್ ಡೈರೆಕ್ಟರ್ ಎಂದು ನೇಮಕ ಮಾಡಲಾಗುತ್ತದೆ. ಆದರೆ ಗುಜರಾತಿನಲ್ಲಿ ಸಕ್ಕರೆ ಕೈಗಾರಿಕೆಯಲ್ಲಿ ಪರಿಣತಿ ಪಡೆದ ಹಿರಿಯ ತಜ್ಞರನ್ನು ಎಂ.ಡಿ. ಆಗಿ ನೇಮಿಸಲಾಗುತ್ತದೆ. ತಜ್ಞರೇ ಎಂ.ಡಿ. ಆಗುವುದರಿಂದ ಕಾರ್ಖಾನೆ ವ್ಯವಸ್ಥಿತವಾಗಿ ನಡೆಯಲು ಅನುಕೂಲವಾಗುತ್ತದೆ. ಆಡಳಿತ ಮಂಡಳಿಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಇನ್ನೊಂದು ವಿಶೇಷ.

ಗುಜರಾತಿನ ಕಾರ್ಖಾನೆಗಳು ಕಬ್ಬನ್ನು ಹನಿ ನೀರಾವರಿ ವಿಧಾನ ಬಳಸಿ ಬೆಳೆಯಲು ಪ್ರೋತ್ಸಾಹಿಸುತ್ತಿವೆ. ಹನಿ ನೀರಾವರಿಗೆ ಹಣಕಾಸಿನ ವ್ಯವಸ್ಥೆಗಾಗಿ ಕಾರ್ಖಾನೆ, ಬ್ಯಾಂಕ್, ರೈತರ ಮಧ್ಯೆ ತ್ರಿಪಕ್ಷೀಯ ಒಪ್ಪಂದ ಏರ್ಪಡಿಸಲಾಗಿದೆ.

ಕರ್ನಾಟಕದ ಸಹಕಾರಿ ಸಕ್ಕರೆ ಕಾರ್ಖಾನೆಯ ಆಡಳಿತದ ಹೊಣೆ ಹೊತ್ತವರು ಗುಜರಾತ್ ಸಹಕಾರಿಗಳ ಬದ್ಧತೆಯನ್ನು ಅಭ್ಯಾಸ ಮಾಡಿ ಅಳವಡಿಸಿಕೊಳ್ಳುವುದು ಅವಶ್ಯ.

ವಾಚಕರ ವಾಣಿ

ಶ್ರಮ ಸಂಸ್ಕೃತಿಯ ಮಹತ್ವ ಅರಿಯಿರಿ

ವಿಶ್ವ ಆರೋಗ್ಯ ದಿನಾಚರಣೆಗೆ ಸಂಬಂಧಿಸಿದ ಡಾ. ಕೆ.ಎಸ್.ಪವಿತ್ರ ಅವರ ಲೇಖನ (ಸಂಗತ, ಏ. 7) ಸಕಾಲಿಕವಾಗಿದೆ. ಮನುಷ್ಯನ ಸರಾಸರಿ ಆಯಸ್ಸು 100 ವರ್ಷ ಎಂಬುದು ನಮ್ಮ ಜನರಲ್ಲಿ ಇರುವ ಸಾಮಾನ್ಯ ನಂಬಿಕೆ. ಆಧುನಿಕ ಜೀವನಶೈಲಿಯು ಅನೇಕ ಬಗೆಯ ಕಾಯಿಲೆಗಳಿಗೆ ಕಾರಣವಾಗುತ್ತಿದೆ. ಇದು ಆಯಸ್ಸಿನ ಮೇಲೂ ಪರಿಣಾಮ ಬೀರತೊಡಗಿದೆ. ತಂತ್ರಜ್ಞಾನದಿಂದ ಬಂದ ಸೌಲಭ್ಯಗಳು ಇದಕ್ಕೆ ಕಾರಣ. ಬೆವರು ಸುರಿಸಿ ದುಡಿಯುವುದರಿಂದ ಆರೋಗ್ಯದಾಯಕ ಜೀವನ ಸಾಧ್ಯ.

ನಮ್ಮ ತಾತನ 106 ವರ್ಷಗಳ ಬದುಕಿನ ಪಯಣದಲ್ಲಿ ಕೊನೆಯ ಕೆಲವು ದಿನಗಳು ಮಾತ್ರ ಹೊಲದಲ್ಲಿನ ಕೆಲಸವನ್ನು ನಿಲ್ಲಿಸಿದ್ದರು. ಅವರ ಆಹಾರ ಪದ್ಧತಿಯೂ ಅಷ್ಟೇ ಉತ್ತಮವಾಗಿರುತ್ತಿತ್ತು, ನಿಸರ್ಗದತ್ತವಾಗಿತ್ತು. ಈಗ ಅಡುಗೆಮನೆಯಲ್ಲಿ ಶ್ರಮ ಪಡುವಂತಹ ಯಾವ ಕೆಲಸಗಳೂ ನಡೆಯುವುದಿಲ್ಲ. ಎಲ್ಲವೂ ಮಷೀನ್‌ಮಯ. ಕೆಲವು ಮನೆಗಳಲ್ಲಿ ಅಡುಗೆ, ಮನೆಗೆಲಸ ಎಲ್ಲದಕ್ಕೂ ಕೆಲಸಗಾರರನ್ನು ಇಟ್ಟುಕೊಂಡಿರುತ್ತಾರೆ. ಮೈ ಬಗ್ಗಿಸಿ ಏನೂ ಕೆಲಸ ಮಾಡದಿದ್ದರೆ ಆರೋಗ್ಯ ಕಾಪಾಡಿಕೊಳ್ಳುವುದಾದರೂ ಹೇಗೆ?

ಇನ್ನು ಕೆಲವರಲ್ಲಿ ಮನೆಯ ಆಸುಪಾಸಿನ ಓಡಾಟಕ್ಕೂ ಬೈಕ್, ಕಾರ್‌ನಲ್ಲಿ ಹೋಗುವ ಪರಿಪಾಟ. ಅದೇ ವ್ಯಕ್ತಿ ಬೆಳಿಗ್ಗೆ ಕಿಲೊಮೀಟರುಗಟ್ಟಲೆ ವಾಕ್ ಹೋಗುತ್ತಾರೆ. ಅವಶ್ಯಕತೆ ಇದ್ದಲ್ಲಿ ಶ್ರಮಪಟ್ಟು ನಮ್ಮ ನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳೋಣ, ಜೊತೆಗೊಂದಿಷ್ಟು ಒಳ್ಳೆಯ ಆಹಾರವನ್ನು ಸೇವಿಸೋಣ. ಆಗ ಖಂಡಿತ ನಾವು ದೀರ್ಘಾಯುಷಿಗಳಾಗಬಲ್ಲೆವು.

ಶೈಲಾ ಕೊಪ್ಪದ, ಉಪ್ಪುಣಸಿ, ಹಾನಗಲ್

ಹಕ್ಕಿ-ಪಕ್ಷಿಗಳಿಗೆ ನೆರವಾಗೋಣ

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ಝಳಕ್ಕೆ ಭೂಮಿ ಕಾದ ಕಾವಲಿಯಂತಾಗಿದೆ. ಹಕ್ಕಿ-ಪಕ್ಷಿಗಳಲ್ಲಿ ನೀರಿನ ಹಾಹಾಕಾರ ಸೃಷ್ಟಿಯಾಗಿದೆ. ಬೆಳ್ಳಂಬೆಳಿಗ್ಗೆಯೇ ಬಿಸಿಲಿನ ಝಳ ಹೆಚ್ಚಾಗುತ್ತಿರುವ ಕಾರಣ ಹಕ್ಕಿಗಳು ಹಾರಾಟ ಕಡಿಮೆ ಮಾಡಿವೆ. ಅವುಗಳನ್ನು ರಕ್ಷಿಸುವ ಹೊಣೆ ಮನುಷ್ಯರಾದ ನಮ್ಮ ಮೇಲಿದೆ.

ನಮ್ಮ ಮನೆಗಳ ಬಳಿ ಒಂದು ಪಾತ್ರೆಯಲ್ಲೋ ಮಡಕೆಯಲ್ಲೋ ನೀರಿಟ್ಟರೆ ಅವು ಕುಡಿದು ದಾಹ ತೀರಿಸಿಕೊಳ್ಳುತ್ತವೆ. ಕಾಂಕ್ರೀಟ್ ಕಾಡಿನಲ್ಲಿ ಅವುಗಳಿಗೆ ಈಗ ನೆಲೆ ಇಲ್ಲ. ಒಂದೆರಡು ವರ್ಷಗಳ ಹಿಂದೆ ಹದ್ದುಗಳು ಬೆಂಗಳೂರಿನಲ್ಲಿ ಹೆಚ್ಚಾಗಿ ಕಾಣುತ್ತಿದ್ದವು. ಆದರೆ ಈಗ ಅವುಗಳ ಸಂಖ್ಯೆ ಕ್ಷೀಣಿಸುತ್ತಿದೆ. ಪಾರಿವಾಳ, ಗುಬ್ಬಚ್ಚಿಗಳ ಸಂಖ್ಯೆಯೂ ಕಡಿಮೆಯಾಗಿದೆ. ಉಳಿದಿರುವ ಪಕ್ಷಿ ಸಂಕುಲವನ್ನಾದರೂ ರಕ್ಷಿಸೋಣ, ಮಾನವೀಯತೆ ಮೆರೆಯೋಣ.

ಸೋಮನಗೌಡ ಎಸ್.ಎಂ., ಕಟ್ಟಿಗೆಹಳ್ಳಿ

ಪರಿಣಾಮಕಾರಿ ಮನಃಪರಿವರ್ತನೆ

ಶಿವಮೊಗ್ಗ ಕೇಂದ್ರ ಕಾರಾಗೃಹದಲ್ಲಿನ ಕೈದಿಗಳು ತಮ್ಮ ಅನುಭವಗಳನ್ನು ಕವನಗಳ ಮೂಲಕ ಹೊರಹಾಕಿದ್ದು, ಕಾರಾಗೃಹದ ಅಧಿಕಾರಿಗಳು ಅವುಗಳಿಗೆ ಸಂಕಲನದ ರೂಪ ನೀಡಿದ್ದಾರೆ (ಪ್ರ.ವಾ., ಏ. 7). ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿಸಿ ಭಾವನೆ ವ್ಯಕ್ತಪಡಿಸಲು ಅವಕಾಶ ಮಾಡಿಕೊಟ್ಟಿರುವುದು ಪರಿಣಾಮಕಾರಿಯಾದ ಮನಃಪರಿವರ್ತನೆ ಹಾಗೂ ಮೆಚ್ಚುವಂತಹ ಸಂಗತಿ. ಇದೇ ಮಾದರಿಯಲ್ಲಿ ಇತರ ಕಾರಾಗೃಹಗಳಲ್ಲೂ ಕಲಿಕೆಗೆ ಮಹತ್ವ ಸಿಗುವಂತೆ ಆಗಬೇಕು. ಕಲಿಕೆ ಎಂಬುದು ಮನುಷ್ಯರನ್ನು ಬದಲಾಯಿಸುವುದರಲ್ಲಿ ಎಷ್ಟು ಮುಖ್ಯ ಪಾತ್ರ ವಹಿಸುತ್ತದೆ ಎಂಬುದಕ್ಕೆ ಇದೊಂದು ಅತ್ಯುತ್ತಮ ಉದಾಹರಣೆ. ಅಕ್ಷರ ಕಲಿಕೆಯಿಂದ ಕವಿಗಳಾಗಿರುವ ಕೈದಿಗಳು ಬಿಡುಗಡೆಯಾದ ಬಳಿಕ ಸಮಾಜದ ಏಳಿಗೆಗೆ ಮುಂದಾಗಲಿ. ಇವರು ಬರೆದ ಕವನಗಳು ಮನಸ್ಸುಗಳನ್ನು ಬದಲಿಸಲಿ.

ಕೀರ್ತನ ನಾಗರಾಜ್, ಚಟ್ನಳ್ಳಿ, ಶಿವಮೊಗ್ಗ

ತಾರತಮ್ಯ ಧೋರಣೆ ಕೈಬಿಡಿ

‘ಹೆಚ್ಚಿನ ದೈಹಿಕ ಶ್ರಮ ವಹಿಸಿ ಕೆಲಸ ಮಾಡುವ ಪುರುಷರಿಗೆ ಹೆಚ್ಚು ಕೂಲಿ ನೀಡಿಕೆ ಸಮಂಜಸ’ ಎಂದು ಜಿ.ಎಚ್. ವೆಂಕಟೇಶ ಮೂರ್ತಿ ಅವರು ಹೇಳಿರುವುದನ್ನು (ವಾ.ವಾ., ಏ. 6) ಒಪ್ಪಲಾಗದು. ನಿಸರ್ಗದತ್ತವಾಗಿ ಪುರುಷ ಹಾಗೂ ಸ್ತ್ರೀಯರ ದೇಹ ರಚನೆ ಹಾಗೂ ಶಕ್ತಿ, ಸಾಮರ್ಥ್ಯಗಳಲ್ಲಿ ವ್ಯತ್ಯಾಸಗಳಿವೆ. ಆದರೆ ಅದರ ಆಧಾರದ ಮೇಲೆ ಕೂಲಿ, ವೇತನ ನೀಡಿಕೆಯಲ್ಲಿ ವ್ಯತ್ಯಾಸ ಮಾಡಲಾಗದು. ಕೆಲವು ಸನ್ನಿವೇಶಗಳಲ್ಲಿ ಮಹಿಳೆಯರು ಪುರುಷರಿಗಿಂತಲೂ ಹೆಚ್ಚಿನ ತಾಳ್ಮೆ, ಸಹನೆ, ಸಾಮರ್ಥ್ಯ ತೋರುತ್ತಾರೆ.

ಮಕ್ಕಳನ್ನು ಹೆತ್ತು ಕೊಡಲು ಮಹಿಳೆಗೆ ಶುಲ್ಕ ಅಥವಾ ಕೂಲಿ ನಿಗದಿ ಮಾಡಲಾಗದು ಅಲ್ಲವೇ? ನಿಸರ್ಗದತ್ತ ಜೈವಿಕ ವ್ಯತ್ಯಾಸಗಳ ಕಾರಣದಿಂದ ಉತ್ಪಾದಕತೆ ಕಡಿಮೆಯಾಗಿ ನಷ್ಟವಾಗುತ್ತದೆ ಎಂಬ ಕಾರಣ ನೀಡಿ ಕಡಿಮೆ ಕೂಲಿ ಅಥವಾ ಕಡಿಮೆ ವೇತನ ನೀಡುವುದು ಸರಿಯಲ್ಲ. ಈ ಉತ್ಪಾದಕತೆಯ ನಷ್ಟ ನಿಸರ್ಗದ ಇನ್ನೊಂದು ಅಂಶದಲ್ಲಿ ಮಹಿಳೆಯಿಂದ ಸರಿದೂಗಲ್ಪಡುತ್ತದೆ. ಜನಸಂಖ್ಯೆಯ ಶೇ 50ರಷ್ಟು ಪ್ರಮಾಣದಲ್ಲಿರುವ ಮಹಿಳೆಯರ ಸಕ್ರಿಯ ಸಹಭಾಗಿತ್ವ ಖಾತರಿಪಡಿಸಲು ಸಮಾಜ ಇಂತಹ ತಾರತಮ್ಯ ಧೋರಣೆಗಳನ್ನು ಕೈಬಿಡಬೇಕು.

ಡಾ. ಎಚ್.ಬಿ.ಚಂದ್ರಶೇಖರ್, ಬೆಂಗಳೂರು

ಮುಷ್ಕರ: ತಾರ್ಕಿಕ ಅಂತ್ಯ ಸಿಗಲಿ

ಸಾರಿಗೆ ನೌಕರರು ಮುಷ್ಕರನಿರತರಾಗಿರುವ ಹಿನ್ನೆಲೆಯಲ್ಲಿ ಸರ್ಕಾರ ಪರ್ಯಾಯ ಕ್ರಮಕ್ಕೆ ಮುಂದಾಗುವ ಎಚ್ಚರಿಕೆ ನೀಡಿದೆ. ಜನರ ಪಡಿಪಾಟಲು ತಪ್ಪಿಸಲು ಇದು ಅಗತ್ಯವಾದರೂ ಸೌಹಾರ್ದ ವಾತಾವರಣದಲ್ಲಿ ಸಮಸ್ಯೆ ಬಗೆಹರಿಸುವುದು ಆದ್ಯತೆಯಾಗಲಿ. ಕಳೆದ ಡಿಸೆಂಬರ್‌ನಲ್ಲಿ ನೀಡಿದ್ದ ಭರವಸೆಗಳು ಈಡೇರದೇ ಹೋಗಿದ್ದರಿಂದ ಮುಷ್ಕರದ ಅನಿವಾರ್ಯ ಎದುರಾಗಿದೆ ಎಂದು ನೌಕರರು ಹೇಳುತ್ತಿದ್ದಾರೆ. ಇದೇನೇ ಇರಲಿ, ಸರ್ಕಾರ ಮತ್ತು ನೌಕರರ ಹಗ್ಗ ಜಗ್ಗಾಟದಲ್ಲಿ ಸಾರ್ವಜನಿಕರು ತೊಂದರೆ ಎದುರಿಸುವಂತಾಗಿದೆ.

ಸರ್ಕಾರ ಜನರಿಗೆ ತೊಂದರೆಯಾಗದಂತೆ ರಾಜ್ಯದ ಎಲ್ಲ ಕಡೆಗಳಲ್ಲಿಯೂ ಖಾಸಗಿ ಬಸ್ ವ್ಯವಸ್ಥೆ ಮಾಡಲು ಸಾಧ್ಯವಿಲ್ಲ. ಸಾರಿಗೆ ನೌಕರರು ಸಹ ಪರಿಸ್ಥಿತಿಯ ತೀವ್ರತೆ ಅರಿತು ಮಾತುಕತೆ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಪ್ರತಿಭಟನೆಗೆ ಬೇರೆ ಬೇರೆ ಮಾರ್ಗಗಳಿವೆ. ಬಸ್ ಸಂಚಾರ ನಿಲ್ಲಿಸುವುದರಿಂದ ಸರ್ಕಾರಕ್ಕಿಂತ ಜನರಿಗೆ ಹೊರೆಯಾಗುವ ಬಗ್ಗೆ ನೌಕರರು ಪರಾಮರ್ಶೆ ಮಾಡಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕಾಡಿನ ಬೆಂಕಿಯ ಬಗ್ಗೆ ಇರಲಿ ಎಚ್ಚರ

ಕಾಳ್ಗಿಚ್ಚಿನ ಕೆನ್ನಾಲಿಗೆ

ಬೇಸಿಗೆ ಸಮೀಪಿಸಿತು ಎಂದರೆ ಹತ್ತು ಹಲವು ಚಿಂತೆಗಳ ಜತೆಗೆ ಕಾಳ್ಗಿಚ್ಚಿನ ಚಿಂತೆಯೂ ಜಗತ್ತನ್ನು ಕಾಡಲು ಆರಂಭಿಸುತ್ತದೆ. ಕೆಲವು ಸಂದರ್ಭದಲ್ಲಿ ಕಾಳ್ಗಿಚ್ಚು ಒಂದು ನೈಸರ್ಗಿಕ ಕ್ರಿಯೆ ಆಗಿದ್ದರೂ, ಒಂದು ಹಂತವನ್ನು ಮೀರಿದರೆ ಅದರ ಪರಿಣಾಮ ಭೀಕರವಾಗುತ್ತದೆ. ಇದರಲ್ಲಿ ಮಾನವನ ಪಾಲೂ ಸಾಕಷ್ಟು ಇರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಜಗತ್ತನ್ನು ಕಾಡುತ್ತಿರುವ ಪ್ರಮುಖ ಆತಂಕಗಳಲ್ಲಿ ಅದು ಒಂದೆನಿಸಿದೆ. 2019-20ರಲ್ಲಿ ಆಸ್ಟ್ರೇಲಿಯಾದಲ್ಲಿ ಸಂಭವಿಸಿದ ಕಾಳ್ಗಿಚ್ಚಿನ ಭೀಕರತೆ ಈಗಲೂ ಕಣ್ಣಿಗೆ ಕಟ್ಟಿದಂತಿದೆ.

ಕಳೆದ 16 ವರ್ಷಗಳಲ್ಲಿ ಉಪಗ್ರಹದ ಮೂಲಕ ತೆಗೆದಿರುವ ಚಿತ್ರಗಳನ್ನು ವಿಶ್ಲೇಷಿಸಿದಾಗ, ಜಾಗತಿಕ ಮಟ್ಟದಲ್ಲಿ ಪ್ರತಿ ವರ್ಷವೂ ಸುಮಾರು 340 ಕೋಟಿ ಹೆಕ್ಟೇರ್‌ನಷ್ಟು ಅರಣ್ಯವು ಬೆಂಕಿಗೆ ಆಹುತಿಯಾಗಿರುವುದು ಕಂಡುಬರುತ್ತದೆ ಎಂದು ವರದಿಗಳು ಹೇಳಿವೆ. ಇದರಲ್ಲಿ ಹೆಚ್ಚಾಗಿ ಪ್ರಾಥಮಿಕ ಹಂತದ ಕಾಡುಗಳೇ ನಾಶವಾಗುತ್ತಿವೆ. ಇದರ ಪರಿಣಾಮವು ಒಟ್ಟಾರೆ ಹವಾಗುಣದ ಮೇಲಾಗುತ್ತದೆ ಎಂದು ತಜ್ಞರು ಹೇಳುತ್ತಿದ್ದಾರೆ.

2020ನೇ ವರ್ಷವಂತೂ ಕಾಳ್ಗಿಚ್ಚಿನ ವರ್ಷ ಎಂಬಂತಾಗಿತ್ತು. ಭೂಮಿಯ ಯಾವ ಖಂಡವನ್ನೂ ಬಿಡದಂತೆ ಕಾಳ್ಗಿಚ್ಚು ಕಾಡಿತ್ತು. 2019-20ರಲ್ಲಿ ಆಸ್ಟ್ರೇಲಿಯಾ ಒಂದರಲ್ಲೇ ಸುಮಾರು 1.9 ಕೋಟಿ ಹೆಕ್ಟೇರ್‌ನಷ್ಟು ಅರಣ್ಯ ಕಾಳ್ಗಿಚ್ಚಿಗೆ ಆಹುತಿಯಾಗಿದೆ. ಅದು ಬಿಡುಗಡೆ ಮಾಡಿರುವ ಇಂಗಾಲದ ಆಕ್ಸೈಡ್, ಬಲಿ ತೆಗೆದುಕೊಂಡಿರುವ ಪ್ರಾಣಿ ಸಂಕುಲ ಅಗಾಧವಾದುದು. ಸಾವಿರಾರು ಮನೆಗಳು ನಾಶವಾದವು. ಪ್ರಾಣಹಾನಿಯಾಯಿತು, ಲಕ್ಷಾಂತರ ಮಂದಿ ನೆಲೆ ಕಳೆದುಕೊಂಡರು.

ಇಂಡೊನೇಷ್ಯಾದಲ್ಲಿ ಕಳೆದ ವರ್ಷ 16.5 ಲಕ್ಷ ಹೆಕ್ಟೇರ್‌ನಷ್ಟು ಅರಣ್ಯ ಕಾಳ್ಗಿಚ್ಚಿಗೆ ಬಲಿಯಾಗಿದೆ. ಅದರಲ್ಲಿ ಶೇ 76ರಷ್ಟು ಕಾಡು, ಒಂದು ಕಾಲದಲ್ಲಿ ದಟ್ಟ ಅರಣ್ಯವಾಗಿತ್ತು. ಮತ್ತೆ ಮತ್ತೆ ಬೆಂಕಿಗೆ ಆಹುತಿಯಾಗಿ, ಇತ್ತೀಚಿನ ವರ್ಷಗಳಲ್ಲಿ ಅದು ಕುರುಚಲು ಕಾಡಾಗಿ ಪರಿವರ್ತನೆಯಾಗಿದೆ. ಸೈಬೀರಿಯಾ, ರಷ್ಯಾದಲ್ಲೂ ಹವಾಮಾನ ಬದಲಾವಣೆಯ ಪರಿಣಾಮ ಕಾಳ್ಗಿಚ್ಚಿನ ಸಂಖ್ಯೆ ಹೆಚ್ಚುತ್ತಿದೆ.

ಕಾಳ್ಗಿಚ್ಚಿನ ಪರಿಣಾಮಗಳು ಕುತೂಹಲಕರ ಎಂದು ವಿಜ್ಞಾನಿಗಳು ಹೇಳುತ್ತಾರೆ. ಶತಮಾನಗಳಿಂದ ಪ್ರವಾಹವನ್ನು ಕಾಣದಿರುವ ಪ್ರದೇಶಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರವಾಹಗಳು ಸಂಭವಿಸುತ್ತಿವೆ. ಇದಕ್ಕೂ ಕಾಳ್ಗಿಚ್ಚಿಗೂ ಸಂಬಂಧವಿದೆ ಎಂದು ವಿಜ್ಞಾನಿಗಳು ವಿಶ್ಲೇಷಿಸುತ್ತಾರೆ.

ಜಾಗತಿಕ ಮಟ್ಟದಲ್ಲಿ ಉತ್ಪಾದನೆಯಾಗುವ ಶೇ 5ರಷ್ಟು (200 ಕೋಟಿ ಟನ್‌ನಷ್ಟು) ಇಂಗಾಲದ ಆಕ್ಸೈಡ್ ಅನ್ನು ಅಮೆಜಾನ್ ಮಳೆಕಾಡುಗಳು ಹೀರಿಕೊಳ್ಳುತ್ತವೆ. ಆದರೆ, ಹವಾಮಾನ ಬದಲಾವಣೆಯು ಈ ಕಾಡುಗಳ ಮೇಲೂ ಆಗಿದೆ. ಇತ್ತೀಚಿನ ವರ್ಷಗಳಲ್ಲಿ ಅಮೆಜಾನ್ ಕಾಡಿನಲ್ಲೂ ಕಾಳ್ಗಿಚ್ಚಿನ ಪ್ರಮಾಣ ಹೆಚ್ಚಾಗುತ್ತಿದೆ. ಇದೇ ಸ್ಥಿತಿ ಮುಂದುವರಿದರೆ, ಅಮೆಜಾನ್ ಕಾಡು ಇಂಗಾಲವನ್ನು ಹೀರುವ ಬದಲು ಇಂಗಾಲವನ್ನು ಬಿಡುಗಡೆ ಮಾಡುವ ಕಾಡುಗಳಾಗಿ ಪರಿವರ್ತನೆಯಾಗುವ ಅಪಾಯ ಇದೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ.

ಕಳೆದ ಕೆಲವು ದಿನಗಳಿಂದ ಉತ್ತರಾಖಂಡವು ಕಾಳ್ಗಿಚ್ಚಿನಿಂದ ಸುದ್ದಿಯಾಗುತ್ತಿದೆ. ರಾಜ್ಯದ ಕನಿಷ್ಠ 40 ಕಡೆಗಳಲ್ಲಿ ಬೆಂಕಿ ವೇಗವಾಗಿ ಹರಡುತ್ತಿದೆ. ಗರ್ವಾಲ್ ಮತ್ತು ಕುಮಾವ್ ಪ್ರದೇಶದ ನೈನಿತಾಲ್, ಅಲ್ಮೋರಾ, ಟೆಹರಿ ಹಾಗೂ ಪುರಿ ಜಿಲ್ಲೆಗಳಲ್ಲಿ ಭಾರಿ ಹಾನಿ ಆಗಿರುವುದಾಗಿ ವರದಿಯಾಗಿದೆ. 500 ಹೆಕ್ಟೇರ್‌ಗೂ ಹೆಚ್ಚು ಅರಣ್ಯಕ್ಕೆ ಹಾನಿಯಾಗಿದೆ.

ಆಸ್ಟ್ರೇಲಿಯಾದಲ್ಲಿ 2019ರಲ್ಲಿ ಸಂಭವಿಸಿದ ಕಾಳ್ಗಿಚ್ಚಿನ ದೃಶ್ಯ

ಮಾನವ ನಿರ್ಮಿತ ಘಟನೆಗಳೇ ಹೆಚ್ಚು

ಕಾಳ್ಗಿಚ್ಚಿನ ಸಮಸ್ಯೆ ಕರ್ನಾಟಕವನ್ನೂ ಬಿಟ್ಟಿಲ್ಲ. ರಾಜ್ಯದ ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಿಂದ ಆಗಾಗ ಕಾಳ್ಗಿಚ್ಚಿನ ವರದಿಗಳು ಬರುತ್ತಲೇ ಇರುತ್ತವೆ. ಬಂಡಿಪುರ, ನಾಗರಹೊಳೆ ಅರಣ್ಯದಲ್ಲಿ ಇತ್ತೀಚೆಗೆ ಕಾಣಿಸಿದ್ದ ಬೆಂಕಿಯು ಅಪಾರ ಪ್ರಮಾಣದ ನಷ್ಟವನ್ನು ಉಂಟುಮಾಡಿತ್ತು.

ರಾಜ್ಯದಲ್ಲಿ ನೈಸರ್ಗಿಕ ಕಾಳ್ಗಿಚ್ಚಿನ ಘಟನೆಗಳು ತೀರಾ ವಿರಳ. ಇಲ್ಲಿ ಮಾನವ ನಿರ್ಮಿತ ಘಟನೆಗಳೇ ಹೆಚ್ಚು ಎಂದು ಅಧಿಕಾರಿಗಳು ಹೇಳುತ್ತಾರೆ.

ರಾಜ್ಯದಲ್ಲಿ ಸುಮಾರು ಮೂರುಲಕ್ಷ ಎಕರೆ ಅರಣ್ಯ ಪ್ರದೇಶವನ್ನು 'ಅತಿ ಹೆಚ್ಚು' ಕಾಳ್ಗಿಚ್ಚು ಸಂಭವನೀಯ ಪ್ರದೇಶವೆಂದು ಗುರುತಿಸಲಾಗಿದೆ. ಇಲ್ಲಿ 13 ವರ್ಷಗಳಲ್ಲಿ 50ಕ್ಕೂ ಹೆಚ್ಚು ಬೆಂಕಿ ಘಟನೆಗಳು ಸಂಭವಿಸಿವೆ. ಇನ್ನುಳಿದಂತೆ 7.6 ಲಕ್ಷ ಎಕರೆ ಪ್ರದೇಶವನ್ನು 'ಹೆಚ್ಚು ಸಂಭವನೀಯ' ಪ್ರದೇಶವೆಂದು ಗುರುತಿಸಲಾಗಿದೆ.

ಈ ಹೆಚ್ಚು ಅಪಾಯಕಾರಿ ಪ್ರದೇಶಗಳೆಲ್ಲವೂ ಉತ್ತರಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಹಾಗೂ ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಯಲ್ಲಿವೆ. ಜನವರಿ ವೇಳೆಗೆ ತಾಪಮಾನದಲ್ಲಿ ಏರಿಕೆಯಾಗುತ್ತಿದ್ದಂತೆ, ಇಲ್ಲಿ ಕಾಳ್ಗಿಚ್ಚಿನ ಅಪಾಯ ಹೆಚ್ಚುತ್ತದೆ. ಅರಣ್ಯ ಸಿಬ್ಬಂದಿ ಅತಿ ಹೆಚ್ಚು ಎಚ್ಚರಿಕೆಯಿಂದ ಇರಬೇಕಾಗುತ್ತದೆ ಎಂದು ವರದಿಗಳು ಹೇಳಿವೆ.

ನಿಯಂತ್ರಣ ಕ್ರಮಗಳು

ಕಾಳ್ಗಿಚ್ಚಿನ ಬಗ್ಗೆ, ಕಾಡಂಚಿನ ಜನರಲ್ಲಿ ಅರಿವು ಮೂಡಿಸುವುದೇ ಅತ್ಯಂತ ಪರಿಣಾಮಕಾರಿ ನಿಯಂತ್ರಣ ಕ್ರಮ ಎನ್ನಲಾಗಿದೆ. ಹತ್ತಿಕೊಂಡಿರುವ ಬೆಂಕಿಯನ್ನು ನಿಯಂತ್ರಿಸುವುದು ಒಂದು ಕ್ರಮವಾದರೆ, ಬೆಂಕಿ ಹತ್ತಿಕೊಳ್ಳದಂತೆ ಎಚ್ಚರ ವಹಿಸುವುದು ಅತ್ಯಂತ ಪರಿಣಾಮಕಾರಿ ನಿಯಂತ್ರಣ ಕ್ರಮ ಎಂದು ಪರಿಗಣಿಸಲಾಗಿದೆ

- ಬೇಸಿಗೆಯಲ್ಲಿ ಕಾಡಂಚಿನಲ್ಲಿ ಬೆಂಕಿ ಹಚ್ಚುವುದನ್ನು ತಡೆಯಬೇಕು
- ಕಾಡಿನ ಸಮೀಪದ ಹೊಲಗಳಲ್ಲಿ ಬೆಂಕಿ ಹಚ್ಚುವುದನ್ನು, ಪಟಾಕಿ ಸಿಡಿಸುವುದನ್ನು ತಪ್ಪಿಸಬೇಕು
- ಕಾಡಿನಲ್ಲಿ ರಾಸಾಯನಿಕ ತ್ಯಾಜ್ಯ ಸುರಿಯುವುದನ್ನು ಕಟ್ಟುನಿಟ್ಟಾಗಿ ತಡೆಯಬೇಕು
- ಹೈಟೆನ್ಷನ್ ವಿದ್ಯುತ್ ಮಾರ್ಗದ ಕೆಳಗೆ ಒಣ ಹುಲ್ಲು, ತರಗೆಲೆ ಇರದಂತೆ ನೋಡಿಕೊಳ್ಳಬೇಕು
- ನಿರ್ಮಾಣ ಕಾಮಗಾರಿ ವೇಳೆ ಬೆಂಕಿ ಹೊತ್ತಿಕೊಳ್ಳದಂತೆ ಎಚ್ಚರವಹಿಸಬೇಕು
- ಬೇಸಿಗೆ ಅವಧಿಯಲ್ಲಿ ಕಾಡಿನಲ್ಲಿ ಫೈರ್‌ಕ್ಯಾಂಪ್, ಅಡುಗೆ ಮಾಡುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಬೇಕು

ಕಾಳ್ಗಿಚ್ಚಿನ ಬಗೆಗಳು...

ಕಾಳ್ಗಿಚ್ಚಿನಲ್ಲಿ ಪ್ರಮುಖವಾಗಿ ಮೂರು ವರ್ಗೀಕರಣಗಳನ್ನು ಮಾಡಲಾಗಿದೆ. ಕಾಳ್ಗಿಚ್ಚಿನ ಸ್ವರೂಪ, ಪರಿಣಾಮ ಮತ್ತು ವ್ಯಾಪ್ತಿಗಳನ್ನು ಆಧರಿಸಿ ಈ ವರ್ಗೀಕರಣವನ್ನು ಮಾಡಲಾಗಿದೆ



ನೆಲಬೆಂಕಿ: ಕಾಡಿನ ನೆಲದ ಮೇಲ್ಮೈನಲ್ಲಿರುವ ಉದುರೆಲೆ, ಪೊದೆಗಳು, ಸಣ್ಣಪುಟ್ಟ ಗಿಡಗಳು, ಕಟ್ಟಿಗೆಗಳಿಗೆ ಮಾತ್ರ ಹತ್ತಿಕೊಳ್ಳುವ ಬೆಂಕಿ ಇದು. ಇದು ವೇಗವಾಗಿ ಹರಡುತ್ತದೆ. ಆದರೆ ಅರಣ್ಯ ಸಂಪತ್ತು ನಾಶವಾಗುವುದಿಲ್ಲ. ಭಾರತದಲ್ಲಿ ಸಂಭವಿಸುವ ಕಾಳ್ಗಿಚ್ಚಿನಲ್ಲಿ ನೆಲಬೆಂಕಿಯ ಪ್ರಮಾಣ ಹೆಚ್ಚು. ಇದು ಕಾಡು ಸಮೃದ್ಧವಾಗಿ ಬೆಳೆಯಲು ನೆರವಾಗುತ್ತದೆ. ಆದರೆ ಈ ಬೆಂಕಿಯನ್ನು ನಿಯಂತ್ರಿಸುವಲ್ಲಿ ಬಹಳಷ್ಟು ತೊಡಕುಗಳಿವೆ. ವೇಗವಾಗಿ ಹರಡುವುದರಿಂದ, ಬೆಂಕಿ ನಿಯಂತ್ರಣಕ್ಕೆ ಮುಂದಾಗುವವರು ಬೆಂಕಿಗೆ ಆಹುತಿಯಾಗುವ ಅಪಾಯ ಹೆಚ್ಚು. ಆದರೆ, ಬೆಂಕಿ ಒಂದೇ ದಿಕ್ಕಿನಲ್ಲಿ ಹರಡುವ ಕಾರಣ, ಪ್ರಾಣಿಗಳು ತಪ್ಪಿಸಿಕೊಳ್ಳಲು ಸಾಕಷ್ಟು ಸಮಯಾವಕಾಶ ದೊರೆಯುತ್ತದೆ

ಮರ ಬೆಂಕಿ: ಮರಗಳ ಎಲೆ, ರೆಂಬೆ-ಕೊಂಬೆಗಳ ಭಾಗದಲ್ಲಿ ಹತ್ತಿಕೊಳ್ಳುವ ಬೆಂಕಿ ಇದು. ಬಿರುಬೇಸಿಗೆಯಲ್ಲಿ ಮರಗಳು ಒಂದಕ್ಕೊಂದು ತಿಕ್ಕಿ, ಬೆಂಕಿ ಹತ್ತಿಕೊಳ್ಳುವ ಅಪಾಯವೂ ಇರುತ್ತದೆ. ಗಾಳಿಯ ವೇಗ ಹೆಚ್ಚು ಇರುವ ಎತ್ತರದ ಸ್ಥಳದಲ್ಲಿ ಬೆಂಕಿ ಇರುವ ಕಾರಣ, ಒಂದು ಮರದಿಂದ ಮತ್ತೊಂದು ಮರಕ್ಕೆ ಅತ್ಯಂತ ತ್ವರಿತವಾಗಿ ಬೆಂಕಿ ಹರಡುತ್ತದೆ. ಅರಣ್ಯ ನಾಶವೂ ಆಗುತ್ತದೆ. ಇದರ ನಿಯಂತ್ರಣ ಸಾಧ್ಯವೇ ಇಲ್ಲ ಎನ್ನಬಹುದು. ಮರಬೆಂಕಿಯು ಕೆಳಕ್ಕೆ ಇಳಿಯುತ್ತಾ ನೆಲಬೆಂಕಿಯನ್ನೂ ಸೃಷ್ಟಿಸುತ್ತದೆ. ಇದು ನೆಲಬೆಂಕಿಯಾಗಿ ಪರಿವರ್ತನೆಯಾದಾಗ ಮಾತ್ರ ನಿಯಂತ್ರಣ ಸಾಧ್ಯ. ಇಂತಹ ಬೆಂಕಿಯಿಂದ ಪ್ರಾಣಿಗಳು ತಪ್ಪಿಸಿಕೊಳ್ಳುವ ಸಾಧ್ಯತೆ ಅತ್ಯಂತ ಕಡಿಮೆ. ಬೆಂಕಿ ನಿಯಂತ್ರಣಕ್ಕೆ ಹೋಗುವ ಸಿಬ್ಬಂದಿಯೂ ಬೆಂಕಿಗೆ ಆಹುತಿಯಾಗುವ ಸಾಧ್ಯತೆ ಅತ್ಯಧಿಕವಾಗಿರುತ್ತದೆ. ಇದರಲ್ಲಿ ಅರಣ್ಯ ನಾಶ ಅತ್ಯಧಿಕವಾದರೂ, ಒಂದೇ ಮಳೆ ಋತುವಿನಲ್ಲಿ ಹಸಿರು ಮತ್ತೆ ಚಿಗುರೊಡೆಯುತ್ತದೆ

ನೆಲದಡಿಯ ಬೆಂಕಿ: ಕಾಡಿನ ನೆಲದ ಅಡಿಯಲ್ಲಿರುವ ವಸ್ತುಗಳಿಗೆ ಹತ್ತಿಕೊಂಡಿರುವ ಬೆಂಕಿ. ಹುಲ್ಲುಹಾಸು, ತರಗೆಲೆ, ಪೊದೆಗಳ ಕೆಳಗೆ ಹಲವು ವರ್ಷಗಳಿಂದ ಸಂಗ್ರಹವಾಗಿರುವ ಸಾವಯವ ಗೊಬ್ಬರದಂತಹ ವಸ್ತುವಿಗೆ, ಮರಗಿಡಗಳ ಬೇರುಗಳಿಗೆ ಈ ಬೆಂಕಿ ಹತ್ತಿಕೊಂಡಿರುತ್ತದೆ. ಗೊಬ್ಬರದಲ್ಲಿರುವ ಮಿಥೇನ್‌ನಿಂದ ಈ ಬೆಂಕಿ ಉರಿಯುತ್ತದೆ. ಇದು ಅತ್ಯಂತ ಕಡಿಮೆ ವೇಗದಲ್ಲಿ ಹರಡುತ್ತದೆ. ಅಲ್ಲದೆ, ಬರಿಗಣ್ಣಿಗೆ ಈ ಬೆಂಕಿ ಕಾಣುವುದೂ ಇಲ್ಲ. ಹೀಗಾಗಿ ಇದು ಅತ್ಯಂತ ಅಪಾಯಕಾರಿ, ನಿಯಂತ್ರಣ ಕಷ್ಟಸಾಧ್ಯ. ಈ ರೀತಿಯ ಬೆಂಕಿಯಿಂದ ಅರಣ್ಯ ಸಂಪೂರ್ಣವಾಗಿ ನಾಶವಾಗುತ್ತದೆ. ಮತ್ತೆ ಹಸಿರು ತಲೆಎತ್ತಲು ಹತ್ತಾರು ವರ್ಷ ಬೇಕಾಗುತ್ತದೆ

ಕಾರಣಗಳು

ಭಾರತವೂ ಸೇರಿದಂತೆ ಜಗತ್ತಿನ ಎಲ್ಲೆಡೆ ಕಾಣಿಸಿಕೊಳ್ಳುವ ಕಾಳ್ಗಿಚ್ಚಿಗೆ ಮನುಷ್ಯನ ಚಟುವಟಿಕೆಗಳೇ ಪ್ರಮುಖ ಕಾರಣ ಎಂದು ಹಲವು ಅಧ್ಯಯನಗಳು ಸ್ಪಷ್ಟಪಡಿಸಿವೆ. ನೈಸರ್ಗಿಕ ಕಾರಣದಿಂದ ಬೆಂಕಿ ಹತ್ತಿಕೊಳ್ಳುವ ಪ್ರಮಾಣ ಅತ್ಯಂತ ಕಡಿಮೆ

ಕೃತಕ ಕಾರಣಗಳು

- ಹೊಲಗಳಲ್ಲಿ ಹಚ್ಚಿರುವ ಬೆಂಕಿ ಕಾಡಿಗೆ ವ್ಯಾಪಿಸುವುದು
- ಜನರು ಬೀಡಿ-ಸಿಗರೇಟು ಹಚ್ಚಿ ಬಿಸಾಡುವ ಬೆಂಕಿ ಕಡ್ಡಿ
- ಕಾಡಿನಲ್ಲಿ ಸುರಿಯಲಾದ ತ್ಯಾಜ್ಯಗಳಲ್ಲಿ ಇರುವ ರಾಸಾಯನಿಕ ವಸ್ತುಗಳಿಂದ ಬೆಂಕಿ ಹತ್ತಿಕೊಳ್ಳುವುದು
- ಕಾಡಿನ ಸಮೀಪ ಪಟಾಕಿಗಳನ್ನು ಸಿಡಿಸುವುದು
- ಕಾಡಿನಲ್ಲಿ ಅಡುಗೆ ಮಾಡುವುದು, ಫೈರ್‌ಕ್ಯಾಂಪ್ ಮಾಡುವುದು
- ಕಾಡನ್ನು ಹಾದುಹೋಗಿರುವ ಹೈಟೆನ್ಷನ್ ತಂತಿಗಳಲ್ಲಿ ಕಿಡಿ ಉಂಟಾಗಿ ಬೆಂಕಿ ಹತ್ತಿಕೊಳ್ಳುವುದು
- ಕಾಡಿನಲ್ಲಿ ಸಂಚರಿಸುವ ವಾಹನಗಳ ಸೈಲೆನ್ಸರ್ ಬಿಸಿಯಿಂದ ಒಣಹುಲ್ಲಿಗೆ ಬೆಂಕಿ ಹತ್ತಿಕೊಳ್ಳುವುದು
- ಕಾಡಿನಲ್ಲಿ ನಡೆಯುವ ವಿವಿಧ ನಿರ್ಮಾಣ ಕಾಮಗಾರಿಗಳಿಂದ
- ಬುಡಕಟ್ಟು ಜನರು ವಸತಿ ಪ್ರದೇಶಗಳಿಂದ



ನೈಸರ್ಗಿಕ ಕಾರಣಗಳು

- ಸಿಡಿಲು ಬಡಿದು ಮರಗಳಿಗೆ ಬೆಂಕಿ ಹತ್ತಿಕೊಳ್ಳುವುದು
- ವಿಪರೀತ ಬಿಸಿಲಿನಲ್ಲಿ ಮರಗಳು ಒಂದಕ್ಕೊಂದು ತಿಕ್ಕಿ, ಬೆಂಕಿ ಹತ್ತಿಕೊಳ್ಳುವುದು
- ಕಲ್ಲುಗಳು ಉರುಳಿ, ಕಿಡಿ ಉಂಟಾಗಿ ಬೆಂಕಿ ಹತ್ತಿಕೊಳ್ಳುವುದು
- ಅಗ್ನಿಪರ್ವತ ಸ್ಫೋಟದಿಂದ ಬೆಂಕಿ ಹತ್ತಿಕೊಳ್ಳುವುದು

ಆಧಾರ: ಕೇಂದ್ರ ಸರ್ಕಾರದ 'ಫಾರೆಸ್ಟ್ ಫೈರ್ ಇನ್ ಇಂಡಿಯಾ: 2018' ವರದಿ, ಬೋರಿಯಲ್ ಫಾರೆಸ್ಟ್, ಅನಿಮಲ್ ಕ್ಲಬ್

ವರದಿ: ಉದಯ ಯು., ಜಯಸಿಂಹ ಆರ್., ಅಮೃತಕಿರಣ ಬಿ.ಎಂ. ಪ್ರಜಾವಾಣಿ ಗ್ರಾಫಿಕ್ಸ್

ಜೀವ ಸಂಕುಲದ ಸಂಕಷ್ಟ

ಕಾಳ್ಗಿಚ್ಚಿನಿಂದ ಮೊದಲು ತೊಂದರೆಗೆ ಈಡಾಗುವುದು ಸಸ್ಯಸಂಕುಲ ಮತ್ತು ಪ್ರಾಣಿಗಳು. ಕಾಳ್ಗಿಚ್ಚಿನಿಂದ ಕೆಲವು ಪ್ರಾಣಿಗಳಿಗೆ ತಪ್ಪಿಸಿಕೊಳ್ಳಲು ಸಾಧ್ಯವಾಗಬಹುದಾದರೂ, ಇನ್ನೂ ಕೆಲವು ಬದುಕುಳಿಯುವ ಸಾಧ್ಯತೆ ಕಡಿಮೆ.

ಒಂದೊಂದು ಪ್ರಾಣಿಯೂ ತನ್ನದೇ ರಕ್ಷಣಾ ತಂತ್ರಗಾರಿಕೆಯನ್ನು ಹೊಂದಿರುತ್ತದೆ. ದೊಡ್ಡ ಪ್ರಾಣಿಗಳು ಬೆಂಕಿಯ ಕೆನ್ನಾಲಿಗೆಯಿಂದ ತಪ್ಪಿಸಿಕೊಂಡು ಓಡಬಲ್ಲವು. ಮತ್ತೊಂದು ಜಾಗದಲ್ಲೂ ಅವು ಹೊಂದಿಕೊಳ್ಳಬಲ್ಲವು. ಆದರೆ, ಉಭಯಚರಗಳು ಮತ್ತು ಸರೀಸೃಪಗಳು ಕಿಚ್ಚಿನಲ್ಲಿ ಕರಗಿ ಹೋಗುತ್ತವೆ. ಅವುಗಳ ಆವಾಸಸ್ಥಾನ ಒಮ್ಮೆ ನಾಶವಾಯಿತೆಂದರೆ, ಸಂತತಿ ಮತ್ತೆ ಏಳಿಗೆ ಕಾಣುವುದು ಕಷ್ಟ. ಅವುಗಳ ಮೊಟ್ಟೆ ಹಾಗೂ ಮರಿಗಳು ಬೆಂಕಿಯಲ್ಲಿ ಸುಟ್ಟುಹೋಗಬಹುದು.

ಪಕ್ಷಿಗಳಿಗೂ ಕಂಟಕ: ಪಕ್ಷಿಗಳೂ ಇಂತಹದ್ದೇ ಸಂಕಷ್ಟ ಎದುರಿಸುತ್ತವೆ. ಅವು ಬೆಂಕಿಯಿಂದ ಪಾರಾಗಲು ಆಗಸದಲ್ಲಿ ಹಾರಿ, ಜೀವ ಉಳಿಸಿಕೊಳ್ಳುವ ಅವಕಾಶ ಇರುತ್ತದೆ. ಆದರೆ ತಮ್ಮ ಗೂಡು, ಮರಿ, ಮೊಟ್ಟೆಗಳ ಆಸೆ ಕೈಬಿಡಬೇಕಾಗುತ್ತದೆ. ಅಗ್ನಿ ಅವಘಡದಲ್ಲಿ ಬಸವನ ಹುಳು ರೀತಿಯ ಜೀವಿಗಳು ಬೇಗನೇ ದಿಗಿಲಿಗೆ ಈಡಾಗುತ್ತವೆ. ತಪ್ಪಿಸಿಕೊಳ್ಳಲು ಸಮಯವೇ ಸಿಗದೆ ಅವು ಅಗ್ನಿಗಾಹುತಿಯಾಗುತ್ತವೆ.

ಆವಾಸಸ್ಥಾನ ನಾಶ: ಅಗ್ನಿ ಅವಘಡದಲ್ಲಿ ಬದುಕಿದ ಜೀವಿಗಳು ನಿಟ್ಟುಸಿರು ಬಿಡುವಂತಿಲ್ಲ. ತಮ್ಮ ಆವಾಸಸ್ಥಾನ ನಾಶವಾಗಿದ್ದು ಒಂದು ಕಡೆಯಾದರೆ, ಹೊಸ ಪ್ರದೇಶದಲ್ಲಿ ಹೊಸ ಬದುಕು ಕಟ್ಟಿಕೊಳ್ಳುವ ಸಮಸ್ಯೆಗೆ ಅವು ಸಿಲುಕಿಕೊಳ್ಳುತ್ತವೆ. ಎಲೆ, ಬಳ್ಳಿ, ನೀರಿನ ಸೆಲೆ, ಮರಗಳನ್ನೇ ಆಶ್ರಯಿಸಿದ್ದ ಜೀವಿಗಳಿಗೆ ಹೊಸ ಜಾಗವು ಇನ್ನೊಂದು ಅಗ್ನಿಪರೀಕ್ಷೆಯನ್ನು ಒಡ್ಡುತ್ತದೆ.

ಕಾಳ್ಗಿಚ್ಚಿನಲ್ಲಿ ಗಾಯಗೊಂಡರೆ, ತನ್ನ ಬಳಗವನ್ನು ಕಳೆದುಕೊಂಡರೆ ಬದುಕೇ ದುಸ್ತರವಾಗುತ್ತದೆ. ಹೊಸ ಜಾಗದಲ್ಲಿ ಈಗಾಗಲೇ ಇರುವ ಜೀವಿಗಳ ಜೊತೆ ಮತ್ತೊಂದು ಸುತ್ತಿನ ಯುದ್ಧಕ್ಕೆ ಅವು ಸಿದ್ಧವಾಗಬೇಕಿರುತ್ತದೆ. ಕಾಡಂಚಿನ ಭಾಗಗಳಲ್ಲಿ ಮಾನವ–ಪ್ರಾಣಿ ಸಂಘರ್ಷ ತಲೆದೋರುತ್ತದೆ. ಪರಿಸರ ಅಸಮತೋಲನ ಉಂಟಾಗುತ್ತದೆ.

ಮಾನವನಿಗೂ ಅಪಾಯ: ಕಾಡನ್ನು ನಂಬಿಕೊಂಡು ಅರಣ್ಯದಂಚಿನಲ್ಲಿ ಬದುಕುವ ಜನರ ಜೀವನಕ್ಕೂ ಕಾಳ್ಗಿಚ್ಚು ತೊಂದರೆ ಉಂಟು ಮಾಡುತ್ತದೆ. ತಮ್ಮ ಆದಾಯದ ಮೂಲ ಕಳೆದುಕೊಳ್ಳುವ, ತಮ್ಮ ನೆಲೆಯನ್ನು ಕಳೆದುಕೊಳ್ಳುವ ಅಪಾಯ ಎದುರಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಛತ್ತೀಸಗಡದಲ್ಲಿ ಇತ್ತೀಚೆಗೆ ನಡೆದ ನಕ್ಸಲೀಯರ ದಾಳಿ ಬೆನ್ನಲ್ಲೇ, ನಕ್ಸಲೀಯರು ಅರಣ್ಯದಲ್ಲಿ ವಾಸಿಸುತ್ತಿರುವ ಚಿತ್ರಗಳು ವೈರಲ್ ಆಗಿವೆ. ದಿನಪತ್ರಿಕೆಯೊಂದು ವಿಡಿಯೊ ಹಾಗೂ ಚಿತ್ರಗಳನ್ನು ಪ್ರಕಟಿಸಿದೆ. ಮಹಿಳಾ ನಕ್ಸಲರು ಅಡುಗೆ ಮಾಡುತ್ತಿರುವ, ನಕ್ಸಲರ ಗುಂಪು ಕುರ್ಚಿಯಲ್ಲಿ ಕುಳಿತು ನಗುತ್ತಿರುವ, ವಿಜಯದ ಸಂಕೇತ ತೋರುತ್ತಿರುವ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ಸದ್ದು ಮಾಡಿವೆ.

ಆಲ್ಟ್ ನ್ಯೂಸ್ ನಡೆಸಿದ ಪರಾಮರ್ಶೆಯಲ್ಲಿ ಈ ಚಿತ್ರಗಳು ಸಿನಿಮಾ ಚಿತ್ರೀಕರಣ ಸೆಟ್‌ಗೆ ಸಂಬಂಧಿಸಿದವು ಎಂಬುದು ತಿಳಿದು ಬಂದಿದೆ. ಸಿನಿಮಾ ಶೂಟಿಂಗ್‌ಗೆ ಬಳಸುವ ಕ್ಯಾಮೆರಾ ಇರುವ ಚಿತ್ರ ಸಹ ಇದರಲ್ಲಿ ಇದೆ. ಸಾಮಾಜಿಕ ಜಾಲತಾಣ ಬಳಕೆದಾರರೂ ಇದನ್ನು ಉಲ್ಲೇಖಿಸಿದ್ದಾರೆ. ಬಸ್ತಾರ್‌ನ ಪತ್ರಕರ್ತ ಅಶು ತಿವಾರಿ ಅವರೂ ಇದನ್ನು ಖಚಿತಪಡಿಸಿದ್ದಾರೆ. ಈ ಚಿತ್ರಗಳಿಗೂ ಛತ್ತೀಸಗಡದ ನಕ್ಸಲ್ ಶಿಬಿರಕ್ಕೂ ಸಂಬಂಧವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಫಲಿಸಿದ ಕುಯುಕ್ತಿ

ಪ್ರತಿಯೊಂದು ಪರೀಕ್ಷೆಯಲ್ಲಿಯೂ ಬೋಧಿಸತ್ವನಾದ ಮಹೋಷಧಕುಮಾರ ಯಶಸ್ಸುಗಳಿಸಿ ರಾಜನ ಪ್ರೀತಿಗೆ ಪಾತ್ರನಾದದ್ದನ್ನು ಕಂಡು ನಾಲ್ವರು ಅಮಾತ್ಯರಿಗೆ ಸಂಕಟವಾಯಿತು. ಹೇಗಾದರೂ ಮಾಡಿ ಅವನನ್ನು ರಾಜನ ಅವಕೃಪೆಗೆ ಗುರಿಮಾಡಿ ಕೊಲ್ಲಿಸಬೇಕೆಂದು ಚಿಂತಿಸಿದರು. ಒಂದು ದಿನ ರಾಜನ ಬಳಿಗೆ ಹೋಗಿ, 'ಮಹಾಪ್ರಭು, ತಾವು ಅತ್ಯಂತ ಅಭಿಮಾನದಿಂದ, ಪ್ರೀತಿಯಿಂದ ನೋಡುವ ಗ್ರಹಪತಿ- ಮಹೋಷಧಕುಮಾರ ತಮಗೆ ಶತ್ರುವಾಗಿ ಬಿಟ್ಟಿದ್ದಾನೆ. ನಾವು ಅವನಿಗೆ 'ರಹಸ್ಯವನ್ನು ಯಾರ ಹತ್ತಿರ ಹೇಳಬೇಕು?' ಎಂದು ಕೇಳಿದೆವು. ಆಗ ಆತ 'ಯಾರಿಗೂ ಹೇಳಬಾರದು. ಕೆಲಸ ಮುಗಿಯುವವರೆಗೂ ಬಾಯಿ ತೆರೆಯಬಾರದು' ಎಂದ. 'ಮಹಾರಾಜರಿಗೂ ಕೂಡ ಹೇಳಬಾರದು' ಎಂದ. ತಮ್ಮಲ್ಲಿಯೂ ರಹಸ್ಯವನ್ನು ಹೇಳದಿರುವವನು, ತಮಗೆ ಒಳ್ಳೆಯದನ್ನು ಮಾಡುವನೇ?' ಎಂದು ಕಿವಿ ಊದಿದರು. ಸಾಮಾನ್ಯವಾಗಿ ರಾಜರ ಕಿವಿ ಹಿತ್ತಾಳೆಯದ್ದೇ. ಮರುದಿನ ರಾಜ, ಕುಮಾರನ ಪರೀಕ್ಷೆ ಮಾಡುವುದಾಗಿ ತೀರ್ಮಾನಿಸಿದ. ಸಭೆ ಸೇರಿದಾಗ ರಾಜ ಕೇಳಿದ, 'ಅಮಾತ್ಯರೇ ನೀವು ನಾಲ್ಕು ಜನ ಮತ್ತು ಮಹೋಷಧಕುಮಾರ ಇಲ್ಲಿದ್ದೀರಿ. ನನಗೊಂದು ಪ್ರಶ್ನೆ ಇದೆ. ಅತ್ಯಂತ ರಹಸ್ಯವಾದ ವಿಚಾರವನ್ನು ಯಾರಲ್ಲಿ ಹಂಚಿಕೊಳ್ಳಬೇಕು?'. ಸೆನೆಕ ಕುತಂತ್ರಿ. ಆತ ಹೇಳಿದ, 'ಮಹಾಸ್ವಾಮಿ, ತಾವೇ ನಮ್ಮ ರಕ್ಷಕರು, ನಮಗೆ ದೇವರು. ತಾವೇ ಮೊದಲು ತಮ್ಮ ಉತ್ತರವನ್ನು ಅಪ್ಪಣೆ ಕೊಡಿಸಿ' ಎಂದ. ರಾಜ, 'ಶೀಲವತಿಯಾದ, ಪ್ರತಿವ್ರತೆಯಾದ ಹೆಂಡತಿಯಲ್ಲಿ ಯಾವ ರಹಸ್ಯವನ್ನಾದರೂ ಹೇಳಬಹುದು' ಎಂದ. ಸೆನೆಕ ಹೇಳಿದ, 'ಸ್ವಾಮಿ, ಅತ್ಯಂತ ಆಪ್ತನಾದ ಮಿತ್ರನಲ್ಲಿ ರಹಸ್ಯವನ್ನು ಹೇಳಬಹುದು'. ಪುಕ್ಕುಸ, 'ಸ್ವಾಮಿ, ನನ್ನ ಅಭಿಪ್ರಾಯದಂತೆ ಸ್ಥಿರಚಿತ್ತವುಳ್ಳ ಅಣ್ಣ ಅಥವಾ ತಮ್ಮನಿಗೆ ಯಾವ ರಹಸ್ಯವನ್ನಾದರೂ ಹೇಳಬಹುದು' ಎಂದ.

ರಾಜ ಕಾವಿಂದನೆಡೆಗೆ ನೋಡಿದಾಗ ಆತ ಹೇಳಿದ, 'ಮಹಾಪ್ರಭು, ನಮ್ಮ ಆಜ್ಞಾನುಸಾರಿ-ಯಾದ, ವಂಶವನ್ನು ಮುಂದುವರೆಸಿಕೊಂಡು ಹೋಗುವ ಮಗನಿಗೆ ಯಾವ ರಹಸ್ಯವನ್ನಾದ-ರೂ ಹೇಳಬಹುದು'. ಕೊನೆಯವನು ದೇವಿಂದ ಆತ ಹೇಳಿದ, 'ಸ್ವಾಮಿ, ತಾಯಿಗಿಂತ ಯಾರೂ ಶ್ರೇಷ್ಠರಲ್ಲ. ಪ್ರೇಮದಿಂದ ನಮ್ಮನ್ನು ಕಾಣುವ ತಾಯಿಗೆ ಎಂಥ ರಹಸ್ಯವನ್ನಾದರೂ ಹೇಳಬಹುದು'. ನಾಲ್ಕು ಅಮಾತ್ಯರ ಅಭಿಪ್ರಾಯಗಳನ್ನು ತಿಳಿದ ರಾಜ ಮಹೋಷಧಕುಮಾರನನ್ನು ಅಭಿಪ್ರಾಯ ಹೇಳುವಂತೆ ಕೇಳಿದ. ಆಗ ಕುಮಾರ, 'ಸ್ವಾಮಿ, ವಿಷಯ ರಹಸ್ಯವಾಗಿದ್ದರೆ ಅದನ್ನು ಗುಪ್ತವಾಗಿಯೇ ಇಡಬೇಕು. ಅದನ್ನು ಯಾರಿಗೂ ಪ್ರಕಟಮಾಡಬಾ-ರದು, ಧೀರನಾದವನು ಕಾರ್ಯಮುಗಿಯುವವರೆಗೆ ತನ್ನ ಮನಸ್ಸಿನಲ್ಲಿಯೇ ಇಟ್ಟುಕೊಂಡು, ಕಾರ್ಯ ಮುಗಿದ ಮೇಲೆ ಬಾಯಿ ತೆರೆಯಬೇಕು' ಎಂದ.

ರಾಜನಿಗೆ ಕೋಪ ಬಂತು, 'ನೀನು ರಾಜರಿಗೂ ರಹಸ್ಯ ಹೇಳುವುದಿಲ್ಲವೇ?' ಎಂದು ಕೇಳಿದ. ಕುಮಾರ ಹೇಳಿದ, 'ರಾಜರಿಗೂ ಹೇಳಬಾರದಂಥ ರಹಸ್ಯವಿದ್ದರೆ ಹೇಳಬಾರದು'. ನಾಲ್ಕು ಜನ ಮಂತ್ರಿಗಳು ತಮ್ಮ ಯೋಜನೆ ಫಲಿಸಿತೆಂದು ಮುಖ ಮುಖ ನೋಡಿಕೊಂಡು ಮನದಲ್ಲಿಯೇ ನಕ್ಕರು. ಸಭೆ ಮುಗಿಯಿತು. ರಾಜ ಅಮಾತ್ಯ ಸೆನೆಕನನ್ನು ಕರೆದು, 'ನೀನು ಹೇಳಿದ್ದು ಸತ್ಯ. ಕುಮಾರ ನನ್ನನ್ನು ಅಪಾಯಕ್ಕೀಡು ಮಾಡುತ್ತಾನೆ. ಆದ್ದರಿಂದ ನಾಳೆ ಬೆಳಿಗ್ಗೆ ಆತ ರಾಜಸಭೆಗೆ ಬರುವಾಗ ಅವನ ತಲೆ ಕತ್ತರಿಸಿಬಿಡಿ' ಎಂದು ಆಜ್ಞೆ ಮಾಡಿ ತನ್ನ ಖಡ್ಗವನ್ನೇ ಅವನಿಗೆ ಕೊಟ್ಟುಬಿಟ್ಟ. ❖

ಗುಂಡಣ್ಣ

ದಿನ ಭವಿಷ್ಯ

ಗುರುವಾರ 8 ಏಪ್ರಿಲ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ರೇವತಿ ದ್ವಾದಶೀ ಗಂ. 54-30 (ರಾ. 4-07) ಗುರುವಾರ ನಿತ್ಯ ನಕ್ಷತ್ರ ಶತಭಿಷ ಗಂ. 58-46 (ಬೆ.ಝಾ. 5-49) ಶುಭ ನಾಮ ಯೋಗ ಗಂ 22-13 ಕೌಲವ ಕರಣ ಗಂ. 24-38 ವಿಷ ಗಂ. 15-51 ಅಮೃತ ಗಂ. 40-34 ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 ಸೂರ್ಯೋದಯ: 6-15 **ಸೂರ್ಯಾಸ್ತ:** 6-28 ಅದೃಷ್ಟ ಸಂಖ್ಯೆ 1 3 9

ಮೇಷ: ಸ್ತ್ರೀ ವರ್ಗದವರಿಗೆ ಅತ್ಯಂತ ಸಂತೋಷಕರ ವಾತಾವರಣ. ಮದುವೆ ಮುಂಜಿ ಸಮಾರಂಭಗಳಲ್ಲಿ ಭಾಗಿ. ಬಂಧು–ಬಾಂಧವರ ಸಮಾಗಮ. ನವ ಚೈತನ್ಯ ಧುಮ್ಮಿಕ್ಕಲಿದೆ.

ವೃಷಭ: ಪಿತ್ರಾರ್ಜಿತ ಆಸ್ತಿಯು ನಿಮ್ಮ ಪಾಲಿಗೆ ಬಂದೊದಗಲಿದೆ. ಹಿರಿಯರ ಆಶೀರ್ವಾದದಿಂದಾಗಿ ಆದಾಯದ ಮೂಲಗಳು ಗೋಚರವಾಗಿ ಸಂತೃಪ್ತಿ. ಕುಟುಂಬದವರಿಂದ ಸ್ಥಾನ ಮಾನಗಳು ಲಭ್ಯ.

ಮಿಥುನ: ಭೂ ವಿವಾದದಲ್ಲಿ ಸಿಕ್ಕಿಹಾಕಿಕೊಳ್ಳುವ ಸಾಧ್ಯತೆ. ಅತಿಯಾದ ಕಾರ್ಯ ಒತ್ತಡದಿಂದಾಗಿ ಗೊಂದಲಮಯ ಪರಿಸ್ಥಿತಿ. ಸಕಾಲಿಕ ಚಿಂತನೆಯಿಂದಾಗಿ ಮಾನಸಿಕ ಶಾಂತಿ. ಸಂಗಾತಿಯಿಂದ ಸಿಹಿ ಸುದ್ದಿ.

ಕರ್ಕಾಟಕ: ಹಿಂದಿನ ತಾಪತ್ರಯಗಳೆಲ್ಲವೂ ನಿವಾರಣೆಯಾಗಿ ನಿರಾಳತೆ. ವಿದ್ಯಾರ್ಥಿಗಳಿಗೆ ಯಶಸ್ಸಿನ ದಿನ. ದಿನಸಿ ವ್ಯಾಪಾರಿಗಳಿಗೆ ಸ್ವಲ್ಪ ಮಟ್ಟಿನ ನಷ್ಟ. ವಕೀಲ ವೃತ್ತಿಯವರಿಗೆ ಆರ್ಥಿಕಾಭಿವೃದ್ಧಿ. ವಾಹನ ಯೋಗ.

ಸಿಂಹ: ಕಳ್ಳ ಕಾಕರ ಬಗ್ಗೆ ಗಮನ ವಹಿಸುವುದು ಉತ್ತಮ. ಬೆಲೆಬಾಳುವ ವಸ್ತುಗಳ ಬಗ್ಗೆ ಸೂಕ್ತ ರಕ್ಷಣೆ ಮಾಡಿಕೊಳ್ಳಿ. ಮಿತ್ರರೊಂದಿಗೆ ಮನಸ್ತಾಪ ಶಮನ. ಸಂಗಾತಿಯಿಂದ ವಿಶೇಷ ಕೊಡುಗೆ. ಬಂಧುಗಳ ಆಗಮನದಿಂದ ಸಂತಸ.

ಕನ್ಯಾ: ಸ್ಥಿರಾಸ್ತಿ ಪ್ರಾಪ್ತವಾಗುವ ಸಾಧ್ಯತೆಯಿದ್ದು, ಭೂ ಖರೀದಿಗೆ ಯೋಗ್ಯ ದಿನ. ವಿದೇಶ ಪ್ರಯಾಣದ ಕನಸು ಗರಿಗೆದರುವ ಸಾಧ್ಯತೆ. ಹೊಸ ಮನೆ, ಸಂತಾನ ಭಾಗ್ಯ ಮುಂತಾದವುಗಳು ದೊರಕಿ ಸಂತಸ.

ತುಲಾ: ಕೋರ್ಟ್ ಕಚೇರಿ ವ್ಯವಹಾರಗಳಲ್ಲಿ ಉತ್ತಮ ಫಲಿತಾಂಶ. ಹೊಸ ಮನೆ, ಜಮೀನು ಪ್ರಾಪ್ತವಾಗುವ ಯೋಗ. ಸಾಂಸಾರಿಕ ಸುಖ. ಕೃಷಿ ಬದುಕಿನವರಿಗೆ ಸ್ವಲ್ಪ ಮಟ್ಟಿನ ಬಿಡುವು. ದೂರ ಪ್ರಯಾಣ ಸಾಧ್ಯತೆ.

ವೃಶ್ಚಿಕ: ನಿಮ್ಮ ಎಲ್ಲ ಕೆಲಸ ಕಾರ್ಯಗಳು ಸುಗಮವಾಗಿ ಕೈಗೂಡಲಿದೆ. ವಿದ್ಯಾರ್ಥಿಗಳ ಉನ್ನತ ವ್ಯಾಸಂಗದ ದಾರಿ ಸುಗಮ. ವಿವಾಹಾಕಾಂಕ್ಷಿಗಳಿಗೆ ಕಂಕಣ ಭಾಗ್ಯ. ರಾಜಕೀಯ ರಂಗದವರಿಗೆ ಉತ್ತಮ ಫಲ.

ಧನು: ಸಂದುನೋವು, ಬೆನ್ನು ನೋವಿನಿಂದ ಬಳಲುವ ಸಾಧ್ಯತೆ. ಹಿರಿಯರ ಮಾತುಗಳಿಗೆ ಮನ್ನಣೆ ನೀಡಿ ಬರಲಿರುವ ಅವಘಡವನ್ನು ತಪ್ಪಿಸಿಕೊಳ್ಳಿ. ವಿವಾಹಾಕಾಂಕ್ಷಿಗಳಿಗೆ ಹಿನ್ನಡೆ.

ಮಕರ: ಭೂ ವ್ಯವಹಾರದಲ್ಲಿ ಅಧಿಕ ಲಾಭ. ರಾಜಕೀಯ ರಂಗದಲ್ಲಿರುವವರಿಗೆ ಉನ್ನತ ಹುದ್ದೆ ಪ್ರಾಪ್ತಿ. ನೀಡಿದ ಸಾಲಗಳು ಮರುಪಾವತಿಯಾಗುವವು. ವಿದ್ಯಾರ್ಥಿಗಳು ಯಶಸ್ಸಿನ ಉತ್ತುಂಗವನ್ನು ಕಂಡುಕೊಳ್ಳುವ ಅವಕಾಶ.

ಕುಂಭ: ದಿನದ ಮಟ್ಟಿಗೆ ಎಲ್ಲ ವಿಧಗಳಲ್ಲೂ ಕಷ್ಟನಷ್ಟ ಅನುಭವಿಸುವ ಸಾಧ್ಯತೆ. ಅಪಾಯಕಾರಿ ಕೆಲಸ ಮತ್ತು ವಾಹನಗಳಿಂದ ದೂರವಿರುವುದು ಶ್ರೇಯಸ್ಕರ. ಗುರು ಗಣಪತಿಯ ಆರಾಧನೆಯಿಂದ ಉತ್ತಮ ಫಲ.

ಮೀನ: ಸ್ವಯಂ ಉದ್ಯೋಗಿಗಳಿಗೆ ಉತ್ತಮ ಆದಾಯ. ಕೊಡುಕೊಳ್ಳುವಿಕೆ-ಯಲ್ಲಿ ಎಚ್ಚರಿಕೆ ಅಗತ್ಯ. ಮೋಸಹೋಗುವ ಸಾಧ್ಯತೆ. ಸ್ನೇಹಿತ ವರ್ಗದವರಿಂದ ಸಂತಸದ ಸುದ್ದಿ. ಉದ್ಯೋಗದಲ್ಲಿ ಬದಲಾವಣೆಗಳು ಸಂಭವಿಸಬಹುದು.

ನಿಮ್ಮ ಜನ್ಮದಿನ 8-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಯಂತ್ರೋಪಕರಣಗಳ ಉದ್ಯಮದಲ್ಲಿ ಉತ್ತಮ ಭವಿಷ್ಯವನ್ನು ಕಾಣಲಿದ್ದೀರಿ. ಬಹುಮುಖ ಪ್ರತಿಭೆಯನ್ನು ಹೊಂದಿದವರಾದ್ದ-ರಿಂದ ಒಂದೇ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸಲಾರಿರಿ. ದೃಢ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಲಿದೆ. ರಾಜಕೀಯದಲ್ಲಿ ಕ್ಷೇತ್ರದಲ್ಲಿ ಪ್ರಗತಿ ಸಾಧ್ಯ.

ಪದಬಂಧ 4561

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಸ್ವಾಸ್ಥ್ಯದಲ್ಲಿಯೇ ರುಚಿಯನ್ನು ಹುಡುಕಿ! (2)
3.ಹದ ತಿರುಗಿಸಿ ಸುಡುವಿಕೆ! (3)
5.ನರ ಮೊದಲಿದ್ದುಅನುಭವಿಸಿದ ಅತಿಯಾದ ಕಷ್ಟ! (3)
7.ಆಕಾಶಚರದೊಡನಿರುವ ಆಳಿನ ವಿಧಿ! (4)
9.ಇದು ಮುಖ್ಯವಾದುದು (3)
10.ದಣಿವರಿಯದೇ ನೆರೆದಿರುವ ಗುಂಪು! (3)
11.ಪದಗಳ ಅರ್ಥವನ್ನು ವಿವರಿಸುವ ಗ್ರಂಥ (4)
13.ನಂಜಿನಿಂದ ಉಂಟಾದ ಕೆಟ್ಟ ಪರಿಸ್ಥಿತಿ (3)
15.ಸ್ತುತಿ ಪಾಠಕ ಇಲ್ಲಿದ್ದಾನೆ (3)
16.ದುಸ್ತರದಲ್ಲಿಯೇ ಮಡಿಕೆಯನ್ನು ಹುಡುಕಿ! (2)

ಮೇಲಿಂದ ಕೆಳಕ್ಕೆ

2.ದನದೊಳಗಿನ ದಂತ ಕಾಣುತ್ತಿದೆಯೇ? (3)
3.ಸ್ವೀಕೃತ ಪುತ್ರ ಅಥವಾ ದತ್ತು ಪುತ್ರ (3)
4.ಉಗುರಿನ ಮೊನೆ (3)
6.ರಸ ಒಸರುವ ಜಿಹ್ವೆ (3)
8.ಹೊಂದಾಣಿಕೆ ಅಥವಾ ಸಂಬಂಧ (3)
9.ಆವೇಶದಿಂದ ಒಳ ಹೋಗುವಿಕೆ! (3)
10.ಆನಂದ ಹೀಗೆ ಬಂದಿದೆ (3)
12.ಬಲಶಾಲಿಗೆ ಕಾಣಿಸಿದ ಮಿಡತೆ (3)
13.ರಾಗಿ ಹಿಡಿದಿರುವ ವಿರಕ್ತ! (3)
14.ಯಾವ ಪಕ್ಷಕ್ಕೂ ಸೇರದವನು (3)



4560ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಣಯಕಲಹ 2.ರಸಮಯ 5.ವಾಚಕ 7.ಸ್ಥಾವರ 9.ಲುಬ್ಧಕ 12.ವಲ್ಲರಿ 13.ಬಾಲರವಿ 15.ಪ್ರತ್ಯಕ್ಷಪ್ರಮಾಣ

ಮೇಲಿಂದ ಕೆಳಕ್ಕೆ: 1.ಪ್ರತಿಫಲ 2.ಹರ 3.ಅಯಸ್ಕಾಂತ 6.ಕಮಂಡಲು 7.ಸ್ಥಾಪಕ 8.ರಕ್ತಸ್ರಾವ 9.ಪುಷ್ಪಬಾಣ 11.ಹರಿವಾಣ 14.ವಿಪ್ರ

ಸುಡೊಕು 4947

				5		9		
1			6		4			3
	5	3		7			2	4
5		8	9					
	1					7	5	2
4		7					8	
2		5		9			3	
	6		3		5	2		7
3	7	9		6			4	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4946 ಸುಡೊಕು

6	2	4	5	3	9	7	1	8
8	9	5	6	7	1	2	4	3
1	3	7	2	4	8	5	9	6
3	4	1	8	2	5	9	6	7
2	8	6	3	9	7	1	5	4
7	5	9	4	1	6	8	3	2
5	1	3	7	6	2	4	8	9
4	7	8	9	5	3	6	2	1
9	6	2	1	8	4	3	7	5

ಷೇರುಪೇಟೆ ವಹಿವಾಟು ▲460

49,201 ಹಿಂದಿನ ಅಂತ್ಯ — 49,661 ಇಂದಿನ ಅಂತ್ಯ (10:00–16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,683
ಇಂದಿನ ಅಂತ್ಯ	14,819
▲	136
ದಿನದ ಗರಿಷ್ಠ	14,880

ವಿನಿಮಯ ದರ

$ ಡಾಲರ್	74.47
£ ಪೌಂಡ್	103.05
€ ಯುರೊ	88.60
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹450

ಚಿನ್ನ, ಬೆಳ್ಳಿ ಧಾರಣೆ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ 10 ಗ್ರಾಂ ಚಿನ್ನದ ಬೆಲೆಯಲ್ಲಿ ₹ 587ರಷ್ಟು ಏರಿಕೆ ಆಗಿದೆ. 10 ಗ್ರಾಂ ಚಿನ್ನವು ₹ 45,768ಕ್ಕೆ ಮಾರಾಟವಾಗಿದೆ. ಬುಧವಾರ ಚಿನ್ನದ ದರವು ₹ 45,181 ಆಗಿತ್ತು.

ಬೆಳ್ಳಿಯ ದರದಲ್ಲಿಯೂ ಏರಿಕೆ ಆಗಿದೆ. ಕೆ.ಜಿ. ಬೆಳ್ಳಿಯ ದರದಲ್ಲಿ ₹ 682ರಷ್ಟು ಹೆಚ್ಚಳವಾಗಿ, ₹ 65,468ಕ್ಕೆ ತಲುಪಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಮಾರ್ಚ್: ಸೇವಾ ವಲಯದ ಚಟುವಟಿಕೆ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ಮತ್ತು ವೆಚ್ಚ ಹೆಚ್ಚಳದ ಕಾರಣಗಳಿಂದಾಗಿ ದೇಶದ ಸೇವಾ ವಲಯದ ಚಟುವಟಿಕೆಗಳು ಮಾರ್ಚ್ ತಿಂಗಳಿನಲ್ಲಿ ತುಸು ಇಳಿಕೆಯಾಗಿವೆ ಎಂದು ಐಎಚ್‌ಎಸ್ ಮರ್ಕಿಟ್ ಸಂಸ್ಥೆ ಹೇಳಿದೆ.

ಸೇವಾ ವಲಯದ ಚಟುವಟಿಕೆಯನ್ನು ಸೂಚಿಸುವ ಸೂಚ್ಯಂಕವು ಫೆಬ್ರುವರಿಯಲ್ಲಿ 55.3ರಷ್ಟು ಇತ್ತು. ಇದು ಮಾರ್ಚ್‌ನಲ್ಲಿ 54.6ಕ್ಕೆ ಇಳಿದಿದೆ. ಈ ವಲಯದ ಬೆಳವಣಿಗೆಯ ವೇಗ ತಗ್ಗಿದ್ದರೂ, ಸತತ ಆರನೇ ತಿಂಗಳಿನಲ್ಲಿಯೂ ಸಕಾರಾತ್ಮಕ ಹಾದಿಯಲ್ಲಿಯೇ ಇದೆ ಎಂದು ಸಂಸ್ಥೆ ತಿಳಿಸಿದೆ.

ಸೂಚ್ಯಂಕವು 50ರ ಮಟ್ಟಕ್ಕಿಂತ ಹೆಚ್ಚಿಗೆ ಇದ್ದರೆ ಅದನ್ನು ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಕೋವಿಡ್–19 ಪ್ರಕರಣಗಳು ಹೆಚ್ಚಾಗುತ್ತಿರುವುದು ಹಾಗೂ ಕೆಲವು ರಾಜ್ಯಗಳಲ್ಲಿ ಮತ್ತೆ ನಿರ್ಬಂಧಗಳನ್ನು ಹೇರುತ್ತಿರುವುದರಿಂದ ಏಪ್ರಿಲ್‌ನಲ್ಲಿ ವಲಯದ ಬೆಳವಣಿಗೆ ಗಮನಾರ್ಹ ಇಳಿಕೆ ಕಾಣಬಹುದು ಎಂದು ಐಎಚ್‌ಎಸ್ ಮರ್ಕಿಟ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ. ಲಿಮಾ ಎಚ್ಚರಿಕೆ ನೀಡಿದ್ದಾರೆ.

ಲಸಿಕೆ ಲಭ್ಯತೆಯಲ್ಲಿ ಇನ್ನಷ್ಟು ಸುಧಾರಣೆ ಆಗಲಿದ್ದು, ಇದರಿಂದಾಗಿ ಸೋಂಕು ಹರಡುವಿಕೆ ಕಡಿಮೆಯಾಗಲಿದೆ. ಆ ಮೂಲಕ ಆರ್ಥಿಕತೆ ಚೇತರಿಕೆಗೆ ಬೆಂಬಲ ಸಿಗಲಿದೆ ಎನ್ನುವ ಭರವಸೆಯನ್ನು ಕಂಪನಿಗಳು ಹೊಂದಿವೆ ಎಂದೂ ತಿಳಿಸಿದ್ದಾರೆ.

ಭಾರತದ ಸೇವೆಗಳಿಗೆ ಜಾಗತಿಕ ಮಾರುಕಟ್ಟೆಗಳಿಂದ ಬರುತ್ತಿರುವ ಬೇಡಿಕೆಯು ಸತತ 13ನೇ ತಿಂಗಳಿನಲ್ಲಿಯೂ ಕುಸಿತ ಕಂಡಿದೆ ಎಂದು ಸಂಸ್ಥೆಯು ಹೇಳಿದೆ. ವಲಯದ ವೆಚ್ಚವು ಹೆಚ್ಚಳ ಕಂಡಿದೆ. ಹೀಗಿದ್ದರೂ ಪೈಪೋಟಿಯ ಒತ್ತಡದಿಂದಾಗಿ ಬಹುಪಾಲು ಕಂಪನಿಗಳು ಶುಲ್ಕವನ್ನು ಹೆಚ್ಚು ಏರಿಕೆ ಮಾಡಿಲ್ಲ. ಉದ್ಯೋಗ ಲಭ್ಯತೆಯ ಪ್ರಮಾಣವು ಮಾರ್ಚ್‌ನಲ್ಲಿಯೂ ಕಡಿಮೆ ಇದೆ ಎಂದು ಸಂಸ್ಥೆ ಹೇಳಿದೆ.

8ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಜಿ.ಸುಧಾರಾಣಿ

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳು ಕಳೆದವು. ನಿಮ್ಮ ನೆನಪು ಸದಾ ನಮ್ಮ ಹೃದಯಗಳಲ್ಲಿ ಹಚ್ಚಹಸುರಾಗಿ ಉಳಿದಿದೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸುವ

ಪತಿ: ಶ್ರೀ ಎಂ.ತಿಮ್ಮಾರೆಡ್ಡಿ, ಮಕ್ಕಳು: ಟಿ.ಸ್ಮಿತಾ ಮತ್ತು ಟಿ.ಮಹೇಶ್‌ಬಾಬು ಹಾಗೂ ಮೊಮ್ಮಕ್ಕಳು.

ವಿಳಾಸ: ನಂ.28, 24ನೇ ಮುಖ್ಯರಸ್ತೆ, ಅಂಚೆ ಕಛೇರಿ ಮುಂಭಾಗ, ಅಗರಗ್ರಾಮ, ಸರ್ಜಾಪುರ ರಸ್ತೆ, ಬೆಂಗಳೂರು. ಫೋನ್: 98866 81404

ಪ್ರಜಾವಾಣಿ

FOR ADVERTISEMENT QUERIES
• OBITUARY
• REMEMBRANCES

Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಆರ್‌ಬಿಐ ನಿರ್ಧಾರ: ಸೆನ್ಸೆಕ್ಸ್ ಏರಿಕೆ

ಮುಂಬೈ (ಪಿಟಿಐ): ಮಾರುಕಟ್ಟೆಯ ನಿರೀಕ್ಷೆಯಂತೆಯೇ ಆರ್‌ಬಿಐ ಬಡ್ಡಿದರಗಳಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದ್ದು, ಆರ್ಥಿಕ ಚೇತರಿಕೆಗೆ ಹೊಂದಾಣಿಕೆಯ ನಿಲುವು ಮುಂದುವರಿಸುವುದಾಗಿ ಹೇಳಿದ್ದು ಷೇರುಪೇಟೆ ಸೂಚ್ಯಂಕಗಳು ಬುಧವಾರ ಏರುಗತಿಯಲ್ಲಿ ಸಾಗುವಂತೆ ಮಾಡಿದವು.

ಬ್ಯಾಂಕಿಂಗ್, ವಾಹನ ಮತ್ತು ಮಾಹಿತಿ ತಂತ್ರಜ್ಞಾನ ವಲಯದ ಷೇರುಗಳ ಏರಿಕೆಯು ಸಕಾರಾತ್ಮಕ ವಹಿವಾಟಿಗೆ ಕಾರಣವಾದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 460 ಅಂಶ ಏರಿಕೆಯಾಗಿ 49,661 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 136 ಅಂಶ ಹೆಚ್ಚಾಗಿ 14,819 ಅಂಶಗಳಿಗೆ ತಲುಪಿತು. ಬ್ರೆಂಟ್ ತೈಲ ದರ ಶೇ 0.37ರಷ್ಟು ಇಳಿಕೆಯಾಗಿ ಒಂದು ಬ್ಯಾರಲ್‌ಗೆ ₹ 62.97 ಡಾಲರ್‌ಗಳಿಗೆ ತಲುಪಿತು.

20 ತಿಂಗಳ ಬಹುದೊಡ್ಡ ಕುಸಿತ ಕಂಡ ರೂಪಾಯಿ

ಮುಂಬೈ/ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಬುಧವಾರ 105 ಪೈಸೆಗಳಷ್ಟು ತಗ್ಗಿದೆ. ದಿನದ ವಹಿವಾಟಿನ ಅಂತ್ಯಕ್ಕೆ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 74.47 ಆಗಿತ್ತು. ಬುಧವಾರದ ಅಂತ್ಯಕ್ಕೆ ರೂಪಾಯಿ ಮೌಲ್ಯವು 73.42 ಆಗಿತ್ತು.

ರೂಪಾಯಿ ಮೌಲ್ಯವು ಒಂದೇ ದಿನದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಕುಸಿದಿರುವುದು 20 ತಿಂಗಳ ಅವಧಿಯಲ್ಲಿ ಇದೇ ಮೊದಲು.

'ದೇಶದಲ್ಲಿ ಕೋವಿಡ್–19 ಪ್ರಕರಣಗಳು ಮತ್ತೆ ಹೆಚ್ಚಾಗುತ್ತಿರುವುದು ಹಾಗೂ ಅಲ್ಲಲ್ಲಿ ಲಾಕ್‌ಡೌನ್ ಜಾರಿಯಾಗುತ್ತಿರುವ ಸಂದರ್ಭದಲ್ಲಿ ರೂಪಾಯಿ ಮೌಲ್ಯ ಕುಸಿದಿದೆ' ಎಂದು ಶೇರ್‌ಖಾನ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸೈಫ್ ಮುಕದಂ ಹೇಳಿದ್ದಾರೆ.

₹ 1 ಲಕ್ಷ ಕೋಟಿ ಮೌಲ್ಯದ ಸರ್ಕಾರಿ ಸಾಲಪತ್ರಗಳನ್ನು ಖರೀದಿಸುವುದಾಗಿ ಆರ್‌ಬಿಐ ಹೇಳಿದ್ದು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾಗಿರಬಹುದು. ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾಲಪತ್ರಗಳನ್ನು ಖರೀದಿಸುವುದರಿಂದ ಮಾರುಕಟ್ಟೆಯಲ್ಲಿ ನಗದು ಲಭ್ಯತೆ ಹೆಚ್ಚಾಗುತ್ತದೆ. ಇದು ಹಣದುಬ್ಬರದ ಮೇಲೆ ಪರಿಣಾಮ ಬೀರಬಹುದು ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

ಯಶಸ್ಸಿನ ಮೂರು ಮಂತ್ರಗಳು

ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೆನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ಗುಣಮಟ್ಟದ ಆರೋಗ್ಯ ಸೇವೆ ಹಿಂದೆಂದಿಗಿಂತಲೂ ಈಗ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಕಾಯಿಲೆಗಳನ್ನು ದೂರವಿಡಲು ನಾವು ಹಲವು ದಾರಿಗಳನ್ನು ಶೋಧಿಸುತ್ತಲೇ ಇದ್ದೇವೆ. ವೈದ್ಯಕೀಯ ಕ್ಷೇತ್ರದ ತಜ್ಞರು ಜೀವನಶೈಲಿಯಲ್ಲಿ ಬದಲಾವಣೆಗಳನ್ನು ತರುವ ಮೂಲಕ ಆರೋಗ್ಯಕರ ಜೀವನ ನಡೆಸುವ ಮಾರ್ಗೋಪಾಯಗಳನ್ನು ಕಂಡುಕೊಳ್ಳುತ್ತಿದ್ದಾರೆ. 'ವಿವೇಕಾನಂದ ಹೆಲ್ತ್ ಗ್ಲೋಬಲ್' ಸಂಸ್ಥೆಯ ಸ್ಥಾಪಕಿ ಡಾ. ವಸುಧಾ ಎಂ. ಶರ್ಮ ಅವರು ಅಂಥವರಲ್ಲಿ ಒಬ್ಬರು.

'ಆಯುರ್ವೇದ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಯನ್ನು ಬಳಸಿಕೊಂಡು ಸಂಯೋಜಿತ ವೈದ್ಯಕೀಯ ಸೇವೆ ಒದಗಿಸುವ ಕೇಂದ್ರಗಳನ್ನು ನಾವು ನಡೆಸುತ್ತಿದ್ದೇವೆ. ರೋಗಿಯ ಆರೋಗ್ಯ, ಕಾಯಿಲೆ, ದೇಹ-ಮನಸ್ಸಿನ ನಡುವಿನ ಹೊಂದಾಣಿಕೆಯನ್ನು ಪರಿಗಣಿಸಿ ಸರಿಯಾದ ಪರಿಹಾರ ಸೂಚಿಸುವುದು ನಮ್ಮ ಆದ್ಯತೆ' ಎಂದು ಅವರು ಹೇಳುತ್ತಾರೆ.

ಆರೋಗ್ಯಕರ ಸಮಾಜದ ಕುರಿತು ಡಾ. ವಸುಧಾ ಕಂಡ ಕನಸುಗಳೇ ಈ ಆಸ್ಪತ್ರೆಯ ನಿರ್ಮಾಣಕ್ಕೆ ಕಾರಣವಾದವು. ವೈದ್ಯೆಯಾಗಿ ಅವರು ದಶಕಗಳ ಅನುಭವ ಹೊಂದಿದ್ದಾರೆ. 'ಆಯುರ್ವೇದ ವೈದ್ಯವಿಜ್ಞಾನದಲ್ಲಿ ಪದವಿ ಪಡೆದ ಬಳಿಕ ನಾನು 2-3 ವರ್ಷ ತಜ್ಞರೊಂದಿಗೆ ಕಲಿಕೆ ಮುಂದುವರೆಸಿದೆ. ಕಲಿಯುವ ಬಯಕೆ ಇನ್ನಷ್ಟು ಹೆಚ್ಚಾದಾಗ ಯೋಗ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ, ನಂತರ ಆಯುರ್ವೇದ ಮತ್ತು ಯೋಗ ಥೆರಪಿ ಬಳಸಿ ತಲೆಶೂಲೆ (ಮೈಗ್ರೇನ್) ನಿರ್ವಹಣೆ ವಿಷಯದಲ್ಲಿ ಪಿಎಚ್‌.ಡಿ ಪದವಿ ಪಡೆದೆ. ಅಗತ್ಯ ಶೈಕ್ಷಣಿಕ ಅರ್ಹತೆ ಪಡೆದ ಬಳಿಕ ನಾನು ನನ್ನದೇ ಸ್ವಂತ ಆಸ್ಪತ್ರೆ ನಿರ್ಮಾಣಕ್ಕೆ ಮುಂದಾದೆ. ವ್ಯಾಸ ಹೆಲ್ತ್ ಕೇರ್ ಪ್ರೈ.ಲಿ. ಕಂಪನಿ ಹೆಸರಿನ ಅಡಿಯಲ್ಲಿ 2004ರಲ್ಲಿ ವಿವೇಕಾನಂದ ಹೆಲ್ತ್ ಗ್ಲೋಬಲ್ ಅಸ್ತಿತ್ವಕ್ಕೆ ಬಂತು' ಎಂದು ಅವರು ನೆನಪಿಸಿಕೊಳ್ಳುತ್ತಾರೆ.

'ರೋಗಿಗಳ ಮನೆ ಬಾಗಿಲಿಗೇ ಸಂಯೋಜಿತ ವೈದ್ಯ ಸೇವೆಯನ್ನು ಒದಗಿಸುವುದು ವಿವೇಕಾನಂದ ಗ್ಲೋಬಲ್ ಹೆಲ್ತ್‌ನ ಹೆಗ್ಗಳಿಕೆ. ಅದು ಯಶಸ್ವಿಯೂ ಆಗಿದೆ' ಎಂದು ಡಾ. ವಸುಧಾ ಹೇಳುತ್ತಾರೆ. 'ಸಾಂಪ್ರದಾಯಿಕ ಔಷಧ ಮತ್ತು ಜೀವನಶೈಲಿಯಲ್ಲಿ ಬದಲಾವಣೆ ಮೂಲಕ ರೋಗಿಯನ್ನು ವ್ಯಕ್ತಿಗತವಾಗಿ ಆರೈಕೆ ಮಾಡುವುದರಿಂದ' ಪರಿಣಾಮಕಾರಿ ಫಲಿತಾಂಶ ಪಡೆಯುವುದು ಸಾಧ್ಯವಾಗಿದೆ ಎಂದು ಅವರು ಹೇಳುತ್ತಾರೆ.

ಕೋವಿಡ್–19 ಸಾಂಕ್ರಾಮಿಕದ ಬಿಕ್ಕಟ್ಟಿನ ಸಮಯದಲ್ಲಿಯೂ ಅವರು ರೋಗಿಗಳನ್ನು ಕಂಡು ಆರೈಕೆ ಮಾಡುವುದನ್ನು ಮುಂದುವರೆಸಿದ್ದರು. 'ಕಳೆದ 20 ವರ್ಷಗಳಿಂದ ನನ್ನ ವೃತ್ತಿ ನಿಂತಿಲ್ಲ. ಆದರೆ ಕಳೆದ ವರ್ಷ, ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಇದಕ್ಕೆ ವಿರಾಮ ನೀಡಲು ಬಹುತೇಕ ನಿರ್ಧರಿಸಿದ್ದೆ. ಹೀಗಿದ್ದರೂ, ನನ್ನ ತಂಡ ನೀಡಿದ ನೆರವು ಮತ್ತು ಆ ಸಂದರ್ಭಕ್ಕೆ ಹೊಂದಿಕೊಳ್ಳಲು ಸಾಧ್ಯವಾಗಿದ್ದರಿಂದ ನಾವು ಮತ್ತೆ ಪುಟಿದೇಳಲು ಸಾಧ್ಯವಾಯಿತು. ಅಗತ್ಯವಿದ್ದರೆ ಬದಲಾವಣೆ ಮಾಡಿಕೊಳ್ಳಬೇಕೆಂಬ ಪಾಠವನ್ನೂ ನನಗೆ ಆ ಪರಿಸ್ಥಿತಿಯು ಕಲಿಸಿತು. ಪರಿಸ್ಥಿತಿಗೆ ತಕ್ಕಂತೆ ನೀವೂ ಬದಲಾಗಬೇಕು. ಭವಿಷ್ಯದಲ್ಲಿ ಇದು ನಿಜಕ್ಕೂ ನಿಮ್ಮ ನೆರವಿಗೆ ಬರುತ್ತದೆ. ಅನೇಕ ಸಂದರ್ಭಗಳಲ್ಲಿ ನಾವು ಇಂಥ ಸವಾಲುಗಳನ್ನು ನಿರೀಕ್ಷಿಸಿರುವುದೇ ಇಲ್ಲ. ಹಾಗಾಗಿ ಪರ್ಯಾಯ ಯೋಜನೆಯೂ ನಮ್ಮಲ್ಲಿ ಇರುವುದಿಲ್ಲ' ಎಂದು ಡಾ. ವಸುಧಾ ಹೇಳುತ್ತಾರೆ.

ಉದ್ಯಮಿಯಾಗಲು ಬಯಸುವವರಿಗೆ ಯಶಸ್ಸಿನ ಮೂರು ಮಂತ್ರಗಳನ್ನು ಅವರು ಹೇಳುತ್ತಾರೆ. ನಿರಂತರ ಪರಿಶ್ರಮ, ಮಾಡುವ ಕೆಲಸದಲ್ಲಿ ದೃಢನಂಬಿಕೆ ಮತ್ತು ಸುಧಾರಣೆಯ ಕಡೆ ಸತತ ಪ್ರಯತ್ನ ಇರಬೇಕು ಎಂಬುದು ಆ ಮಂತ್ರಗಳು. ಆರೋಗ್ಯಸೇವಾ ಉದ್ಯಮಿಯಾಗಿ 15ಕ್ಕೂ ಹೆಚ್ಚು ವರ್ಷಗಳ ಅನುಭವವಿರುವ ಡಾ. ವಸುಧಾ ಈ ಮಂತ್ರಗಳನ್ನು ತಮ್ಮಲ್ಲಿಯೂ ಅಳವಡಿಸಿಕೊಂಡು ಪ್ರಗತಿಯ ದಾಪುಗಾಲು ಇಡುತ್ತಿದ್ದಾರೆ.

ಡಾ. ವಸುಧಾ ಶರ್ಮ

ಮುಂಬೈ ಧಾರಣೆ

ಶೇಂಗಾ 7-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1610)
ಒಂದು ವಾರದ ಡೆಲಿವರಿ	1635 (1605)
ಸೋಯಾ ಕಚ್ಚಾ	1300 (1300)
ಪಾಮ್ ವಾರದ ಡೆಲಿವರಿ	1243 (1233)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1660)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 45,800 (45,300)
ಬೆಳ್ಳಿ ಕೆ.ಜಿ 66,000 (65,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಕುಮಟ	
ಚಿಪ್ಪು	26599-30209
ಕೋಕ	18599-27869
ಫ್ಯಾಕ್ಟರಿ	14189-17992
ಹಳೆಚಾಲಿ	40509-41989
ಹೊಸಚಾಲಿ	36099-38599
ಸಿದ್ದಾಪುರ	
ಬಿಳಿಗೋಟು	24689-31299
ಚಾಲಿ	34500-37539
ಕೋಕ	17899-30719
ಕೆಂಪುಗೋಟು	23399-30199
ರಾಶಿ	38819-41799
ತಟ್ಟಿಬೆಟ್ಟೆ	31519-38009
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	43119-44200
ಗೊರಬಲು	27500-31219
ರಾಶಿ	37599-43169
ಸರಕು	50009-74013
ಚನ್ನಗಿರಿ	
ರಾಶಿ	40009-43599
ಬೆಟ್ಟೆ	32679-34579

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	---	9800	--- ಸೆಂಟ್ಸ್
ಎಸಿ	---	---	3750	
ಆರ್‌ಪಿ	---	---	5075	
ಆರ್‌ಸಿ	---	---	2850	--- ಡಾಲರ್ಸ್

ಎರಡನೇ ಅಲೆ: ಕ್ರೆಡಾಯ್ ಆತಂಕ

ಬೆಂಗಳೂರು: 'ಕೋವಿಡ್–19 ಸಾಂಕ್ರಾಮಿಕದ ಎರಡನೇ ಅಲೆಯ ಬಗ್ಗೆ ಆತಂಕ ಇದೆ. ಇದು ಉಂಟುಮಾಡಲಿರುವ ಪರಿಣಾಮಗಳ ಬಗ್ಗೆ ಅರಿಯಲು ಸಮಯ ಬೇಕಾಗಲಿದೆ' ಎಂದು ಭಾರತೀಯ ರಿಯಲ್ ಎಸ್ಟೇಟ್ ನಿರ್ಮಾಣಗಾರರ ಸಂಘಗಳ ಒಕ್ಕೂಟದ (ಕ್ರೆಡಾಯ್) ಅಧ್ಯಕ್ಷ ಹರ್ಷವರ್ಧನ್ ಪಟೋಡಿಯಾ ಹೇಳಿದರು.

ಪ್ರಮುಖ ಎಂಟು ನಗರಗಳಲ್ಲಿ 2020ರಲ್ಲಿ ವಸತಿ ಮಾರಾಟವು ಶೇಕಡ 40ರಿಂದ ಶೇ 50ರಷ್ಟು ಇಳಿಕೆ ಕಂಡಿದೆ. ಆದರೆ, 2021ರ ಜನವರಿ-ಮಾರ್ಚ್ ತ್ರೈಮಾಸಿಕದಲ್ಲಿ ವಸತಿ ಮಾರಾಟದಲ್ಲಿ ಏರಿಕೆ ಕಂಡುಬಂದಿದೆ ಎಂದು ವರ್ಚುವಲ್ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ಕೇಂದ್ರದ ಗಮನಕ್ಕೆ ತಂದ ರಾಜ್ಯ: ಪ್ರತಿ ವಾರ 40 ಲಕ್ಷ ಡೋಸ್‌ಗೆ ಆಗ್ರಹ

ಮಹಾರಾಷ್ಟ್ರ: ಲಸಿಕೆ ಕೊರತೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದಲ್ಲಿ ಕೋವಿಡ್–19 ವಿರುದ್ಧ ಲಸಿಕೆ ಮತ್ತು ರೆಮ್‌ಡೆಸಿವಿರ್ ಔಷಧಗಳ ಕೊರತೆಯಾಗಿದೆ.

ಪ್ರಕರಣಗಳು ಹೆಚ್ಚುತ್ತಿರುವ ನಡುವೆಯೂ ಲಸಿಕೆ ಮತ್ತು ಔಷಧಗಳು ಕೊರತೆಯಾಗಿರುವುದನ್ನು ರಾಜ್ಯ ಸರ್ಕಾರ ಕೇಂದ್ರದ ಗಮನಕ್ಕೆ ತಂದಿದೆ. ರಾಜ್ಯದಲ್ಲಿ ಕೋವಿಶೀಲ್ಡ್ ಮತ್ತು ಕೊವ್ಯಾಕ್ಸಿನ್ ಲಸಿಕೆಗಳು ಕೇವಲ ಮೂರು ದಿನಗಳಾಗುವಷ್ಟು ಮಾತ್ರ ಸಂಗ್ರಹಿಸಿಡಲಾಗಿದೆ.

ಅತಿ ಹೆಚ್ಚು ಕೋವಿಡ್–19 ಪ್ರಕರಣಗಳು ಕಾಣಿಸಿಕೊಂಡಿರುವ ಒಂಬತ್ತು ರಾಜ್ಯಗಳ ಆರೋಗ್ಯ ಸಚಿವರ ಜತೆ ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಅವರು ಬುಧವಾರ ನಡೆಸಿದ ವಿಡಿಯೊ ಕಾನ್ಫರೆನ್ಸ್ ಸಂದರ್ಭದಲ್ಲಿ ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ.

'ಮಹಾರಾಷ್ಟ್ರದಲ್ಲಿ ಈಗ 14 ಲಕ್ಷ ಡೋಸ್ ಲಸಿಕೆ ಲಭ್ಯವಿದೆ. ಇದು ಮೂರು ದಿನಗಳಿಗೆ ಮಾತ್ರ ಸಾಕಾಗುತ್ತದೆ. ಪ್ರತಿ ವಾರ ನಮಗೆ 40 ಲಕ್ಷ ಡೋಸ್‌ಗಳಷ್ಟು ಲಸಿಕೆ ಅಗತ್ಯವಿದೆ' ಎಂದು ಟೋಪೆ ಅವರು ಸುದ್ದಿಗಾರರಿಗೆ ತಿಳಿಸಿದರು.

'ಹಲವು ಲಸಿಕಾ ಕೇಂದ್ರಗಳಲ್ಲಿ ಅಗತ್ಯವಿದ್ದಷ್ಟು ಲಸಿಕೆ ಇಲ್ಲದ ಕಾರಣ ಜನರನ್ನು ವಾಪಸ್ ಕಳುಹಿಸಲಾಗುತ್ತಿದೆ. ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ಲಸಿಕೆ ನೀಡುತ್ತಿಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ, ಸಾಧ್ಯವಾದಷ್ಟು ತ್ವರಿತಗತಿಯಲ್ಲಿ ಲಸಿಕೆಗಳನ್ನು ಪೂರೈಸಬೇಕಾಗಿದೆ. ಜತೆಗೆ, ಆದ್ಯತೆ ಮೇರೆಗೆ 20ರಿಂದ 45 ವಯಸ್ಸಿನವರಿಗೂ ಲಸಿಕೆ ಹಾಕಲು ಅವಕಾಶ ಕಲ್ಪಿಸುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ' ಎಂದು ಹೇಳಿದರು.

'ರಾಜ್ಯದಲ್ಲಿ ಆಮ್ಲಜನಕ ಪೂರೈಕೆಯಲ್ಲೂ ಕೊರತೆಯಾಗುತ್ತಿದೆ. ಶೇಕಡ 80ರಷ್ಟು ವೈದ್ಯಕೀಯ ಆಮ್ಲಜನಕ ಮತ್ತು ಶೇಕಡ 20ರಷ್ಟು ಕೈಗಾರಿಕಾ ಆಮ್ಲಜನಕ ಪೂರೈಕೆಗೆ ಆದೇಶಿಸಲಾಗಿದೆ. ಆಸ್ಪತ್ರೆಗಳಲ್ಲಿ ರೋಗಿಗಳು ದಾಖಲಾಗುತ್ತಿರುವ ಸಂಖ್ಯೆಯಲ್ಲಿ ಏರಿಕೆಯಾಗುತ್ತಿರುವುದು ಕಳವಳಕಾರಿಯಾಗಿದೆ' ಎಂದು ಹೇಳಿದರು.

'ನೆರೆಯ ರಾಜ್ಯಗಳಿಂದಲೂ ಆಮ್ಲಜನಕ ಪೂರೈಕೆಗೆ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಕೋರಿದ್ದೇನೆ. ಡಾ. ಹರ್ಷವರ್ಧನ್ ಅವರು ನಮ್ಮ ಎಲ್ಲ ಸಮಸ್ಯೆಗಳನ್ನು ಆಲಿಸಿದ್ದಾರೆ. ಸಕಾರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡಿದ್ದಾರೆ' ಎಂದು ತಿಳಿಸಿದರು.

'ಪ್ರತಿ ದಿನ 50 ಸಾವಿರ ರೆಮ್‌ಡೆಸಿವಿರ್ ಅಗತ್ಯವಿದೆ. ಕೆಲವರು ಈ ಔಷಧದ ಕೃತಕ ಅಭಾವ ಸೃಷ್ಟಿಸುವ ಪ್ರಯತ್ನ ಮಾಡುತ್ತಿದ್ದಾರೆ. ಈ ಬಗ್ಗೆ ಕೇಂದ್ರ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳುವುದು ಅಗತ್ಯವಿದೆ. ರೆಮ್‌ಡೆಸಿವಿರ್ ಅಗತ್ಯ ಇಲ್ಲದವರಿಗೂ ನೀಡಲಾಗುತ್ತಿದೆ. ಹೆಚ್ಚು ಹಣ ಪಡೆಯಲು ಕೆಲವು ವೈದ್ಯರು ರೆಮ್‌ಡೆಸಿವಿರ್ ನೀಡುತ್ತಿದ್ದಾರೆ. ಭಾರತೀಯ ವೈದ್ಯಕೀಯ ಸಂಘ (ಐಎಂಎ) ಈ ಬಗ್ಗೆ ಗಮನಹರಿಸಬೇಕಾಗಿದೆ. ಸರ್ಕಾರಿ ವೈದ್ಯರ ಮೇಲೆ ನಮಗೆ ನಿಯಂತ್ರಣವಿದೆ. ಆದರೆ, ಖಾಸಗಿ ವೈದ್ಯರ ಮೇಲೆ ಇಲ್ಲ' ಎಂದು ಹೇಳಿದರು.

'ರೆಮ್‌ಡಿಸಿವರ್ ಔಷಧದ ಬೆಲೆ ₹1,000ದಿಂದ 1,400 ಒಳಗೆ ಇರಬೇಕು. ಸಂಕಷ್ಟದ ಕಾಲದಲ್ಲಿ ನಾವು ಮಾನವೀಯತೆಯಿಂದ ವರ್ತಿಸುವುದು ಅಗತ್ಯವಿದೆ' ಎಂದು ಹೇಳಿದರು.

ಮಹಾರಾಷ್ಟ್ರ ವಿರುದ್ಧ ಕೇಂದ್ರದ ಕಿಡಿ

ಹರ್ಷವರ್ಧನ್

ನವದೆಹಲಿ: ಲಸಿಕೆ ಕೊರತೆ ಬಗ್ಗೆ ಹೇಳಿಕೆ ನೀಡಿರುವ ಮಹಾರಾಷ್ಟ್ರ ಸರ್ಕಾರದ ವಿರುದ್ಧ ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಕಿಡಿಕಾರಿದ್ದಾರೆ.

'ಇಂತಹ ಆರೋಪಗಳು ಸಂಪೂರ್ಣ ಆಧಾರರಹಿತವಾಗಿವೆ. ಇದು ಸೋಮಾರಿತನದ ನಡವಳಿಕೆಯಾಗಿದೆ. ಜತೆಗೆ, ವೈರಸ್ ವಿರುದ್ಧದ ಹೋರಾಟವನ್ನು ಕುಗ್ಗಿಸುವ ಪ್ರಯತ್ನವೂ ಇದಾಗಿದೆ' ಎಂದು ಬುಧವಾರ ಹೇಳಿದ್ದಾರೆ.

'ಲಸಿಕೆ ಕೊರತೆ ಬಗ್ಗೆ ಮಹಾರಾಷ್ಟ್ರದ ಜನಪ್ರತಿನಿಧಿಗಳು ಹೇಳಿಕೆ ನೀಡಿರುವುದನ್ನು ಗಮನಿಸಿದ್ದೇನೆ. ಸಾಂಕ್ರಾಮಿಕ ಕಾಯಿಲೆ ಹಬ್ಬುತ್ತಿರುವುದನ್ನು ನಿಯಂತ್ರಿಸಲು ಪದೇ ಪದೇ ವಿಫಲವಾಗಿರುವ ಮಹಾರಾಷ್ಟ್ರ ಸರ್ಕಾರ, ಗಮನವನ್ನು ಬೇರೆಡೆ ಸೆಳೆಯಲು ಇಂತಹ ಪ್ರಯತ್ನಗಳನ್ನು ಮಾಡುತ್ತಿದೆ ಮತ್ತು ಜನರಲ್ಲಿ ಆತಂಕವನ್ನು ಮೂಡಿಸಲಾಗುತ್ತಿದೆ' ಎಂದು ಟೀಕಿಸಿದ್ದಾರೆ.

'ಮಹಾರಾಷ್ಟ್ರದಲ್ಲಿನ ದುರಾಡಳಿತ ಮತ್ತು ನಿರ್ಲಕ್ಷ್ಯದ ಧೋರಣೆಯಿಂದ ವೈರಸ್ ಹಬ್ಬುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ. ರಾಜ್ಯ ಸರ್ಕಾರ ಪ್ರಯತ್ನದ ಕೊರತೆ ಈಗ ಸ್ಪಷ್ಟವಾಗಿ ಕಾಣಿಸುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೋವಿಡ್–19 ನಿಯಂತ್ರಿಸಲು ವಿಫಲವಾಗಿರುವ ಛತ್ತೀಸಗಡ ಮತ್ತು ದೆಹಲಿ ಸರ್ಕಾರಗಳ ಧೋರಣೆಯನ್ನು ಸಹ ಅವರು ಟೀಕಿಸಿದ್ದಾರೆ. ಕರ್ನಾಟಕ, ಪಂಜಾಬ್, ರಾಜಸ್ಥಾನ ಮತ್ತು ಗುಜರಾತ್‌ನಲ್ಲೂ ಹಲವು ಕೊರತೆಗಳಿವೆ ಎಂದು ಅವರು ಹೇಳಿದ್ದಾರೆ. ಕರ್ನಾಟಕ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಪರೀಕ್ಷಾ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ ಎಂದು ಸೂಚಿಸಿದ್ದಾರೆ. ಛತ್ತೀಸಗಡ ಸರ್ಕಾರ ಭಾರತ್ ಬಯೊಟೆಕ್‌ನ ಕೊವ್ಯಾಕ್ಸಿನ್ ಬಳಸಲು ನಿರಾಕರಿಸಿದ್ದಕ್ಕೆ ಅವರು ಅಸಮಾಧಾನ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ದಿನಕ್ಕೆ 7 ಸಾವಿರದತ್ತ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ತೀವ್ರವಾಗಿ ಹರಡುತ್ತಿದ್ದು, ದಿನದಿಂದ ದಿನಕ್ಕೆ ಸರಾಸರಿ ಒಂದೊಂದು ಸಾವಿರ ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ. ಬುಧವಾರ ಒಂದೇ ದಿನ 6,976 ಮಂದಿಯಲ್ಲಿ ಕೋವಿಡ್ ದೃಢಪಟ್ಟಿದೆ.

ಪಾಸಿಟಿವಿಟಿ ದರ ಕೂಡ ಹೆಚ್ಚಾಗುತ್ತಿದೆ. ಏ.7 ರಂದು ಈ ದರ ಶೇ 5.56 ಇದೆ. ಮಂಗಳವಾರ ಶೇ 6.02ರಷ್ಟು ಇತ್ತು. ಅಂದರೆ, ಪರೀಕ್ಷೆಗೆ ಒಳಗಾಗುವ ಪ್ರತಿ 100 ರಲ್ಲಿ 5ರಿಂದ 6 ಮಂದಿಯಲ್ಲಿ ಕೋವಿಡ್ ದೃಢಪಡುತ್ತಿದೆ.

ರಾಜಧಾನಿಯಲ್ಲಿ ಶರವೇಗ: ರಾಜಧಾನಿಯಲ್ಲಿ ಶರವೇಗದಲ್ಲಿ ಕೋವಿಡ್ ಹೊಸ ಪ್ರಕರಣಗಳು ವರದಿಯಾಗುತ್ತಿವೆ. 24 ತಾಸಿನ ಅವಧಿಯಲ್ಲಿ ಐದು ಸಾವಿರ ಸಮೀಪ (4,991) ಹೊಸ ಪ್ರಕರಣಗಳು ಪತ್ತೆಯಾಗಿದ್ದರೆ, ಕೇವಲ 1,782 ಜನ ಗುಣಮುಖರಾಗಿದ್ದಾರೆ. 25 ಜನ ಸಾವಿಗೀಡಾಗಿದ್ದು, ಬೆಂಗಳೂರಿನಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 4,718ಕ್ಕೆ ಏರಿದೆ.

1.25 ಲಕ್ಷ ಪರೀಕ್ಷೆ: ಕೋವಿಡ್ ಪರೀಕ್ಷೆಗಳ ಸಂಖ್ಯೆಯ ಲ್ಲಿಯೂ ಹೆಚ್ಚಳವಾಗಿದೆ. ಬುಧವಾರ ಒಂದೇ ದಿನ 1.25 ಲಕ್ಷ ಮಂದಿ ಪರೀಕ್ಷೆ ಮಾಡಿಸಿಕೊಂಡಿದ್ದಾರೆ.

88 ಸಾವಿರ ಮಂದಿಗೆ ಲಸಿಕೆ: ರಾಜ್ಯದಲ್ಲಿ ಬುಧವಾರ 88,499 ಮಂದಿ ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದಾರೆ. ಆ ಮೂಲಕ ಈವರೆಗೆ ಒಟ್ಟಾರೆ 48.32 ಲಕ್ಷ ಮಂದಿ ಕೋವಿಡ್ ಲಸಿಕೆ ಪಡೆದುಕೊಂಡಂತಾಗಿದೆ.

ಹೊಸ ತಳಿಯಿಂದ ಪ್ರಕರಣ ಹೆಚ್ಚಳ: ಟೋಪೆ ಶಂಕೆ

ಮುಂಬೈ (ಪಿಟಿಐ): 'ಕೊರೊನಾ ವೈರಸ್‌ನ ರೂಪಾಂತರಿ ಹೊಸ ತಳಿ ರಾಜ್ಯದಲ್ಲಿ ಕಾಣಿಸಿಕೊಂಡಿರುವ ಸಂಶಯವಿದೆ. ಅಲ್ಪ ಸಮಯದಲ್ಲಿಯೇ ಸೋಂಕು ಜನರಿಗೆ ಹರಡುತ್ತಿರಬಹುದು' ಎಂದು ಮಹಾರಾಷ್ಟ್ರ ಆರೋಗ್ಯ ಸಚಿವ ರಾಜೇಶ್ ಟೋಪೆ ಬುಧವಾರ ಹೇಳಿದರು.

'ಸಂಭಾವ್ಯ ಹೊಸ ತಳಿಯ ವೈರಸ್ ಕುರಿತು ನ್ಯಾಷನಲ್ ಸೆಂಟರ್ ಆಫ್ ಡಿಸೀಸ್ ಕಂಟ್ರೋಲ್ (ಎನ್‌ಸಿಡಿಎಸ್) ಹೆಚ್ಚಿನ ಮಾಹಿತಿ ನೀಡಬೇಕು. ಈ ವೈರಸ್‌ನಿಂದ ಹರಡುವ ಸೋಂಕಿಗೆ ಚಿಕಿತ್ಸೆ ಬಗ್ಗೆಯೂ ತಿಳಿಸಬೇಕು' ಎಂದು ಒತ್ತಾಯಿಸಿದರು.

ಸಂಕ್ಷಿಪ್ತ ಸುದ್ದಿ

ಚಿದಂಬರಂ ಹಾಜರಾತಿಗೆ ವಿನಾಯಿತಿ

ನವದೆಹಲಿ: ಐಎನ್‌ಎಕ್ಸ್ ಮೀಡಿಯಾ ಪ್ರಕರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕೇಂದ್ರದ ಮಾಜಿ ಸಚಿವ ಪಿ.ಚಿದಂಬರಂ ಮತ್ತು ಅವರ ಪುತ್ರ ಕಾರ್ತಿ ಅವರಿಗೆ ದೆಹಲಿ ನ್ಯಾಯಾಲಯಕ್ಕೆ ಖುದ್ದಾಗಿ ಹಾಜರಾಗುವುದರಿಂದ ವಿನಾಯಿತಿ ನೀಡಿದೆ.

ಚಿದಂಬರಂ ಮತ್ತು ಕಾರ್ತಿ ಪರ ವಕೀಲ ಆರ್ಷ್‌ದೀಪ್ ಸಿಂಗ್, 'ತಮ್ಮ ಕಕ್ಷಿದಾರರು ತಮಿಳುನಾಡು ವಿಧಾನಸಭಾ ಚುನಾವಣೆ ಪ್ರಚಾರದಲ್ಲಿ ತಾರಾ ಪ್ರಚಾರಕರಾಗಿದ್ದಾರೆ. ಹಾಗಾಗಿ ಅವರಿಗೆ ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಬೇಕು' ಎಂದು ಕೋರಿದ್ದರು.

ಅಸ್ಟ್ರಾಜೆನೆಕಾ ಲಸಿಕೆ: ಬ್ರಿಟನ್‌ನಲ್ಲಿ 19 ಸಾವು

ಲಂಡನ್ (ಎಎಫ್‌ಪಿ): ಬ್ರಿಟನ್‌ನಲ್ಲಿ ಅಸ್ಟ್ರಾಜೆನೆಕಾ ಲಸಿಕೆ ಪಡೆದವರಲ್ಲಿ 79 ಮಂದಿಗೆ ಅಪರೂಪದ ರಕ್ತ ಹೆಪ್ಪುಗಟ್ಟುವಿಕೆ ತೊಂದರೆ ಕಾಣಿಸಿಕೊಂಡಿದ್ದು, ಇದರಲ್ಲಿ 19 ಮಂದಿ ಮೃತಪಟ್ಟಿದ್ದಾರೆ ಎಂದು ದೇಶದ ಔಷಧ ನಿಯಂತ್ರಕ ಸಂಸ್ಥೆ ಬುಧವಾರ ತಿಳಿಸಿದೆ.

'ದೇಶದಲ್ಲಿ ಮಾರ್ಚ್ 31ರ ಹೊತ್ತಿಗೆ 20 ಮಿಲಿಯನ್ ಡೋಸ್‌ಗಳನ್ನು ನೀಡಲಾಗಿದೆ. ರಕ್ತ ಹೆಪ್ಪುಗಟ್ಟುವಿಕೆಯ 79 ಪ್ರಕರಣಗಳು ವರದಿಯಾಗಿವೆ. 79 ಪ್ರಕರಣಗಳಲ್ಲಿ 19 ಜನರು ಸಾವನ್ನಪ್ಪಿದ್ದಾರೆ' ಎಂದು ಔಷಧ ಮತ್ತು ಆರೋಗ್ಯ ಉತ್ಪನ್ನಗಳ ನಿಯಂತ್ರಣ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಜೂನ್ ರೈನ್ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಬೆಂಗಳೂರಿನ ಎಲ್ಲಾ ಭಾಗಗಳಲ್ಲಿ ಕಂಪನಿ, ಫ್ಯಾಕ್ಟರಿ ಶೋರೂಮ್, ಬ್ಯಾಂಕಿಂಗ್, ರಿಟೇಲ್ ಕೊರಿಯರ್, ಬಿಸಿನೆಸ್ ಡಿಪಾರ್ಟ್ಮೆಂಟ್ ಗಳಲ್ಲಿ ಕೆಲಸ, ಸಂಬಳ 18,000-36,000/- ಆಯ್ದ ಭಾಗಗಳಲ್ಲಿ ವಸತಿಯೂಟವಿದೆ. 9686115054, 9902603707

✓ WORK FROM HOME: ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ವಯಸ್ಸಾದವರು, ಮನೆಯಲ್ಲೇ ಕುಳಿತು ಬುಕ್ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ12,000-15,000ವರೆಗೆ ಸಂಪಾದಿಸಿ ಕೊರಿಯರ್ ಸೌಲಭ್ಯವಿದೆ.8884611125, 8884611126

✓ ಕರ್ನಾಟಕದಾದ್ಯಂತ OFFICE, Company ಗಳಿಗೆ ಯುವಕ-ಯುವತಿಯರು ಬೇಕಾಗಿದ್ದಾರೆ.10th, PUC, Any Degree, ITI, Diploma Pass/Fail, ನೇರನೇಮಕಾತಿ ಸಂಬಳ:16,200-65,000/- ಊಟ ವಸತಿಯೊಂದಿಗೆ 8095037111, 8095036111.

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ MNC ಕಂಪನಿಗಳಿಗೆ ಹಾಗೂ ಎಲ್ಲಾಜಿಲ್ಲೆಗಳಿಗೆ ಯುವಕಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ 7th,SSLC, PUC, ITI Degree Pass/Fail ಆದವರಿಗೆ, ಉಚಿತ ವಸತಿಯೂಟದೊಂದಿಗೆ ESI/PF ನೊಂದಿಗೆ ಸಂಬಳ 16,800/- ರಿಂದ 45000/- ದವರೆಗೆ. 9538606888, 9916016092

✓ ನೇರನೇಮಕಾತಿ ಎಲ್ಲಾ ಜಿಲ್ಲೆಗಳಿಗೆ TATA MOTORS ಟಯೋಟಾ,TVS ಬ್ರಿಟಾನಿಯಾಗಳಿಗೆ SSLC,Degree, ITI ನವರುಗಳು ವಿದ್ಯಾರ್ಹತೆಯಿಲ್ಲದವರುಗಳು 16,800-56,000/- ವಸತಿಯೂಟವಿದೆ. 7795049766, 7795048129

Wanted

✓ ತಕ್ಷಣ ಬೇಕಾಗಿದ್ದಾರೆ: TVS, TOYOTA, VOLVO ಮುಂತಾದ ಕಂಪನಿ ಹಾಗೂ ಆಫೀಸ್ ವರ್ಕ್ ಗಳಿಗೆ ಯುವಕ ಯುವತಿಯರು. ವಸತಿಯೂಟದೊಂದಿಗೆ 15800-55000/- 7411720916, 7411720920

ಸಮಾಜಸೇವೆ

Others

ಅಂಗವಿಕಲರಿಗೆ ಉಚಿತ ತರಬೇತಿ: ಸಮರ್ಥನಂ ಅಂಗವಿಕಲರ ಸಂಸ್ಥೆ ಅಂಗವಿಕಲರಿಗಾಗಿ ವಸತಿಯುತ ವಿಶೇಷ ಕೌಶಲ ತರಬೇತಿ ಹಾಗೂ ಉದ್ಯೋಗವಕಾಶಗಳನ್ನು ಕಲ್ಪಿಸುತ್ತಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ 18 ರಿಂದ 35 ವರ್ಷದೊಳಗಿನ ಆಸಕ್ತ ಅಂಗವಿಕಲರು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9449864693, 9480812139

ವೈಯಕ್ತಿಕ

Change of Name

I, ANAMIKA D/o. Uday Vir Singh RESIDENT OF No.103, Konena Agrahara, Bangalore-560017 HAVE CHANGED MY NAME FROM ANAMIKA to ANAMIKA KUMARI VIDE AFFIDAVIT DATED 06.04.2021 BEFORE NOTARY L GOPALA KRISHNA AT CITY CIVIL COURT, BANGALORE

ವ್ಯಾಪಾರ

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲದೊರೆಯುತ್ತದೆ. ಸಂಪರ್ಕಿಸಿ:09499457849/ 09953286082. ಏಜೆಂಟರು ಸಂಪರ್ಕಿಸಬಹುದು.

ಮುದ್ರಾ ಯೋಜನೆಯಲ್ಲಿ ಕೃಷಿ ಸ್ಥಿರಾಸ್ತಿ, ವೈಯುಕ್ತಿಕ ಬಿಸಿನೆಸ್, ವಿದ್ಯಾ, ವಾಹನ ಸಾಲ 4% ವಾರ್ಷಿಕ ಬಡ್ಡಿಯಲ್ಲಿ ಸಾಲ. 9172930942, 9449896870.

ಭವಿಷ್ಯ

Astrology

★॥ಕೊಳ್ಳೇಗಾಲದ_ಪ್ರಖ್ಯಾತ ಮೋಡಿಮಾಂತ್ರಿಕರು॥★ ನಿಮ್ಮ_ಸಮಸ್ಯೆ ಯಾವುದೇಯಿದ್ದರೂ ಶ್ರೀ_ಭದ್ರಕಾಳಿದೇವಿಯ ಬಲಿಷ್ಠ_ಪೂಜೆಯಿಂದ ಗ್ಯಾರಂಟಿ_ಪರಿಹಾರ. ವಿಶೇಷ_ಸೂಚನೇ: ನಮ್ಮ_ಮೋಡಿ_ಸಿದ್ಧಾಂತ ತಪ್ಪದು. ಸ್ತ್ರೀ_ಮೋಡಿ, ಪುರುಷ_ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ,25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ ಸಂಭೋಗ ವಶೀಕರಣ ಮಾಟಮಂತ್ರ, ಸಾಲಭಾದೆ,ಶತ್ರುನಾಶ, ಧನವಶ,ಜನವಶ ಇನ್ನೂಯಾವುದೇ ಸಮಸ್ಯೆಗಳಿಗೆ ನೋಡುವಮೂಲಕ 11ನಿಮಿಷದಲ್ಲಿ ಪರಿಹಾರ. 9008968867

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

220 ರೂಪಾಯಿಗಳಿಗೆ ಪರಿಹಾರ:- ಉತ್ತರಭಾರತೀಯ ರಹಸ್ಯಪದ್ಧತಿಯಿಂದ ತಿಳಿಸಿದಂತೆ ನಡೆದುಕೊಳ್ಳಿ. ವ್ಯಾಪಾರವಿಲ್ಲ, ಪ್ರೇಮಸಂಬಂಧ, ಕಲಹ, 78 ಸಮಸ್ಯೆಗಳಿರಲಿ 8884826120. ವಶೀಕರಣವಿದ್ಯೆಯನ್ನು ಕಲಿಸಲಾಗುತ್ತದೆ.

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ರಾವ್. 9901724082

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ_ಮೂಲಕ_ಪರಿಹಾರ ತಿಳಿಸುತ್ತಾರೆ. ಬಸ್_ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಮುಸ್ಲಿಂ ಲೀಗ್ ಕಾರ್ಯಕರ್ತನ ಹತ್ಯೆ

ಕಣ್ಣೂರು (ಪಿಟಿಐ): ಕೇರಳ ವಿಧಾನ ಸಭಾ ಚುನಾವಣೆಗೆ ಮಂಗಳವಾರ ನಡೆದ ಮತದಾನದ ನಂತರ, ರಾಜ್ಯದ ಹಲವೆಡೆ ಹಿಂಸಾಚಾರ ನಡೆದಿದೆ. ಕಣ್ಣೂರಿನಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ನ (ಐಯುಎಂಎಲ್) ಯುವ ಕಾರ್ಯಕರ್ತ ಒಬ್ಬರು ಹಿಂಸಾಚಾರದಲ್ಲಿ ಮೃತಪಟ್ಟಿದ್ದಾರೆ. ರಾಜ್ಯದ ಹಲವೆಡೆ ಹಲವರು ಗಾಯಗೊಂಡಿದ್ದಾರೆ.

ಕಣ್ಣೂರಿನ ಚೊಕ್ಲಿಯಲ್ಲಿ ಮಂಗಳವಾರ ರಾತ್ರಿ 8ರ ಹೊತ್ತಿಗೆ ಹಿಂಸಾಚಾರ ನಡೆದಿದೆ. ಚೊಕ್ಲಿಯಲ್ಲಿನ ಮತಗಟ್ಟೆಯಲ್ಲಿ ಐಯುಎಂಎಲ್ ಏಜೆಂಟ್ ಆಗಿ ಕಾರ್ಯನಿರ್ವಹಿಸಿದ್ದ ಮನ್ಸೂರ್ (22) ಎಂಬ ಯುವಕನ ಮನೆ ಮೇಲೆ ಸಿಪಿಎಂನ ಕಾರ್ಯಕರ್ತರು ದಾಳಿ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಮಮತಾಗೆ ನೋಟಿಸ್

ನವದೆಹಲಿ: ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದಲ್ಲಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಚುನಾವಣಾ ಆಯೋಗವು ಬುಧವಾರ ನೋಟಿಸ್ ಜಾರಿ ಮಾಡಿದೆ.

ಕೈಗಾರಿಕೆ ಸ್ಥಾಪನೆಗೆ ಅಡ್ಡಿ, ಉದ್ಯೋಗ ನಷ್ಟ ಆರೋಪ ಮುಂದಿಟ್ಟು ಮಮತಾ ವಿರುದ್ಧ ಆರೋಪ

ಸಿಂಗೂರ್‌ಗೆ ಕೈಗಾರಿಕೆ: ಶಾ ಭರವಸೆ

ಸಿಂಗೂರು (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಒಂದು ಕಾಲದಲ್ಲಿ ಭೂ ಸ್ವಾಧೀನ ವಿರೋಧಿ ಚಳವಳಿಯ ಕೇಂದ್ರ ಸ್ಥಾನವಾಗಿದ್ದ ಸಿಂಗೂರ್‌ನಲ್ಲಿ ಬುಧವಾರ ರೋಡ್ ಷೋ ನಡೆಸಿದ್ದಾರೆ. ಬಿಜೆಪಿ ಅಧಿಕಾರಕ್ಕೆ ಬಂದರೆ ಈ ಪ್ರದೇಶವನ್ನು ಅತ್ಯಂತ ವೇಗವಾಗಿ ಕೈಗಾರಿಕಾ ಕೇಂದ್ರವಾಗಿಸುವುದಾಗಿ ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಹಿಂದೆ ಇದೇ ಸ್ಥಳದಲ್ಲಿ ರ‍್ಯಾಲಿ ನಡೆಸಿದ್ದರು. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ 'ಅಡ್ಡಿಪಡಿಸುವಿಕೆ ಮನಸ್ಥಿತಿ'ಯಿಂದಾಗಿ ಪಶ್ಚಿಮ ಬಂಗಾಳವು ಕೈಗಾರಿಕೆಗಳು ಮತ್ತು ಉದ್ಯೋಗದಿಂದ ವಂಚಿತವಾಗಿದೆ ಎಂದು ಮೋದಿ ಆರೋಪಿಸಿದ್ದರು. ರಾಜ್ಯದಲ್ಲಿ ಕೈಗಾರಿಕೆಗಳು ಕುಗ್ಗುತ್ತಿವೆ ಮತ್ತು ಉದ್ಯೋಗ ನಷ್ಟವಾಗುತ್ತಿದೆ ಎಂಬ ಆರೋಪವನ್ನು ಮಮತಾ ವಿರುದ್ಧ ಬಿಜೆಪಿ ಬಳಸುತ್ತಿದೆ.

ಶಾ ಅವರು ಅಲಂಕೃತ ವಾಹನದಲ್ಲಿ ನಿಂತು ಬಿಜೆಪಿ ಅಭ್ಯರ್ಥಿ ರವೀಂದ್ರನಾಥ ಭಟ್ಟಾಚಾರ್ಯ ಪರ ಮತ

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಿಕ್ಷಾ ಚಾಲಕ ಮತ್ತು ಬಿಜೆಪಿ ಕಾರ್ಯಕರ್ತರೊಬ್ಬರ ಮನೆಯಲ್ಲಿ ಬುಧವಾರ ಮಧ್ಯಾಹ್ನ ಊಟ ಮಾಡಿದರು ಪಿಟಿಐ ಚಿತ್ರ

ಯಾಚಿಸಿದರು. ಟಿಎಂಸಿಯಲ್ಲಿದ್ದ ಭಟ್ಟಾಚಾರ್ಯ ಅವರು ಇತ್ತೀಚೆಗಷ್ಟೇ ಬಿಜೆಪಿ ಸೇರಿದ್ದಾರೆ.

ರೋಡ್ ಷೋ ಸಂದರ್ಭದಲ್ಲಿ ಶಾ ಅವರು ಮಾಧ್ಯಮ ಪ್ರತಿನಿಧಿಗಳ ಜತೆಗೂ ಮಾತನಾಡಿದರು. 2006ರ ಚಳವಳಿಯ ಬಳಿಕ ಈ ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಆಗಿಲ್ಲ. ಬಿಜೆಪಿಯ ಮುಂದಿನ ಸರ್ಕಾರದ ಇಲ್ಲಿ ಕೈಗಾರಿಕಾ ಅಭಿವೃದ್ಧಿ ಮಾಡಲಿದೆ ಎಂದರು.

'ಇಲ್ಲಿ ನಾವು ಕೈಗಾರಿಕಾ ಅಭಿವೃದ್ಧಿ ಮಾಡಲಿದ್ದೇವೆ. ಈ ಪ್ರದೇಶವು ಆಲೂಗಡ್ಡೆಗೆ ಪ್ರಸಿದ್ಧವಾಗಿದೆ. ಇದನ್ನು ಬಳಸುವ ಕೈಗಾರಿಕೆಗಳ ಅಭಿವೃದ್ಧಿಗೆ ₹500 ಕೋಟಿ ಹೂಡಿಕೆಯ ಯೋಜನೆ ರೂಪಿಸಲಾಗುವುದು ಎಂಬ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಿದ್ದೇವೆ' ಎಂದರು.

'ಸಿಆರ್‌ಪಿಎಫ್ ಬಿಜೆಪಿಯ ಕೈಗೊಂಬೆ'

ಬಾನೇಶ್ವರ್ (ಪಿಟಿಐ): 'ಬಿಜೆಪಿಯ ಸಿಆರ್‌ಪಿಎಫ್'ನವರು (ಕೇಂದ್ರ ಮೀಸಲು ಪೊಲೀಸ್ ಪಡೆ) ಜನರನ್ನು ಮತಗಟ್ಟೆಗಳಿಗೆ ಹೋಗುವುದನ್ನು ತಡೆಯುವುದಲ್ಲದೆ, ಕಿರುಕುಳ ನೀಡುವುದು ಮತ್ತು ಅವರ ಹತ್ಯೆ ಮಾಡುವುದರಲ್ಲೂ ತೊಡಗಿದ್ದಾರೆ. ಕೇಂದ್ರದ ಗೃಹ ಸಚಿವ ಅಮಿತ್ ಶಾ ಅವರ ಸೂಚನೆಯ ಮೇರೆಗೆ ಅವರು ಹೀಗೆ ನಡೆದುಕೊಳ್ಳುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆರೋಪಿಸಿದ್ದಾರೆ.

ಬುಧವಾರ ಇಲ್ಲಿ ಆಯೋಜಿಸಿದ್ದ ಪಕ್ಷದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಕೇಂದ್ರೀಯ ಪಡೆಗಳು ಮಹಿಳೆಯರಿಗೆ ಕಿರುಕುಳ ನೀಡುತ್ತಿವೆ. ರಾಜ್ಯದ ಗೃಹ ಸಚಿವೆಯಾಗಿ ನಾನು ಅವರಿಗೆ ಅಂಥ ಆದೇಶಗಳನ್ನು ನೀಡಿಲ್ಲ. ಶಾ ಅವರ ಸೂಚನೆಯಂತೆ ಹೀಗೆ ನಡೆದುಕೊಳ್ಳುತ್ತಿದ್ದಾರೆ. ಸಿಆರ್‌ಪಿಎಫ್ ಬಗ್ಗೆ ನನಗೆ ಗೌರವ ಇದೆ. ಆದರೆ, ಬಿಜೆಪಿಯ ಸೂಚನೆಯಂತೆ ಕೆಲಸ ಮಾಡುವವರ ಬಗ್ಗೆ ನನಗೆ ಗೌರವ ಇಲ್ಲ' ಎಂದರು.

'ಚುನಾವಣೆಯ ಸಂದರ್ಭದಲ್ಲಿ ನಡೆದ ಹಿಂಸಾಚಾರಗಳಲ್ಲಿ ರಾಜ್ಯದಲ್ಲಿ 10ಕ್ಕೂ ಹೆಚ್ಚು ಮಂದಿ ಹತ್ಯೆಯಾಗಿದ್ದಾರೆ ಎಂದ ಮಮತಾ, ಜವಾಬ್ದಾರಿ ಅರಿತು ನಡೆದುಕೊಳ್ಳುವಂತೆ ಮತ್ತು ಮುಂದಿನ ಐದು ಹಂತಗಳ ಮತದಾನದ ಸಂದರ್ಭದಲ್ಲಿ ಯಾವುದೇ ಸಾವುಗಳು ಸಂಭವಿಸದಂತೆ ನೋಡಿಕೊಳ್ಳಲು ಸಿಆರ್‌ಪಿಎಫ್‌ಗೆ ಸೂಚನೆ ನೀಡಬೇಕು' ಎಂದು ಚುನಾವಣಾ ಆಯೋಗಕ್ಕೆ ಮನವಿ ಮಾಡಿದರು. ತಾರಕೇಶ್ವರ್‌ನಲ್ಲಿ ಸಿಆರ್‌ಪಿಎಫ್ ಸಿಬ್ಬಂದಿಯೊಬ್ಬರು ಶಾಲಾ ವಿದ್ಯಾರ್ಥಿನಿಯೊಬ್ಬಳಿಗೆ ಕಿರುಕುಳ ನೀಡಿದ್ದಾರೆ ಎಂದು ಸೋಮವಾರ ಆರೋಪಿಸಲಾಗಿತ್ತು. ಆರೋಪದ ಕಾರಣಕ್ಕೆ ಚುನಾವಣಾ ಆಯೋಗವು ಆ ಸಿಬ್ಬಂದಿಯನ್ನು ಅಲ್ಲಿಂದ ತೆಗೆದುಹಾಕಿತ್ತು. ಘಟನೆಯ ಬಗ್ಗೆ ತನಿಖೆ ನಡೆಸಲಾಗುತ್ತಿದೆ.

ಬಸವಕಲ್ಯಾಣ ತಾಲ್ಲೂಕಿನ ಚಿಟ್ಟಾದಲ್ಲಿ ಜೆಡಿಎಸ್ ಮುಖಂಡ ಎಚ್‌.ಡಿ.ಕುಮಾರಸ್ವಾಮಿ ಪಕ್ಷದ ಅಭ್ಯರ್ಥಿ ಯಸ್ರಬ್ ಅಲಿ ಖಾದ್ರಿ ಪರ ಮತಯಾಚಿಸಿದರು

ಜಮೀರ್ ಅಹ್ಮದ್‌ಗೆ ಕುಮಾರಸ್ವಾಮಿ ಸವಾಲು

₹10 ಕೋಟಿ ಪಡೆದದ್ದು ಸಾಬೀತುಪಡಿಸಲಿ

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ಬಸವಕಲ್ಯಾಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಬಿಜೆಪಿಯಿಂದ ₹10 ಕೋಟಿ ಪಡೆದಿದ್ದೇನೆ ಎಂದು ಶಾಸಕ ಜಮೀರ್ ಅಹ್ಮದ್ ಆರೋಪಿಸಿದ್ದಾರೆ. ಅವರಿಗೆ ಅಲ್ಲಾನ ಮೇಲೆ ನಂಬಿಕೆ ಇದ್ದರೆ ಅದನ್ನು ಸಾಬೀತು ಮಾಡಲಿ' ಎಂದು ಜೆಡಿಎಸ್ ಮುಖಂಡ ಎಚ್‌.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

'ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡದೆ ಕಡೆಗಣಿಸಲಾಗಿದೆ ಎಂಬ ಕಾರಣಕ್ಕೆ ಇಲ್ಲಿ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗಿದೆಯೇ ಹೊರತು ಬೇರೆ ಉದ್ದೇಶವಿಲ್ಲ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಈ ಕ್ಷೇತ್ರದಲ್ಲಿ 7 ಬಾರಿ ಜನತಾ ಪರಿವಾರದ ಅಭ್ಯರ್ಥಿ ಗೆದ್ದಿದ್ದು, ಇದು ಜೆಡಿಎಸ್ ಭದ್ರಕೋಟೆಯಾಗಿದೆ. ಈ ಉಪಚುನಾವಣೆಯಲ್ಲಿ ಗೆಲ್ಲಲೇಬೇಕು ಎಂಬ ಕಾರಣಕ್ಕೆ ಒಂದು ವಾರ ಇಲ್ಲಿಯೇ ಠಿಕಾಣಿ ಹೂಡಲಿದ್ದೇನೆ' ಎಂದರು.

'ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಈ ಕ್ಷೇತ್ರವನ್ನು ದತ್ತು ಪಡೆದು ಉದ್ಧಾರ ಮಾಡುವುದಾಗಿ ಸುಳ್ಳು ಭರವಸೆ ನೀಡಿದ್ದಾರೆ. ಚುನಾವಣೆ ಬಂದಾಗ, ಸ್ವರ್ಗ ಇಳಿಸುವೆ ಎನ್ನುವ ಅವರು ನಂತರ ಕ್ಷೇತ್ರವನ್ನೇ ಮರೆಯುತ್ತಾರೆ. ಈವರೆಗೆ ಉಪಚುನಾವಣೆ ನಡೆದ ಕ್ಷೇತ್ರಗಳಲ್ಲಿ, ಯಾವುದೇ ಕೆಲಸ ಮಾಡಿಲ್ಲ' ಎಂದು ದೂರಿದರು.

'ರಾಜ್ಯ ಸರ್ಕಾರ ದಿವಾಳಿಯತ್ತ ಸಾಗಿದೆ. ಯೋಜನೆಗಳಿಗೆ ನೀಡಲು ಹಣ ಇಲ್ಲ. ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜಾರಿಯಾದ ಯೋಜನೆಗಳ ಅನುದಾನವನ್ನಾದರೂ ಬಿಡುಗಡೆಗೊಳಿಸುವಂತೆ ಬಹುತೇಕ ಶಾಸಕರು ಕೋರುತ್ತಿದ್ದಾರೆ' ಎಂದರು.

'ರಾಜ್ಯದಾದ್ಯಂತ ಸಾರಿಗೆ ನೌಕರರು ಮುಷ್ಕರ ಹೂಡಿದ್ದು ಅವರಿಗೆ ವೇತನ ಹೆಚ್ಚಳವಾಗಬೇಕು ಎಂದು ನಾನೂ ಆಗ್ರಹಿಸುವೆ. ಆದರೂ ಸರ್ಕಾರ ಸ್ಪಂದಿಸುತ್ತಿಲ್ಲ. ವೇತನ ಹೆಚ್ಚಳಕ್ಕೆ ₹700 ಕೋಟಿ ಬೇಕಾಗಬಹುದು' ಎಂದರು.

ಶಾಸಕ ಬಂಡೆಪ್ಪ ಕಾಶೆಂಪೂರ, ಅಭ್ಯರ್ಥಿ ಯಸ್ರಬ್ ಅಲಿ ಖಾದ್ರಿ, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷ ರಮೇಶ ಪಾಟೀಲ ಸೊಲಪುರ, ತಾಲ್ಲೂಕು ಘಟಕದ ಅಧ್ಯಕ್ಷ ಶಬ್ಬೀರಪಾಶಾ ಮುಜಾವರ್ ಇದ್ದರು.

ಅಜಿತ್ ಪವಾರ್ ಆಪ್ತ, ಅನಿಲ್ ಪರಬ್ ಹೆಸರು ಪ್ರಸ್ತಾಪ

ಹಣ ವಸೂಲಿಗೆ ಸೂಚಿಸಿದ್ದ ದೇಶಮುಖ್: ವಾಜೆ

ಪ್ರಜಾವಾಣಿ ವಾರ್ತೆ

ಮುಂಬೈ: ಹಣ ವಸೂಲಿ ಮಾಡುವಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಮತ್ತು ಸಂಸದೀಯ ವ್ಯವಹಾರಗಳು ಮತ್ತು ಸಾರಿಗೆ ಸಚಿವ ಅನಿಲ್ ಪರಬ್ ಸೂಚಿಸಿದ್ದರು ಎಂದು ಸದ್ಯ ಬಂಧನದಲ್ಲಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಬಹಿರಂಗಪಡಿಸಿದ್ದಾರೆ.

ಪರಬ್ ಅವರು ಮಹಾರಾಷ್ಟ್ರ ಮುಖ್ಯಮಂತ್ರಿ ಮತ್ತು ಶಿವಸೇನಾ ಅಧ್ಯಕ್ಷ ಉದ್ಧವ್ ಠಾಕ್ರೆ ಅವರಿಗೂ ಅತ್ಯಾಪ್ತರು. ಅಲ್ಲದೆ, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರ ಆಪ್ತ ಮತ್ತು ಸೋದರಳಿಯನಾದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಆಪ್ತರೊಬ್ಬರು ಸಹ ತಮ್ಮನ್ನು ಸಂಪರ್ಕಿಸಿ, ಹಣ ಸುಲಿಗೆ ಮಾಡಲು ಹೇಳುತ್ತಿದ್ದರು ಎಂದು ವಾಜೆ ಹೇಳಿದ್ದಾರೆ.

ಮುಂಬೈನ ಎನ್‌ಐಎ ವಿಶೇಷ ನ್ಯಾಯಾಲಯದ ಮುಂದೆ ಸಲ್ಲಿಸಿರುವ ನಾಲ್ಕು ಪುಟಗಳ ಪತ್ರದಲ್ಲಿ ವಾಜೆ ಈ ವಿಷಯ ಉಲ್ಲೇಖಿಸಿದ್ದಾರೆ.

ವಾಜೆ ಹೇಳಿಕೆಯಿಂದ ಉದ್ಧವ್ ಠಾಕ್ರೆ ನೇತೃತ್ವದ ಮಹಾ ವಿಕಾಸ್ ಅಗಾಡಿ ಸರ್ಕಾರಕ್ಕೆ ಗಂಡಾಂತರ ಎದುರಾಗಿದೆ.

'ಪೊಲೀಸ್ ಇಲಾಖೆಗೆ ವಾಪಸ್ ಸೇರಲು ದೇಶಮುಖ್ ಅವರು ತಮ್ಮಿಂದ ₹ 2ಕೋಟಿ ಕೇಳಿದ್ದರು. ಈ ವಿಷಯದ ಬಗ್ಗೆ ಶರದ್ ಪವಾರ್ ಅವರಿಗೂ ಮನವರಿಕೆ ಮಾಡುವ ಭರವಸೆ ನೀಡಿದ್ದರು. ಆದರೆ, ಇಷ್ಟೊಂದು ಮೊತ್ತ ನೀಡಲು ಸಾಧ್ಯವಿಲ್ಲ ಎಂದು ಹೇಳಿದ ನಂತರ ತಡವಾಗಿ ನೀಡುವಂತೆ ಸೂಚಿಸಿದರು' ಎಂದು ವಾಜೆ ಹೇಳಿದ್ದಾರೆ.

2020ರ ಅಕ್ಟೋಬರ್‌ನಲ್ಲಿ ಸಹ್ಯಾದ್ರಿ ಅತಿಥಿ ಗೃಹಕ್ಕೆ ಕರೆಯಿಸಿಕೊಂಡಿದ್ದ ದೇಶಮುಖ್ ಅವರು, ಮುಂಬೈನಲ್ಲಿ 1,650 ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳಿಂದ ಪ್ರತಿ ತಿಂಗಳು ₹3 ಲಕ್ಷ ವಸೂಲಿ ಮಾಡುವಂತೆ ಸೂಚಿಸಿದ್ದರು ಎಂದು ಹೇಳಿದ್ದಾರೆ.

'ಸಿಂಗ್ ಸೂಚನೆ ಮೇರೆಗೆ ಸಿಐಯುಗೆ ವಾಜೆ': ಜಂಟಿ ಪೊಲೀಸ್ ಕಮಿಷನರ್ (ಅಪರಾಧ) ಆಕ್ಷೇಪ ವ್ಯಕ್ತಪಡಿಸಿದ್ದರೂ ಮುಂಬೈನ ಹಿಂದಿನ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಅವರ ಒತ್ತಾಯದ ಮೇರೆಗೆ ಕಳೆದ ವರ್ಷ ಜೂನ್‌ನಲ್ಲಿ ಸಚಿನ್ ವಾಜೆ ಅವರನ್ನು ಅಪರಾಧ ಗುಪ್ತದಳ ಘಟಕಕ್ಕೆ (ಸಿಐಯು) ನಿಯೋಜಿಸಲಾಗಿತ್ತು ಎಂದು ಮುಂಬೈ ಪೊಲೀಸರು, ರಾಜ್ಯ ಗೃಹ ಇಲಾಖೆಗೆ ವರದಿ ಸಲ್ಲಿಸಿದ್ದಾರೆ.

ಹಿರಿತನವನ್ನು ಕಡೆಗಣಿಸುತ್ತಿದ್ದ ವಾಜೆ ನೇರವಾಗಿ ಅಂದಿನ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಅವರಿಗೆ ವಿವಿಧ ಪ್ರಕರಣಗಳ ತನಿಖೆಯ ವಿವರಗಳ ಬಗ್ಗೆ ವರದಿ ನೀಡುತ್ತಿದ್ದರು. ಟಿಆರ್‌ಪಿ ಹಗರಣ, ಮುಕೇಶ್ ಅಂಬಾನಿ ಭದ್ರತಾ ಪ್ರಕರಣ ಮುಂತಾದ ಮಹತ್ವದ ಪ್ರಕರಣಗಳ ಕುರಿತು ಸಚಿವರಿಗೆ ವಿವರಣೆ ನೀಡುವ ಸಭೆಗಳಲ್ಲಿಯೂ ಪೊಲೀಸ್ ಕಮಿಷನರ್ ಅವರ ಜತೆಯಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದು ವರದಿಯಲ್ಲಿ ವಿವರಿಸಲಾಗಿದೆ.

ಸಾಮಾನ್ಯವಾಗಿ ಅಪರಾಧ ಗುಪ್ತದಳ ಘಟಕದ ಮುಖ್ಯಸ್ಥರ ಹುದ್ದೆಗೆ ಪೊಲೀಸ್ ಇನ್‌ಸ್ಪೆಕ್ಟರ್ ದರ್ಜೆಯ ಅಧಿಕಾರಿಯನ್ನು ನೇಮಿಸಲಾಗುತ್ತದೆ. ಆದರೆ, ವಾಜೆ ಸಹಾಯಕ ಪೊಲೀಸ್ ಇನ್‌ಸ್ಪೆಕ್ಟರ್ ಆಗಿದ್ದರೂ ಅವರನ್ನು ನೇಮಿಸಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏ.9ರವರೆಗೆ ವಾಜೆ ಎನ್‌ಐಎ ವಶಕ್ಕೆ

ಬಂಧಿತ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಶಕ್ಕೆ ಒಪ್ಪಿಸಿದ್ದ ಅವಧಿಯನ್ನು ಏಪ್ರಿಲ್ 9ರವರೆಗೂ ವಿಸ್ತರಿಸಲಾಗಿದೆ.

ವಿಶೇಷ ಎನ್‌ಐಎ ನ್ಯಾಯಾಲಯ ಈ ಆದೇಶ ನೀಡಿದೆ.

ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಹಾಗೂ ಉದ್ಯಮಿ ಮನ್‌ಸುಖ್ ಹಿರೇನ್ ಅನುಮಾನಸ್ಪದ ಸಾವಿನ ಪ್ರಕರಣದ ಸಂಬಂಧ ವಾಜೆ ಅವರನ್ನು ಮಾರ್ಚ್ 13ರಂದು ಎನ್‌ಐಎ ಬಂಧಿಸಿತ್ತು. ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ವಿರುದ್ಧದ ಭ್ರಷ್ಟಾಚಾರ ಆರೋಪಗಳಿಗೆ ಸಂಬಂಧಿಸಿದಂತೆ ವಾಜೆ ಅವರನ್ನು ವಿಚಾರಣೆ ನಡೆಸಲು ಸಹ ಸಿಬಿಐಗೆ ನ್ಯಾಯಾಲಯ ಅನುಮತಿ ನೀಡಿತು.

ಬಾಂದಾ ಜೈಲಿಗೆ ಅನ್ಸಾರಿ ಸ್ಥಳಾಂತರ

ಬಾಂದಾ, ಉತ್ತರಪ್ರದೇಶ (ಪಿಟಿಐ): ಎರಡು ವರ್ಷಗಳಿಂದ ಪಂಜಾಬ್‌ನ ರೂಪ್‌ನಗರ ಜೈಲಿನಲ್ಲಿದ್ದ ಪಾತಕಿ ಹಾಗೂ ರಾಜಕಾರಣಿ ಮುಖ್ತಾರ್ ಅನ್ಸಾರಿಯನ್ನು ಬುಧವಾರ ಬೆಳಿಗ್ಗೆ ಉತ್ತರ ಪ್ರದೇಶದ ಬಾಂದಾ ಜೈಲಿಗೆ ಕರೆತರಲಾಯಿತು.

ಪೊಲೀಸರು ಅನ್ಸಾರಿಯನ್ನು ಆಂಬುಲೆನ್ಸ್‌ನಲ್ಲಿ ರೂಪ್‌ನಗರದಿಂದ ಬಾಂದಾ ಜೈಲಿಗೆ ಕರೆತಂದರು. 900 ಕಿ.ಮೀ. ಪ್ರಯಾಣದ ವೇಳೆ ಉತ್ತರ ಪ್ರದೇಶ ಪೊಲೀಸರಿದ್ದ ವಾಹನಗಳಿಂದ ಆಂಬುಲೆನ್ಸ್‌ಗೆ ಭದ್ರತೆ ಒದಗಿಸಲಾಗಿತ್ತು.

'ಜೈಲಿನ ಒಳಗೆ ಹಾಗೂ ಹೊರಗೆ ಭದ್ರತಾ ಸಿಬ್ಬಂದಿಯನ್ನು ಮಾಡಲಾಗಿತ್ತು. ಅನ್ಸಾರಿಯನ್ನು ಕೊಠಡಿ ಸಂಖ್ಯೆ 15ರಲ್ಲಿ ಇರಿಸಲಾಗಿದ್ದು, ಜೈಲಿನಲ್ಲಿರುವ ಇತರ ಕೈದಿಗಳು ಈ ಕೊಠಡಿ ಹತ್ತಿರ ಸುಳಿಯಲು ಅವಕಾಶ ನೀಡುತ್ತಿಲ್ಲ' ಎಂದು ಬಾಂದಾ ಜೈಲರ್ ಪ್ರಮೋದ್ ತಿವಾರಿ ತಿಳಿಸಿದರು.

ಅನ್ಸಾರಿಯನ್ನು ಉತ್ತರ ಪ್ರದೇಶ ಪೊಲೀಸರಿಗೆ ಹಸ್ತಾಂತರಿಸಬೇಕು ಎಂದು ಸುಪ್ರೀಂಕೋರ್ಟ್ ಇತ್ತೀಚೆಗೆ ಆದೇಶಿಸಿತ್ತು. ಈ ಆದೇಶದನ್ವಯ, ಉತ್ತರ ಪ್ರದೇಶ ಪೊಲೀಸರು ರೂಪ್‌ನಗರ ಜೈಲಿನಲ್ಲಿದ್ದ ಅನ್ಸಾರಿಯನ್ನು ಮಂಗಳವಾರ ತಮ್ಮ ವಶಕ್ಕೆ ಪಡೆದರು. ಭದ್ರತೆಗೆ ನಿಯೋಜನೆಗೊಂಡಿದ್ದ ವಾಹನಗಳು ರಾತ್ರಿ 1.30ರ ವೇಳೆ ಸತ್ತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆಲ ಕಾಲ ತಂಗಿದ್ದವು. ಇದು ಊಹಾಪೋಹಗಳಿಗೆ ಕಾರಣವಾಗಿತ್ತು.

'ಹಸ್ತಾಂತರ ವೇಳೆ ಅನ್ಸಾರಿಗೆ ಆಹಾರ, ನೀರು ನೀಡಿಲ್ಲ'

ಬಲ್ಲಿಯಾ, ಉತ್ತರ ಪ್ರದೇಶ (ಪಿಟಿಐ): 'ಪಂಜಾಬ್‌ನಿಂದ ಬಾಂದಾ ಜೈಲಿಗೆ ಕರೆತರುವ ವೇಳೆ ಮುಖ್ತಾರ್ ಅನ್ಸಾರಿಯನ್ನು ಅಮಾನವೀಯವಾಗಿ ನಡೆಸಿಕೊಳ್ಳಲಾಗಿದೆ. ಈ ರೀತಿ ಚಿತ್ರಹಿಂಸೆ ನೀಡುವ ಬದಲು ಮಾರ್ಗಮಧ್ಯೆಯೇ ಆತನನ್ನು ಗುಂಡಿಕ್ಕಿ ಕೊಂದಿದ್ದರೆ ಒಳ್ಳೆಯದಿತ್ತು' ಎಂದು ಪಾತಕಿ ಹಾಗೂ ರಾಜಕಾರಣಿ ಮುಖ್ತಾರ್ ಅನ್ಸಾರಿ ಸಹೋದರ, ಅಫ್ಜಲ್ ಅನ್ಸಾರಿ ಬುಧವಾರ ಆರೋಪಿಸಿದ್ದಾರೆ. ಅಫ್ಜಲ್ ಅನ್ಸಾರಿ ಗಾಜಿಪುರದ ಬಿಎಸ್‌ಪಿ ಸಂಸದ.

'ಪಂಜಾಬ್‌ನಿಂದ ಬಾಂದಾಗೆ 15 ಗಂಟೆಗಳ ಪ್ರಯಾಣ. ಈ ಪ್ರಯಾಣದ ಅವಧಿಯಲ್ಲಿ ಮುಖ್ತಾರ್‌ಗೆ ಆಹಾರ, ನೀರು ನೀಡಿಲ್ಲ. ಆತನಿಗೆ ವೈದ್ಯಕೀಯ ನೆರವನ್ನೂ ನಿರಾಕರಿಸಲಾಗಿದೆ. ಈ ಕಾರಣದಿಂದ ಮುಖ್ತಾರ್ ಅಸ್ವಸ್ಥಗೊಂಡು, ಬಾಂದಾ ಜೈಲು ತಲುಪುವಷ್ಟರಲ್ಲಿ ಆತ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ' ಎಂದೂ ಅಫ್ಜಲ್ ಆರೋಪಿಸಿದ್ದಾರೆ.

ಈ ವಿಷಯ ತಮಗೆ ಹೇಗೆ ಗೊತ್ತಾಯಿತು ಎಂಬ ಬಗ್ಗೆ ಅಫ್ಜಲ್ ವಿವರಣೆ ನೀಡಿಲ್ಲ. 'ಬಾಂದಾ ವೈದ್ಯಕೀಯ ಕಾಲೇಜಿನ ವೈದ್ಯರು ಅನ್ಸಾರಿಯನ್ನು ಜೈಲಿನಲ್ಲಿ ಪರೀಕ್ಷಿಸಿದ್ದು, ಆರೋಗ್ಯ ಸಮಸ್ಯೆ ಇಲ್ಲ' ಎಂದು ಉತ್ತರಪ್ರದೇಶ ಸರ್ಕಾರ ಹೇಳಿದೆ.

ಏ.9ಕ್ಕೆ ಅರ್ಜಿ ವಿಚಾರಣೆ

ಪಾತಕಿ ಹಾಗೂ ರಾಜ ಕಾರಣಿ ಮುಖ್ತಾರ್ ಅನ್ಸಾರಿಯವರಿಗೆ ರಕ್ಷಣೆ ನೀಡಲು ಉತ್ತರಪ್ರದೇಶ ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ಅನ್ಸಾರಿ ಪತ್ನಿ ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕೈಗೆತ್ತಿಕೊಳ್ಳಲಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಮಂಗಳೂರು ವಿಭಾಗ : ಮಂಗಳೂರು

: ಸಂಖ್ಯೆ: ಕರಾಸ: ಮಂವಿ :ಸಿಶಾ :ನೇಮಕ: : 21–22

ದಿನಾಂಕ: 07–04–2021

ಕರೆ ಪತ್ರ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಮಂಗಳೂರು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ತರಬೇತಿ ಚಾಲಕ, ಚಾಲಕ–ಕಂ–ನಿರ್ವಾಹಕ, ತಾಂತ್ರಿಕ ಸಿಬ್ಬಂದಿಗಳು ಯಾವುದೇ ಮುನ್ಸೂಚನೆ ನೀಡದೆ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟ (ರಿ) ರವರು ದಿನಾಂಕ: 07–04–2021ರಿಂದ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಂಡಿದ್ದು, ಸಂಸ್ಥೆಯು ಅಗತ್ಯ ಸೇವಾ ನಿರ್ವಹಣಾ ಕಾಯಿದೆ–2013 (Karnataka Act No-25/2015) ಯಡಿ ಬರುತ್ತಿದ್ದು ಕೆಲಸಕ್ಕೆ ಗೈರುಹಾಜರಾಗಿರುವ ನೌಕರರ ವಿರುದ್ಧ "ಕೆಲಸ ಮಾಡದಿದ್ದಾಗ ವೇತನವಿಲ್ಲ" ಎಂಬ ತತ್ವದ ಪ್ರಕಾರ ಕ್ರಮ ಕೈಗೊಳ್ಳಲಾಗುವುದು ಎಂದು ಹಾಗೂ ಕಾನೂನು ಬಾಹಿರ ಮುಷ್ಕರದಲ್ಲಿ ಭಾಗವಹಿಸಬಾರದಾಗಿ ಅವರಿಗೆ ಸೂಚಿಸಿದ್ದು, ಭಾಗವಹಿಸಿದಲ್ಲಿ ಕೆಲಸ ಮಾಡದಿದ್ದಾಗ ವೇತನವಿಲ್ಲವೆಂಬ ತತ್ವದ ಪ್ರಕಾರ ಕ್ರಮಕೈಗೊಳ್ಳುವುದಾಗಿ ಅನಧಿಕೃತವಾಗಿ ಗೈರುಹಾಜರಾಗಿ ನೌಕರರ ವಿರುದ್ಧ ಶಿಸ್ತು ಕ್ರಮಗಳನ್ನು ಕೈಗೊಳ್ಳುವುದಾಗಿ ಘಟಕದ ಸೂಚನಾ ಫಲಕದಲ್ಲಿ ಪ್ರದರ್ಶಿಸಿ ಮುಂಚಿತವಾಗಿ ತಿಳಿಸಿದ್ದಾಗ್ಯೂ ಸದರಿಯವರು ಕರ್ತವ್ಯಕ್ಕೆ ಗೈರುಹಾಜರಾಗಿ ಸಂಸ್ಥೆಯ ಆಡಳಿತಾತ್ಮಕ ನಿರ್ದೇಶನಗಳನ್ನು ಉಲ್ಲಂಘಿಸಿರುವುದಲ್ಲದೆ ಸಾರ್ವಜನಿಕ ಸೇವೆಗಾಗಿ ಮುಡಿಪಾಗಿರುವ ಸಂಸ್ಥೆಯ ವಾಹನಗಳನ್ನು ಕಾರ್ಯಾಚರಿಸದೆ ಸಾರ್ವಜನಿಕ ಪ್ರಯಾಣಿಕರಿಗೆ ಅನಾನುಕೂಲ ಮಾಡಿರುವುದಲ್ಲದೆ ಸಂಸ್ಥೆಗೆ ಕೆಟ್ಟ ಹೆಸರು ಬರಲುಕಾರಣರಾಗಿರುತ್ತಾರೆ. ಸದರಿಯವರುಗಳಿಗೆ ತರಬೇತಿಗೆ ನಿಯೋಜಿಸುವ ಸಮಯದಲ್ಲಿ ಜಾರಿಗೊಳಿಸಲಾದ ತರಬೇತಿ ಪ್ರಸ್ತಾವನೆಗಳಲ್ಲಿ ತಿಳಿಸಲಾದ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಕರ್ತವ್ಯದ ಮೇಲೆ ತರಬೇತಿ ಮೇಲೆ ನಿಯೋಜಿಸಿಕೊಂಡಿದ್ದು ಅನಧಿಕೃತವಾಗಿ ಗೈರುಹಾಜರಾಗಿ ತರಬೇತಿ ಆದೇಶದಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಉಲ್ಲಂಘಿಸಿರುತ್ತಾರೆ.
ತರಬೇತಿ ನಿಯೋಜನಾ ಆದೇಶದ ಷರತ್ತು 9 ರಲ್ಲಿ ತರಬೇತಿ ಅವಧಿಯಲ್ಲಾಗಲೀ ಅಥವಾ ವಿಸ್ತರಿಸಿದ ಅವಧಿಯಲ್ಲಾಗಲೀ ನೌಕರರು ತರಬೇತಿಗೆ ಗೈರುಹಾಜರಾದಲ್ಲಿ. ಆಸಕ್ತಿ ತೋರದಿದ್ದಲ್ಲಿ/ ತೃಪ್ತಿಕರವಾಗಿ ಮುಗಿಸದಿದ್ದಲ್ಲಿ ಅಥವಾ ಯಾವುದೇ ತೆರನಾದ ದುರ್ನಡತೆ/ ಗುರುತರ ಅಪರಾಧ/ ಕ್ರಿಮಿನಲ್ ಪ್ರಕರಣದಲ್ಲಿ ಭಾಗಿಯಾಗಿದ್ದಲ್ಲಿ ಅವರನ್ನು ಆಯ್ಕೆಪಟ್ಟಿಯಿಂದ ಯಾವುದೇ ಮುನ್ಸೂಚನೆಯಿಲ್ಲದೆ ತೆಗೆದು ಹಾಕಲಾಗುವುದೆಂದು ತಿಳಿಸಲಾಗಿದ್ದು, ಈ ಪ್ರಕಾರ ನಿರ್ದೇಶಿಸಲ್ಪಸಟ್ಟ ಕಾರಣಗಳಿಗಾಗಿ ತಮ್ಮ ಹೆಸರನ್ನು ಆಯ್ಕೆ ಪಟ್ಟಿಯಿಂದ ಯಾವುದೇ ಸೂಚನೆ ಇಲ್ಲದೆ ತೆಗೆದು ಹಾಕಲಾಗುವುದು. ಆದ ಕಾರಣ ಈ ಪತ್ರ ತಲುಪಿದ ಕೂಡಲೇ ತರಬೇತಿ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲ್ಕಾಣಿಸಿ ತರಬೇತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗಲು ಇಚ್ಛೆ ಇರುವುದಿಲ್ಲ ಎಂದು ಪರಿಗಣಿಸಿ ಅವರನ್ನು ಯಾವುದೇ ಮುನ್ಸೂಚನೆ ಇಲ್ಲದೆ ತರಬೇತಿ ಹುದ್ದೆಯ ಆಯ್ಕೆ ಪಟ್ಟಿಯಿಂದ ತೆಗೆದು ಹಾಕಲಾಗುವುದು. ಮೇಲ್ಕಂಡ ಸಿಬ್ಬಂದಿಗಳಿಗೆ ವ್ಯಕ್ತಿವಾರು ಕರೆ ಪತ್ರಗಳನ್ನು ಅವರ ಮನೆ ವಿಳಾಸಕ್ಕೆ ಕಳುಹಿಸಿಕೊಡಲಾಗಿದ್ದು, ಘಟಕದ ಸೂಚನಾ ಫಲಕಗಳಲ್ಲಿಯೂ ಸಹ ಪ್ರದರ್ಶಿಸಲಾಗಿರುತ್ತದೆ. ಆದಾಗ್ಯೂ ಹೆಚ್ಚುವರಿಯಾಗಿ ಈ ಕರೆ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಕರೆ ಪತ್ರವೇ ಅಂತಿಮವಾಗಿದ್ದು ಕೂಡಲೇ ಕರ್ತವ್ಯಕ್ಕೆ ಹಾಜರಾಗುವಂತೆ ತಿಳಿಸಿದೆ. ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಪತ್ರವ್ಯವಹಾರ ಮಾಡಲಾಗುವುದಿಲ್ಲ.

ಮಂಗಳೂರು –1ನೇ ಘಟಕ

ಕ್ರ. ಸಂ.	ಹೆಸರು	ಹುದ್ದೆ	ಬಿ.ಸಂ
1	ಶ್ರೀ. ಮಲ್ಲಪ್ಪ ಸಾಯಿಬಣ್ಣ,	ಚಾ–ಕಂ–ನಿ	769/5200
2	ಶ್ರೀ. ಸೋಮಣ್ಣ ಆರ್	ಚಾ–ಕಂ–ನಿ	85/5192
3	ಅಬ್ಬಾ ಸಾಲಿ ಗಲೀಬ್ ಸಾಬ್ ದೊಡ್ಡಮನಿ	ಚಾ–ಕಂ–ನಿ	2242/4750
4	ಪರಮೇಶ್ವರ	ಚಾ–ಕಂ–ನಿ	1691/4758
5	ರಮೇಶ ಮಾರುತಿ ಉದ್ದ ನಾಯ್ಕ	ಚಾ–ಕಂ–ನಿ	32/4997
6	ನಿಂಗರಾಜ ಎನ್.ಪಿ	ಚಾ–ಕಂ–ನಿ	14861/4605
7	ಪುಂಡಲೀಕ ನಡ್ನಳ್ಳಿ	ಚಾಲಕ	1074
8	ಗಂಗಪ್ಪ ಪಾಟೀಲ್	ಚಾ–ಕಂ–ನಿ	799/5166
9	ಉಮೇಶ ಎಸ್	ಚಾ–ಕಂ–ನಿ	1063/5104
10	ಹಣಮಂತಪ್ಪ ಮಾದರ್	ಚಾ–ಕಂ–ನಿ	8996/5002
11	ಉಮೇಶ ಪಿ	ಚಾ–ಕಂ–ನಿ	43560/4938
12	ಎಸ್.ಕೆ.ಪ್ರತಾಪ್	ಚಾಲಕ	1326
13	ಸಂತೋಷ್ ರಾಠೋಡ್	ಚಾ–ಕಂ–ನಿ	19610/4797
14	ಮುಕ್ತುಂ ಸಾಬ್ ನಾಯ್ಕೋಡಿ	ಚಾ–ಕಂ–ನಿ	1117/4778
15	ಶಿವಾನಂದ ಕುರಿ	ಚಾ–ಕಂ–ನಿ	11134/5045
16	ಬಡೇ ಸಾಬ್ ದೊಡ್ಡಮನಿ	ಚಾ–ಕಂ–ನಿ	8039/4827
17	ರಾಮ ನಾಯ್ಕ ಹೆಚ್.	ಚಾ–ಕಂ–ನಿ	3424/5165
18	ಅಕ್ಬರ್ ಸಾಬ್ ಹಳಕೇರಿ	ಚಾ–ಕಂ–ನಿ	296/4679
19	ಅಂಬ್ಲಪ್ಪ	ಚಾ–ಕಂ–ನಿ	310/4981
20	ವಿಷ್ಣು ಗುಂಜೇರಿ	ತಾಂತ್ರಿಕ ಸಹಾಯಕ	
21	ರಾಘವೇಂದ್ರ	ತಾಂತ್ರಿಕ ಸಹಾಯಕ	
22	ಅರುಣ ಬಿರಾದಾರ	ತಾಂತ್ರಿಕ ಸಹಾಯಕ	
23	ಕುಮಾರ ಕಾಳಿ	ತಾಂತ್ರಿಕ ಸಹಾಯಕ	
24	ರಾಮಪ್ಪ ಕುಂಟೋಜಿ	ಚಾಲಕ–ಕಂ–ನಿರ್ವಾಹಕ(ತ)	8371/5023
25	ಆನಂದ ಮಾಳಗೊಂಡ	ಚಾಲಕ–ಕಂ–ನಿರ್ವಾಹಕ(ತ)	1223/4983
26	ನವೀನ	ಚಾಲಕ–ಕಂ–ನಿರ್ವಾಹಕ(ತ)	12160/4935
27	ನಜೀರ್ ಅಹ್ಮದ್	ಚಾಲಕ–ಕಂ–ನಿರ್ವಾಹಕ(ತ)	24885/4812
28	ರಾಘವೇಂದ್ರ	ಚಾಲಕ–ಕಂ–ನಿರ್ವಾಹಕ(ತ)	783/5058
29	ರಾಮಪ್ಪ ಕುಂಟೋಜಿ	ಚಾಲಕ–ಕಂ–ನಿರ್ವಾಹಕ(ತ)	8371/5023
30	ಆನಂದ ಮಾಳಗೊಂಡ	ಚಾಲಕ–ಕಂ–ನಿರ್ವಾಹಕ(ತ)	1223/4983
31	ನವೀನ	ಚಾಲಕ–ಕಂ–ನಿರ್ವಾಹಕ(ತ)	12160/4935
32	ನಜೀರ್ ಅಹ್ಮದ್	ಚಾಲಕ–ಕಂ–ನಿರ್ವಾಹಕ(ತ)	24885/4812
33	ರಾಘವೇಂದ್ರ	ಚಾಲಕ–ಕಂ–ನಿರ್ವಾಹಕ (ತ)	783/5058

ಮಂಗಳೂರು–2ನೇ ಘಟಕ

ಕ್ರ. ಸಂ.	ಹೆಸರು	ಹುದ್ದೆ	ಬಿಲ್ಲೆ ಸಂಖ್ಯೆ
1	ರಾಜಾ ಭಕ್ಷ್ ಪಿಂಜಾರ	ಚಾ–ಕಂ–ನಿ	4800/22873
2	ಧರೆಪ್ಪ	ಚಾ–ಕಂ–ನಿ	4813/2641
3	ಗಿರಿಯಪ್ಪ,	ಚಾ–ಕಂ–ನಿ	4927/673
4	ಹಾಲೇಶ ಜಿ ಎಂ	ಚಾ–ಕಂ–ನಿ	5032/9071,
5	ಮಹೇಶ,	ಚಾ–ಕಂ–ನಿ	56/5140,
6	ಚಿದಾನಂದ	ಚಾ–ಕಂ–ನಿ	503/395
7	ಕಮ್ತ ಮಲ್ದೆಪ್ಪ	ಚಾ–ಕಂ–ನಿ	5160/804
8	ರಫೀಕ್ ಸಾಬ್‌ಅಣ್ಣಿಗೇರಿ,	ಚಾ–ಕಂ–ನಿ	402/5201,
9	ಅಶೋಕ ಮೇಲಿನಕೇರಿ,	ಚಾ–ಕಂ–ನಿ	25142/5185,
1	ದಸ್ತಗೀರ್	ಚಾ–ಕಂ–ನಿ	442/5039
2	ಶಿವಾನಂದ ಸಿರಸಿ,	ಚಾ–ಕಂ–ನಿ	43401/5042,
3	ಮಲ್ಲಿಕಾರ್ಜುನ ಎ	ಚಾ–ಕಂ–ನಿ	318/5152
4	ಸುಭಾಷ್ ವಿ ಆರ್,	ಚಾ–ಕಂ–ನಿ	744/4923,
5	ಪ್ರಸಾದ್ ಎಂ,	ಚಾ–ಕಂ–ನಿ	1485/5004
6	ಎಂ.ಕೆ ಶಿವಕುಮಾರ್,	ಚಾ–ಕಂ–ನಿ	4717/5012,
7	ಯಲ್ಲಪ್ಪ	ಚಾ–ಕಂ–ನಿ	408/5187
8	ಪ್ರಭು ಸವಣೂರು	ಚಾ–ಕಂ–ನಿ	562/4861

ಮಂಗಳೂರು–3ನೇ ಘಟಕ

1	ಪ್ರಕಾಶ್ ಎಂ ಎನ್	ಚಾಲಕ	135
2	ಅನುಕುಮಾರ್	ಚಾಲಕ	1831
3	ಶಿವಲಿಂಗಪ್ಪ ಉಪ್ಪಿನ್	ಚಾ–ಕಂ–ನಿ	1497/ 4757
4	ಮಹಮ್ಮದ್ ಫಜಲ್‌ಖಾ ಜಿ ಮುಲ್ಲಾ	ಚಾ–ಕಂ–ನಿ	598/ 4762
5	ಶರಣಪ್ಪ ಪಾಟೀಲ್	ಚಾ–ಕಂ–ನಿ	12123/ 4790
6	ಬಂದಗೀಸಾ ಬಾಗೇವಾಡಿ	ಚಾ–ಕಂ–ನಿ	4878/ 6664
7	ಗೌರೀಶ್	ಚಾ–ಕಂ–ನಿ	6004/ 4950
8	ನಂದೀಶ	ಚಾ–ಕಂ–ನಿ	1222/ 4928
9	ಕುಮಾರಸ್ವಾಮಿ ಹಿರೇಮಠ್	ಚಾ–ಕಂ–ನಿ	5051 / 4934
10	ವೀರಣ್ಣ ಲಂಕೆಪ್ಪ ಸಂತಗೇರಿ	ಚಾ–ಕಂ–ನಿ	13673/ 4944
11	ಮಾರುತಿ ಸಂತಗೋಲ್	ಚಾ–ಕಂ–ನಿ	356/ 4954
12	ಕುಮಾರಯ್ಯ ಹಿರೇಮಠ್	ಚಾ–ಕಂ–ನಿ	18/ 4967
13	ಮಲ್ಲಪ್ಪ ಜಲಗೇರಿ	ಚಾ–ಕಂ–ನಿ	13/ 4971
14	ಕಾಮೇಶ್ ಮಾದರ್	ಚಾ–ಕಂ–ನಿ	281/ 4996
15	ಬಸವರಾಜ್ ಕಲ್ಲೊಲಿ	ಚಾ–ಕಂ–ನಿ	150/ 4999
16	ಬಸವರಾಜ್ ಹಿರೇಮಠ್	ಚಾ–ಕಂ–ನಿ	13198/ 5003
17	ಪ್ರದೀಪ್ ಪಾಟೀಲ್	ಚಾ–ಕಂ–ನಿ	502/ 5131
18	ದಿನೇಶ ಪಿ ಎಸ್	ಚಾ–ಕಂ–ನಿ	13063/ 5158
19	ಯಮನೂರಪ್ಪ	ಚಾ–ಕಂ–ನಿ	13041/ 5226
20	ದಿಲೀಪ್ ಎನ್	ಚಾ–ಕಂ–ನಿ	850/ 4622
21	ರವಿ ಕುಮಾರ್ ಆರ್	ಚಾ–ಕಂ–ನಿ	8767/ 4640
22	ಫಕೀರಪ್ಪ ಅರಗೋಳ್	ಚಾ–ಕಂ–ನಿ	879/ 4665
1	ಬಿ.ಎಚ್.ವಿಜಯಕುಮಾರ	ಚಾಲಕ	747
2	ಪ್ರತೀಪಆರ್.ವಲ್.	ಚಾ–ಕಂ–ನಿ	1158
3	ಶಿವಕುಮಾರ ರುಳ್ಳಿ	ಚಾ–ಕಂ–ನಿ	4718/676
4	ಮಹಬಲಿ ಎ.	ಚಾ–ಕಂ–ನಿ	4808/9805
5	ಸಿದ್ದಪ್ಪ ತೇಲಿ	ಚಾ–ಕಂ–ನಿ	4825/213
6	ರಮೇಶ ಸಂಗಪ್ಪ ಹರಕಮನಿ	ಚಾ–ಕಂ–ನಿ	4842/471
7	ಹುಸೇನ ಸಾಬ ಹಳ್ಳೂರ	ಚಾ–ಕಂ–ನಿ	4843/273
8	ಮಧು ಸಿ.ಎಂ.	ಚಾ–ಕಂ–ನಿ	4894/2510
9	ನಾಗಪ್ಪ ಕಾಳಗಿ	ಚಾ–ಕಂ–ನಿ	4896/1500
10	ಮಂಜುನಾಥ ಜಯರಾಮ ನಾಯ್ಕ	ಚಾ–ಕಂ–ನಿ	4907/887
11	ಹರೀಶಸಿ,ಕೆ.	ಚಾ–ಕಂ–ನಿ	4913/165
12	ಶಿವಾನಂದ ಸುತಗಟ್ಟಿ	ಚಾ–ಕಂ–ನಿ	4920/331
13	ನಂಜೇಗೌಡಕೆ.ಟಿ.	ಚಾ–ಕಂ–ನಿ	4939/2115
14	ತಿಮ್ಮಪ್ಪ ಪಿ.	ಚಾ–ಕಂ–ನಿ	4956/6709
15	ಚೆಲುವ	ಚಾ–ಕಂ–ನಿ	4960/1197
16	ಸುಲೇಮಾನ್‌ಓಲೇಕಾರ್	ಚಾ–ಕಂ–ನಿ	4969/734
17	ಶ್ರೀಧರ ಬಿ.ಎಸ್.	ಚಾ–ಕಂ–ನಿ	4993/213
18	ಮಂಜುಳ ಎಂ.	ಚಾ–ಕಂ–ನಿ	5062/6948
19	ವೆಂಕಟಶಿವ ಕೆ.ವಿ.	ಚಾ–ಕಂ–ನಿ	5066/13436
20	ಬಾಲಜ್ಜ	ಚಾ–ಕಂ–ನಿ	5170/475
21	ಈರಯ್ಯ ಕಡಳ್ಳಿಮಠ	ಚಾ–ಕಂ–ನಿ	5194/40
1	ಮಹಮ್ಮದ್ ರಫೀಕ್ ದೊಡಮನಿ	ಚಾ–ಕಂ–ನಿ	13706/4771
2	ಪ್ರವೀಣ	ಚಾ–ಕಂ–ನಿ	740/4979
3	ದಿನೇಶ ಎನ್ ಬಿ	ಚಾ–ಕಂ–ನಿ	6824/5181
4	ರವಿ ಎಂ ಪಿ	ಚಾ–ಕಂ–ನಿ	1626/4632
5	ಪರಶುರಾಮ ಅಳ್ಳಗಿ	ತಾಂತ್ರಿಕ ಸಹಾಯಕ	

ಉಡುಪಿ ಘಟಕ

1	ಕಲ್ಯಾಣಿ ಕ್ಷತ್ರಿ	ಚಾ–ಕಂ–ನಿ(ತ)	4714/1353
2	ಮಲ್ಲಪ್ಪ ಶಿರೂರು	ಚಾ–ಕಂ–ನಿ(ತ)	4753/ 717
3	ರವಿ	ಚಾ–ಕಂ–ನಿ(ತ)	4787/1202
4	ಪದ್ಮಣ್ಣ ಡೋಣೂರು	ಚಾ–ಕಂ–ನಿ(ತ)	4933/555
5	ಮಂಜುನಾಥ ನೀಲಗಾರ	ಚಾ–ಕಂ–ನಿ(ತ)	5028/505
6	ಜಗದೀಶ ದುಬ್ಬದಮರಡಿ	ಚಾ–ಕಂ–ನಿ(ತ)	4972/737
7	ಜಗದೀಶ ಗೋದಿ	ಚಾ–ಕಂ–ನಿ(ತ)	4932/684
8	ಮನೋಜ್ ಕುಮಾರ ಬಿ ಪಾಟೀಲ್	ಚಾ–ಕಂ–ನಿ(ತ)	4906/365
9	ಪ್ರದೀಪ ಹಳ್ಳೂರು	ಚಾ–ಕಂ–ನಿ(ತ)	4940/70
10	ಮುದಕಪ್ಪ ತಪಸಿ	ಚಾ–ಕಂ–ನಿ(ತ)	4976/755
11	ಅರುಣ	ಚಾ–ಕಂ–ನಿ(ತ)	4930/10459
12	ನಿಂಗಪ್ಪ ಬೆಳ್ಳಿಕುಪ್ಪಿ	ಚಾ–ಕಂ–ನಿ(ತ)	5136/68
13	ವಿರೇಶ ಆದಯ್ಯ ಕುಚಬಾಳ	ಚಾ–ಕಂ–ನಿ(ತ)	5145 / 1687
14	ಚಂದ್ರಶೇಖರ ಕುರಿ	ಚಾ–ಕಂ–ನಿ(ತ)	5146/1077
15	ಅಡಿವೆಪ್ಪ ಪಠಾಣಿ	ಚಾ–ಕಂ–ನಿ(ತ)	5174/181
16	ಮಲ್ಲಿಕಾರ್ಜುನ ಕ	ಚಾ–ಕಂ–ನಿ(ತ)	5177/1083
17	ಸುರೇಶ ಕೆ	ಚಾ–ಕಂ–ನಿ(ತ)	5199 / 12008
18	ಮಂಜುನಾಥ ಜಿ ಡಿ	ಚಾ–ಕಂ–ನಿ(ತ)	5215/6681
19	ನಾಗೇಶ ಬಿ ಎನ್	ಚಾ–ಕಂ–ನಿ(ತ)	4986/2530
20	ಮಂಜುನಾಥ	ಚಾ–ಕಂ–ನಿ(ತ)	849
21	ಕೃಷ್ಣ ಜಟ್ಟಿ ಮೊಗೇರ	ಚಾಲಕ–ಕಂ–ನಿರ್ವಾಹಕ(ತ)	2821/4264
22	ಬಸವರಾಜ ಕಡಬಲಕಟ್ಟಿ	ಚಾಲಕ–ಕಂ–ನಿರ್ವಾಹಕ(ತ)	1207/5218
23	ಹೇಮಚಂದ್ರ	ಚಾಲಕ–ಕಂ–ನಿರ್ವಾಹಕ(ತ)	11845/4658
24	ಗಣಪತಿ ತಿಮ್ಮಪ್ಪ ಪಟಗಾರ	ಚಾಲಕ–ಕಂ–ನಿರ್ವಾಹಕ(ತ)	1537/4905
25	ವೀರಭದ್ರಪ್ಪ ಕಳಸಣ್ಣವರ್	ಚಾಲಕ–ಕಂ–ನಿರ್ವಾಹಕ(ತ)	253/5175
26	ರಮಕಾಂತಗೌಡ	ಚಾಲಕ–ಕಂ–ನಿರ್ವಾಹಕ(ತ)	594/4910
27	ಕಿರಣ್ ಹೆಚ್ ಆರ್	ಚಾಲಕ–ಕಂ–ನಿರ್ವಾಹಕ(ತ)	6175/5223
28	ಮೃತ್ಯುಂಜಯ ಕೆ ಆರ್	ಚಾಲಕ–ಕಂ–ನಿರ್ವಾಹಕ(ತ)	1120

ಕುಂದಾಪುರ

ಕ್ರ. ಸಂ	ಹೆಸರು	ಬಿಲ್ಲೆ ಸಂಖ್ಯೆ	ಹುದ್ದೆ / ಅ ಸಂ
1	ಎಳುಮಲೈ	4710/2849	ಚಾ/ನಿ 17/18
2	ಅಜ್ಜನ ಗೌಡ ಎಮ್ಮಿ	4895/1763	ಚಾ/ನಿ 105/106
3	ಕಲ್ಲಪ್ಪ ಗರ್ಲಕಟ್ಟಿ	4786/594	ಚಾ/ನಿ 158/159

ಕ್ರ. ಸಂ	ಹೆಸರು	ಬಿಲ್ಲೆ ಸಂಖ್ಯೆ	ಹುದ್ದೆ
1	ಶಿವಪ್ಪ ವಾಲ್ಮೀಖಿ	4626/1011	ಚಾ/ನಿ 78/79
2	ಬಸವರಾಜ ಬರಮಣ್ಣನವರ	4682ಎ/1467	ಚಾ/ನಿ 150/151
3	ಮಂಜುನಾಥ ಕುಂಬಾರ	5214/566	ಚಾ/ನಿ
4	ಪ್ರಶಾಂತ ಮಡಿವಾಳ	5217/1447	ಚಾ/ನಿ 85/86
5	ಪಕೀರಪ್ಪ ಪೂಜಾರ್	4759/1419	ಚಾ/ನಿ 146/147
7	ಕರಿಂ ಖಾನ್	4818/596	ಚಾ/ನಿ 99/100
6	ಸಂದೀಪ್	14470	ಚಾಲಕ 91/92

ಕ್ರ.ಸಂ	ಹೆಸರು	ಬಿಲ್ಲೆ ಸಂಖ್ಯೆ	ಹುದ್ದೆ
1	ಶ್ರೀ ಶೈಲ ಪೂಜಾರಿ	4708/1144	ಚಾ/ನಿ
2	ಮಹೇಶ ಗರಗದ	4752/62	ಚಾ/ನಿ
3	ಸಂಗಪ್ಪ ಹೇಳರವ	4779/13299	ಚಾ/ನಿ
4	ಎಂ ರಾಮಚಂದ್ರ	5036/7782	ಚಾ/ನಿ
5	ಶರಣಯ್ಯ ಪೂಜಾರ್	5147/11642	ಚಾ/ನಿ
6	ಸಿದ್ದಪ್ಪ	5193/266	ಚಾ/ನಿ
7	ದಶರಥ ಕರಗುಪ್ಪಿ	4732/133	ಚಾ/ನಿ
8	ಮೆಹಬೂಬ ಸಾಬ್ ಫಣಿಬಂದ್	19ಎ	ಚಾಲಕ

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಮಂಗಳೂರು ವಿಭಾಗ

ಐಪಿಎಲ್: ತಂಡಕ್ಕೆ ಮರಳಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬ್ಯಾಟ್ಸ್‌ಮನ್

ದೇವದತ್ತ ಗುಣಮುಖ; ಸ್ಯಾಮ್ಸ್‌ಗೆ ಸೋಂಕು

ಪ್ರಜಾವಾಣಿ ವಾರ್ತೆ

ದೇವದತ್ತ ಪಡಿಕ್ಕಲ್ –ಪಿಟಿಐ ಚಿತ್ರ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡದ ಆರಂಭಿಕ ಬ್ಯಾಟ್ಸ್‌ಮನ್, ಕರ್ನಾಟಕದ ಎಡಗೈ ಆಟಗಾರ ದೇವದತ್ತ ಪಡಿಕ್ಕಲ್ ಕೋವಿಡ್–19ರಿಂದ ಗುಣಮುಖರಾಗಿ ಬುಧವಾರ ತಂಡಕ್ಕೆ ವಾಪಸಾದರು. ಆದರೆ ತಂಡದ ಆಲ್‌ರೌಂಡರ್, ಆಸ್ಟ್ರೇಲಿಯಾದ ಡ್ಯಾನಿಯಲ್ ಸ್ಯಾಮ್ಸ್ ಸೋಂಕಿನಿಂದಾಗಿ ಕ್ವಾರಂಟೈನ್ ಆಗಿದ್ದಾರೆ.

ಯುಎಇಯಲ್ಲಿ ನಡೆದ ಐಪಿಎಲ್ ಟೂರ್ನಿಯ ಕಳೆದ ಆವೃತ್ತಿಯಲ್ಲಿ ಆರ್‌ಸಿಬಿ ಪರ ಗರಿಷ್ಠ ರನ್ (15 ಪಂದ್ಯಗಳಲ್ಲಿ 473) ಗಳಿಸಿದ್ದ ದೇವದತ್ತ ಅವರಲ್ಲಿ ಮಾರ್ಚ್ 22ರಂದು ಸೋಂಕು ಕಾಣಿಸಿಕೊಂಡಿತ್ತು. ಹೀಗಾಗಿ ಮನೆಯಲ್ಲೇ ಪ್ರತ್ಯೇಕವಾಸದಲ್ಲಿದ್ದರು. 20 ವರ್ಷದ ದೇವದತ್ತ ಅವರ ಈಗಿನ ಪರೀಕ್ಷಾ ವರದಿ ನೆಗೆಟಿವ್ ಆಗಿದ್ದು ತಂಡದೊಂದಿಗೆ ಅಭ್ಯಾಸ ಮಾಡಲಿದ್ದಾರೆ ಎಂದು ಫ್ರಾಂಚೈಸ್ ಪ್ರಕಟಣೆ ತಿಳಿಸಿದೆ.

ಈ ಮಾಹಿತಿಯನ್ನು ಟ್ವಿಟರ್ ಖಾತೆಯಲ್ಲೂ ಹಾಕಿರುವ ಫ್ರಾಂಚೈಸ್ ‘28 ವರ್ಷದ ಡ್ಯಾನಿಯಲ್ ಸ್ಯಾಮ್ಸ್ ಏಪ್ರಿಲ್ ಮೂರರಂದು ತಂಡವನ್ನು ಸೇರಿದ್ದರು. ಆಗ ಅವರ ಪರೀಕ್ಷಾ ವರದಿ ನೆಗೆಟಿವ್ ಆಗಿತ್ತು. ಆದರೆ ಬುಧವಾರ ನಡೆಸಿದ ಪರೀಕ್ಷೆಯಲ್ಲಿ ಸೋಂಕು ಇರುವುದು ಪತ್ತೆಯಾಗಿದೆ. ಅವರಲ್ಲಿ ಸೋಂಕಿನ ಲಕ್ಷಣಗಳು ಕೂಡ ಗೋಚರಿಸಿದ್ದು ನಿಗದಿಪಡಿಸಿರುವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ವಿವರಿಸಿದೆ.

ಡ್ಯಾನಿಯಲ್ ಸ್ಯಾಮ್ಸ್ ಮತ್ತು ದೇವದತ್ತ ಪಡಿಕ್ಕಲ್ ಆರೋಗ್ಯದ ಮೇಲೆ ತಂಡದ ವೈದ್ಯಕೀಯ ಸಿಬ್ಬಂದಿ ಸತತ ನಿಗಾ ಇರಿಸಿದ್ದು ಸುರಕ್ಷತೆಗೆ ಒತ್ತು ನೀಡುತ್ತಿದೆ ಎಂದು ಕೂಡ ತಿಳಿಸಲಾಗಿದೆ.

ಡೆಲ್ಲಿ ಕ್ಯಾಪಿಟಲ್ಸ್‌ನಲ್ಲಿದ್ದ ಸ್ಯಾಮ್ಸ್ ಅವರನ್ನು ಈ ವರ್ಷ ಆರ್‌ಸಿಬಿ ಖರೀದಿಸಿದೆ. ಕಳೆದ ಬಾರಿ ಟೂರ್ನಿಗೆ ಪದಾರ್ಪಣೆ ಮಾಡಿದ್ದ ಅವರು ಕೇವಲ ಮೂರು ಪಂದ್ಯಗಳನ್ನು ಆಡಿದ್ದಾರೆ.

ಮುಂಬೈ ಇಂಡಿಯನ್ಸ್ ತಂಡದ ವಿಕೆಟ್ ಕೀಪಿಂಗ್ ಸಲಹೆಗಾರ ಕಿರಣ್ ಮೋರೆ ಅವರಲ್ಲಿ ಮಂಗಳವಾರ ಸೋಂಕು ಕಾಣಿಸಿಕೊಂಡಿತ್ತು. ಅಕ್ಷರ್ ಪಟೇಲ್ ಮತ್ತು ನಿತೀಶ್ ರಾಣಾ ಈಗಾಗಲೇ ಸೋಂಕಿಗೆ ಒಳಗಾಗಿದ್ದಾರೆ. ವಾಂಖೆಡೆ ಕ್ರೀಡಾಂಗಣದ ಸಿಬ್ಬಂದಿ ಮತ್ತು ಕಾರ್ಯಕ್ರಮ ಸಂಯೋಜಕರಲ್ಲೂ ಕೊರೊನಾ ಕಾಣಿಸಿಕೊಂಡಿದೆ.

‘ಹುರುಪು ತುಂಬಿದ ಹರಭಜನ್’

ಮುಂಬೈ (ಪಿಟಿಐ): ನಲವತ್ತರ ಹರಯದಲ್ಲೂ ಯುವಕನ ಉತ್ಸಾಹದಲ್ಲಿ ಓಡಾಡುವ ಹರಭಜನ್ ಸಿಂಗ್ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಆಟಗಾರರಿಗೆ ಹುಮ್ಮಸ್ಸು ತುಂಬಿದ್ದಾರೆ ಎಂದು ಉಪನಾಯಕ ದಿನೇಶ್ ಕಾರ್ತಿಕ್ ಅಭಿಪ್ರಾಯಪಟ್ಟಿದ್ದಾರೆ.

ಹರಭಜನ್ ಸಿಂಗ್

ವೃತ್ತಿಜೀವನದ ಕೊನೆಯ ಘಟ್ಟದಲ್ಲೂ ಹರಭಜನ್ ಸಿಂಗ್ ತೋರುತ್ತಿರುವ ಉತ್ಸಾಹ ಮತ್ತು ಕ್ರೀಡೆಯ ಮೇಲಿನ ಅವರ ಪ್ರೀತಿ ಯುವ ಆಟಗಾರರಿಗೆ ಮಾದರಿಯಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 700ಕ್ಕೂ ಅಧಿಕ ವಿಕೆಟ್‌ಗಳನ್ನು ಕಬಳಿಸಿರುವ ಅವರು ಒಂದು ವಾರದಿಂದ ತಂಡದ ಆಟಗಾರರಲ್ಲಿ ಅಚ್ಚರಿ ಮೂಡಿಸಿದ್ದಾರೆ ಎಂದು ಕಾರ್ತಿಕ್ ಹೇಳಿದ್ದಾರೆ.

ಹಿಂದಿನ ಆವೃತ್ತಿಗಳಲ್ಲಿ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ತಂಡಗಳಲ್ಲಿ ಆಡಿದ್ದ ಹರಭಜನ್ ಸಿಂಗ್ ಅವರನ್ನು ಈ ಬಾರಿ ಆಟಗಾರರ ಹರಾಜಿನ ಮೊದಲ ಹಂತದಲ್ಲಿ ಯಾರೂ ಖರೀದಿಸಿರಲಿಲ್ಲ. ಕೊನೆಯಲ್ಲಿ ₹ ಎರಡು ಕೋಟಿಗೆ ಕೋಲ್ಕತ್ತ ನೈಟ್ ರೈಡರ್ಸ್ ಖರೀದಿಸಿತ್ತು.

‘ಎಲ್ಲರೂ ಬರುವ ಮೊದಲೇ ಹರಭಜನ್ ಸಿಂಗ್ ಅಭ್ಯಾಸಕ್ಕೆ ಹಾಜರಾಗುತ್ತಾರೆ. ನನಗೆ ಅವರ ಇಂಥ ಶಿಸ್ತಿನ ಬಗ್ಗೆ ಗೊತ್ತಿರಲಿಲ್ಲ. ಆದ್ದರಿಂದ ಈಗ ವಿಶಿಷ್ಟವಾಗಿ ಕಾಣಿಸುತ್ತಿದ್ದಾರೆ’ ಎಂದು ಡಿ.ವೈ.ಪಾಟೀಲ್ ಕ್ರೀಡಾಂಗಣದಲ್ಲಿ ಅಭ್ಯಾಸದ ನಡುವೆ ಕೆಕೆಆರ್ ವೆಬ್‌ಸೈಟ್‌ಗೆ ನೀಡಿದ ಸಂದರ್ಶನದಲ್ಲಿ ಕಾರ್ತಿಕ್ ಹೇಳಿದ್ದಾರೆ.

‘ಕ್ಯಾಪ್ಟನ್7’ ನಿರ್ಮಾಣದತ್ತ ಧೋನಿ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಮಹೇಂದ್ರ ಸಿಂಗ್ ಧೋನಿ ಆ್ಯನಿಮೇಟೆಡ್ ಸರಣಿ 'ಕ್ಯಾಪ್ಟನ್ 7' ನಿರ್ಮಾಣಕ್ಕೆ ಮುಂದಾಗಿದ್ದಾರೆ. ಸರಣಿಯು ನಿರ್ಮಾಣದ ಹಂತದಲ್ಲಿದ್ದು ಇದರಲ್ಲಿರುವ ಏಳು ಎಂಬುದು ಧೋನಿ ಅವರ ಜೆರ್ಸಿ ಸಂಖ್ಯೆಯಾಗಿದೆ ಎಂದು ನಿರ್ಮಾಪಕರು ತಿಳಿಸಿದ್ದಾರೆ.

ಮಹೇಂದ್ರ ಸಿಂಗ್ ಧೋನಿ ಮತ್ತು ಪತ್ನಿ ಸಾಕ್ಷಿ ಸಿಂಗ್ ಅವರ ಧೋನಿ ಎಂಟರ್‌ಟೈನ್ಮೆಂಟ್ ಪ್ರೈವೆಟ್ ಲಿಮಿಟೆಡ್ ಮತ್ತು ಬ್ಲ್ಯಾಕ್ ಆ್ಯಂಡ್ ವೈಟ್ ಆರೆಂಜ್ ಬ್ರಾಂಡ್ಸ್ ಸಂಸ್ಥೆಗಳು ಜಂಟಿಯಾಗಿ ಈ ಸರಣಿ ನಿರ್ಮಿಸುತ್ತಿದ್ದಾರೆ.

ಬಯೊಬಬಲ್ ಸವಾಲೇ ಸರಿ: ಮ್ಯಾಕ್ಸ್‌ವೆಲ್

ಚೆನ್ನೈ (ಪಿಟಿಐ): ಸತತವಾಗಿ ಬಯೊಬಬಲ್‌ನಲ್ಲಿ ಕಳೆಯುವುದೊಂದು ದುಸ್ವಪ್ನ. ಈ ಕಠಿಣ ಜೀವನ ವಿಧಾನವನ್ನು ಅನುಸರಿಸುವುದು ದೊಡ್ಡ ಸವಾಲೇ ಸರಿ ಎಂದು ಆಸ್ಟ್ರೇಲಿಯಾದ ಸ್ಫೋಟಕ ಬ್ಯಾಟ್ಸ್‌ಮನ್ ಗ್ಲೆನ್ ಮ್ಯಾಕ್ಸ್‌ವೆಲ್ ಹೇಳಿದರು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿರುವ ಅವರು ತಂಡದ ಯು ಟ್ಯೂಬ್ ಚಾನಲ್‌ನಲ್ಲಿ ಪೋಸ್ಟ್ ಮಾಡಿರುವ ವಿಡಿಯೊದಲ್ಲಿ ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಆಟಗಾರರಿಗೆ ಹೊರಜಗತ್ತಿನೊಂದಿಗೆ ಬೆರೆಯಲು ಆಗುತ್ತಿಲ್ಲ. ಸಂವಾದ ನಡೆಯುತ್ತಿಲ್ಲ. ಇದರಿಂದ ಮಾನಸಿಕವಾಗಿ ಕುಗ್ಗಿಹೋಗುತ್ತೇವೆ. ಈ ಒತ್ತಡವನ್ನು ನಿರ್ವಹಿಸುವುದು ದೊಡ್ಡ ಸವಾಲು. ಹೀಗಿದ್ದರೂ ಆಟದ ಅಂಗಣಕ್ಕೆ ಮರಳು ಸಾಧ್ಯವಾಗಿರುವುದು ಖುಷಿಯ ಸಂಗತಿ’ ಎಂದು ಅವರು ನುಡಿದಿದ್ದಾರೆ.

ವಿರಾಟ್ ಕೊಹ್ಲಿ ಮತ್ತು ಎಬಿ ಡಿವಿಲಿಯರ್ಸ್ ಜೊತೆಗೂಡಿ ಆಡುವುದು ಸಂಭ್ರಮವೇ ಸರಿ’ ಎಂದರು.

ಒಲಿಂಪಿಕ್ಸ್ ಅರ್ಹತಾ ಟೂರ್ನಿಯಿಂದ ಹಿಂದೆ ಸರಿದ ಜೂಡೊ ತಂಡ

ನವದೆಹಲಿ (ಪಿಟಿಐ): ಇಬ್ಬರು ಆಟಗಾರರಿಗೆ ಕೋವಿಡ್–19 ದೃಢಪಟ್ಟ ಹಿನ್ನೆಲೆಯಲ್ಲಿ ಭಾರತ ಜೂಡೊ ತಂಡವು ಏಷ್ಯಾ ಒಸೀನಿಯಾ ಒಲಿಂಪಿಕ್ಸ್ ಅರ್ಹತಾ ಟೂರ್ನಿಯಿಂದ ಹಿಂದೆ ಸರಿದಿದೆ. ಕಿರ್ಗಿಸ್ತಾನದ ಬಿಷ್‌ಕೇಕ್‌ನಲ್ಲಿ ಈ ಟೂರ್ನಿ ನಡೆಯುತ್ತಿದೆ. ಭಾರತದ ಅಜಯ್ ಯಾದವ್ ಹಾಗೂ ರಿತು ಅವರಲ್ಲಿ ಸೋಂಕು ಖಚಿತಪಟ್ಟಿದೆ.

ಸದ್ಯ ಕಿರ್ಗಿಸ್ತಾನದಲ್ಲಿರುವ ಯಾದವ್ 73 ಕೆಜಿ ಕ್ಲಾಸ್ ಹಾಗೂ ರಿತು 52 ಕೆಜಿ ವಿಭಾಗದಲ್ಲಿ ಸ್ಪರ್ಧಿಸಬೇಕಿತ್ತು. ಇಬ್ಬರಲ್ಲಿಯೂ ಸೋಂಕಿನ ಯಾವುದೇ ಲಕ್ಷಣಗಳು ಕಂಡುಬಂದಿಲ್ಲ.

ಏಪ್ರಿಲ್ 5ರಂದು ನಡೆಸಿದ ಪರೀಕ್ಷೆಯಲ್ಲಿ ಈ ಇಬ್ಬರಲ್ಲಿ ಕೋವಿಡ್ ಕಂಡುಬಂದಿದೆ. ಸದ್ಯ ಅವರು ಬಿಷ್‌ಕೇಕ್‌ನ ಹೋಟೆಲೊಂದರಲ್ಲಿ ಕ್ವಾರಂಟೈನ್ ಆಗಿದ್ದಾರೆ. ಏಷ್ಯಾ ಒಸೀನಿಯಾ ಚಾಂಪಿಯನ್‌ಷಿಪ್ ಮಂಗಳವಾರ ಆರಂಭವಾಗಿದೆ.

ಶ್ಯಾಮ್ ಥಾಪಾ ಆಸ್ಪತ್ರೆಗೆ ದಾಖಲು

ಕೋಲ್ಕತ್ತ (ಪಿಟಿಐ): ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ (ಎಐಎಫ್‌ಎಫ್) ತಾಂತ್ರಿಕ ಸಮಿತಿ ಅಧ್ಯಕ್ಷ ಶ್ಯಾಮ್ ಥಾಪಾ ಅವರಿಗೆ ಕೋವಿಡ್–19 ಖಚಿತಪಟ್ಟಿದ್ದು, ಇಲ್ಲಿಯ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರರೂ ಆಗಿರುವ 73 ವರ್ಷದ ಥಾಪಾ, 1970ರಲ್ಲಿ ತಂಡವು ಮರ್ಡೆಕಾ ಕಪ್ ಹಾಗೂ ಬ್ಯಾಂಕಾಕ್‌ನಲ್ಲಿ ನಡೆದ ಏಷ್ಯನ್ ಗೇಮ್ಸ್‌ನಲ್ಲಿ ಕಂಚಿನ ಪದಕ ಗೆಲ್ಲುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಸುದ್ದಿ 2 ನಿಮಿಷ

ಏಷ್ಯನ್ ಚಾಂಪಿಯನ್‌ಷಿಪ್: ಬಾಕ್ಸಿಂಗ್ ತಂಡದಲ್ಲಿ ಮೇರಿ

ನವದೆಹಲಿ (ಪಿಟಿಐ): ಆರು ಬಾರಿಯ ವಿಶ್ವ ಚಾಂಪಿಯನ್ ಮೇರಿ ಕೋಮ್ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮಹಿಳಾ ತಂಡವನ್ನು ಮುನ್ನಡೆಸಲಿದ್ದಾರೆ.

ನವದೆಹಲಿಯಲ್ಲಿ ಮೇ 21ರಿಂದ 31ರವರೆಗೆ ನಡೆಯಲಿರುವ ಚಾಂಪಿಯನ್‌ಷಿಪ್‌ನಲ್ಲಿ ಮೇರಿ 51 ಕೆಜಿ ವಿಭಾಗದಲ್ಲಿ ಕಣಕ್ಕಿಳಿಯಲಿದ್ದಾರೆ.

ಏಷ್ಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಇದುವರೆಗೆ ಅವರು ಆರು ಪದಕಗಳನ್ನು ಗೆದ್ದಿದ್ದು, ಅವುಗಳಲ್ಲಿ ಐದು ಚಿನ್ನ ಎಂಬುದು ಗಮನಾರ್ಹ. 2019ರ ಟೂರ್ನಿಯಿಂದ ಮೇರಿ ಹಿಂದೆ ಸರಿದಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿ ಕಂಚಿನ ಪದಕ ಗೆದ್ದುಕೊಂಡಿರುವ ಲವ್ಲಿನಾ ಬೊರ್ಗೊಹೈನ್ (69 ಕೆಜಿ) ಕೂಡ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ತಂಡ ಇಂತಿದೆ: ಮೋನಿಕಾ (48 ಕೆಜಿ), ಮೇರಿ ಕೋಮ್ (51 ಕೆಜಿ), ಸಾಕ್ಷಿ (54 ಕೆಜಿ), ಜಾಸ್ಮಿನ್ (57 ಕೆಜಿ), ಸಿಮ್ರನ್‌ಜೀತ್ ಕೌರ್ (60 ಕೆಜಿ), ಪ್ವಿಲಾವೊ ಬಾಸುಮತಾರಿ (64 ಕೆಜಿ), ಲವ್ಲಿನಾ ಬೊರ್ಗೊಹೈನ್ (69 ಕೆಜಿ), ಪೂಜಾ ರಾಣಿ (75 ಕೆಜಿ), ಸ್ವೀಟಿ (81 ಕೆಜಿ), ಅನುಪಮಾ (81 + ಕೆಜಿ).

ಪಾಕಿಸ್ತಾನ ಫುಟ್‌ಬಾಲ್ ಮೇಲೆ ಫಿಫಾ ಗದಾ ಪ್ರಹಾರ

ಕರಾಚಿ (ಎಎಫ್‌ಪಿ): ಬಾಹ್ಯಶಕ್ತಿಗಳ ಹಸ್ತಕ್ಷೇಪ ವಿರೋಧಿಸಿ ಪಾಕಿಸ್ತಾನ ಫುಟ್‌ಬಾಲ್ ಫೆಡರೇಷನ್ (ಪಿಎಫ್‌ಎಫ್) ಮೇಲೆ ಕ್ರಮ ಕೈಗೊಂಡಿರುವ ಅಂತರರಾಷ್ಟ್ರೀಯ ಫುಟ್‌ಬಾಲ್ ಫೆಡರೇಷನ್ (ಫಿಫಾ) ಪಾಕಿಸ್ತಾನ ಫೆಡರೇಷನ್‌ನ ಕಚೇರಿಯನ್ನು ಖಾಲಿ ಮಾಡುವಂತೆ ಅನಧಿಕೃತ ಸಮಿತಿಗೆ ಆದೇಶ ನೀಡಿದೆ.

ಫಿಫಾ ನೇಮಕ ಮಾಡಿರುವ ಸಮಿತಿಯೊಂದು 2019ರಿಂದ ಪಾಕಿಸ್ತಾನ ಫುಟ್‌ಬಾಲ್ ಫೆಡರೇಷನ್‌ನ ಆಡಳಿತ ನಿರ್ವಹಿಸುತ್ತಿದೆ. ಆದರೆ ಚುನಾವಣೆ ನಡೆಸುವಂತೆ ಒತ್ತಾಯಿಸಿದ ಕೆಲವರು ಲಾಹೋರ್‌ನಲ್ಲಿರುವ ಕಚೇರಿಯ ಈ ಸಮಿತಿ ಸದಸ್ಯರನ್ನು ಹೊರಹಾಕಿದ್ದರು.

ಹೀಗಾಗಿ ಪಿಎಫ್‌ಎಫ್ ಅಮಾನತು ಮಾಡಿ ಫಿಫಾ ಬುಧವಾರ ಆದೇಶ ಹೊರಡಿಸಿತ್ತು. ಅಮಾನತು ವಾಪಸ್ ತೆಗೆದುಕೊಳ್ಳುವ ವರೆಗೆ ಪಾಕಿಸ್ತಾನ ಯಾವುದೇ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪಾಲ್ಗೊಳ್ಳುವಂತಿಲ್ಲ ಎಂದು ತಾಕೀತು ಮಾಡಿತ್ತು. 2019ರಲ್ಲಿ ಕಾಂಬೋಡಿಯಾ ವಿರುದ್ಧ ಪಾಕಿಸ್ತಾನ ಕೊನೆಯದಾಗಿ ಪಂದ್ಯ ಆಡಿತ್ತು. ಅಮಾನತಿನಿಂದಾಗಿ ಫಿಫಾದ ಅನುದಾನ ಕೂಡ ಪಿಎಫ್‌ಎಫ್‌ಗೆ ಸಿಗುವುದಿಲ್ಲ.

16ರಂದು ಬಿಸಿಸಿಐ ಅಪೆಕ್ಸ್ ಸಮಿತಿ ಸಭೆ

ಸ್ಥಳೀಯ ಟಿ20 ಲೀಗ್ ಮೇಲೆ ನಿಯಂತ್ರಣ?

ನವದೆಹಲಿ (ಪಿಟಿಐ): ಅನುಮತಿ ಇಲ್ಲದೇ ಟಿ20 ಕ್ರಿಕೆಟ್ ಟೂರ್ನಿ ಆಯೋಜಿಸಿದ ಬಿಹಾರ ಕ್ರಿಕೆಟ್ ಸಂಸ್ಥೆಯ (ಬಿಸಿಎ) ಮೇಲೆ ಬೇಸರಗೊಂಡಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸ್ಥಳೀಯ ಟೂರ್ನಿಗಳ ಮೇಲೆ ನಿಯಂತ್ರಣ ಹೇರಲು ಬಿಗಿ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ.

ಇದೇ 16ರಂದು ನಡೆಯಲಿರುವ ಅಪೆಕ್ಸ್ ಸಮಿತಿ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬರಲಿದ್ದು ರಾಷ್ಟ್ರೀಯ ಮಹಿಳಾ ತಂಡದ ನೆರವು ಸಿಬ್ಬಂದಿ ನೇಮಕಕ್ಕೆ ಸಂಬಂಧಿಸಿಯೂ ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ.

ಬಿಹಾರ ಕ್ರಿಕೆಟ್ ಸಂಸ್ಥೆ ಬಿಸಿಸಿಐನ ಅನುಮತಿ ಪಡೆಯದೇ ಕಳೆದ ತಿಂಗಳಲ್ಲಿ ಬಿಸಿಎಲ್ ಆಯೋಜಿಸಿತ್ತು. ಟೂರ್ನಿಯನ್ನು ಸ್ಥಗಿತಗೊಳಿಸುವಂತೆ ಬಿಸಿಸಿಐ ನೀಡಿದ ನಿರ್ದೇಶನಕ್ಕೆ ಬಿಸಿಎ ಬೆಲೆ ನೀಡಲಿಲ್ಲ. ಐಪಿಎಲ್ ಟೂರ್ನಿಯ ಯಶಸ್ಸಿನ ನಂತರ ದೇಶದ ಮೂಲೆ-ಮೂಲೆಗಳಲ್ಲಿ ಕ್ರಿಕೆಟ್ ಲೀಗ್‌ಗಳು ನಡೆಯತೊಡಗಿವೆ. ಹೆಚ್ಚಿನವುಗಳಲ್ಲಿ ಬೆಟ್ಟಿಂಗ್ ನಡೆಯುತ್ತಿರುವ ಆರೋಪ ಕೇಳಿಬಂದಿದೆ. ಇದು ಬಿಸಿಸಿಐನ ಭ್ರಷ್ಟಾಚಾರ ತಡೆ ಘಟಕಕ್ಕೆ ತಲೆನೋವು ಉಂಟುಮಾಡಿದೆ.

ಮಹಿಳಾ ತಂಡಕ್ಕೆ ಸಿಬ್ಬಂದಿ ನೇಮಕ ಮಾಡುವುದು ಮತ್ತು ಅಂತರರಾಷ್ಟ್ರೀಯ ಟೂರ್ನಿಗಳಿಗೆ ತಂಡವನ್ನು ಸಜ್ಜುಗೊಳಿಸುವುದು ಕೂಡ ಅಪೆಕ್ಸ್ ಸಮಿತಿ ಸಭೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ.

ಟಿ20 ವಿಶ್ವಕಪ್‌ಗೆ ಐಸಿಸಿ ಪರ್ಯಾಯ ಯೋಜನೆ

ನವೆಹಲಿ: ಕೋವಿಡ್–19 ನಿಯಂತ್ರಣಕ್ಕೆ ಬಾರದೇ ಇದ್ದರೆ ಟಿ20 ವಿಶ್ವಕಪ್ ಟೂರ್ನಿಯನ್ನು ಎಲ್ಲಿ ಮತ್ತು ಹೇಗೆ ಆಯೋಜಿಸಬೇಕು ಎಂಬುದಕ್ಕೆ ಸಂಬಂಧಿಸಿ ಆಲೋಚನೆ ನಡೆದಿದ್ದು ‘ಬಿ’ ಪ್ಲ್ಯಾನ್ ಸಿದ್ಧಪಡಿಸಲಾಗಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯ (ಐಸಿಸಿ) ಹಂಗಾಮಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜೆಫ್ ಅಲಾರ್ಡಿಸ್ ಬುಧವಾರ ತಿಳಿಸಿದ್ದಾರೆ.

ಟೂರ್ನಿಯನ್ನು ಇದೇ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಭಾರತದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ದೇಶದಲ್ಲಿ ಈಚೆಗೆ ಪ್ರತಿದಿನ ಲಕ್ಷಕ್ಕೂ ಅಧಿಕ ಕೋವಿಡ್ ಪ್ರಕರಣಗಳು ಪತ್ತೆಯಾಗುತ್ತಿವೆ. ಈ ನಡುವೆ ಇದೇ ಒಂಬತ್ತರಿಂದ ಐಪಿಎಲ್ ಟೂರ್ನಿ ನಡೆಯಲಿದೆ. ‘ಟೂರ್ನಿಯನ್ನು ನಿಗದಿಪಡಿಸಿದಂತೆ ಆಯೋಜಿಸಲು ನಿರ್ಧರಿಸಲಾಗಿದೆ. ಪ್ಲ್ಯಾನ್ ‘ಬಿ’ ಸಿದ್ಧವಿದ್ದರೂ ಅದನ್ನು ಜಾರಿಗೆ ತರಲು ಈ ವರೆಗೆ ಐಸಿಸಿ ಮುಂದಾಗಲಿಲ್ಲ. ಬಿಸಿಸಿಐ ಜೊತೆ ಸತತ ಸಂಪರ್ಕದಲ್ಲಿದ್ದು ಅಗತ್ಯವಿದ್ದರೆ ಪರ್ಯಾಯ ಮಾರ್ಗಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು’ ಎಂದು ಅವರು ವರ್ಚುವಲ್ ಸಂವಾದದಲ್ಲಿ ಹೇಳಿದರು.

ಸಂಕ್ಷಿಪ್ತ ಸುದ್ದಿ

ಒಲಿಂಪಿಕ್ಸ್‌ಗೆ ನೇತ್ರಾ

ನವದೆಹಲಿ: ತಮಿಳುನಾಡಿನ ನೇತ್ರಾ ಕುಮನನ್ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ಭಾರತದ ಮೊದಲ ಮಹಿಳಾ ಸೇಯ್ಲರ್ ಎಂಬ ಗೌರವ ತಮ್ಮದಾಗಿಸಿಕೊಂಡರು. ಒಮಾನ್‌ನಲ್ಲಿ ಬುಧವಾರ ನಡೆದ ಏಷ್ಯಾ ವಲಯದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ ಅಗ್ರ ಸ್ಥಾನ ಗಳಿಸುವುದರೊಂದಿಗೆ ಅವರು ಟೋಕಿಯೊ ಟಿಕೆಟ್ ಗಿಟ್ಟಿಸಿಕೊಂಡರು.

ಚೆನ್ನೈನಲ್ಲಿ ನೆಲೆಸಿರುವ 23 ವರ್ಷದ ನೇತ್ರಾ ಎದುರಾಳಿ ರಮ್ಯಾ ಸರವಣನ್ ಅವರಿಗಿಂತ 21 ಪಾಯಿಂಟ್‌ಗಳ ಮುನ್ನಡೆಯೊಂದಿಗೆ ಅಗ್ರಪಟ್ಟಕ್ಕೇರಿದರು. ಗುರುವಾರ ಅಂತಿಮ ಹಂತದ ಸ್ಪರ್ಧೆ ನಡೆಯಲಿದೆ.

ಭಾರತದ ಇನ್ನೂ ಇಬ್ಬರು ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸುವ ಸಾಧ್ಯತೆ ಇದ್ದು ಅವರಲ್ಲಿ ಒಬ್ಬರು ಗಣಪತಿ ಕೇಳಪಂಡ ಚೆಂಗಪ್ಪ.

ಸಾಯ್ ಕೇಂದ್ರದ ಕ್ರೀಡಾಪಟುಗಳಿಗೆ ಕೋವಿಡ್

ನವದೆಹಲಿ (ಪಿಟಿಐ): ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಭೋಪಾಲ್ ಕೇಂದ್ರದಲ್ಲಿ 24 ಕ್ರೀಡಾಪಟುಗಳು ಸೇರಿದಂತೆ ಒಟ್ಟು 36 ಮಂದಿಗೆ ಬುಧವಾರ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರದ ಎಲ್ಲ ಕೇಂದ್ರಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ.

ನೆರವು ಸಿಬ್ಬಂದಿ ಹಾಗೂ ಕ್ರೀಡಾಪಟುಗಳಲ್ಲಿ ಸೋಂಕು ಕಾಣಿಸಿಕೊಂಡಿದೆ. ಒಲಿಂಪಿಕ್ಸ್‌ಗೆ ಅರ್ಹತೆ ಪಡೆದುಕೊಂಡಿರುವ ಯಾರೂ ಈ ಕೇಂದ್ರದಲ್ಲಿ ಇಲ್ಲ. ಏಪ್ರಿಲ್ ಮೂರು ಮತ್ತು ಆರರಂದು ನಡೆಸಿದ ಪರೀಕ್ಷೆಗಳಲ್ಲಿ ಪಾಸಿಟಿವ್ ವರದಿ ಬಂದಿದೆ. ಸುರಕ್ಷತೆಯ ದೃಷ್ಟಿಯಿಂದ ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಸಾಯ್ ತಿಳಿಸಿದೆ. ಕೋವಿಡ್ ನಿಯಮಾವಳಿಗಳನ್ನು ಚಾಚೂ ತಪ್ಪದೆ ಪಾಲಿಸಲು ಆದೇಶಿಸಿರುವ ಸಾಯ್ ಪ್ರತಿ ವಾರ ಕ್ರೀಡಾಪಟುಗಳು ಮತ್ತು ಸಿಬ್ಬಂದಿಯನ್ನು ಪರೀಕ್ಷೆಗೆ ಒಳಪಡಿಸಬೇಕು ಎಂದು ಸೂಚಿಸಿದೆ.

ಬಿಎಫ್‌ಸಿ ತಂಡದ ಮೂವರಿಗೆ ಸೋಂಕು

ಪಣಜಿ (ಪಿಟಿಐ): ಐಎಸ್‌ಎಲ್ ಟೂರ್ನಿಯಲ್ಲಿ ಆಡುವ ಬೆಂಗಳೂರು ಫುಟ್‌ಬಾಲ್ ಕ್ಲಬ್‌ನ (ಬಿಎಫ್‌ಸಿ) ಮೂವರಿಗೆ ಕೋವಿಡ್ –19 ಇರುವುದು ಬುಧವಾರ ದೃಢಪಟ್ಟಿದೆ. ತಂಡವು ಟ್ವಿಟರ್‌ನಲ್ಲಿ ಈ ವಿಷಯವನ್ನು ತಿಳಿಸಿದೆ.

ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟ: ‘ಹುತಾತ್ಮರ ಸ್ಮಾರಕ’ಕ್ಕೆ ಅಡಿಗಲ್ಲು

ಸಾಮಾಜಿಕ ಕಾರ್ಯಕರ್ತೆ ಮೇಧಾಪಾಟ್ಕರ್ ಮತ್ತು ಇತರೆ ಸ್ವಯಂ ಸೇವಕರು ಇಪ್ಪತ್ತೊಂಬತ್ತು ರಾಜ್ಯಗಳಿಂದ ಸಂಗ್ರಹಿಸಿದ ಮಣ್ಣಿನ ಗಡಿಗೆಗಳೊಂದಿಗೆ ಮಂಗಳವಾರ ಕೃಷಿ ಕಾಯ್ದೆಗಳನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದ ದೆಹಲಿಯ ಗಾಜಿಪುರ ಗಡಿಗೆ ಆಗಮಿಸಿದರು.

ಗಾಜಿಯಾಬಾದ್(ಪಿಟಿಐ): ಕೇಂದ್ರದ ಮೂರು ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ ಸಾವನ್ನಪ್ಪಿದ ರೈತರ ಸ್ಮರಣಾರ್ಥ ಪ್ರತಿಭಟನಾ ಸ್ಥಳ ‘ಗಾಜಿಪುರ–ಗಾಜಿಯಾಬಾದ್’(ಉತ್ತರ ಪ್ರದೇಶದ ಗಡಿ)ಗಡಿಯಲ್ಲಿ ‘ಹುತಾತ್ಮರ ಸ್ಮಾರಕ’ ನಿರ್ಮಾಣಕ್ಕೆ ಭಾರತೀಯ ಕಿಸಾನ್ ಒಕ್ಕೂಟ(ಬಿಕೆಯು) ಅಡಿಗಲ್ಲು ಹಾಕಿದೆ.

ಬಿಕೆಯು ಮುಖಂಡ ರಾಕೇಶ್ ಸಿಂಗ್ ಟಿಕಾಯತ್, ಸಾಮಾಜಿಕ ಹೋರಾಟಗಾರ್ತಿ ಮೇಧಾಪಾಟ್ಕರ್ ಅವರು ಮಂಗಳವಾರ ‘ಹುತಾತ್ಮರ ಸ್ಮಾರಕ’ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರು. ಮುಂದೆ ಇಲ್ಲಿ ಶಾಶ್ವತವಾದ ಸ್ಮಾರಕವನ್ನು ನಿರ್ಮಿಸಲಾಗುವುದು ಎಂದು ಬಿಕೆಯು ಮಾಧ್ಯಮ ಉಸ್ತುವಾರಿ ಧರ್ಮೇಂದ್ರ ಮಲಿಕ್ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಗಾಜಿಯಾಬಾದ್ ಜಿಲ್ಲಾಧಿಕಾರಿ ಅಜಯ್ ಶಂಕರ್ ಪಾಂಡೆ, ‘ಹುತಾತ್ಮರ ಸ್ಮಾರಕ’ಕ್ಕೆ ನೆರವೇರಿರುವ ಶಂಕುಸ್ಥಾಪನೆ ಕೇವಲ ಸಾಂಕೇತಿಕವಷ್ಟೇ ಹೊರತು ಶಾಶ್ವತವಲ್ಲ’ ಎಂದಿದ್ದಾರೆ.

ಕೃಷಿ ಕಾಯ್ದೆಗಳ ವಿರುದ್ಧದ ಹೋರಾಟದಲ್ಲಿ 320 ರೈತರು ಸಾವನ್ನಪ್ಪಿದ್ದಾರೆ. ಸಾಮಾಜಿಕ ಕಾರ್ಯಕರ್ತರು ‘ಹುತಾತ್ಮರ ಸ್ಮಾರಕ’ ನಿರ್ಮಾಣಕ್ಕಾಗಿ ಎಲ್ಲ ಮೃತ ರೈತರ ಹಳ್ಳಿಗಳಿಂದ ಮಣ್ಣನ್ನು ಸಂಗ್ರಹಿಸಿ ಪ್ರತಿಭಟನಾ ಸ್ಥಳಕ್ಕೆ ತಂದಿದ್ದಾರೆ ಎಂದು ಬಿಕೆಯು ತಿಳಿಸಿದೆ. ಇದರ ಜತೆಗೆ, ಸಾಮಾಜಿಕ ಹೋರಾಟಗಾರರ ಒಂದು ಗುಂಪು ‘ಮಿಟ್ಟಿ ಸತ್ಯಾಗ್ರಹದ (ಮಣ್ಣಿನ ಸತ್ಯಾಗ್ರಹ)’ ಹೆಸರಲ್ಲಿ ವಿವಿಧ ರಾಜ್ಯಗಳಿಂದ ಮಣ್ಣನ್ನು ಸಂಗ್ರಹಿಸಿದೆ. ಇದರ ಜತೆಗೆ, ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ಸುಖದೇವ್ ರಾಜಗುರು, ಚಂದ್ರಶೇಖರ್ ಆಜಾದ್, ರಾಮ್ ಪ್ರಸಾದ್ ಮತ್ತು ಅಶ್ಫಾಕ್ ಉಲ್ಲಾ ಖಾನ್ ಜನಿಸಿದ ಸ್ಥಳದಿಂದ ಮಣ್ಣನ್ನು ಸಂಗ್ರಹಿಸಿ ತರಲಾಗಿದೆ.

ಇಂಡೊನೇಷ್ಯಾ ಭೂಕುಸಿತ: ಮೃತರ ಸಂಖ್ಯೆ 126ಕ್ಕೆ ಏರಿಕೆ

ಲೆಂಬಾಟಾ, ಇಂಡೊನೇಷ್ಯಾ (ಎಪಿ): ಪೂರ್ವ ಇಂಡೊನೇಷ್ಯಾದಲ್ಲಿ ಸಂಭವಿಸಿದ ಪ್ರವಾಹ ಹಾಗೂ ಭೂಕುಸಿತದಿಂದಾಗಿ ಮೃತರ ಸಂಖ್ಯೆ 126ಕ್ಕೆ ಏರಿದೆ. ಇನ್ನೂ ಹಲವಾರು ಜನರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಬುಧವಾರ ಹೇಳಿದ್ದಾರೆ.

ಈ ಪ್ರದೇಶದಲ್ಲಿ ಇನ್ನೂ ಮಳೆ ಬೀಳುತ್ತಿದ್ದು, ಪರಿಹಾರ ಕಾರ್ಯ ಹಾಗೂ ನಾಪತ್ತೆಯಾಗಿರುವವರನ್ನು ಹುಡುಕುವುದಕ್ಕೆ ತೊಂದರೆಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಪ್ರವಾಹದಿಂದಾಗಿ ಇಂಡೊನೇಷ್ಯಾದ ಫ್ಲೋರ್ಸ್ ದ್ವೀಪದಿಂದ ಪೂರ್ವ ಟಿಮೋರ್‌ವರೆಗೆ ವ್ಯಾಪಿಸಿರುವ ದ್ವೀಪಗಳಲ್ಲಿ ತೀವ್ರ ಹಾನಿಯಾಗಿದ್ದು, ಸಾವಿರಾರು ಮಂದಿ ನಿರಾಶ್ರಿತರಾಗಿದ್ದಾರೆ.

ಪೂರ್ವ ಫ್ಲೋರ್ಸ್ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಸಂಭವಿಸಿದೆ. ಇಲ್ಲಿ ಈ ವರೆಗೆ 67 ಮೃತದೇಹಗಳನ್ನು ಹೊರತೆಗೆಯಲಾಗಿದ್ದು, 6 ಜನರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಮ್ಯಾನ್ಮಾರ್: ಭದ್ರತಾ ಪಡೆ ದಾಳಿ– ಏಳು ನಾಗರಿಕರ ಹತ್ಯೆ

ಯಾಂಗೂನ್(ಎಪಿ): ಮ್ಯಾನ್ಮಾರ್‌ನಲ್ಲಿ ಫೆಬ್ರುವರಿಯಲ್ಲಿ ನಡೆದ ಮಿಲಿಟರಿ ಕ್ಷಿಪ್ರ ದಂಗೆಯನ್ನು ಪ್ರತಿಭಟನಕಾರರು ಶಿಕಾರಿಯ ನಾಡ ಬಂದೂಕುಗಳ ಮೂಲಕ ಪ್ರತಿರೋಧಿಸಿದ್ದ ಕಾರಣಕ್ಕೆ ಭದ್ರತಾ ಪಡೆಗಳು ಬುಧವಾರ ವಾಯುವ್ಯ ಮ್ಯಾನ್ಮಾರ್‌ನ ಪಟ್ಟಣವೊಂದರ ಮೇಲೆ ದಾಳಿ ನಡೆಸಿ, ಕನಿಷ್ಠ ಏಳು ನಾಗರಿಕರನ್ನು ಹತ್ಯೆ ಮಾಡಿದ್ದಾರೆ. ಭದ್ರತಾ ಪಡೆಯ ದಾಳಿಯಲ್ಲಿ ಹಲವು ಮಂದಿ ನಾಗರಿಕರು ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಸುದ್ದಿ ಮಾಧ್ಯಮಗಳು ವರದಿ ಮಾಡಿವೆ.

ಕಲಾಯ್ ಪಟ್ಟಣದ ಮೇಲೆ ಭದ್ರತಾಪಡೆಯ ದಾಳಿ ಮುಂಜಾನೆ ಪ್ರಾರಂಭವಾಯಿತು‘ ಎಂದು ಆನ್‌ಲೈನ್ ಸುದ್ದಿ ತಾಣ ಖೋನುಮ್ತುಂಗ್ ಬರ್ಮೀಸ್ ಹೇಳಿದೆ.